# ಜನರಿಗೆ ಅಧಿಕಾರ

## ಒಂಬತ್ತನೇ ಯೋಜನೆ — ಜನಕೀಯ ಯೋಜನೆ

## ಸಮಗ್ರ ವಿಕಸನ ವರದಿ

## ಮಂಜೇಶ್ವರ ಗ್ರಾಮ ಪಂಚಾಯತ್



*With Best Compliments From:*

# Hill Side Theatre

HOSANGADI, MANJESHWAR, KASARAGOD DIST.



FRONT ELEVATION

PROPOSED HILL SIDE COMPLEX AT
HOSANGADI, MANJESHWAR, KASARAGOD DIST.

| | | | |
|---|---|---|---|
| DESIGNED | | CHECKED | |
| DRAWN | | APPROVED | |
| DRG NO | HB/ /96 | SH NO | 03 |
| SCALE | 1:100 | DATE | 10-01-96 |

HI-TECH BUILDERS
Engineers And Architects
Hosangadi, Manjeshwar - 671 323
Phone - 672632

# ಮಂಜೇಶ್ವರ ಗ್ರಾಮ ಪಂಚಾಯತು
# ಜನಕೀಯ ಯೋಜನೆಗಳು

"ಜನರಿಂದ ಜನರಿಗಾಗಿ ಜನರಿಗೋಸ್ಕರ"

*ಅಬ್ರಹಾಂ ಲಿಂಕನ್*

**ಕಾಸರಗೋಡು ಜಿಲ್ಲಾ ಮಟ್ಟದ ಉದ್ಘಾಟನೆ**

**6 ನವಂಬರ 1996**




## ಸಂಪಾದಕೀಯ

**ಬಿ.ಎಮ್. ನಾರಾಯಣ DR P.**

1. ಗೋವಿಂದ ಶೆಟ್ಟಿಗಾರ್. ಬಿ
2. ಬಿ. ಎ. ನಾರಾಯಣ
3. ರವೀಂದ್ರ ಬ್ರಹ್ಮೇಶ್ವರ
4. ದೇವರಾಜ ರಾವ್ .ಎಮ್
5. ನಾರಾಯಣ ಶೆಟ್ಟಿಗಾರ .ಬಿ
6. ಶ್ರೀಮತಿ ಸುಮತಿ ಬ್ಯಾ
7. ಬಿ. ಎಮ್. ಅನಂತ
8. ಎಮ್. ರಾಮ
9. ರವಿಚಂದ್ರ ಕುಮಾರ್
10. ಬಿ.ಎಮ್ ಈಶ್ವರ

ಅಕ್ಷರ ಜೋಡಣೆ
**ಮಧುಬನ್ ಗ್ರಾಫಿಕ್ಸ್, ಅಳಕೆ, ಮಂಗಳೂರು - 3 ಫೋನ್ : 33773**

ಮುದ್ರಕರು :
**ಸಾಯಿರಾಮ್ ಪ್ರಿಂಟರ್ಸ್, ಕಾರ್‌ಸ್ಟ್ರೀಟ್, ಮಂಗಳೂರು**

# ಅನುಕ್ರಮಣಿಕೆ


1. ಮುನ್ನುಡಿ

2. ನಮ್ಮ ಪಂಚಾಯತಿನ ವಿವರಗಳು

3. ಸಾಮಾಜಿಕ ಸಾಂಸ್ಕೃತಿಕ ಚರಿತ್ರೆ

4. ಭೂಪ್ರಕೃತಿ, ಜನಪ್ರಕೃತಿ, ಜಲಪ್ರಕೃತಿ

5. 1. ಕೃಷಿಯೂ ನೀರಾವರಿಯೂ

   2. ಕೈಗಾರಿಕೆ

   3. ವಿದ್ಯಾಭ್ಯಾಸ

   4. ಕುಡಿಯುವ ನೀರು

   5. ಸಾರಿಗೆ, ವಿದ್ಯುತ್ ಮಾರುಕಟ್ಟೆ

   6. ಸಾಮಾಜಿಕ ಕ್ಷೇಮವೂ ವಸತಿಯೂ

   7. ಸಂಸ್ಕೃತಿ

   8. ವನಿತೆ

   9. ಸಹಕಾರಿ ರಂಗ

   10. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ

   11. ಸಂಪನ್ಮೂಲ

   12. ಮೀನುಗಾರಿಕೆ ಮತ್ತು ಮೃಗ ಸಂರಕ್ಷಣೆ

   13. ಉಪ ಸಂಹಾರ

   14. ಮಂಜೇಶ್ವರ ಗ್ರಾಮ ಪಂಚಾಯತು ಯೋಜನೆಗಳು ಜನರದ್ದಾಗಿದೆ.

# ಹಿಂದಿನ ಅಧ್ಯಕ್ಷರೂ ಮತ್ತು ಅವರ ಕಾಲಾವಧಿಯೂ



ಶ್ರೀ ಎಂ. ರಾಮಪ್ಪ ಮಾಸ್ಟರ್
1963 - 1979



ಶ್ರೀ ಬಿ.ಎಂ. ರಾಮಯ್ಯ ಶೆಟ್ಟಿ
1980 - 1984



ಶ್ರೀ ಸಿ. ಅಹಮ್ಮದ್ ಕುಂಞಿ
1987 to 1995

# ಪ್ರಸ್ತುತ ಮಂಜೇಶ್ವರ ಪಂಚಾಯತು ಆಡಳಿತ ಮಂಡಳಿ



ಶ್ರೀ ಪಿ. ಅಬ್ದುಲ್ ರಹಿಮಾನ್



ಶ್ರೀ ಕೆ.ಎ. ರಹಿಮಾನ್ ಹುಸೂರು



ಶ್ರೀ ಅಬ್ದುಲ್ಲ ಕೆ.



ಎಂ.ಎ. ಅಬೂಬಕ್ಕರ್



ಯು. ಅಬ್ದುಲ್ ಕಾದರ್



ಶ್ರೀಮತಿ ಕೆ.ಪಿ. ನಫೀಸಾ ರಹಿಮಾನ್ ಹುಸೂರು
ಅಧ್ಯಕ್ಷರು



ಶ್ರೀ ಪಿ.ಎಚ್. ಅಬ್ದುಲ್ ಹಮೀದ್
ಉಪಾಧ್ಯಕ್ಷರು



ಶ್ರೀಮತಿ ಸುಮತಿ ಬಾಯಿ ಟೀಚರ್



ಶ್ರೀಮತಿ ವಿ. ವಸಂತಿ



ಶ್ರೀಮತಿ ಕೆ. ಕುಸುಮ ಟೀಚರ್



ಶ್ರೀ ಯು. ಕೃಷ್ಣ



ಶ್ರೀಮತಿ ಜಯಂತಿ

# ಮುನ್ನುಡಿ

ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧವಾಗಿ ತಮ್ಮ ಸರ್ವಸ್ವವನ್ನೂ ತ್ಯಜಿಸಿ ಭಾರತ ಪಿತಾಮಹನಾದ ಮಹಾತ್ಮ ಗಾಂಧಿಜಿಯವರ ನೇತೃತ್ವದಲ್ಲಿ ನಮ್ಮ ದೇಶ 1947 ಅಗೋಸ್ತು 15ರಂದು ಸ್ವತಂತ್ರವಾಯಿತು. ಡಾ. ಅಂಬೇಡ್ಕರ್ ನಮ್ಮ ಸಂವಿಧಾನವನ್ನು ಅಂಗೀಕರಿಸಿದ ಐತಿಹಾಸಿಕ ದಿನದಂದೇ ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸಲು 40ನೇ ವಿಧಿಯಲ್ಲಿ ಅಳವಡಿಸಿದ್ದಾರೆ. ಸರಕಾರದ ಅಧಿಕಾರವನ್ನು ಪ್ರಜೆಗಳಿಗೆ ಕೊಡುವ ಅಧಿಕಾರ ವಿಕೇಂದ್ರಿಕರಣದ ದಿಟ್ಟ ಧೀರ ಹೆಜ್ಜೆಯನ್ನು ಮುಂದಿಟ್ಟು ಕೇರಳ ರಾಜ್ಯ ಆಯೋಜನಾ ಬೋರ್ಡು ನಿಯೋಗಿಸಿರುವ 9 ಸ್ಟೆಯರಿಂಗ್ ಸಮಿತಿಗಳು ಹಾಗೂ 65ರಷ್ಟು ಕರ್ಮ ಸಮಿತಿಯನ್ನು ಆಯೋಜಿಸಲಾಗಿದೆ.

ನಮ್ಮ ಮಂಜೇಶ್ವರ ಪಂಚಾಯತ್ ಕಾಸರಗೋಡು ತಾಲೋಕಿನ ಉತ್ತರ ದಿಕ್ಕಿನಲ್ಲಿರುವ (ಪುರಾಣೋಕ್ತ) ಪುಣ್ಯಕ್ಷೇತ್ರವಾಗಿರುತ್ತದೆ. ಬಂಗ್ರ ಮಂಜೇಶ್ವರ ಹೊಳೆಯ ದಕ್ಷಿಣದ ಉಪ್ಪಳ ಹೊಳೆಯದಡದಿಂದ ಉತ್ತರದ ತಲಪ್ಪಾಡಿ ಹೊಳೆಯ ತೀರದ ವರೆಗಿನ 24.40 ಚ.ಕಿ.ಮೀ. ವ್ಯಾಪಿಸಿರುತ್ತದೆ. ಪಂಚಾಯತಿನಲ್ಲಿ 15,898 ಗಂಡಸರೂ 16,199 ಹೆಂಗಸರೂ ಇದ್ದಾರೆ. ಇದು ಸದಾ ಫಲಭರಿತವಾದ ತೆಂಗು-ಕಂಗಿನ ತೋಟಗಳಿಂದಲೂ ಶುಕ-ಪಿಕ, ಕೋಗಿಲೆ ಮುಂತಾದ ಮಂಜುಳ ಸ್ವರವುಳ್ಳ ಪಕ್ಷಿಸಂಕುಲಗಳಿಂದಲೂ, ಕಲ-ಕಲ ನಿನಾದದಿಂದ ಹರಿಯುವ ನದಿ ಹಾಗೂ ತೋಡುಗಳಿಂದಲೂ, ನೋಟಕರ ಮನಸ್ಸನ್ನು ಆನಂದ ತುಂದಿಲರನ್ನಾಗಿ ಮಾಡುವುದರಿಂದ ಇದಕ್ಕೆ ಪುರಾಣದಲ್ಲಿ "ಮಂಜುಳಾಪುರ"ವೆಂದೂ ಮಂಜೇಶ್ವರ ಮಹಾತ್ಮೆಯ ಪ್ರಕಾರ ಪರಶುರಾಮನು ವರುಣನಿಂದ ಪಡೆದ 108 ಲಿಂಗಗಳಲ್ಲಿ ಒಂದಾದ "ಮಂಜರೀಶ್ವರ" ಎಂಬ ಲಿಂಗವನ್ನು ಇಲ್ಲಿ ಸ್ಥಾಪಿಸಿದ ಕಾರಣ ಈ ಊರಿಗೆ ಮಂಜೇಶ್ವರ ಎಂಬ ಹೆಸರು ಬಂತು. ಈ ಭಾಗವು 1956 ಅಕ್ಟೋಬರ್ 31ರ ತನಕ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಮದ್ರಾಸು ಪ್ರಾಂತ್ಯದ ಆಡಳಿತೆಗೆ ಸೇರಿತ್ತು.

1951ನೇ ಇಸವಿಯಿಂದ ಪ್ರಾರಂಭವಾದ ಪಂಚವಾರ್ಷಿಕ ಪದ್ಧತಿ 7 ಹಂತಗಳು ಮುಗಿದಿದ್ದು 8ನೆಯ ಯೋಜನೆಯು ಮುಕ್ತಾಯದ ಹಂತದಲ್ಲಿದೆ. ಆದರೆ ಬಡತನ ರೇಖೆಯ ಕೆಳಗೆ ಬದುಕುವ ಜನಸಂಖ್ಯೆ ಬೆಳೆಯುತ್ತಲೇ ಇದೆ. ದಿಲ್ಲಿಯಲ್ಲಿ ಕುಳಿತು ಹಳ್ಳಿಯವರ ಅಭಿವೃದ್ಧಿ ಯೋಜನೆಯನ್ನು ತಯಾರಿಸಲು ಸರ್ವತಾ ಸಾಧ್ಯವಿಲ್ಲವೆಂಬುದು ಸರ್ವರಿಗೂ ವಿಧಿತವಾಗಿದೆ.

ಮಂಜೇಶ್ವರದ ಜನರು ಜಾತಿ ಮತ ಭೇಧವಿಲ್ಲದೆ ಸೌಹಾರ್ದಯುತವಾಗಿ ಜೀವನ ನಡೆಸಿರುತ್ತಾರೆಂಬುದಕ್ಕೆ ಇಲ್ಲಿಯ ಪ್ರಸಿದ್ಧ ದೇವಾಲಯಗಳೂ ಮಸೀದಿಗಳೂ, ಇಗರ್ಜಿಗಳೂ, ಗುಡಿಗಳು ಅತ್ಯಂತ ಸಾರ್ಥಕವೂ, ಇಡೀ ದೇಶದ ಜನರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ ಎಂಬುದನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದು. ಚುನಾವಣೆಯಲ್ಲಿ ಗೆದ್ದು ಬಂದು ಅಧಿಕಾರ ಗ್ರಹಣ ಮಾಡಿದ ನಾವು ನಮ್ಮ ನಾಯಕರು ಜನರ ಪ್ರಾಥಮಿಕ ಅವಶ್ಯಕತೆಗಳಾದ ಅನ್ನ, ಅರಿವೆ, ಅಕ್ಷರ, ಆರೋಗ್ಯ ಮುಂತಾದವುಗಳನ್ನು ಪೂರೈಸುವ ಧ್ರುವನಕ್ಷತ್ರದ ದಿಕ್ಕನ್ನು ಮರೆಯದಂತೆ ದುಃಖಿಗಳ ಒಂದು ಹನಿ ನೀರನ್ನಾದರೂ ಒರೆಸುವ ಹೃದಯವಂತರಾಗಿ ಬಡವರ ಬಂಧುಗಳಾಗಿ, ಜನಕೀಯ ಯೋಜನೆಯ ಚುಕ್ಕಾಣಿ ಹಿಡಿದಿರುವ ನಮಗೆ ಜನರ ಸಹಕಾರ ಸಿಗಬಹುದೆಂದು ಆಶಿಸುತ್ತೇವೆ.

1984 ಮೇ 24ರಂದು ಕಾಸರಗೋಡು ಜಿಲ್ಲೆಯ ಉದಯವಾಯಿತು. ತಲಪಾಡಿ ಹೊಳೆಯಿಂದ ಕಾಲಿಕಡವಿನ ತನಕ ವ್ಯಾಪಿಸಿರುವ ಅತ್ಯಂದ ದೊಡ್ಡದಾದ ವಿಭಿನ್ನ ಚಾರಿತ್ರಿಕ ಹಿನ್ನೆಲೆ ಇರುವ ಈ ಜಿಲ್ಲೆಯನ್ನು ಮಂಜೇಶ್ವರವೆಂದೇ ಹೆಸರಿಸುವ ವಿಧಾನಸಭಾ ಕ್ಷೇತ್ರ, ಬ್ಲೋಕ್ ಪಂಚಾಯತ್, ಸ್ಟೇಟ್ ಬ್ಯಾಂಕ್ ಆಫ್ ಟ್ರಾವೆಂಕೂರ್, ಸಬ್ ರಿಜಿಸ್ಟ್ರಾರ್ ಆಫೀಸು, ಪಿಡಬ್ಲ್ಯುಡಿ ಇಂಜಿನಿಯರಿಂಗ್ ಆಫೀಸು, ಅರಕ್ಷಕ ಠಾಣೆ, ಕಸ್ಟಮ್ ಆಫೀಸು, ಸೆಂಟ್ರಲ್ ಎಕ್ಸೈಸ್, ಟೆಲಿಕಮ್ಯುನಿಕೇಶನ್ ಆಫೀಸು, ಮೈನರ್ ಇರಿಗೇಶನ್ ಆಫೀಸ್, ಸರಕಾರಿ ಆಸ್ಪತ್ರೆ, ರೆವೆನ್ಯೂ ಅಧಿಕಾರ ಆಫೀಸ್ ಇತ್ಯಾದಿ ಹಲವಾರು ವ್ಯವಸಾಯ ಕೇಂದ್ರಗಳು, ಕಾರ್ಖಾನೆಗಳು ಎಣೆಯ ಮಿಲ್ಲುಗಳು, ಪೋಸ್ಟ್ ಆಫೀಸು, ಸರಕಾರಿ ಟ್ರಾವಲೆರ್ಸ್ ಬಂಗಲೆಗಳು, ಐ.ಸಿ.ಡಿ.ಎಸ್. ಆಫೀಸು, ಸರಕಾರಿ ಕಾಲೇಜು, ಸುಂದರವಾದ ಕಡಲ ಕಿನಾರೆಗಳು, ಕೆ.ಟಿ.ಡಿ.ಸಿ. ಆರಾಮ ಕೇಂದ್ರ, ವಿಭಿನ್ನ ತೀರ್ಥಗಳು ಮಹಾಕ್ಷೇತ್ರಗಳು ಇರುವ ಮಂಜೇಶ್ವರದಲ್ಲೇ ತಾಲೋಕು ಕೇಂದ್ರವನ್ನು ಸ್ಥಾಪಿಸಬೇಕೆಂದು ಜನತೆಯ ಒಕ್ಕೊರಳಿನ ಉದ್ಘೋಷವಾಗಿದೆ. ಅದಕ್ಕಾಗಿ ಪಿಡಬ್ಲ್ಯುಡಿ ಇಲಾಖೆಯ 7 ಎಕ್ರೆಗೂ ಮಿಕ್ಕಿರುವ ಸ್ಥಳವಿದೆ. ಮಾತ್ರವಲ್ಲದೆ ಬೇಕಾಗಿದ್ದರೆ ತಾತ್ಕಾಲಿಕವಾಗಿ ಸುಂದರವಾದ ಕಟ್ಟಡವನ್ನು ಒದಗಿಸಲು ಸರ್ವರೀತಿ ತಯಾರಿ ನಡೆದಿರುತ್ತದೆ. ಇದು ನೆರವೇರಿದರೆ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಯೋಜನೆಗೆ ಹೊಸ ಚಾಲನೆ ಬರಬಹುದು. ಅಭೂತಪೂರ್ವ ಜಾಗ್ರತಿಯು ಎಲ್ಲಾ ಕ್ಷೇತ್ರಗಳಲ್ಲಿ ಉಂಟಾಗಲೆಂದು ಹಾರೈಸುತ್ತೇವೆ.

ಈ ಜನಕೀಯ ಯೋಜನಾ ವರದಿ ತಯಾರಿಸಲು ನಮಗೆ ಸಹಾಯಕರಾದ ಸಂಪನ್ಮೂಲ ವ್ಯಕ್ತಿಗಳಿಗೆ, ವಿದಗ್ಧರಾದ ವಿವಿಧ ಸಮಿತಿಯವರಿಗೆ, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಜನಾಬ್ ಸಿ. ಅಹಮ್ಮದ್ ಕುಂಞಿಯವರಿಗೆ ನಲ್ಮೆಯ ಕೃತಜ್ಞತೆಗಳು

**- ಜೈ ಭಾರತ್ -**

ಅಧ್ಯಕ್ಷರು ಮತ್ತು ಸದಸ್ಯರು ಮಂಜೇಶ್ವರ ಗ್ರಾಮ ಪಂಚಾಯತ್

# ನಮ್ಮ ಗ್ರಾಮ ಪಂಚಾಯತಿನ ಸಾಮಾನ್ಯ ವಿವರಣೆ

| | | |
|---|---|---|
| 1. ಪಂಚಾಯತಿನ ಹೆಸರು | : | ಮಂಜೇಶ್ವರ ಗ್ರಾಮ ಪಂಚಾಯತು (ಬಡಾಜೆ, ಉದ್ಯಾವರ, ಕುಂಜತ್ತೂರು, ಹೊಸಬೆಟ್ಟು, ಬಂಗ್ರ ಮಂಜೇಶ್ವರ) |
| 2. ಬ್ಲೋಕ್ ಪಂಚಾಯತು ಡಿವಿಜನ್ | : | ಮಂಜೇಶ್ವರ |
| 3. ತಾಲೂಕು | : | ಕಾಸರಗೋಡು |
| 4. ಜಿಲ್ಲಾ ಪಂಚಾಯತು ಡಿವಿಜನ್ | : | ಕಾಸರಗೋಡು |
| 5. ಎಸೆಂಬ್ಲಿ ಮಂಡಲ | : | ಮಂಜೇಶ್ವರ |
| 6. ಪಾರ್ಲಿಮೆಂಟ್ ಮಂಡಲಿ | : | ಕಾಸರಗೋಡು |
| 7. ವಿಸ್ತೀರ್ಣ | : | ಚ.ಕಿ. 24.51 ಚದರ ಕಿ.ಮೀ. |

8. ಅಕ್ಷಾಂಶ 12.2. ರೇಖಾಂಶ 75.10

**ಗಡಿಗಳು**

| | | |
|---|---|---|
| ಎತ್ತರ | : | ತಲಪಾಡಿ, ಕರ್ಣಾಟಕ ಪ್ರಾಂತ್ಯ |
| ದಕ್ಷಿಣ | : | ಮಂಗಲ್ಪಾಡಿ ಗ್ರಾಮ ಪಂಚಾಯತು |
| ಪೂರ್ವ | : | ವರ್ಕಾಡಿ ಪಂಚಾಯತು ಮೀಂಜ ಪಂಚಾಯತು |
| ಪಶ್ಚಿಮ | : | ಅರಬಿ ಸಮುದ್ರ |
| **ಜನಸಂಖ್ಯೆ** | : | 1991ರ ಖಾನೇಶುಮಾರಿ ಪ್ರಕಾರ |
| ಗಂಡಸರು | : | 15,580 |
| ಹೆಂಗಸರು | : | 16,520 |
| ಒಟ್ಟು | : | 32,100 |

**ಮನೆಗಳು :**

ಜನಸಾಂದ್ರತೆ : (ಚದರ ಕಿ.ಮೀ.ಗೆ ವಾಸಿಸುವ ಜನರು ) : 1309 (ಪ್ರತಿ ಕಿ.ಮೀ.ಗೆ)

**ಸಾಕ್ಷರತಾ ಸಂಖ್ಯೆ :**

| | | |
|---|---|---|
| ಗಂಡಸರು | : | 13200 |
| ಹೆಂಗಸರು | : | 11350 |
| ಪರಿಶಿಷ್ಟ ಜಾತಿ | : | |
| ಗಂಡಸರು | : | 850 |
| ಹೆಂಗಸರು | : | 520 |
| ಪರಿಶಿಷ್ಟ ವರ್ಗ | | |
| ಗಂಡಸರು | :. | 250 |
| ಹೆಂಗಸರು | : | 110 |

# ಮಂಜೇಶ್ವರ ಗ್ರಾಮ ಪಂಚಾಯತಿನ
# ಸಾಮಾಜಿಕ ಸಾಂಸ್ಕೃತಿಕ ಚರಿತ್ರೆ

ಮಂಜೇಶ್ವರವು ಬಹು ಪುರಾತನ ಕಾಲದಿಂದಲೂ ಒಳ್ಳೆಯ ವ್ಯಾಪಾರ ಕೇಂದ್ರವಾಗಿದ್ದು, ಚೈನಾ, ಅರಬಸ್ಥಾನ, ಪರ್ಶಿಯಾ ದೇಶಗಳ ಹಾಗೂ ಪಶ್ಚಿಮ ಕರಾವಳಿಯಲ್ಲಿರುವ ವಿವಿಧ ಬಂದರುಗಳ ಸಂಪರ್ಕದೊಂದಿಗೆ ವ್ಯಾಪಾರ ನಡೆಸುತ್ತಿತ್ತು. ಜೈನರು ತುಳುರಾಜ್ಯಕ್ಕೆ ಬಂದು ತುಳುರಾಜ್ಯ ಸ್ಥಾಪನೆ ಮಾಡಿ ರಾಜ್ಯಭಾರಕ್ಕೆ ಅನುಕೂಲವಾಗುವಂತೆ ಸೀಮೆಗಳನ್ನಾಗಿ ವಿಂಗಡಿಸಿ ಈ ಭಾಗಕ್ಕೆ ಮಂಜೇಶ್ವರ ಸೀಮೆಯೆಂದೂ ಹೆಸರಿಟ್ಟು, ಒಬ್ಬ ಬಲ್ಲಾಲನನ್ನು ನೇಮಿಸಿ, ಆತನ ಕೈಕೆಳಗೆ ಬಂಗ್ರ ಮಂಜೇಶ್ವರ, ಹೊಸಬೆಟ್ಟು, ಉದ್ಯಾವರ, ಬಡಾಜೆ, ಕುಂಜತ್ತೂರು, ಕಡಂಬಾರು ಮೀಂಜ, ವರ್ಕಾಡಿ, ಮೈಜಿಬೈಲು, ಮೂಡಂಬೈಲು ಎಂಬ ಹತ್ತು ಗ್ರಾಮಗಳನ್ನು ಕೊಟ್ಟರು. ಸ್ವಲ್ಪಕಾಲದಲ್ಲಿಯೇ ಮಂಜೇಶ್ವರವು ಒಂದು ದೊಡ್ಡ ಪಟ್ಟಣವಾಯಿತು. ಜೈನರು ಇಲ್ಲಿ ಗುಡ್ಡದ ಮೇಲ್ಪಾರ್ಶ್ವದಲ್ಲಿ ಚಂದ್ರನಾಥ ಬಸದಿಯನ್ನೂ, ಕೆಳಪಾರ್ಶ್ವದಲ್ಲಿ ಶಾಂತಿನಾಥ ಮತ್ತು ಪಾರ್ಶ್ವನಾಥ ಎಂಬ ಚತುರ್ಮುಖ ಬಸದಿಯನ್ನು ಕಟ್ಟಿಸಿದರು. ಮಂಜೇಶ್ವರ ಶ್ರೀ ಮದನಂತೇಶ್ವರ ದೇವಸ್ಥಾನದ ಸೀಮೆಯ ದೇವಸ್ಥಾನವನ್ನಾಗಿ ಮಾಡಿದರು. ಈಗಲೂ ಸಮುದ್ರ ಕಿನಾರೆಯಲ್ಲಿರುವ ರಿ. ಸರ್ವೆ ನಂಬ್ರ 3/2ರಲ್ಲಿ 2 ಎಕ್ರೆ 42 ಸೆಂಟ್ಸ್ ಸ್ಥಳವನ್ನು ಬಂಗ್ರ ಮಂಜೇಶ್ವರ ಗ್ರಾಮದ 6 ಮತ್ತು 7ನೇ ವಾರ್ಡಿನವರು "ಪತ್ತನಾಜೆ"ಯ ದಿವಸ ಎಲ್ಲರೂ ಸೇರಿ ಗುಳಿಗನ ಕೋಲ ನಡೆಸುತ್ತಿರುವುದು ಮೂಕಸಾಕ್ಷಿಯಾಗಿದೆ. ಇಕ್ಕೇರಿ ನಾಯಕನಾದ ವೆಂಕಟಪ್ಪನು ಈ ಊರಿನ ಭದ್ರತೆಗಾಗಿ ಉಪ್ಪಳ ಹೊಳೆಯಿಂದ ಮಂಜೇಶ್ವರ ಹೊಳೆಯ ವರೆಗೆ ಊರಿನ ಭದ್ರತೆಗಾಗಿ ಕೋಟೆ ಕೊತ್ತಲಗಳನ್ನು ಕಟ್ಟಿಸಿದರು. ಅಳಿವೆಯ ಹತ್ತಿರದಲ್ಲಿಯೇ ಇರುವ ಬೊಬ್ಬರ್ಯ ದೇವಸ್ಥಾನದ ಮುಂಭಾರ್ಶ್ವದಲ್ಲಿ ಉತ್ತುಂಗಕೋಟೆ ಬೊಬ್ಬರ್ಯ ಕಲ್ಲು ಸಜೀವ ನಿದರ್ಶನವಾಗಿದೆ. ಇಲ್ಲಿಗೆ ಪ್ರತೀ ವರ್ಷವೂ ಉದ್ಯಾವರ ಅರಸು ಮಂಜುಷ್ನಾರ್ ದೈವಗಳು ಭೇಟಿಕೊಡುವ ಪದ್ಧತಿ ಇದೆ.

ಶಂಕರ ದೇವಿ ಬಂಗರಾಣಿಯು ಇಕ್ಕೇರಿ ಅರಸರಿಗೆ ಕೊಡತಕ್ಕ ಕಪ್ಪವನ್ನು ಕೊಡದ ಕಾರಣ, ಊರಿನ ಭದ್ರತೆಗಾಗಿ ಕಟ್ಟಿದ ಕೋಟೆ ಕೊತ್ತಲವನ್ನು ಪುಡಿಗೈದು ತಪ್ಪಿಗಾಗಿ ಕಡಂಬಾರು, ಮೀಂಜ, ವರ್ಕಾಡಿ, ಮಜಿಬೈಲು, ಮೂಡಂಬೈಲು ಗ್ರಾಮಗಳನ್ನು ವಶಪಡಿಸಿಕೊಂಡನು. ಆ ಬಳಿಕ ರಾಣಿಗೆ ಈಗಿನ ಬಂಗ್ರ ಮಂಜೇಶ್ವರ ಹೊಸಬೆಟ್ಟು, ಉದ್ಯಾವರ, ಬಡಾಜೆ, ಕುಂಜತ್ತೂರು ಗ್ರಾಮಗಳನ್ನೂ ಮಾತ್ರ ಕೊಟ್ಟು ಮಂಜೇಶ್ವರ ಮಾಗಣೆಯೆಂದೇ ನಾಮಕರಣ ಮಾಡಿದನು.

ಇಕ್ಕೇರಿ ಅರಸರ ಕಾಲದಲ್ಲಿ ಉದ್ಯಾವರ ಸೂಪಿಬ್ಯಾರಿಯು ಅವರ ಮಗನಾದ ಪೊಕಚ್ಚು ಬ್ಯಾರಿಯವರು ಸೇನಾಧಿಪತಿಗಳಾಗಿದ್ದು ಕೊಲತ್ತರಸರ ಕೂಡೆ ಯುದ್ಧ ಮಾಡುತ್ತಿದ್ದಾಗ ಸೋಮಶೇಖರ ನಾಯಕನಿಗೆ ಸಹಾಯವನ್ನು ಮಾಡಿದ್ದರಲ್ಲದೆ ಕದನದಲ್ಲಿ ಜಯವನ್ನು ಸಂಪಾದಿಸಿಕೊಟ್ಟರು. ಇದರ ಸವಿನೆನಪಿಗಾಗಿ ಪೋಕಚ್ಚು ಬ್ಯಾರಿಯವರಿಗೆ ಹೊಸಬೆಟ್ಟು ಮತ್ತು ವರ್ಕಾಡಿ ಗ್ರಾಮದ ಪಾತೂರಿನಲ್ಲಿ ಉಂಬಳಿಯಾಗಿ ಭೂಮಿಯನ್ನು ಕೊಟ್ಟರು. ಕಣ್ವತೀರ್ಥದಿಂದ ಹರಿದು ಬೊಬ್ಬರ್ಯ ದೇವಸ್ಥಾನದ ಹತ್ತಿರ ಹರಿಯುತ್ತಿರುವ ನದಿ ಕಿನಾರೆಯ ಪೂರ್ವದಿಕ್ಕಿನಲ್ಲಿ ಉದ್ಯಾವರ ಜುಮ್ಮಾ ಮಸೀದಿಯೂ ವಿಶಾಲವಾದ ಕೆರೆಯನ್ನು ಕಟ್ಟಿಸಿದರು. ಈಗಲೂ ಉದ್ಯಾವರದ ಅರಸು ಮಂಜುಷ್ನಾರ್ ದೈವಗಳು ವರ್ಷಾವಧಿ ಜಾತ್ರೆಯ 2 ವಾರದ ಮೊದಲ ಶುಕ್ರವಾರದಂದು ಜುಮ್ಮಾ ಪ್ರಾರ್ಥನೆಯ ನಂತರ ಭೇಟಿಕೊಟ್ಟು ಹಿಂದೂ ಮುಸ್ಲಿಂರನ್ನು ಹರಸುವ ಪದ್ಧತಿಯು ಭಾರತದಲ್ಲಿ ಎಲ್ಲಿಯೂ ಕಾಣದ ಸೌಹಾರ್ಧತೆಯ ಸಂಕೇತವಾಗಿದೆ.

ಬಂಗ್ರ ಮಂಜೇಶ್ವರದ ಗ್ರಾಮದಲ್ಲಿ ಕಟ್ಟಿಸಿರುವ ಮೊಯ್ದಿನ್ ಜುಮ್ಮಾ ಮಸೀದಿ ಹಾಗೂ ಪಕೀರ್ ಸಾಹೇಬ್ ವಲಿಅಲ್ಲಾಯಿ ದರ್ಗಮತ್ತು ಮಂಜೇಶ್ವರ ಹೊಳೆಯ ದಕ್ಷಿಣದಲ್ಲಿ ರಾರಾಜಿಸಿಕೊಂಡಿರುವ ಉತ್ತುಂಗವಾದ ಕಣಿಲಗಿರಿಯಲ್ಲಿ ಶ್ರೀ ಭಗವತಿ ಮಾತೆಯು ತನ್ನ ಪಡಿಬಿಡಾರವಾಗಿ ನೆಲೆನಿಂತಿರುವ ಶ್ರೀ ದೇವಿಯ ಅವಿರ್ಭಾಗವು ಭರಣಿ ನಕ್ಷತ್ರದಲ್ಲಾದುದರಿಂದ ಈಗಲೂ ಅದೇ ನಕ್ಷತ್ರದ ದಿನದಲ್ಲಿ ವರ್ಷಾವಧಿ ಜಾತ್ರೆಯು ಜರಗುವುದು ಮಾತ್ರವಲ್ಲದೆ ಊರಿನ ಎಲ್ಲಾ ಮತಸ್ಥರಿಗೂ ಹೇಳಿಕೆ ನೀಡುವ ಪದ್ಧತಿಯು ಜಾತಿ ಮತ ಸೌಹಾರ್ದತೆಯಲ್ಲಿ ಬೆಳಗಿ ಬೆಳೆದ ನಾಡೆಂದು ಊಹಿಸಬಹುದು.

ಮಂಜೇಶ್ವರವು ಸುಭದ್ರವಾದ ಸ್ಥಳವಾದುದರಿಂದ ಕೀರ್ತೇಶ್ವರ ದೇವಸ್ಥಾನದ ಪರಿಸರ ಪ್ರದೇಶವು ಫಲವತ್ತಾದ ಸ್ಥಳವಿರುವುದನ್ನು ತಿಳಿದು ಕೊಂಕಣದಿಂದ ವಲಸೆ ಬಂದು ಇಲ್ಲಿ ಉತ್ತಮವಾದ ಸ್ಥಳವನ್ನು ಕಂಡು ಹಿಡಿದು ಕ್ರೈಸ್ತ ಜನಾಂಗದವರು ಮೇರಿ ಮರ್ಸಿಯಮ್ಮ ಕ್ರೈಸ್ತ ಮಂದಿರವನ್ನು ಸ್ಥಾಪಿಸಿದರು. ಇಲ್ಲಿ ಎಲ್ಲಾ ಜನಾಂಗದವರೊಂದಿಗೆ ಸೌಹಾರ್ದತೆಯಿಂದ ಜೀವನ ನಡೆಸಿರುತ್ತಾರೆಂಬುದು ಇತ್ತೀಚೆಗೆ ನವೀಕರಿಸಿದ ಇಗರ್ಜಿಯ ಸಂದರ್ಶನದಿಂದ ತಿಳಿಯಬಹುದು.

ನರಸಯ್ಯ ಶ್ಯಾನುಭೋಗರ ಹೊಸಮನೆಯಿರುವ ಸ್ಥಳದಲ್ಲಿ ಅರಬಿ ಸಾಹುಕಾರರು ದೊಡ್ಡ ಭಂಡಸಾಲೆಯನ್ನು ಕಟ್ಟಿ ಅವರಿಗಾಗಿ ಇದರ

ಮುಂದುಗಡೆ ಪಾಂಡ್ಯಲ ಮಸೀದಿ (ಭಂಡಸಾಲೆ ಪಳ್ಳಿ)ಯನ್ನು ಕಟ್ಟಿಸಿದರು. ಇವರ ಹಾಯಿ ಹಡಗು ಕೊರಟ ಮೊಗರಿನ ವರೆಗೆ ಹೋಗಿ "ಕೊಟ್ಯಗುಂಡಿ" ಎಂಬಲ್ಲಿ ಹಡಗನ್ನು ನಿಲ್ಲಿಸಿ ಅಡಿಕೆ, ತೆಂಗಿನಕಾಯಿ ಇತ್ಯಾದಿಗಳನ್ನು ಹೊರದೇಶಕ್ಕೆ ಸಾಗಿಸುತ್ತಿದ್ದರು.

ಅನಂತರ ಬಂದ ಹೈದರಾಲಿ, ಟಿಪ್ಪು ಸುಲ್ತಾನರ ಕಾಲದಲ್ಲಿ ಹೊಸತಾಗಿ ಮುಸಲ್ಮಾನ ಮತಕ್ಕೆ ಸೇರಿದವರು ಸೈನಿಕರಾಗಿಯೂ, ನಾವಿಕರಾಗಿಯೂ ಕಾಡ್ಯಾರು ಎಂಬ ಸ್ಥಳದಲ್ಲಿ ವೈರಿಗಳೊಡನೆ ಕಾದಾಡಿ ಈ ಊರು ವೈರಿಗಳಿಂದ ಸುಲಿಗೆಯಾಗದೆ ಸುರಕ್ಷಿತವಾಗಿ ಉಳಿಯಿತು. ಶ್ರೀ ಕೀರ್ತೇಶ್ವರ ದೇವಸ್ಥಾನದ ಪರಿಸರದಲ್ಲಿ ಈ ಪಂಚಾಯತಿಗೆ ಒದಗಿಸುವಷ್ಟು ಜಲಸಂಪತ್ತಿದೆ. ಕಣ್ವತೀರ್ಥದ ಉತ್ತರ ಭಾಗದಲ್ಲಿ ಪರಶುರಾಮನಿಂದ ಉಂಟಾದ ರಾಮತೀರ್ಥ ಹಾಗೂ ಅಗಸ್ತ್ಯ ತೀರ್ಥವು ಧಾರಾಳವಾದ ನೀರು ಬುಗ್ಗೆಯ ರೂಪದಲ್ಲಿ ಮೇಲಕ್ಕೆ ಬರುವುದನ್ನು ಈಗಲೂ ನೋಡಬಹುದು. ಇಂದಿಗೂ ಜನರು ಅದನ್ನು ತೀರ್ಥರೂಪದಲ್ಲಿ ಕೊಂಡು ಹೋಗುವುದನ್ನು ನಾವು ಕಾಣಬಹುದು. ಯೋಜನಾಬದ್ಧರಾಗಿ ಪ್ರವಾಸಿ ಕೇಂದ್ರವಾಗುವ ದಿನಗಳು ಬಹಳ ಹತ್ತಿರವಾಗುತ್ತಿದೆ.

ಕುಂಜತ್ತೂರು ಗ್ರಾಮದಲ್ಲಿ ಮಹಾಲಿಂಗೇಶ್ವರ ದೇವಸ್ಥಾನ ಬಳಿಯಲ್ಲಿ ಹರಿಯು ತೋಡು ಚಕ್ರದ ಹಾಗೆ ಉಕ್ಕುವ ನೀರಿನ ಬುಗ್ಗೆಯು ಒಂದು ಸಣ್ಣ ಕುಂಡಿಕೆಗೆ ಬಂದು ತೋಡಾಗಿ ಹರಿದು, ಮಾಣಿಂಜ ಬೈಲಿನ ಮೂಲಕ ಹರಿದು ಮಂಜೇಶ್ವರದ ಹೊಳೆಗೆ ಸೇರುವ ಈ ತೋಡು ಜಂಗಮ ಸ್ತ್ರೀಯಾದ ಗುಡ್ಡೆಕೇರಿ ಎಂಬಲ್ಲಿ ನೆಲೆ ನಿಂತಿದ್ದ ಸೂರವ್ವ ಎಂಬಾಕೆಯು ರೈತರ ಹಿತದೃಷ್ಟಿಯಿಂದ ಕಟ್ಟಿದ್ದ ಕಾರಣ ಇದಕ್ಕೆ ಸುರಮ ತೋಡೆಂದು ಹೆಸರಾಯಿತು. ಅಲ್ಲಿಯ ನಿವಾಸಿಯಾದ ಜಂಗಮ ಸಾಹುಕಾರನು ಮಠದ ಅಯ್ಯನವರ ಹೆಸರಿನಿಂದ ಕಟ್ಟಿದ ಕಾರಣ "ಅಯ್ಯರಕಟ್ಟೆ" ಎಂದು ಹೆಸರಾಯಿತು. ಈಗಲೂ ಆ ಕಟ್ಟೆಯು ಶ್ರೀ ಕೀರ್ತೇಶ್ವರ ದೇವಾಸದ ಪೂರ್ವದಿಕ್ಕಿನಲ್ಲಿ ಕಂಗೊಳಿಸುತ್ತಿದೆ. ಬಂಗ್ರ ಮಂಜೇಶ್ವರ ಗ್ರಾಮದ ಮೂರನೇ ವರ್ಗದ (ಕ್ಷತ್ರಿಯ) ನಾಗಯ್ಯನೆಂಬಾತನು ಕಟ್ಟಿದ ಕಟ್ಟೆಯಾದ ನಾಗಯ್ಯ ಕಟ್ಟೆಯು ಕಂಗೊಳಿಸುತ್ತಿದೆ. ಇದಕ್ಕೆ ಆಧಾರವಾದ ಶಿಲಾಶಾಸನಗಳು ಈಗಲೂ ಮಂಜೇಶ್ವರ ಅನಂತ ಕೃಷ್ಣರಾಯರ ಮನೆಯ ಎದುರುಗಡೆ ಕಾಣಬಹುದು.

1957ರ ನಂತರ ಕೇರಳ 1956ರ ತನಕ ಮದ್ರಾಸು ಸಂಸ್ಥಾನದ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಈ ಭಾಗವು ಸೇರಿಸಲ್ಪಟ್ಟಿತು.

ಗ್ರಾಮ ಸ್ವರಾಜ್ಯದ ಜೀವ ಜೀವಾಳ ಆಡಳಿತೆಯ ವಿಕೇಂದ್ರಿಕರಣ, ಮಂಜೇಶ್ವರ ಪಂಚಾಯತಿನ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮಹಿಳೆಯರ ಪಾಲುಗಾರಿಕೆಯ ಕೊರತೆ ಎಲ್ಲೆಲ್ಲೂ ಎದ್ದು ಕಾಣುವಂತಿದೆ. ಆದುದರಿಂದ ಈ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಶತ ಪ್ರಯತ್ನದಿಂದ ಅಧಿಕ ಸಂಖ್ಯೆಯಲ್ಲಿ ಮಹಿಳೆಯರನ್ನು ಎಲ್ಲಾ ರಂಗದಲ್ಲೂ ಪಾಲ್ಗೊಳ್ಳಿಸಬೇಕಾಗಿದೆ. ಈ ಎಲ್ಲಾ ಸಾಧನೆಗೆ ಜನಕೀಯ ಯೋಜನೆಯ ಬಗ್ಗೆ ಮಹಿಳೆಯರಿಗೆ ಪುಂಖಾನುಪುಂಖವಾಗಿ ವ್ಯಾಖ್ಯಾನ ನಡೆಯಬೇಕಾಗಿದೆ. ಗ್ರಾಮ ಸ್ವರಾಜ್ಯ ಎಂಬುದು ಕೈಗೆ ಎಟುಕದ ದೂರದ ನಕ್ಷತ್ರವಾಗಬಾರದು. ಗಾಂಧೀಜಿಯ ಗ್ರಾಮ ಸ್ವರಾಜ್ಯದ ಕನಸು ನನಸಾಗಲಿ. ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಹೆಸರು ಬೆಳಗಲಿ ಮಂಜೇಶ್ವರವು ಬೆಳಗಲೆಂದು ಹಾರೈಸುವ

ಬಿ.ಎಂ. ನಾರಾಯಣ
ಡಿಆರ್‌ಪಿ ಕನ್ವೀನರ್
ಮಂಜೇಶ್ವರ

**ಜೈ ಭಾರತ್**

# 4. ಭೂ ಪ್ರಕೃತಿ, ಜನಪ್ರಕೃತಿ, ಜಲಪ್ರಕೃತಿ, ಜೈವಿಕ ಪ್ರಕೃತಿ

## I ಭೂ ಪ್ರಕೃತಿ

ಮಂಜೇಶ್ವರ ಗ್ರಾಮ ಪಂಚಾಯತು ಭೂ ವಿಜ್ಞಾನ ಪರವಾಗಿ ತೀರ ಪ್ರದೇಶದಲ್ಲಿ ಇರುವ ಸ್ಥಳವಾಗಿರುತ್ತದೆ. ಅರಭಿ ಸಮುದ್ರದಿಂದ ಪೂರ್ವಕ್ಕೆ ಹರಡಿರುವ ಈ ಪ್ರದೇಶವು ಕಾಸರಗೋಡು ಜಿಲ್ಲೆಯ ಕಾಸರಗೋಡು ತಾಲೂಕಿನ ಮಂಜೇಶ್ವರ ಬ್ಲೋಕು ವಿಭಾಗದಲ್ಲಿ ಸೇರಿರುತ್ತದೆ. ಪಶ್ಚಿಮ ಭಾಗದಲ್ಲಿ ಸಮುದ್ರ ಕಿನಾರೆ ಮದ್ಯಭಾಗದಲ್ಲಿ ಬಯಲು, ಗುಡ್ಡೆಗಳಿಂದ ಕೂಡಿರುತ್ತದೆ. ಹೆಚ್ಚಿನ ಭೂ ಪ್ರದೇಶವು ಕೆಂಪುಕಲ್ಲು ಮಿಶ್ರಿತ ಮಣ್ಣಿ ಪ್ರದೇಶವಾಗಿರುತ್ತದೆ. ಭೂಪ್ರಕೃತಿಗನುಸಾರವಾಗಿ ಈ ಪ್ರದೇಶವನ್ನು ನಾಲ್ಕು ವಿಭಾಗವನ್ನಾಗಿ ಮಾಡಬಹುದು.

| ಭೂಮಿಯ ವಿಧ | ವಿಸ್ತೀರ್ಣ | ಶತಮಾನ |
|---|---|---|
| ಕೆಂಪುಕಲ್ಲು, ಕಲ್ಲು ಪ್ರದೇಶ | 3439.29 | |
| ತೀರ ಪ್ರದೇಶ | 85.00 | |
| ಹುಲ್ಲುಗಾವಲು ಪ್ರದೇಶ | 160.00 | |
| ಕೆಸರು ಮೆಕ್ಕಲು ಪ್ರದೇಶ | 2536.21 | |
| Total | | |

**1. ಕೆಂಪುಕಲ್ಲು ಪ್ರದೇಶ :**

ಮಂಜೇಶ್ವರ ಪಂಚಾಯತಿನಲ್ಲಿ ಒಟ್ಟು ವಿಸ್ತೀರ್ಣದ ______ ಶತಮಾನವು ಕೆಂಪುಕಲ್ಲು ಕೂಡಿದ ಮಣ್ಣು ಪ್ರದೇಶವಾಗಿರುತ್ತದೆ. ಕುಂಜತ್ತೂರು ಪೂರ್ವ ವಿಭಾಗ ಬಡಾಜೆ ಗ್ರಾಮ ವಾಮಂಜೂರು ಪೂರ್ವಭಾಗ ಈ ವಿಭಾಗಕ್ಕೆ ಸೇರಿರುತ್ತದೆ. ಇಲ್ಲಿ ಪ್ರಧಾನ ಕೃಷಿಯು ಭತ್ತ, ಗೇರು ಕೃಷಿ, ತೆಂಗು,ಮಾವು ಸಮ್ಮಿಶ್ರ ಬೆಳೆಯು ಬೆಳೆಸಲ್ಪಡುತ್ತದೆ. ನೀರಿನ ಅಭಾವದಿಂದಾಗಿ ನೀರಿನ ಬೆಳೆ ಬೆಳೆಯಿಸಲು ಸಾಧ್ಯವಾಗುವುದಿಲ್ಲ. ಗುಡ್ಡ ಪ್ರದೇಶದ ವಿವರಗಳನ್ನು ಕೆಳಗೆ ಕಾಣಿಸಲಾಗಿದೆ.

**ಕೋಷ್ಟಕ**

1. ಕೆಂಪುಗುಡ್ಡೆ
2. ಗುಡ್ಡಕೇರಿ
3. ಉದ್ಯಾವರ ಗುಡ್ಡೆ
4. ಬಡಾಜೆ ಗುಡ್ಡೆ ಪ್ರದೇಶಗಳು

**2. ತೀರ ಪ್ರದೇಶ :** ಮಂಜೇಶ್ವರ ಗ್ರಾಮ ಪಂಚಾಯತಿನಲ್ಲಿ 9 ಕಿ.ಮೀ. ಕಡಲ ಕಿನಾರೆ ಇರುವುದು. ಬಂಗ್ರ ಮಂಜೇಶ್ವರ, ಹೊಸಬೆಟ್ಟು ಪಶ್ಚಿಮಭಾಗ, ಉದ್ಯಾವರ, ಕುಂಜತ್ತೂರು, ಪಶ್ಚಿಮ ಭಾಗವು ಸೇರಿ ಸುಮಾರು 9 ಚ.ಕಿ.ಮೀ. ಪ್ರದೇಶವು ತೀರ ಪ್ರದೇಶದಲ್ಲಿ ಸೇರಿರುತ್ತದೆ. ಹೊಯ್ಗೆ ಮಿಶ್ರಿತ ಮೆಕ್ಕಲು ಮಣ್ಣು ಪ್ರದೇಶವಾಗಿರುವುದರಿಂದ ಭತ್ತ, ತೆಂಗು, ಕಂಗು, ತರಕಾರಿ ಪ್ರಧಾನ ಕೃಷಿ ಉತ್ಪನ್ನ ಸ್ಥಳವಾಗಿರುತ್ತದೆ.

**3. ಹುಲ್ಲುಗಾವಲು ಪ್ರದೇಶ :** ಗುಡ್ಡ ಪ್ರದೇಶದಲ್ಲಿರುವ ಈ ಭೂ ವಿಭಾಗವು ಹೆಚ್ಚಾಗಿ ಜಾನುವಾರುಗಳ ಮೇವಿಗಾಗಿ ಉಪಯೋಗಿಸಲ್ಪಡುತ್ತದೆ. 4 ಚ.ಕಿ.ಮೀ. ಸ್ಥಳವು ಮಂಜೇಶ್ವರ ಪಂಚಾಯತಿನ ಒಟ್ಟು ವಿಸ್ತೀರ್ಣದ 15% ನಷ್ಟು ಇರುತ್ತದೆ. ಹೆಚ್ಚಾಗಿ ಬಡಾಜೆ ಗ್ರಾಮದ ವಾಮಂಜೂರು ಗ್ರಾಮದ ಕೆಲ ಪ್ರದೇಶಗಳು ಹುಲ್ಲುಗಾವಲಿನಂತೆ ಉಪಯೋಗಿಸಲ್ಪಡುತ್ತದೆ.

**4. ಮೆಕ್ಕಲು ಪ್ರದೇಶ :** ತಲಪಾಡಿ ಹೊಳೆಯಿಂದ ಉಪ್ಪಳ ಹೊಳೆಯ ತೀರ ಪ್ರದೇಶವನ್ನು ಬಿಟ್ಟು ಸುಮಾರು ಪಶ್ಚಿಮಕ್ಕೆ 4 ಕಿ.ಮೀ. ಪ್ರದೇಶದ ವರೆಗೆ ಮೆಕ್ಕಲು ಮಣ್ಣು ಪ್ರದೇಶವಾಗಿರುತ್ತದೆ. 4 ಚ.ಕಿ.ಮೀ. ಪ್ರದೇಶ ವಿಸ್ತೀರ್ಣದಲ್ಲಿದ್ದು ಒಟ್ಟು ವಿಸ್ತೀರ್ಣದ 15% ದಷ್ಟು ಇಉವುದು. ಭತ್ತ ಕೃಷಿ, ಕಂಗು, ತೆಂಗು ಬೆಳೆಯು ಈ ಪ್ರದೇಶದಲ್ಲಿ ಬೆಳೆಸಲ್ಪಡುತ್ತದೆ. ನೀರಿನ ಕೊರತೆಯಿಂದಾಗಿ ಬೆಳೆಯು ಕಡಿಮೆಯಾಗುತ್ತಾ ಹೋಗುತ್ತದೆ.

## II ಜಲಪ್ರಕೃತಿ :

ಮಂಜೇಶ್ವರ ಗ್ರಾಮ ಪಂಚಾಯತಿನಲ್ಲಿ ಇತ್ತೀಚೆಗಿನ 10 ವರ್ಷಗಳಲ್ಲಿ ಸರಾಸರಿ ಮಳೆಯು 3460 mm ಆಗಿರುತ್ತದೆ. ಈ ಪ್ರದೇಶದಲ್ಲಿ ಸುಮಾರು ನವೆಂಬರ್ ತಿಂಗಳ ಮಳೆ ಬರುತ್ತದೆ. ದಶಂಬರ ಜನವರಿ ಫೆಬ್ರವರಿ ಮಾರ್ಚ್ ತಿಂಗಳಲ್ಲಿ 31.2 mm ಮಳೆ ಬರುತ್ತದೆ. ಸಾಧಾರಣ ಮಳೆ ಬೀಳುವ ಪ್ರದೇಶವಾಗಿರುವುದರಿಂದ ನೀರಿನ ಕ್ಷಾಮವು ಹೆಚ್ಚಾಗಿರುತ್ತದೆ. ಬಿದ್ದ ಮಳೆಯು ನೇರವಾಗಿ ಸಮುದ್ರ ಸೇರುವುದರಿಂದ ಮಾರ್ಚ್ ಏಪ್ರಿಲ್ ಮೇ ತಿಂಗಳಲ್ಲಿ ಕುಡಿಯುವ ನೀರಿಗೆ ಕ್ಷಾಮವಿರುತ್ತದೆ. ಕೃಷಿ ಬೆಳೆಯು ಕಡಿಮೆಯಾಗುತ್ತದೆ. ಈ ಪ್ರದೇಶದಲ್ಲಿ 52050 ತೋಡು, 3162 ಕೆರೆಗಳೂ ಈ ಪಂಚಾಯತಿನಲ್ಲಿ ಇರುತ್ತದೆ.

## III ಜನಪ್ರಕೃತಿ :

1991ನೇ ಖಾನೇಶುಮಾರಿ ಪ್ರಕಾರ ಈ ಪಂಚಾಯತಿನ ಜನಸಂಖ್ಯೆಯು 32,100 ಆಗಿರುತ್ತದೆ. ಅದರಲ್ಲಿ 18,666 ಗಂಡಸರೂ 13434 ಹೆಂಗಸರೂ ಆಗಿರುತ್ತಾರೆ. ಗಂಡಸರಿಗಿಂತ ಹೆಂಗಸರು ಈ ಪಂಚಾಯತಿನಲ್ಲಿ ಅಧಿಕವಾಗಿರುತ್ತಾರೆ. 1 ಚ.ಕಿ.ಮೀಟರಿಗೆ 1340 ಜನಗಳು ವಾಸಿಸುತ್ತಾರೆ. ಗಂಡಸರು 48.53 ಶತಮಾನವೂ ಹೆಂಗಸರೂ 51.46 ಶತಮಾನವೂ ಇರುತ್ತಾರೆ.

ಇದರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಜನರು 750 ಆಗಿರುತ್ತಾರೆ. ಅದರಲ್ಲಿ ಗಂಡಸರು 467ಹೆಂಗಸರು 291 ಆಗಿರುತ್ತಾರೆ. ಪರಿಶಿಷ್ಟ ವರ್ಗಕ್ಕೆ ಸೇರಿದ ಜನರು 360 ಇರುತ್ತಾರೆ. ಅದರಲ್ಲಿ 205 ಗಂಡಸರೂ 155 ಹೆಂಗಸರೂ ಇರುತ್ತಾರೆ. ಸ್ತ್ರೀ ಪುರುಷ ಅನುಪಾತವು 18:13 ಆಗಿರುತ್ತದೆ.

ಒಟ್ಟು ಜನಸಂಖ್ಯೆಯಲ್ಲಿ 2275 ಜನರು ಕೆಲಸಗಾರರು ಆಗಿರುತ್ತಾರೆ. 1750 ಗಂಡಸರು 525 ಹೆಂಗಸರು ವಿವಿಧ ಉದ್ಯೋಗಗಳಲ್ಲಿ ದುಡಿಯುತ್ತಾರೆ. ಸುಮಾರು 500 ಗಂಡಸರು 300 ಹೆಂಗಸರು ಕುಲಕಸುಬುಗಳನ್ನು ಮಾಡುವವರು ಆಗಿರುತ್ತಾರೆ. ಒಟ್ಟು ಜನಸಂಖ್ಯೆಯ.............. ಶತಮಾನ ಗಂಡಸರೂ.............. ಶತಮಾನ ಹೆಂಗಸರು ವಿವಿಧ ಕೆಲಸಗಳಲ್ಲಿ ಇರುತ್ತಾರೆ. ಇವರಲ್ಲಿ 2200 ಜನರು ಸ್ವಂತ ಕೃಷಿಕರಾಗಿರುತ್ತಾರೆ. ಇವರಲ್ಲಿ 3200 1750 ಗಂಡಸರೂ 450 ಹೆಂಗಸರೂ ಆಗಿರುತ್ತಾರೆ. 2500 ಜನರು ಕೃಷಿ ಕೆಲಸಗಾರರು ಆಗಿರುತ್ತಾರೆ. ಇವರಲ್ಲಿ 2000 ಗಂಡಸರು 500 ಹೆಂಗಸರು ಆಗಿರುತ್ತಾರೆ. ಮಾತ್ರವಲ್ಲದೆ ಕೃಷಿ ಪೆನ್ಶನ್ ಸಿಗುವವರು ಇದ್ದಾರೆ.

ಮೀನುಗಾರಿಕೆ ಮತ್ತು ಹೈನುಗಾರಿಕೆ ಮಾಡುವವರು ಈ ಪಂಚಾಯತಿನಲ್ಲಿ ಇರುತ್ತಾರೆ. 605 ಗಂಡಸರು 320 ಹೆಂಗಸರು ಕೆಲಸದಲ್ಲಿ ಇರುತ್ತಾರೆ.

ಕೆಂಪು ಕಲ್ಲು ಕೆತ್ತುವ ಕೆಲಸದಲ್ಲಿ 350 ಗಂಡಸರೂ - ಹೆಂಗಸರೂ ಇರುತ್ತಾರೆ.

ಗುಡಿಗಾರಿಕೆ ಕೆಲಸದಲ್ಲಿ 250 ಗಂಡಸರೂ 134 ಹೆಂಗಸರೂ ಇರುತ್ತಾರೆ. ವ್ಯಾಪಾರ, ಕೈಗಾರಿಕೆಗಳಲ್ಲಿ 500 ಗಂಡಸರೂ 100 ಹೆಂಗಸರೂ ಇರುತ್ತಾರೆ. ನಿರ್ಮಾಣ (ಇಟ್ಟಿಗೆ, ಮರದ ಉತ್ಪನ್ನ) ಕೆಲಸದಲ್ಲಿ 1000 ಗಂಡಸರೂ 500 ಹೆಂಗಸರೂ ಇರುತ್ತಾರೆ.

ವಿವರಗಳನ್ನು ಕೆಳಗೆ ಕೊಡಲಾಗಿದೆ.

ಹಲವು ಜಾತಿ ಮತಗಳಿಗೆ ಸೇರಿದ ಜನರು ವಾಸಿಸುವ ಪ್ರದೇಶವಾಗಿರುತ್ತದೆ. ಮಂಜೇಶ್ವರ ಗ್ರಾಮ ಪಂಚಾಯತು ಜಾತೀಯತೆಯ ಉಚ್ಚ ನೀಚತ್ವ ಹಿಂದೆ ಇದ್ದರೂ ಇಂದು ಅದು ತೀರಾ ಕಡಿಮೆಯಾಗಿರುತ್ತದೆ. ಎಲ್ಲಾ ಜಾತಿ ಮತ್ತ ಪಂಥದ ಜನರೂ ಈಗ ಒಂದೇ ಪ್ರದೇಶದಲ್ಲಿ ವಾಸಿಸುತ್ತಾರೆ. ಜನರು ಉತ್ತಮ ಬಂಧುತ್ವದಲ್ಲಿ ನಂಬಿಕೆ ಇರಿಸಿ ಬೇಧವಿಲ್ಲದೆ ಜೀವಿಸುತ್ತಾರೆ.

## IV ಜೈವ ಪ್ರಕೃತಿ :

ಶಿಲಾಯುಗದಲ್ಲಿ ಅತೀ ಹೆಚ್ಚು ಕಾಡು ಬೆಳೆಯುತ್ತಿದ್ದ ನದಿ ಹರಿಯುತ್ತಿದ್ದು ಬಯಲು ಪ್ರದೇಶವು ಕಡಿಮೆಯಾಗಿತ್ತು. ಕಾಡು ನಾಶವಾಗಿ ಅತ್ಯಂತ ಕಡಿಮೆ ಪ್ರದೇಶಗಳು ಕಾಡುಗಳು ಹಬ್ಬಿಕೊಂಡಿರುತ್ತದೆ. ಬನಗಳು, ಕಾಡು ಪ್ರದೇಶಗಳು ತೀರ ಕಡಿಮೆ ಪ್ರದೇಶಧಲ್ಲಿ ಮಾತ್ರ ಇರುವುದು. ಕಾಡು ಕಡಿಮೆಯಾದುದರಿಂದ ಆಯುರ್ವೇದ ಮದ್ದಿನ ಸಸಿಗಳು ಕಡಿಮೆಯಾಗಿರುತ್ತದೆ. ವೃಕ್ಷ ಆರಾಧನೆ ಇರುವ ಪ್ರದೇಶ ನಾಗಬನವಾಗಿರುತ್ತದೆ. ಹಿಂದಿನ ಕಾಲದಲ್ಲಿ ಮನುಷ್ಯನ ಆಹಾರ, ವಸತಿ ಮರವನ್ನು ಆಶ್ರಯಿಸಬೇಕಾಗಿರುತ್ತದೆ. ನಮ್ಮ ಪ್ರದೇಶದಲ್ಲಿ ಕೆಳಗಿನ ಮದ್ದಿನ ಸಸಿಗಳನ್ನು ಕಾಣಬಹುದು.

### ಕೋಷ್ಟಕ 1

| | | | |
|---|---|---|---|
| 1. | ಕಹಿಬೇವು | 12. | ಹಳದಿ |
| 2. | ಬೇವು | 13. | ಮಜ್ಜಿಗೆ ಹುಲ್ಲು |
| 3. | ಸೂತ್ರವಳ್ಳಿ | 14. | ಸನ್ನಾರು |

4. ಈಶ್ವರಬಳ್ಳಿ
5. ಶಂಖಪುಷ್ಪ
6. ಹಾಳೆಮರ
7. ಶ್ರೀಗಂಧ
8. ತುಳಸಿ
9. ಶತಾವರಿ
10. ಸರ್ಪಗಂಧಿ
11. ಕರಿಮೆಣಸು
15. ಅಣಿಲೆಕಾಯಿ
16. ಜಾಯಿಕಾಯಿ
17. ಗರಿಕೆಹುಲ್ಲು
18. ಪಂಚಪತ್ರ
19. ಭದ್ರಮುಷ್ಠಿ
20. ಇಲೋಳಿ ಸರ
21. ಬುಡವಿಲ್ಲದ ಬಳ್ಳಿ
22. ಅಮೃತಬಳ್ಳಿ

## ಕೋಷ್ಟಕ - 2

### ಪಕ್ಷಿ ಸಂಪತ್ತು :

ನಮ್ಮ ಪಂಚಾಯತಿನಲ್ಲಿ ವೃಕ್ಷಗಳು ಕಡಿಮೆಯಾಗುತ್ತಾ ಹೋಗುವುದರಿಂದ ಪಕ್ಷ ಸಂಕುಲವು ನಶಿಸುತ್ತಾ ಹೋಗುತ್ತಾ ಇದೆ.

1. ಬಾವಲಿ
2. ಕಡಲು ಕಾಗೆ
3. ಗಿಳಿ
4. ಪಾರಿವಾಳ
5. ಕೊಕ್ಕರೆ
6. ಕಾಗೆ
7. ಕೋಗಿಲೆ
8. ಗಿಡುಗ
9. ಹದ್ದು
10. ಮಿಂಚುಳ್ಳಿ
11. ಗುಬ್ಬಿ
12. ಮೈನಾ

**ಕೋಷ್ಟಕ 1 1991ನೇ ಖಾನೇಷುಮಾರಿ ಪ್ರಕಾರ ವಾರ್ಡುಗಳ ತಳಹದಿಯಲ್ಲಿ ವಿವರಗಳು**

| | ಜನಸಂಖ್ಯೆ | | | 6 ವಯಸ್ಸಿನ ವರೇಗೆ ಮಕ್ಕಳು | | | ಪರಿಶಿಷ್ಟ ಜಾತಿ | | | ಪರಿಶಿಷ್ಟ ವರ್ಗ | | | ಸಾಕ್ಷರತಾ | | |
|---|---|---|---|---|---|---|---|---|---|---|---|---|---|---|---|
| | ಗ | ಹೆ | ಒಟ್ಟು | ಗ | ಹೆ | ಒಟ್ಟು | ಗ | ಹೆ | ಒಟ್ಟು | ಗ | ಹೆ | ಒ | ಗ | ಹೆ | ಒ |
| | 1500 | 1260 | 2760 | 80 | 65 | 145 | 50 | 45 | 95 | 200 | 150 | 350 | 1000 | 800 | 1800 |
| | 1200 | 1560 | 2760 | 120 | 100 | 220 | 5 | 5 | 10 | - | - | - | 850 | 1000 | 1850 |
| | 2029 | 1160 | 3189 | 160 | 80 | 240 | 10 | 5 | 15 | - | - | - | 1200 | 1000 | 2200 |
| | 1500 | 1260 | 2760 | 130 | 85 | 215 | 250 | 110 | 360 | - | - | - | 800 | 650 | 1450 |
| | 1350 | 1410 | 2760 | 100 | 140 | 240 | 20 | 10 | 30 | - | - | - | 1000 | 1200 | 2200 |
| | 1400 | 1360 | 2760 | 140 | 120 | 260 | 110 | 90 | 200 | - | - | - | 850 | 900 | 1750 |
| | 1600 | 829 | 1829 | 150 | 80 | 230 | 5 | 5 | 10 | - | - | - | 750 | 525 | 1275 |
| | 1800 | 1029 | 2829 | 80 | 95 | 165 | 10 | 15 | 25 | 5 | 5 | 10 | 650 | 825 | 1475 |
| | 1850 | 979 | 2829 | 75 | 90 | 165 | 3 | 4 | 7 | - | - | - | 500 | 350 | 850 |
| | 980 | 849 | 1825 | 120 | 75 | 195 | - | - | - | - | - | - | 520 | 450 | 970 |
| | 1739 | 829 | 2565 | 100 | 60 | 160 | - | - | - | - | - | - | 650 | 429 | 1079 |
| | 1320 | 909 | 2229 | 92 | 80 | 172 | 4 | 2 | 6 | - | - | - | 800 | 750 | 1550 |
| Total | 18666 | 13434 | 32100 | 1347 | 1070 | 2417 | 467 | 291 | 758 | 205 | 155 | 360 | 9570 | 8879 | 18449 |

ಬೇರೆ ಬೇರೆ ತರದ ಕೈಗಾರಿಕೆ ಅಭಾವದಿಂದಾಗಿ ಉದ್ಯೋಗ ಕೊರತೆಯಿರುವ ಸ್ಥಳವಾಗಿರುತ್ತದೆ. ಕೃಷಿ ಬೆಳೆಯ ಪ್ರದೇಶವು ಕಡಿಮೆಯಾದುದರಿಂದ ಕೃಷಿ ಉದ್ಯೋಗ ಸ್ತರ ಸಂಖ್ಯೆಯೂ ಕಡಿಮೆಯಾಗಿದೆ. ಕೃಷಿರಂಗವು ಇದರಿಂದ ಬಾಧಿತವಾಗಿರುವುದು. ಕೆಲಸ ಇಲ್ಲದವರ ಸಂಖ್ಯೆಯು ಹೆಚ್ಚಾಗುತ್ತಾ ಹೋಗುವುದು.

ಜನರ ಪ್ರಧಾನ ವರಮಾನವು ಕೃಷಿಯಿಂದ ಆಗಿದೆ. ಆದರೆ ಕೃಷಿಯಲ್ಲಿ ಆದಾಯವು ನಷ್ಟಕರವಾದುದರಿಂದ ಕೃಷಿಕರೂ, ಕೃಷಿ ಕೆಲಸಗಾರರೂ, ಬಹಳ ಸಂಕಷ್ಟದಲ್ಲಿ ಇರುತ್ತಾರೆ.

ಉದ್ಯೋಗ ಸಂಬಂಧ ಕೋಷ್ಟಕ ಕೆಳಗೆ ಕೊಟ್ಟಿರುತ್ತದೆ.

**ಪಟ್ಟಿ**

**ಉದ್ಯೋಗದಲ್ಲಿ ಭಾಗವಹಿಸುವವರು**

4.1 ಸ್ಥಿರ ಉದ್ಯೋಗಸ್ಥರು

| | |
|---|---|
| ಪುರುಷರು | 1500 |
| ಸ್ತ್ರೀಯರು | 500 |
| ಒಟ್ಟು | 2000 |
| ಶತಮಾನ | 6% |

**4.2 ತಾತ್ಕಾಲಿಕ ಉದ್ಯೋಗಸ್ಥರು**

| | |
|---|---|
| ಪುರುಷರು | 250 |
| ಸ್ತ್ರೀಯರು | 25 |
| ಒಟ್ಟು | 275 |
| ಶತಮಾನ | 0.9% |

**4.3 ಪರಂಪರಾಗತ ಉದ್ಯೋಗದವರು**

| | |
|---|---|
| ಪುರುಷರು | 500 |
| ಸ್ತ್ರೀಯರು | 200 |
| ಒಟ್ಟು | 700 |
| ಶತಮಾನ | 2.2% |

**4.4 ಗುಡಿ ಕೈಗಾರಿಕೆ ಕೆಲಸ ಮಾಡುವವರು**

| | |
|---|---|
| ಪುರುಷರು | 250 |
| ಸ್ತ್ರೀಯರು | 134 |
| ಒಟ್ಟು | 384 |
| ಶತಮಾನ | 1.2% |

**4.5 ನಿರ್ಮಾಣ ಕೆಲಸ ಮಾಡುವವರು**

| | |
|---|---|
| ಪುರುಷರು | 1000 |
| ಹೆಂಗಸರು | 500 |
| ಸ್ತ್ರೀಯರು | |
| ಒಟ್ಟು | 1500 |
| ಶತಮಾನ | 4.6% |

**4.6 ವ್ಯಾಪಾರ, ಕೈಗಾರಿಕೆ ಕೆಲಸ ಮಾಡುವವರು**

| | |
|---|---|
| ಪುರುಷರು | 500 |
| ಸ್ತ್ರೀಯರು | 100 |
| ಒಟ್ಟು | 600 |
| ಶತಮಾನ | 1.9% |

**4.7 ಸ್ವಂತ ಕೆಲಸ ಮಾಡುವವರು**

| | |
|---|---|
| ಪುರುಷರು | 2200 |
| ಸ್ತ್ರೀಯರು | 1000 |
| ಒಟ್ಟು | 3200 |
| ಶತಮಾನ | 10% |

**4.8 ಕೃಷಿಕೂಲಿ ಮಾಡುವವರು**

| | |
|---|---|
| ಪುರುಷರು | 2000 |
| ಸ್ತ್ರೀಯರು | 500 |
| ಒಟ್ಟು | 2500 |
| ಶತಮಾನ | 7.8% |

**4.9 ಕೆಂಪುಕಲ್ಲು ಕೆಲಸಗಾರರು**

| | |
|---|---|
| ಪುರುಷರು | 350 |
| ಸ್ತ್ರೀಯರು | |
| ಒಟ್ಟು | |
| ಶತಮಾನ | 350 |

**4.10 ಸಣ್ಣ ಕೈಗಾರಿಕೆ ಕೆಲಸಗಾರರು**

| | |
|---|---|
| ಪುರುಷರು | 200 |
| ಸ್ತ್ರೀಯರು | 500 |
| ಒಟ್ಟು | 700 |
| ಶತಮಾನ | 2.2% |

# ಕೃಷಿ ಮತ್ತು ನೀರಾವರಿ

ಮಂಜೇಶ್ವರ ಪಂಚಾಯತು, ಕೃಷಿಕರ ಹಾಗೂ ಮೀನುಗಾರರ ಕೇಂದ್ರ ಸ್ಥಳವೆಂದು ಹೇಳಬಹುದು. ಅದರಲ್ಲೂ ಕೃಷಿಕರು ಹೆಚ್ಚೆಂದು ಹೇಳಿದರೆ ತಪ್ಪಾಗಲಾರದು. ಮಂಜೇಶ್ವರ ಪಂಚಾಯತಿನ ಪಶ್ಚಿಮ ತೀರದಲ್ಲಿ ವಿಶಾಲವಾದ ಅರಬ್ಬೀ ಸಮುದ್ರವೂ, ದಕ್ಷಿಣ ಬದಿಯಿಂದ ಉಪ್ಪಳ ನದಿಯೂ ಆವರಿಸಲ್ಪಟ್ಟವೂ, ಉತ್ತರಕ್ಕೆ ಕರ್ನಾಟಕ ಗಡಿಯಿಂದ ಸುತ್ತುವರಿಯಲ್ಪಟ್ಟೂ ಪೂರ್ವಕ್ಕೆ ವರ್ಕಾಡಿ ಹಾಗೂ ಮೀಂಜ ಪಂಚಾಯತ್ ಪ್ರದೇಶಗಳು ಗಡಿಯಾಗಿದ್ದೂ ಮಂಜೇಶ್ವರ ಪಂಚಾಯತಿನ ಒಟ್ಟು ವಿಸ್ತೀರ್ಣವೂ, 24:4 ಚದರ ಕಿಲೋ ಮೀಟರ್ ಆಗಿರುತ್ತದೆ. ಇದು ಕುಂಜತ್ತೂರು, ಉದ್ಯಾವರ, ಹೊಸಬೆಟ್ಟು ಬಂಗ್ರ ಮಂಜೇಶ್ವರ ಹಾಗೂ ಬಡಾಜೆ ಗ್ರಾಮಗಳಿಂದ ಕೂಡಿದ್ದು, 12 ವಾರ್ಡ್‌ಗಳಿಗೆ ವಿಂಗಡಿಸಲ್ಪಟ್ಟಿರುತ್ತದೆ.

ಇದರಲ್ಲಿ ಮುಖ್ಯವಾಗಿ ಕುಂಜತ್ತೂರು, ಬಡಾಜೆ ಗ್ರಾಮಗಳಲ್ಲಿ ಭತ್ತ, ಅಡಿಕೆ, ತೆಂಗು ಮುಖ್ಯ ಬೆಳೆ ಆಗಿಯೂ, ಉದ್ಯಾವರ, ಹೊಸಬೆಟ್ಟು, ಬಂಗ್ರ ಮಂಜೇಶ್ವರದಲ್ಲಿ ತೆಂಗಿನ ಬೆಳೆಯನ್ನು ಮುಖ್ಯವಾಗಿ ಬೆಳೆಸುತ್ತಾರೆ. ಸುಮಾರು 1450 ಹೆಕ್ಟೇರು ವಿಸ್ತೀರ್ಣದಲ್ಲಿ ಭತ್ತ, ತೆಂಗು, ಅಡಿಕೆ, ಧಾನ್ಯ, ತರಕಾರಿ, ಗೇರು, ಕರಿಮೆಣಸು, ಬಾಳೆ, ಮಾವು ಇತ್ಯಾದಿ ಕೃಷಿಗಳನ್ನು ಬೆಳೆಸುತ್ತಾರೆ.

ಕೃಷಿ ಕಾರ್ಮಿಕರ ಅಭಾವದಿದಲೂ, ಭತ್ತದ ಕೃಷಿಗೆ ತಗಲುವ ವೆಚ್ಚವು ಹೆಚ್ಚಾಗಿರುವುದರಿಂದಲೋ ಭತ್ತದ ಕೃಷಿ ಸ್ಥಳವೂ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಈ ಸ್ಥಳವೂ, ಇನ್ನಿತರ ವಾಣಿಜ್ಯ ಬೆಳೆಗಳಾಗಿಯೂ, ಉಪಯೋಗಿಸಲ್ಪಡುವುದು ಕಂಡು ಬರುತ್ತದೆ. ಆಧುನಿಕ ಉಪಕರಣಗಳ ಬಳಕೆಯಿಂದ (ಟಿಲ್ಲರ್) ಗದ್ದೆಗಳಿಂದ ಎತ್ತುಗಳಿಂದ ಉಳುವ ಪದ್ಧತಿಯು ಕಡಿಮೆಯಾಗುತ್ತದೆ. ಹಳೆಯ ಭತ್ತದ ಬೀಜಗಳಾದ, ಕಯಮು, ನೆಲ್ಲೂರು, ಉಬಾರ್ ಮುಂಡ, ಚಕ್ಕಚವ್ವೆ, ರಾಜಕಯಮ, ತೊನ್ನೂರು, ಮಸ್ಕತ್ತಿ, ಗಂಧಸಾಲೆ ಇತ್ಯಾದಿ ಬೀಜಗಳು ಕಡಿಮೆಯಾಗಿ ಈಗ ಹೊಸ ತಳಿಗಳಾದ ಜಯ, IR8 ಶಕ್ತಿ, ಪಲ್ಗುಣ, ಜ್ಯೋತಿ, ತ್ರಿವೇಣಿ, ಕೆ.ಕೆ.ಪಿ. ಇತ್ಯಾದಿ, ಆಧುನಿಕ ತಳಿಯ ಇಳುವರಿಗಳನ್ನು ಬೆಳೆಸುತ್ತಾರೆ. ಇದರಿಂದಾಗಿ ಸ್ವಲ್ಪ ಸ್ಥಳದಲ್ಲಿ ಬೇಸಾಯ ಮಾಡಿದರೂ ಹೆಚ್ಚು ಉತ್ಪತ್ತಿಯನ್ನು ಕಾಣಬಹುದು.

ಪರಂಪರಾಗತವಾಗಿ ಬಳಸಿಕೊಂಡು ಬಂದ ಕೀಟನಾಶಕಗಳ ಬದಲು ಈಗ ರಸಾಯನಿಕ ಕೀಟ ನಾಶಕಗಳನ್ನು ಬಳಸಲಾಗುತ್ತಿದೆ. ಪ್ರಕೃತಿದತ್ತ ಕೀಟನಾಶಕಗಳಾದ ಹಾವು, ಕಪ್ಪೆ, ಪಕ್ಷಿಗಳೂ, ಮೀನು, ಜೇಡ, ಇತ್ಯಾದಿಗಳ ಸಂತಾನಗಳು ಕಡಿಮೆಯಾದಂತೆ, ಕೀಟಗಳ ಹಾವಳಿ ಹೆಚ್ಚಾಗುತ್ತಲೇ ಬರುತ್ತದೆ. ಅದಕ್ಕಾಗಿ ಮಿತವಾದ ರೀತಿಯಲ್ಲಿ ರಾಸಾಯನಿಕ ಕೀಟನಾಶಕಗಳನ್ನು ಬಳಸಿ ಪ್ರಕೃತಿಧತ್ತವಾದ ಕೀಟನಾಶಕಗಳ ರಕ್ಷಣೆಯನ್ನು ಮಾಡುವುದರೊಂದಿಗೆ, ಹಳೆ ಕ್ರಮಗಳಾದ ಈಚಲು ಸೋಗೆ, ಕಹಿಬೇವಿನ ಎಣ್ಣೆ, ಸಾಬೂನು ನೊರೆ "ಇಂಗು" ನೀರುಳ್ಳಿ ಇತ್ಯಾದಿಗಳನ್ನು ಬಳಸಿ ಪ್ರಕೃತಿಯ ಸಮತೋಲನವನ್ನು ಕಾಪಾಡುವುದು ಅಗತ್ಯವಾಗಿದೆ.

ಮಣ್ಣಿನ ಸಾರವನ್ನು ಕಾಪಾಡಲು ಜೈವಿಕ ಗೊಬ್ಬರದ ಉಪಯೋಗವನ್ನು ಹೆಚ್ಚಿಸಿ (ಹಸಿರುಗೊಬ್ಬರ, ಹಟ್ಟಿಗೊಬ್ಬರ) ರಸಾಯನಿಕ ಗೊಬ್ಬರಗಳ ಉಪಯೋಗವನ್ನು ಕಡಿಮೆ ಮಾಡುವುದು ಅಗತ್ಯವಾಗಿದೆ.

ನೀರಾವರಿಗಾಗಿ ದಶಮಾನಗಳ ಹಿಂದೆ ಏತ್ತ ದಂಬೆ ಇತ್ಯಾದಿ ಮಾನವ ಶಕ್ತಿಗಳನ್ನು ಉಪಯೋಗಿಸುತ್ತಿದ್ದರು. ಈಗ ಇದರ ಬದಲಿಗೆ, ಪಂಪುಸೆಟ್ಟು, ಸೀಮೆಎಣ್ಣೆ, ವಿದ್ಯುತ್ ಶಕ್ತಿ, ಡೀಸಿಲ್ ಇತ್ಯಾದಿ ಶಕ್ತಿಗಳನ್ನು ಉಪಯೋಗಿಸುತ್ತಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ಲಾಭದ ದೃಷ್ಟಿಯಿಂದ ಆಹಾರ ಧಾನ್ಯದ ಬದಲು ವಾಣಿಜ್ಯ ಬೆಳೆಗಳನ್ನು ಬೆಳೆಸಲು ಪ್ರಾರಂಭಿಸಿದ ಕಾರಣ ಭತ್ತದ ಕೃಷಿಯು ಕಡಿಮೆಯಾಗುತ್ತಾ ಬಂತು. ಅನಾದಿ ಕಾಲದಿಂದಲೂ ನಾಟಿ, ಕೊಯ್ಲಿನ ಕೃಷಿ ಕೆಲಸಗಳಲ್ಲಿ ಪಾಲುಗೊಳ್ಳುತ್ತಿದ್ದ ಮಹಿಳೆಯರು ಬೀಡಿ ಕೆಲಸದತ್ತ ಆಕರ್ಷಿತರಾಗಿ ಕೃಷಿ ರಂಗದಲ್ಲಿ ಕಾರ್ಮಿಕರ ಅಭಾವ ಗೋಚರವಾಯಿತು. ಇಂದಿನ ವಿದ್ಯಾಭ್ಯಾಸ ಪದ್ಧತಿಯು, ಪದವಿಗಳಿಸುವಿಕೆ ಹಾಗೂ ಬಿಳಿ ಅಂಗಿ ಹುದ್ದೆಯನ್ನು ಪಡೆಯಲು ವಿದ್ಯಾರ್ಥಿಗಳನ್ನು ಅಣಿಗೊಳಿಸಲಾಗಿದೆ. ನಮ್ಮ ಪ್ರಧಾನವಾದ ಕೃಷಿರಂಗದ ಅವಶ್ಯಕತೆಗಳ ಸಮಸ್ಯೆಗಳ ಕುರಿತು ಪ್ರಾಥಮಿಕ ಮಾಹಿತಿಗಳನ್ನು ಮನದಟ್ಟು ಮಾಡಿಕೊಳ್ಳುವಲ್ಲಿ ಸೋತಿದೆ. ಕೃಷಿ ಕೆಲಸ, ವ್ಯವಸಾಯ ಮಾಡುವುದು ನಮ್ಮ ಭಾವಿ ಜನಾಂಗಕ್ಕೆ ಆವಶ್ಯವಾದದ್ದೆಂದು ಅದು ನಮ್ಮ ಭಾರತೀಯ ಪರಂಪರೆಯ ಉದ್ದೇಶವೆಂದೂ, ತಿಳಿಸುವುದು ಅವಶ್ಯವಲ್ಲವೆ - ?

**ಕೃಷಿ ಭೂಮಿಗೆ ಸಂಬಂಧಿಸಿದ ವಿವರಗಳು ಕೋಷ್ಟಕ - ೧**

| ಗ್ರಾಮ | ನಂಜ | ಪುಂಜ | ಬಾಗ್ಯೆತು | ಖಾಲಿ | ಪದರಿಪೋಕು | ವಿಸ್ತೀರ್ಣ |
|---|---|---|---|---|---|---|
| ಕುಂಜತ್ತೂರು | 381-92 | 120 | 300 | 1241-79 | 110-03 | 2154-11 |
| ಉದ್ಯಾವರ | 175-62 | 60-05 | 201-91 | 434-17 | 111-44 | 983-19 |
| ಹೊಸಬೆಟ್ಟು | 103-07 | 20-00 | 141-69 | 218-80 | 146-44 | 629-60 |
| ಬಂಗ್ರಮಂಜೇಶ್ವರ | 111-70 | 26.15 | 155-15 | 192-04 | 215-99 | 706-03 |
| ಬಡಾಜೆ | 153-96 | 95-00 | 295-99 | 963-02 | 74-40 | 1532-57 |
| Total | 926-27 | 321-02 | 1094-74 | 3049-82 | 658-30 | 6075-50 |

## ಭೂಮಿಯ ಉಪಯೋಗ

ನಮ್ಮ ಪಂಚಾಯತಿನ ಮೊತ್ತ ವಿಸ್ತೀರ್ಣವು 6075-50 ಎಕ್ರೆ ಸ್ಥಳ ಹೊಂದಿರುತ್ತದೆ. ನಮ್ಮ ಪಂಚಾಯತಿನ ತೀರ ಪ್ರದೇಶದಲ್ಲಿ ಹೊಯ್ಗೆ ಮಣ್ಣು, ಫಲವತ್ತಾದ ಮೆಕ್ಕಲು ಮಣ್ಣು ಹೊಂದಿರುತ್ತದೆ. ಇನ್ನುಳಿದ ಭಾಗಗಳಲ್ಲಿ ಕೆಂಪು ಕಲ್ಲು ಮಣ್ಣು ಧಾರಾಳವಾಗಿ ಕಾಣಬಹುದು. ತೀರ ಪ್ರದೇಶದಲ್ಲಿ ಧಾರಾಳವಾಗಿ ತೆಂಗು ಕೃಷಿಯನ್ನು ಕಾಣಬಹುದು. ಇನ್ನು ಉಳಿದ ಭಾಗಗಳಲ್ಲಿ ಭತ್ತ, ಅಡಿಕೆ, ಗೇರು, ಬಾಳೆ ಕರಿಮೆಣಸು ತರಕಾರಿಗಳನ್ನು ಬೆಳೆಸುತ್ತಾರೆ. ತಗ್ಗು ಪ್ರದೇಶವಾದ ಬಯಲುಗಳಲ್ಲಿ ಭತ್ತದ ಕೃಷಿಯನ್ನು ಇಳಿಜಾರು ಪ್ರದೇಶಗಳಲ್ಲಿ ಅಡಿಕೆ ಬೆಳೆಯನ್ನು ಎತ್ತರ ಪ್ರದೇಶದಲ್ಲಿ ಗೇರು ಮತ್ತು ಇನ್ನಿತರ ಬೆಳೆಯನ್ನು ಬೆಳೆಸುತ್ತಾರೆ.

**ಕೋಷ್ಟಕ - ೨**

**ಬೆಳೆಯ ವಿಸ್ತೀರ್ಣವೂ ಉತ್ಪಾದನೆಯು**

| ಬೆಳೆಯ ವಿವರ | ವಿಸ್ತೀರ್ಣ ಹೆಕ್ಟೆರುಗಳಲ್ಲಿ | ಉತ್ಪಾದನೆ ಮೆಟ್ರಿಕ್ ಟನ್‌ಗಳಲ್ಲಿ | ಉತ್ಪಾದನೆ ಹೆಕ್ಟೆರಿಗೆ ಕೆ.ಜಿ.ಗಳಲ್ಲಿ |
|---|---|---|---|
| ಭತ್ತದ ಒಂದನೇ ಬೆಳೆ | 305 | 869 | 2850 |
| ಭತ್ತದ ಎರಡನೇ ಬೆಳೆ | 206 | 446 | 2850 |
| " ಮೂರನೇ ಬೆಳೆ | 30 | 90 | 3000 |
| ತೆಂಗು | 429 | 3081 | 7200 |
| ಧಾನ್ಯ | 40 | 16 | 4000 |
| ಅಡಿಕೆ | 225 | 585 | 2600 |
| ಗೇರು | 230 | 38 | 900 |
| ತರಕಾರಿ | 45 | 5625 | 1250 |
| ಕರಿಮೆಣಸು | 4 | 2.2 | 550 |
| ಬಾಳೆ | 20 | 100 | 5 |
| ಗಾಳಿಮರ | 123 | | |

**ಕೋಸ್ಟಕ**

**ಮಳೆಯ ವಿವರ 1994-95**

| ತಿಂಗಳು degrees in Celcious | ಹವಾಮಾನ ಮಿಲಿಮೀಟರ್‌ನಲ್ಲಿ | ಮಳೆ ಬೀಳುವ ಮಳೆಯ ದಿನಗಳು | ವರ್ಷದಲ್ಲಿ |
|---|---|---|---|
| ಜನವರಿ | 26.5 | 1.7 | |
| ಫೆಬ್ರವರಿ | 26.9 | 1.9 | - |
| ಮಾರ್ಚ್ | 28.1 | 8.9 | 1 |
| ಎಪ್ರಿಲ್ | 29.2 | 40.0 | 4 |
| ಮೇ | 29.0 | 232.7 | 12 |
| ಜೂನ್ | 26.00 | 981.6 | 27 |
| ಜುಲೈ | 26.00 | 1058.6 | 30 |
| ಅಗೋಸ್ತು | 26.00 | 576.9 | 28 |
| ಸೆಪ್ಟೆಂಬರ್ | 26.1 | 267.0 | 22 |
| ಅಕ್ಟೋಬರ್ | 26.8 | 205.9 | 15 |
| ನವೆಂಬರ್ | 27.1 | 70.6 | 5 |
| ಡಿಸೆಂಬರ್ | 26.8 | 18.2 | 1 |

ಮಂಜೇಶ್ವರ ಪಂಚಾಯತಿನ ಹೆಚ್ಚಿನ ಭಾಗಗಳು ಕರಾವಳಿಯ ಪ್ರದೇಶವಾಗಿದ್ದು ಇಲ್ಲಿನ ಹವಾಮಾನದ ವ್ಯತ್ಯಾಸ ತೀರ ಕಡಿಮೆ. ಅತೀ ಹೆಚ್ಚು ಉಷ್ಣವು ಏಪ್ರಿಲ್ ಮೇ ತಿಂಗಳಲ್ಲಾದರೆ ಅತಿ ಕಡಿಮೆ ಉಷ್ಣವು ಡಿಸೆಂಬರ್ ಹಾಗೂ ಜನವರಿಯಲ್ಲಿ ತಿಂಗಳಲ್ಲಾಗುತ್ತದೆ. ವಾರ್ಷಿಕ ಹವಾಮಾನವು 27.0 Degree ಆಗಿಯೂ ಆಗುತ್ತದೆ. ಅದರಂತೆ ಅತೀ ಹೆಚ್ಚು ಮಳೆಯು ಜೂನ್ ಹಾಗೂ ಜುಲೈ ತಿಂಗಳಲ್ಲಾದರೆ ಅತೀ ಕಡಿಮೆ ಮಳೆಯು ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ. ಈ ಪ್ರದೇಶದಲ್ಲಿ ವರ್ಷವಿಡೀ ನೀರು ತುಂಬಿರುವ ಜಲಾಶಯಗಳಿಲ್ಲ. ಇಲ್ಲಿಯ ಜನರು ಮುಖ್ಯವಾಗಿ ಕೃಷಿಕರು ಮಳೆಯ ನೀರನ್ನು ಆಶ್ರಯಿಸಿರುತ್ತಾರೆ. ವರ್ಷದಲ್ಲಿ ಸರಾಸರಿ ಹೆಚ್ಚು ಕಡಿಮೆ 120ರಿಂದ 140 ಮಳೆಯ ದಿನಗಳನ್ನು ನಿರೀಕ್ಷಿಸಬಹುದು.

## Table - 1
## Manjeshwar Panchayat - Climate data

| Month<br>Temperature<br>in degree C | Mean<br>in<br>mm | Rainfall<br>of<br>Rainy days | Number |
|---|---|---|---|
| January | 26.5 | 1.7 | - |
| February | 26.9 | 1.9 | - |
| March | 28.1 | 8.9 | 1 |
| April | 29.2 | 40.0 | 4 |
| May | 29.0 | 232.7 | 12 |
| June | 26.6 | 981.6 | 27 |
| July | 26.0 | 1058.6 | 30 |
| August | 26.0 | 576.9 | 28 |
| September | 26.1 | 267.0 | 22 |
| October | 26.8 | 2059 | 15 |
| November | 27.1 | 70.6 | 5 |
| December | 26.8 | 18.2 | 1 |
| Annual | 27.9 | 3467.0 | 147 |

**MEAN MONTHLY RAINFALL**

**MANJESHWAR PANCHAYAT**

ಭತ್ತದ ಕೃಷಿ ಮಾಡುವ ತಗ್ಗು ಪ್ರದೇಶಗಳಾದ ಬಡಾಜೆ, ಪೊಸೋಟು ಕೊರಟ ಮೊಗರು, ಕಣಿಲ, ಉದ್ಯಾವರ, ಕಣ್ವತೀರ್ಥ (ಸ್ವಲ್ಪಭಾಗದಲ್ಲಿ) 1ನೇ ಬೆಳೆ ಮಾಡುವರೆ ಸಾಧ್ಯವಾಗುವುದಿಲ್ಲ. ಇಲ್ಲಿ ನೆರೆಯ ನೀರು ತುಂಬಿ ಕೃಷಿ ಭೂಮಿ ಹೊಳೆಯ ಅಥವಾ ತೋಡಿನ ಮಟ್ಟಕ್ಕಿಂತ ತಗ್ಗಿನಲ್ಲಿರುವುದು. ತೆಂಗುಕೃಷಿಗೆ ಅನುಕೂಲವಾದ ಮಣ್ಣು ಇದ್ದು ಉಳಿದ ಕೃಷಿಯ ವಿಸ್ತೀರ್ಣಕ್ಕಿಂತ ಹೆಚ್ಚು ಸ್ಥಳದಲ್ಲಿ ಈ ಕೃಷಿ ಆಗುತ್ತಾ ಇದೆ. ಅದರಂತೆ ವಾಣಿಜ್ಯ ಕೃಷಿಗಳಾದ ಅಡಿಕೆ, ಗೇರು, ತರಕಾರಿ ಇತ್ಯಾದಿಗಳ ಉತ್ಪತ್ತಿಯು ಎಷ್ಟೋ ಹೆಚ್ಚಾಗುತ್ತಾ ಇದೆ.

## ಕೋಷ್ಟಕ ನಂ. 3

## ನದಿಗಳ ಹಾಗೂ ತೋಡುಗಳ ವಿವರ

| ಕ್ರ.ಸಂ. | ನದಿಯ ಹೆಸರು | ನದಿಯ ತೋಡಿನ ಉದ್ದ |
|---|---|---|
| | ಮಂಜೇಶ್ವರ ಹೊಳೆ | 5-60 ಕಿಲೋ ಮೀಟರ್ |
| | ಉಪ್ಪಳ ಹೊಳೆ (ಕೊನೆಯ ಭಾಗ) | 1-70 ಕಿಲೋ ಮೀಟರ್ |
| | ಕುಂಜತ್ತೂರ್ ಸೂರಮ್ಮ ತೋಡು | 5-25 ಕಿ.ಮೀ. |
| | ಹೊನ್ನೆ ಕಣ್ವತೀರ್ಥ | 2.50 ಕಿ.ಮೀ. |
| | ಹೊನ್ನೆ ಕೊಪ್ಪಳ | 3.20 ಕಿ.ಮೀ. |
| | ಅಡ್ಕ ಸಳಾಯಿ | 1.00 ಕಿ.ಮೀ. |
| | ಪೊಸ್ಕೋಡುತೋಡು | 0.50 ಕಿ.ಮೀ. |
| | ಇಡ್ಯ ತೋಡು | 1.00 ಕಿ.ಮೀ. |
| | ಕಣಿಲ ತೋಡು | 0.50 ಕಿ.ಮೀ. |
| | ಮಚ್ಚಂಪಾಡಿತೋಡು | 0.50 ಕಿ.ಮೀ. |
| | ಸುರಿಬೈಲ್ ತೋಡು | 0.75 ಕಿ.ಮೀ. |
| | ಕೊಪ್ಪಳ ಬಂಗ್ರ ಮಂಜೇಶ್ವರ ತೋಡು | 1.00 ಕಿ.ಮೀ. |
| | ವಾಮಂಜೂರು ತೋಡು | 0.50 ಕಿ.ಮೀ. |
| | ಉಪ್ಪಿನಕಳ ತೋಡು | 0.50 ಕಿ.ಮೀ. |

ಮಂಜೇಶ್ವರದ ಹೊಳೆಯು ಕರ್ಣಾಟಕ ಪ್ರಾಂತ್ಯದ ಮುಡಿಪು ಎಂಬಲ್ಲಿ ಉಗಮಿಸಿ ವರ್ಕಾಡಿ ಪಂಚಾಯತಿನ ಪಾವೂರು ಗ್ರಾಮದ ಮುಖಾಂತರ ಬಡಾಜೆ ಗ್ರಾಮದಲ್ಲಿ ಹರಿದು ಬಂಗ್ರ ಮಂಜೇಶ್ವರ ಹೊಸಬೆಟ್ಟು ಗ್ರಾಮಗಳಾಗಿ ಅರಬೀ ಸಮುದ್ರವನ್ನು ಸೇರುವುದು. ಪುರಾತನ ಕಾಲದಲ್ಲಿ ಈ ಹೊಳೆಯಲ್ಲಿ ವ್ಯಾಪಾರಕ್ಕಾಗಿ ಅರಬೀ ಸಮುದ್ರದಿಂದ ಬಡಾಜೆ ಗ್ರಾಮದ ಕೊಟ್ಯಾಗುಂಡಿ ವರೆಗೆ ದೇಶೀಯ ಹಾಗೂ ಪರದೇಶೀಯ ಮಂಜಿಗಳು ಬರುತ್ತಿದ್ದುವು. ಆದರೆ ಈಗ ಹೊಯ್ಗೆ ತುಂಬಿ ಕೇವಲ ದೋಣಿಗಳನ್ನು ಕೊಂಡು ಹೋಗುವುದಕ್ಕೂ ಅಸಾಧ್ಯವಾಗಿದೆ.

ಅದರಂತೆ ಬಂಗ್ರ ಮಂಜೇಶ್ವರದ ಗ್ರಾಮದಿಂದ ಹರಿಯುವ ಹೊಳೆಯು ಮಳೆಗಾಲದಲ್ಲಿ ವಿಶೇಷ ಮಹಾಪೂರದಿಂದ ತಗ್ಗು ಪ್ರದೇಶದಲ್ಲಿ ವಾಸಿಸುವ ಜನರನ್ನು ಸುರಕ್ಷಿತ ಸ್ಥಳಗಳಿಗೆ ಹೋಗುವಂತೆ ಮಾಡುವ ದುಃಖಕರವಾದ ಸನ್ನಿವೇಶಗಳು ಹಲವು ವರ್ಷಗಳ ಅನುಭವವಾಗಿದೆ. ಸೂರಮ್ಮ ತೋಡು ಚಕ್ರತೀರ್ಥ ಎಂಬಲ್ಲಿಂದ ಉಗಮಿಸಿ ಕುಂಜತ್ತೂರ್ ಅಂಬಿತ್ತಡಿಯಾಗಿ ಉದ್ಯಾವರ ರೈಲ್ವೆ ಸ್ಟೇಶನ್ ಬಳಿಯಿಂದ ಹೊಸಬೆಟ್ಟು ಬೈಲಿನಲ್ಲಿ ಹರಿದು ಮಂಜೇಶ್ವರ ಹೊಳೆಯನ್ನು ಸೇರುವುದು. ಈ ತೋಡು ವರ್ಷವಿಡೀ ಒಸರು ನೀರಿನಿಂದ ತುಂಬಿ ಈ ಪ್ರದೇಶದ ಜನರಿಗೆ ತುಂಬಾ ಉಪಕಾರಿಯಾಗಿತ್ತು. ಆದರೆ ಈಗ ಮಣ್ಣು ತುಂಬಿ ಹೊಸಬೆಟ್ಟು ಇತ್ಯಾದಿ ಸ್ಥಳಗಳಲ್ಲಿ ಮೊದಲಿನಂತೆ ಕೃಷಿ ಮಾಡುವರೇ ಅಸಾಧ್ಯವಾದ ಪರಿಸ್ಥಿತಿಯನ್ನು ಉಂಟುಮಾಡಿದೆ.

## ಕೋಷ್ಟಕ 5

## ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಿನಿಗಳ ಉಪಯೋಗ

| ಸರ್ವೆನಂ. | ಸ್ಥಾಪನೆಗಳು | ಮೆಟ್ರಿಕ್ ಟನ್ | ಮೆಟ್ರಿಕ್ ಟನ್ | | ವರ್ಷ |
|---|---|---|---|---|---|
| | | | ದ್ರವ | ಘನ | |
| 1 | ಸಹಕಾರಿ ರಂಗ | - | - | | 1993-94 |
| 2 | ಖಾಸಗಿರಂಗ | 474.26 | 516.00 | 3175 | 1995-96 |
| | | 5125.3 | 314.00 | 955.00 | 1994-95 |
| | | 542.75 | 412.00 | 1170.00 | 1995-96 |

ರಾಸಾಯನಿಕ ಗೊಬ್ಬರ, ಶೇಖರಣೆ ಹಾಗೂ ವ್ಯಾಪಾರಕ್ಕಾಗಿ ಸಹಕಾರಿ ರಂಗದಲ್ಲಿ ದಾಸ್ತಾನು ಕೇಂದ್ರ ಇಲ್ಲದಿರುವುದು ಈ ಪಂಚಾಯತಿನ ಒಂದು ಕೊರತೆಯಾಗಿದೆ. ಖಾಸಗಿ ರಂಗದಲ್ಲಿ 4 ಸಂಸ್ಥೆಗಳಿಗೆ ರಾಸಾಯನಿಕ ಗೊಬ್ಬರಗಳ ಹಾಗೂ ಕೀಟನಾಶಕಗಳ ಸರಿಯಾದ ಬಳಕೆಯ ಅನುಭವ ಕೃಷಿಕರಲ್ಲಿ

# MANJESWARAM PANCHAYAT
## WATER AVAILABILITY

③



ಇಲ್ಲದಿರುವುದರಿಂದ ಅಗತ್ಯಕ್ಕಿಂತಲೂ ಹೆಚ್ಚು ನಷ್ಟವಾಗುವ ಸನ್ನಿವೇಶಗಳಿವೆ. ಮಣ್ಣಿನ ಸ್ವಭಾವ ಮಣ್ಣಿನ ಸರಿಯಾದ ಪರೀಕ್ಷೆ ಇಲ್ಲದಿರುವುದರಿಂದ ಉತ್ಪತ್ತಿಯಲ್ಲಿ ಏರುಪೇರುಗಳಾಗುತ್ತವೆ. ಜೈವಿಕ ಗೊಬ್ಬರದ ಹೆಚ್ಚು ಉಪಯೋಗವಾಗುವಂತೆ ಆಧುನಿಕ ಕ್ರಮಗಳಾದ ಎರೆಹುಳ ಗೊಬ್ಬರ, ಬೆಕ್ಟೀರಿಯಾ ಗೊಬ್ಬರ ಇತ್ಯಾದಿಗಳಿಗೆ ಪ್ರೋತ್ಸಾಹವಿಲ್ಲದೆ ಕೃಷಿಯ ಸಾರವತ್ತತೆಯು ಕಡಿಮೆಯಾಗುತ್ತಾ ಇದೆ.

## ರಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಉಪಯೋಗಗಳು

**ಮೆಟ್ರಿಕ್ ಟನ್ನುಗಳಲ್ಲಿ** **ಕೋಷ್ಟಕ 6**

| ವರ್ಷ | ನೈಟ್ರೋಜನ್ | ಫ್ರೊಸ್‌ಪರಸ್ | ಪ್ರೊಟೀನ್ |
|---|---|---|---|
| 1986 | 45 | 15 | 50 |
| 1987 | 40 | 12 | 45 |
| 1988 | 48 | 16 | 52 |
| 1989 | 59 | 18 | 55 |
| 1990 | 52 | 21 | 58 |
| 1991 | 55 | 21 | 60 |
| 1992 | 60 | 30 | 70 |
| 1993 | 65 | 36 | 80 |
| 1994 | 70 | 36 | 80 |
| 1994 | 70 | 36 | 90 |
| 1995 | 77 | 38 | 85 |

## ಕೋಷ್ಟಕ 7

| ವಾರ್ಡುಗಳು | | ಉಳುವ ಉಪಕರಣಗಳು | | | | ಮದ್ದು ಬಿಡುವ ಹಾಗೂ ಇತರ ಯಂತ್ರಗಳ ವಿವರ | | | | |
|---|---|---|---|---|---|---|---|---|---|---|
| ಟ್ರಾಕ್ಟರ್ | ಟಿಲ್ಲರ್ | ನೇಗಿಲು | ರೋರರ್ | ಸ್ಪ್ರೇಯರ್ | ಪವರ್ | ಪಂಪುಸೆಟ್ | | | | |
| 1 | - | - | 30 | 7 | - | 2 | - | - | - | 95 |
| 2 | - | - | 20 | 4 | - | - | - | - | - | 15 |
| 3 | - | 1 | 50 | 10 | - | - | 1 | 2 | 1 | 50 |
| 4 | - | 1 | 10 | 5 | - | - | 1 | - | - | 10 |
| 5 | - | - | 5 | 2 | - | - | - | - | - | 20 |
| 6 | - | - | 5 | 4 | - | 1 | - | 1 | 1 | 10 |
| 7 | - | 2 | 3 | 3 | - | - | - | 1 | 1 | 15 |
| 8 | - | - | 10 | 3 | - | - | - | 1 | 1 | 15 |
| 9 | - | - | 5 | - | - | - | - | - | - | 10 |
| 10 | - | - | - | - | - | - | - | - | - | 8 |
| 11 | - | - | 8 | 2 | - | - | - | - | - | 10 |
| 12 | - | 1 | 5 | 1 | - | - | - | - | - | 10 |
| Total | | 5 | 151 | 41 | - | 3 | 2 | 4 | 3 | 218 |

ಇಲ್ಲಿ 5 ಟಿಲ್ಲರ್ 150 ಊರ ಎತ್ತುಗಳು 41 ಸ್ಪ್ರೇಯರು 218 ಸುಲಭದಲ್ಲಿ ಸಾಗಿಸಲ್ಪಡುವ ಪಂಪುಸೆಟ್ಟುಗಳು ಇತ್ಯಾದಿಗಳಿವೆ. ಎತ್ತುಗಳಿಂದ ಉಳುವಂಥಾ ಹಳೆ ಸಂಪ್ರದಾಯವು ಲಾಭಕರವಲ್ಲದ ಕಾರಣ ವರ್ಷಂಪ್ರತಿ ಜಾನುವಾರುಗಳ ಪೋಷಣೆಯು ಕಷ್ಟಕವೂ ಆದಕಾರಣ ಆಧುನಿಕ ಉಳುವ ಯಂತ್ರಗಳಾದ ಪವರ್ ಟಿಲ್ಲರ್‌ಗಳ ಉಪಯೋಗ ಪ್ರಾರಂಭವಾಯ್ತು. ಒಟ್ಟು 5 ಟಿಲ್ಲರ್‌ಗಳ ಪೈಕಿ ಕೃಷಿ ಭವನದಿಂದ ಕೇವಲ ಒಂದು ಮಾತ್ರ ಒದಗಿಸಲಾಗಿದೆ. ಪ್ರತೀ ಕೃಷಿ ವಲಯಗಳಿಗೆ ಈ ಮೊದಲು 85% ಸಬ್ಸಿಡಿಯಲ್ಲಿ ಈ ಕೃಷಿ ವಲಯ ಟಿಲ್ಲರ್ ಹಾಗೂ ಕೃಷಿ ಉಪಕರಣಗಳನ್ನು ಒದಗಿಸುವುದು.

ಕೀಟನಾಶಕಗಳಿಂದಾಗಿ 41 ರೋಶನ್ ಸೆಯಲೂ ಬತ್ತ ಹೊಡೆಯುವ ತೆಂಗು ಹತ್ತುವ ಅನುಕ್ರಮವಾಗಿ ಎರಡು ಮೂರು ಯಂತ್ರಗಳು ಮಾತ್ರ ಇವೆ. 218 ಒಂದು ಕಡೆಯಿಂದ ಇನ್ನೊಂದು ಕಡೆಗೆ ಸುಲಭದಲ್ಲಿ ಸಾಗಿಸುವಂಥಾ ಪಂಪು ಸೆಟ್ಟುಗಳಿವೆ.

### ಕೃಷಿ ಸಾಲಗಳ ಬಗ್ಗೆ ವಿವರ

ಈ ಪಂಚಾಯತಿನಲ್ಲಿ ಕುಂಜತ್ತೂರು ಗ್ರಾಮೀಣ ಬೇಂಕ್, ವಿಜಯ ಬೇಂಕು ಸ್ಟೇಟ್ ಬೇಂಕ್ ಈ ಪಂಚಾಯತಿನಲ್ಲಿ ಕುಂಜತ್ತೂರ್ ಗ್ರಾಮೀಣ ಬೇಂಕ್ ಹಾಗೂ ಮಂಜೇಶ್ವರ ಸಹಕಾರಿ ಬೇಂಕಿನ ಎರಡು ಶಾಖೆಗಳೂ, ಕೃಷಿಕರಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತವೆ. ಸಹಕಾರಿ ರಂಗದಲ್ಲಿ ಕೃತಕ ಗೊಬ್ಬರ, ಕೀಟನಾಶಕ ಹಾಗೂ ಕೃಷಿ ಯಂತ್ರಗಳನ್ನು ಒದಗಿಸುವಂಥಾ ಸೌಕರ್ಯಗಳ ಅಗತ್ಯವಿದೆ. ಅಲ್ಲದೆ ಈ ಪಂಚಾಯತಿನ ಕೃಷಿ ಸಲಹಾ ಸಮಿತಿಗಳ ಸಭೆಗಳಿಗೆ ಈ ಪ್ರದೇಶದ ಬ್ಯಾಂಕುಗಳ ಪ್ರತಿನಿಧಿಗಳು ಇನ್ನಿತರ ಅಧಿಕಾರಗಳು ತಪ್ಪದೆ ಭಾಗವಹಿಸಿ ಕೃಷಿಕರ ತೊಂದರೆಗಳಿಗೆ ನಿವಾರಣೆಗೋಸ್ಕರ ಸಹಕರಿಸುವುದು ಅಗತ್ಯ.

### ತೆಂಗಿನ ಬೆಳೆಗಳ ವಿವರಗಳು

| ಕ್ರ.ಸಂ. | ವಿಸ್ತೀರ್ಣ ಹೆಕ್ಟೇರಿನಲ್ಲಿ | ಫಲಬರುವ ತೆಂಗು | ಫಲ ಇಲ್ಲದ ತೆಂಗು | ಒಟ್ಟು | ಇತರ | ಒಟ್ಟು 125 |
|---|---|---|---|---|---|---|
| 1 | 40 | 5350 | 2650 | 8000 | | |
| 2 | 40 | 5300 | 2700 | 8000 | | |
| 3 | 100 | 6350 | 13650 | 20000 | | |
| 4 | 250 | 1660 | 3340 | 5000 | | |
| 5 | 28 | 2100 | 3500 | 5600 | | |
| 6. | 25 | 1175 | 3825 | 5000 | | |
| 7. | 35 | 2300 | 4700 | 7000 | | |
| 8. | 30 | 2000 | 4000 | 6000 | | |
| 9. | 30 | 2000 | 4000 | 6000 | | |
| 10. | 25 | 1175 | 3825 | 5000 | | |
| 11. | 25 | 1175 | 3825 | 5000 | | |
| 12. | 25 | 1175 | 3825 | 5000 | | |
| Total | 428 | 31760 | 53840 | 85600 | | |

ತೆಂಗುಕೃಷಿ ಇಲ್ಲಿಯ ಒಂದು ಪ್ರಧಾನ ವಾಣಿಜ್ಯ ಬೆಳೆಯಾಗಿದೆ. ಸಾಧಾರಣ 428 ಹೆಕ್ಟೇರ್ ಪ್ರದೇಶದಲ್ಲಿ ತೆಂಗನ್ನು ಬೆಳೆಸುತ್ತಾರೆ. ತೆಂಗು ಕೃಷಿಗಳ ಎಡೆಯಲ್ಲಿ ಮಿಶ್ರ ಬೆಳೆಯಾಗಿ ಕರಿಮೆಣಸು, ಬಾಳೆ, ಅನನಾಸು ಇತ್ಯಾದಿಗಳನ್ನು ಕೂಡಾ ಬೆಳೆಸುತ್ತಾರೆ. ಇಲ್ಲಿಯ ಜನರು ಮುಖ್ಯವಾಗಿ ತೆಂಗಿನ ಕಾಯಿಯನ್ನು ಕೊಬ್ರಿಗೂ ಇನ್ನಿತರ ಆಹಾರ ಪದಾರ್ಥಗಳಿಗೂ ಉಪಯೋಗಿಸುತ್ತಾರೆ. ಮಾತ್ರವಲ್ಲದೆ ತೀರ ಪ್ರದೇಶದ ತೆಂಗು ಕೃಷಿಕರು ಸೀಯಾಳಕ್ಕಾಗಿಯೂ ಉಪಯೋಗಿಸುತ್ತಾರೆ ಮತ್ತು ಕೆಲವು ತೆಂಗಿನ ಮರಗಳನ್ನು ಸೇಂದಿಗಾಗಿಯೂ ಉಪಯೋಗಿಸುತ್ತಾರೆ ಮತ್ತು ಕೆಲವು ತೆಂಗಿನ ಮರಗಳನ್ನು ಶೇಂದಿಗಾಗಿಯೂ ಉಪಯೋಗಿಸುತ್ತಾರೆ. 1993-94ನೇ ಸಾಲಿನಲ್ಲಿ ಮಂಜೇಶ್ವರ ಕೃಷಿಭವನದ ಮೇಲ್ನೋಟದಲ್ಲಿ ತೆಂಗು ಕೃಷಿಯು ಸಮಗ್ರ ಅಭಿವೃದ್ಧಿಗೋಸ್ಕರ "ಕೇರಾ" ಸಂರಕ್ಷಣೆ ಸಮಿತಿಯನ್ನು ರಚಿಸಲಾಯಿತು. ಇದರ ಮೂಲಕ 94-95, 95-96ರಲ್ಲಿ ಕ್ರಮಾನುಗತವಾಗಿ ಪಂಪು ಸೆಟ್ಟುಗಳನ್ನು (94-95) 50 ಕೆರೆಗಳಿಗೂ 95-96ರಲ್ಲಿ 55 ಪಂಪುಸೆಟ್ಟುಗಳೂ, 50 ಕೆರೆಗಳಿಗೂ ಸ್ಪ್ರೇಯರ್‌ಗಳಿಗೂ, ತೆಂಗು ಮತ್ತು ತೆಂಗು ಹತ್ತುವ ಯಂತ್ರಗಳಿಗೂ ಸಹಾಯಧನ ಕೊಡಲಾಯಿತು. ಆಧುನಿಕ ಕೃಷಿಯ ಬಗ್ಗೆ ಕೃಷಿಕರಿಗೆ, ಶಿಬಿರಗಳನ್ನು ಪರ್ಯಟನೆಯನ್ನು ಏರ್ಪಡಿಸಿದೆ.

## ಕೋಷ್ಟಕ 9

## ಭೂಹಿಡುವಳಿದಾರರ ಸಂಖ್ಯೆ

| | 0-1 ಹೆ. | 1.2 ಹೆ. | 2.5ಹೆ | 5.10 ಹೆ | 10 ಹೆ.ಮೀ |
|---|---|---|---|---|---|
| ಉದ್ಯಾವರ | 84 | 33 | - | - | - |
| ಬಂಗ್ರ ಮಂಜೇಶ್ವರ | 78 | 2 | - | - | - |
| ಬಡಾಜೆ | 160 | 27 | 1 | - | - |
| ಹೊಸಬೆಟ್ಟು | 62 | 2 | - | - | - |
| ಕುಂಜತ್ತೂರು | 96 | 47 | | | |

ಕೇರಳ ಭೂಸುಧಾರಣೆ ಮಸೂಧೆಯ ಪರಿಣಾಮವಾಗಿ ಭೂಮಾಲಕ ಪದ್ಧತಿಯು ಸಂಪೂರ್ಣ ಇಲ್ಲದಾಯಿತು. ದೊಡ್ಡ ಹಿಡುವಳಿದಾರರು ಕೂಡಾ ಇದರಿಂದಾಗಿ ಕಡಿಮೆಯಾಯಿತು. ಒಂದು ಹೆಕ್ಟೇರ್‌ಗಿಂತ ಕಡಿಮೆ ಭೂಮಿ ಸ್ವಾಧೀನ ಇರುವ ಕೃಷಿಕರೇ ಹೆಚ್ಚು ಅದರಂತೆ 2 ಹೆಕ್ಟೇರ್‌ನಿಂದ 5 ಹೆಕ್ಟೆರ್‌ಗಳು 2 ಹಿಡುವಳಿದಾರರು

## ಕೋಷ್ಟಕ 9

## ಭತ್ತದ ಉತ್ಪಾದನೆಯ ವಿವರ

## ಭತ್ತದ ಉತ್ಪಾದನೆ (ಟನ್ನುಗಳಲ್ಲಿ)

| ವರ್ಷ | ಕೇರಳ | ಮಂಜೇಶ್ವರ | ಕೇರಳ | ಮಂಜೇಶ್ವರ | ಕೇರಳ | ಮಂಜೇಶ್ವರ |
|---|---|---|---|---|---|---|
| 1984-90 | 58,000 - 34 | 380 | 1141000 - 23 | 950 | 327375 | 1140 |
| 90 - 91 | 55900-45 | 374 | 1860000-58 | 935 | " | " |
| 92 - 93 | 537000-61 | 365 | 1084000 - 88 | 912 - 5 | " | " |
| 93 - 94 | 457000-83 | 355 | 1003000 - 94 | 883 - 50 | " | " |

ಭತ್ತದ ಉತ್ಪಾದನೆಯಲ್ಲಿ ಗಣನೀಯ ಇಳಿಮುಖವನ್ನು ಕಾಣುತ್ತಿದ್ದೇವೆ. ಈಗೀಗ ಈ ಮೊದಲು ತಿಳಿಸಿದಂತೆ ಭತ್ತದ ಕೃಷಿ ಸ್ಥಳವೂ ಇನ್ನಿತರ ವಾಣಿಜ್ಯ ಕೃಷಿಗಳಿಗೆ ಧಾರಾಳವಾಗಿ ಉಪಯೋಗಿಸುತ್ತಾ ಇದೆ. ಆಧುನಿಕ ಪದ್ಧತಿಯಲ್ಲಿ ಭತ್ತದ ಕೃಷಿಯನ್ನು ಮಾಡುವ ಕೃಷಿಕರಿಗೆ ತರಬೇತಿ ಕೇಂದ್ರಗಳನ್ನು ಸಂಘಟಿಸಬೇಕು. ಹಾಗೂ ಪ್ರತಿ ಕೃಷಿ ವಲಯಗಳಲ್ಲಿ ಒಂದೊಂದು ಸಹಕಾರಿ ಸಂಘಗಳನ್ನು ಸಂಘಟಿಸಿ ಸಾಮೂಹಿಕ ಕೃಷಿ ಪದ್ಧತಿಯನ್ನು ಕಾರ್ಯರೂಪಕ್ಕೆ ತರುವುದು, ಈಗೀಗ ಅಗತ್ಯವಾಗಿದೆ.

## ಕೋಷ್ಟಕ 10

## ಕೃಷಿ ಕಾರ್ಮಿಕರ ದಿನ ಕೂಲಿಯ ವಿವರ

| ವರ್ಷ | ಗಂಡು | ಹೆಣ್ಣು | ವರ್ಷ | ಗಂಡು | ಹೆಣ್ಣು |
|---|---|---|---|---|---|
| 1981 - 82 | 35 | 18 | 91 - 92 | 60 | 30 |
| 82 - 83 | 40 | 20 | 92 - 93 | 65 | 40 |
| 83 - 84 | 40 | 20 | 92 - 94 | 70 | 40 |
| 85 - 86 | 45 | 20 | | | |
| 86 - 87 | 50 | 25 | | | |
| 87 - 88 | 50 | 25 | | | |
| 88 - 89 | 55 | 25 | | | |
| 89 - 90 | 55 | 25 | | | |
| 90 - 91 | 60 | 30 | | | |

# MANJESWARAM PANCHAYAT

## LANDFORM.

(1)



④

# MANJESWARAM PANCHAYAT
## LANDUSE



ಕೃಷಿ ಕಾರ್ಮಿಕರ ದಿನಗೂಲಿಯು ಒಂದೊಂದು ಪ್ರದೇಶದಲ್ಲಿ ಒಂದೊಂದು ತರವಾಗಿರುತ್ತದೆ. ಹಿಂದಿನ ಕಾಲದಲ್ಲಿ ಭತ್ತ ಹಾಗೂ ಅಕ್ಕಿಯ ರೂಪದಲ್ಲಿ ಕೊಡುವ ಪದ್ಧತಿ ಇದೆ. 1982ರಿಂದ 1984ರ ತನಕ ಹೆಂಗಸರಿಗೆ ದಿನವೊಂದಕ್ಕೆ 2ಸೇರು ಅಕ್ಕಿ ದಿನಕೂಲಿಯಾಗಿತ್ತು. ಗಂಡಸರಿಗೆ 9 ರೂಪಾಯಿಯಿಂದ 25 ರೂಪಾಯಿ ಇತ್ತು. ಅದರಂತೆ 1985ರಿಂದ 95ರ ತನಕ ದಿನಕೂಲಿ ಹೆಚ್ಚುತ್ತಾ ಹೋಗಿ ಹೆಂಗಸರಿ 3 1/2 ಸೇರು ಅಕ್ಕಿಯೂ ಗಂಡಸರಿಗೆ 75 ರೂಪಾಯಿ ಮಜೂರಿ ಚಾಲ್ತಿಯಲ್ಲಿದೆ.

## ಇತರ ವಾಣಿಜ್ಯ ಬೆಳೆಗಳ ವಿವರ

### ಕೋಷ್ಟಕ 11

| ಒಟ್ಟು ಉತ್ಪತ್ತಿಗಳಲ್ಲಿ ಮುಖ್ಯ ಬೆಳೆ | 1993-94 | 1994-95 | 1995-96 |
|---|---|---|---|
| ತೆಂಗು | 41,21,600/- | 774000 | 9244800 |
| ಅಡಿಕೆ | 2875000 | 2900000 | 35010000 |
| ಕರಿಮೆಣಸು | 34500 | 72000 | 142000 |
| ಗೇರು | 60,0000 | 770000 | 9500000 |

ವಾಣಿಜ್ಯ ಬೆಳೆಗಳಲ್ಲಿ ತೆಂಗು ಮತ್ತು ಅಡಿಕೆ ಇಲ್ಲಿ ಅತೀ ಪ್ರಧಾನ ಬೆಳೆಗಳು. ಬೆಲೆಗಳಲ್ಲಿ ವರ್ಷಂಪ್ರತಿ ಏರುಪೇರುಗಳಿಂದ ಕೂಡಿರುತ್ತದೆ. ಈ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಕ್ಕುವರೆ, ಮಧ್ಯವರ್ತಿಗಳನ್ನು ತಪ್ಪಿಸಲು, ತೆಂಗು ಉತ್ಪತ್ತಿಯ ಬಗ್ಗೆ ಅಡಿಕೆ ಕೃಷಿಯ ಕ್ಯಾಂಪ್ಕೊದಂತೆ ಸಹಕಾರಿ ಸಂಘಗಳನ್ನು ರಚಿಸಿ ಸಹಾಯ ಸಿಗುವಂತೆ ಮಾಡಬೇಕು. "ಕೇರಾ" ಸಮಿತಿಗಳಿಗೆ ಅಧಿಕಾರ ವಿಕೇಂದ್ರಿಕರಣ ಮಾಡಿ ಉತ್ಪತ್ತಿಯನ್ನು ಹೆಚ್ಚಿಸುವ ಕಾರ್ಯಕ್ರಮಗಳ ಅಗತ್ಯವಿದೆ.

ಕರಿಮೆಣಸಿನ ಕೃಷಿಯನ್ನು ಪ್ರೋತ್ಸಾಹಿಸಿ ಸೆಮಿನಾರ್‌ಗಳನ್ನು ನಡೆಸಿ "ಪಣಿಯೂರು" ಇತ್ಯಾದಿ ಉತ್ತಮ ತಳಿಗಳನ್ನು ಕೃಷಿಕರಿಗೆ ಈ ಕೃಷಿಯ ಬಗ್ಗೆ ಅನುಭವವನ್ನು ಕೊಡುವ ತರಬೇತಿ ಶಿಬಿರಗಳನ್ನು ಸಂಘಟಿಸಬೇಕು.

ಮಂಜೇಶ್ವರ ಹೊಳೆಯ ಪರಿಸರ

ಕೃಷಿ ಪ್ರಧಾನವಾದ ಈ ಕ್ಷೇತ್ರವು ವ್ಯಾಪಾರ ಕೇಂದ್ರವೂ ಆಗಿತ್ತು. ಇಲ್ಲಿಯ ಮುಖ್ಯ ಕೃಷಿಯು ತೆಂಗು. ಭತ್ತ ಅಡಿಕೆ ಹಸಿರು ತರಕಾರಿ ಹಾಗೂ ಧಾನ್ಯಗಳು. ಮಂಜೇಶ್ವರ ಪಂಚಾಯತಿನಲ್ಲಿ ಮಂಜೇಶ್ವರ ಹಾಗೂ ಉಪ್ಪಳ ಎಂಬ ನದಿಗಳು ಹರಿಯುತ್ತವೆ. ಈ ನದಿಗಳೇ ಇಲ್ಲಿಯ ರೈತರ ಜೀವನಾಡಿ. ಮಂಜೇಶ್ವರ ಹೊಳೆಯು ಕರ್ನಾಟಕ ರಾಜ್ಯದಿಂದ ಉಗಮವಾಗಿ ಕೇರಳದ ರಾಜ್ಯದ ವರ್ಕಾಡಿ, ಪಾವೂರು, ಗ್ರಾಮದಿಂದಾಗಿ ಬಡಾಜೆ ಬಂಗ್ರ ಮಂಜೇಶ್ವರ ಹೊಸಬೆಟ್ಟು ಗ್ರಾಮಗಳಲ್ಲಿ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತದೆ. ಈ ಹೊಳೆಯು ತುಂಬಾ ಆಳವಾಗಿದ್ದುದರಿಂದ ಇದರ ಬಯಲು ಪ್ರದೇಶದಲ್ಲಿ ನೂರಾರು ಹೆಕ್ಟೇರುಗಳಲ್ಲಿ ಉತ್ತಮ ಬೆಳೆಯಾಗುತಿತ್ತು. ಆದರೆ ಈಗ ಈ ಹೊಳೆಯ ಸುತ್ತಲಿನ ಬೇಸಾಯದ ಬಯಲಿನಲ್ಲಿ ಗದ್ದೆಗಳಲ್ಲಿ ಹೆಚ್ಚು ಕಡಿಮೆ ಒಂದೆರಡು ಅಡಿಗಳಷ್ಟು ಎತ್ತರಕ್ಕೆ ಹೊಯ್ಗೆ ಕೆಸರು ತುಂಬಿ ಒಂದು ಸಣ್ಣ ಮಳೆ ಬಂದರೂ ನೀರು ಹೊಳೆಗೆ ಹರಿಯದೆ ಗದ್ದೆಗೆ ಬರಿದು ಬರುತ್ತದೆ. ಈ ನಾಶ ನಷ್ಟಕ್ಕೆ ಹೆದರಿ ಇಲ್ಲಿನ ಭತ್ತದ ಕೃಷಿ ವಿರಳವಾಗಿ ಮೂರು ಬೆಳೆಯುವ ತೆಗೆಯುವ ಭೂಮಿ ಬಂಜರಾಗಿದೆ. ಈ ಹೊಳೆಗೆ ಮಚ್ಚಂಪಾಡಿ, ಪಾಪಿಲ, ಮುದುಕುಂಜಗಳಂತಹ ಹಲವು ತಾತ್ಕಾಲಿಕ ಮಣ್ಣು ಕಟ್ಟಗಳನ್ನು ಕಟ್ಟಿ ಕೃಷಿಗೆ 2ನೇ ಬೆಳೆಗೆ ನೀರಿನ ಪೂರೈಕೆಯಾಗುತ್ತಿತ್ತು. ಈಗ ಸಣ್ಣ ಹಿಡುವಳಿದಾರರು ಇದನ್ನು ಕಟ್ಟಲು ತಗಲುವ ವೆಚ್ಚ ಭರಿಸಲಾಗಿದೆ. ಈ ಕಟ್ಟಡಗಳಿಗೆ ಈ ಹೊಳೆಗೆ ಎಲ್ಲಿಯೂ ಕಂಡು ಬರುವುದಿಲ್ಲ.

1. **ಪರಿಹಾರ**

ಮೇಲಿನ ಸಮಸ್ಯೆ ಪರಿಹರಿಸಲು ಈ ಹೊಳೆಯ ದಂಡೆಗಳನ್ನು ಎತ್ತರಕ್ಕೆ ಕಟ್ಟಿ ಹೊಳೆಯ ನೀರು ಸಮುದ್ರಕ್ಕೆ ಸೇರುವಲ್ಲಿ ಅಳಿವೆಯ ಬಾಯಿಯನ್ನು ಅಗಲಗೊಳಿಸಿ ಅಲ್ಲಿರುವ ಶಿಲೆ ಕಲ್ಲುಗಳನ್ನೂ ಆಳಕ್ಕೆ ಅಗೆದು ನರ ನೀರು ಸರಾಗವಾಗಿ ಸಮುದ್ರಕ್ಕೆ ಸೇರುವಂತಾಗಬೇಕು.

2. ಮಂಜೇಶ್ವರ ಪಂಚಾಯತಿನವರು ಸಿಗಡಿ ಕೃಷಿಗೆ ಪರವಾನಿಗೆ ಕೊಟ್ಟ ಸ್ಥಳದಲ್ಲಿ ಕಗ್ಗಲಿನಿಂದ ಎತ್ತರಕ್ಕೆ ಕಟ್ಟಲ್ಪಟ್ಟ ಬಂಡುಗಳು ಹೊಳೆಯ ನೀರನ್ನು ತಡೆದು ಮೇಲ್ಭಾಗದ ಪ್ರದೇಶವು ನೀರಿನಿಂದ ಆವರಿಸಲ್ಪಟ್ಟು ಅಲ್ಲಿನ ಕೃಷಿಯು ಸಂಪೂರ್ಣ ಇಲ್ಲವಾಗಿದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸುವುದು ಅತೀ ಅಗತ್ಯ.

3. ಉಪ್ಪುನೀರು ತಡೆಗಟ್ಟುವ ಹಾಗೂ ಸಿಹಿನೀರು ಶೇಖರಿಸುವರೆ ಬಂಗ್ರ ಮಂಜೇಶ್ವರ ಹೊಳೆಯ ಮಲರಾಯ ಭೂತಸ್ಥಾನ ಹತ್ತಿರ ಪ್ರತಿವರ್ಷ ಕಟ್ಟುವ ತಾತ್ಕಾಲಿಕ ಕಟ್ಟವನ್ನು ಕಟ್ಟಿದರೆ ಆ ಮೇಲಿನ ಕೆಳಗಿನ ಹತ್ತಿರ ಬಯಲುಗಳಿಗೆ ವರ್ಷವಿಡಿ ಕೃಷಿ ನೀರಾವರಿಗೆ ಅನುಕೂಲವಾಗುವುದು. ಬಂಗ್ರ ಮಂಜೇಶ್ವರ ಪೋಸೋಟು, ಕೊರಟುಮೊಗರು, ಕನಿಲಬಯಲು ಇತ್ಯಾದಿ ಪ್ರದೇಶಗಳಿಗೆ ವರ್ಷವಿಡೀ ಲಭಿಸಬಹುದು.

**ಉಪ್ಪಳ ಹೊಳೆಯ ಪರಿಸರ, ವಾಮಂಜೂರು ಪ್ರದೇಶ :**

ಈ ಪ್ರದೇಶವು ಸಮತಲವಾಗಿದ್ದು ಪೂರ್ವದಿಕ್ಕಿನಿಂದ ಹರಿಯುವ ಉಪ್ಪಳ ಹೊಳೆಯು ಈ ಪ್ರದೇಶವನ್ನು ದಕ್ಷಿಣ ಭಾಗದಿಂದ ಹರಿದು ಅರಬಿ ಸಮುದ್ರವನ್ನು ಸೇರುವುದು. ಇಲ್ಲಿ ಸಾಧಾರಣ 168 ಎಕ್ರೆ ಭೂ ಪ್ರದೇಶದಲ್ಲಿ 140 ಎಕ್ರೆಯಲ್ಲಿ ತೆಂಗು ಕೃಷಿ ಪ್ರಧಾನವಾಗಿದೆ. ಇಲ್ಲಿನ ಹೊಯ್ಗೆ ಮಿಶ್ರಿತ ಮಣ್ಣು ಈ ಕೃಷಿಗೆ ಯೋಗ್ಯವಾಗಿದೆ. ಸುಮಾರು 28 ಎಕ್ರೆಯಲ್ಲಿ ಭತ್ತದ ಕೃಷಿ ಇದೆ ಹಾಗೂ 2ನೇ ಮತ್ತು 3ನೇ ಬೆಳೆಗೆ ನೀರಿನ ಅಭಾವದಿಂದ ಇಲ್ಲಿನ ಕೃಷಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬಂದಿದೆ. ನದಿಯ ಹೂಳೆತ್ತದ ಕಾರಣ ನೆರೆನೀರು ಬಯಲಿಗೆ ನುಗ್ಗಿ ಮನೆ ಆಸ್ತಿ ತೋಟಗಳನ್ನು ಕೊಚ್ಚಿಕೊಂಡು ಹೋಗಿ ನಾಶ ನಷ್ಟ ಸಂಭವಿಸುತ್ತದೆ.

**ಪರಿಹಾರಗಳು**

1. ನದಿ ಕಡಲು ಸೇರುವ ಭಾಗದಲ್ಲಿ ನದಿಯಿಂದ ಸುಮಾರು 3 ಅಡಿಗಳಷ್ಟು ಹೂಳೆತ್ತುವುದು.
2. ಇಲ್ಲಿನ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಹೊಳೆಯ ಬದಿಯಿಂದ ರಸ್ತೆ ರಚನೆಯಾಗಬೇಕು.
3. ಪರಂಪರಾಗತ ವರ್ಷಗಳಿಂದ ಹುಲ್ಲುಗಾವಲಾಗಿದ್ದ ಭೂಮಿ ಈಗ ಸಿಗಡಿ ಕೃಷಿಗೆ (ಗುತ್ತಿಗೆ) ಬಾಡಿಗೆಗೆ ಕೊಟ್ಟಿರುವುದರಿಂದ ಜಾನುವಾರುಗಳ ಮೇವಿಗೆ ಅಡಚಣೆ ಉಂಟಾಗಿದೆ. ಇದನ್ನು ನಿವಾರಿಸಿದರೆ ಪಶುಸಾಕಣೆ ಅಭಿವೃದ್ಧಿಗೊಳಿಸಬಹುದು. ಇದರಿಂದ ಕೃಷಿಗೆ ಸಾವಯವ ಗೊಬ್ಬರಕಡಿಮೆಗೊಳಿಸಬಹುದು.
4. ಬಂಗ್ರ ಮಂಜೇಶ್ವರ, ವಾಮಂಜೂರು Check Postಹತ್ತಿರ ಕಾಡಿಯಾರು ವರೆಗೆ ಎತ್ತರಕ್ಕೆ ತಡೆಗೋಡೆ ನಿರ್ಮಿಸಿದರೆ ನರೆ ನೀರಿನ ಹಾವಳಿ ನಷ್ಟಗಳನ್ನು ತಡೆಯಬೇಕು.

**ಚೆಕ್‌ಪೋಸ್ಟ್** : ವಾಮಂಜೂರಿನಲ್ಲಿ ಸುಮಾರು 50 ಎಕ್ರೆ ಕೃಷಿಭೂಮಿ ಇದೆ. 10 ಎಕ್ರೆ ಅಡಿಕೆ, 40 ಎಕ್ರೆ ಭತ್ತ. ಇಲ್ಲಿ ಒಂದು ಮತ್ತು ಎರಡನೇ ಭತ್ತದ ಬೆಳೆಯಾಗುತ್ತದೆ. ವಾಮಂಜೂರು ಎಂಬಲ್ಲಿ ಬದಿಗಳಿಗೆ ಕಲ್ಲು ಕಟ್ಟಿದರೆ (ಸೈಡ್ ಬಂಡ್) ಒಂದನೇ ಬೆಳೆಯನ್ನು ನೆರೆಯಿಂದ ರಕ್ಷಿಸಬಹುದು. ಮಜಿಬೈಲು ಗದ್ದೆಯಿಂದ ವಾಮಂಜೂರು ಬಯಲಿಗೆ ಬರುವ ಮಳೆನೀರನ್ನು ಮಜಿಬೈಲು ಗುಡ್ಡೆಯಲ್ಲಿ ಅಲ್ಲಲ್ಲಿ ಅಡ್ಡುಗಳನ್ನು ನಿರ್ಮಿಸಿದರೆ ಎರಡನೇ ಮತ್ತು 3ನೇ ಬೆಳೆಗೆ ನೀರಿನ ತೊಂದರೆಯನ್ನು ನೀಗಿಸಲು ಸಹಾಯವಾಗುತ್ತದೆ.

**ರಾಮತ್ತಮಜಲು :** ಈ ಪ್ರದೇಶವು ಎತ್ತರದ ಗುಡ್ಡವಾಗಿರುತ್ತದೆ. ಇಲ್ಲಿ ನೀರಿನ ಅಭಿನಯವಿರುವುದರಿಂದ "ಗಾಳಿಮರ" ತೆಂಗು, ಮಾವು, ಹಸುರು ಮೊದಲಾಗುಗಳಲ್ಲಿ ಬೆಳೆಯಬಹುದು. ಬಂಗ್ರ ಮಂಜೇಶ್ವರ ಗುಡ್ಡ, ಶಾಂತಿನಗರ ಈ ಪ್ರದೇಶವು ಎತ್ತರವಾದ ಗುಡ್ಡೆಯಾಗಿದೆ. ಇಲ್ಲಿ ಬೇಸಿಗೆ ಕಾಲದಲ್ಲಿ ತೀವ್ರ ನೀರಿನ ಅಭಾವವಿದೆ. ದೊಡ್ಡ ಹಿಡುವಳಿದಾರರು ತೀರ ಕಡಿಮೆ ಇಲ್ಲಿ ಗೇರು ಮಾವು ಇತಆದಿ ಕಡಿಮೆ ನೀರಿನ ಸಸ್ಯಗಳನ್ನು ಬೆಳೆಸಬಹುದು.

**ದುರ್ಗಿಪಳ್ಳ (ಕನಿಲ ಪರಿಸರ)**

ಈ ಪ್ರದೇಶವು ನೀರಿನ ಅಭಾವವಿರುವ ಸ್ಥಳ, ಸುಮಾರು 100 ಎಕ್ರೆ ಸ್ಥಳದಲ್ಲಿ ಕೃಷಿಯಿಲ್ಲದೆ ಬಂಜರು ಭೂಮಿಯಾಗಿದೆ. ಇಲ್ಲಿ ಗೇರು, ತೆಂಗು, ಹಲಸು ಹೆಬ್ಬಲಸು, ಗಾಳಿಮರ ಮೊದಲಾದ ಮರಗಳನ್ನು ನೆಟ್ಟು ಬೆಳೆಸಬಹುದು. ಇದರಿಂದ ಭೂ ಸವೆತವನ್ನು ಕಡಿಮೆ ಮಾಡಿ ಉತ್ಪತ್ತಿಯನ್ನು ಪಡೆಯಬಹುದು. ಇಲ್ಲಿ ನೀರಾವರಿಯ ಅನುಕೂಲವಿರುವ ಸಾಧಾರಣ 15 ಎಕ್ರೆ ಅಡಿಕೆ ಕೃಷಿಯಾಗುತ್ತದೆ.

**ಚೆಂಬದವು :** ಈ ಪ್ರದೇಶವು ಗುಡ್ಡೆ ಪ್ರದೇಶ ಇದರ ಪಶ್ಚಿಮ ಭಾಗ ಬಯಲು ಉತ್ತರ ಭಾಗ ಬಡಾಜೆಯ ಅರಿಮಲೆ ಪಾಪಿಲ ಎಂಬೀ ಸ್ಥಳಗಳಾಗಿವೆ. ಮಳೆಗಾಲದಲ್ಲಿ ಈ ಗುಡೆಯಿಂದ ನೀರು ಬಂಗ್ರಮಂಜೆಶ್ವರ ಹೊಳೆಗೆ ಸೇರುವ ನೀರನ್ನು ಅಲ್ಲಲ್ಲಿ ಒಡ್ಡುಗಳನ್ನು ಕಟ್ಟಿ ನೀರನ್ನು ಭೂಮಿಗೆ ಇಂಗಿಸಿದರೆ ಮಣ್ಣಿನ ಕೊರತೆಯನ್ನು ತಡೆದು ಬೇಸಿಗೆಯಲ್ಲಿ ನೀರಿನ ಅಭಾವವನ್ನು ಕಡಿಮೆ ಮಾಡಬಹುದು. ಈ ಪದವು ಪುರಾತನ ಕಾಲದಿಂದಲೂ ಒಂದು ವಿಶು ಗೋಚಾರವು ಆಗಿತ್ತು. ಈ ಪ್ರದೇಶದ ಜಾನುವಾರುಗಳಿಗೆ ಒಂದು ಗೋಚಾರವಿನ ಅಗತ್ಯವಿದೆ.

**ಅರಿಮಲೆ :** ಇಲ್ಲಿ ಮುಖ್ಯವಾಗಿ 60 ಎಕ್ರೆ ಸ್ಥಳದಲ್ಲಿ ಅಡಿಕೆ 30 ಎಕ್ರೆ ಸ್ಥಳದಲ್ಲಿ ಭತ್ತ ಹಾಗೂ 100 ಎಕ್ರೆ ಸ್ಥಳದಲ್ಲಿ ತೆಂಗು ಬೆಳೆ ಯುಕ್ತವಾಗಿದೆ. ಇದು ಬಹಳ ಫಲವತ್ತಾದ ಪ್ರದೇಶವಾಗಿದೆ. ಇಲ್ಲಿ ಗುಡ್ಡೆಯ ಇಳಿಜಾರಿನಲ್ಲಿ ಒಡ್ಡುಗಳನ್ನು ನಿರ್ಮಿಸಿ ಮಳೆಯ ನೀರನ್ನು ಭೂಮಿಗೆ ಇಂಗುವಂತೆ ಮಾಡಿ

ವಾಣಿಜ್ಯ ಬೆಳೆಗಳ ಸಂರಕ್ಷಣೆಯನ್ನು ಮಾಡಬಹುದು.

ಬಡಾಜೆ, ಇಡ್ಯ ಪಾಪಿಲ, ಇಲ್ಲಿ ಸುಮಾರು 70 ಎಕ್ರೆ ಪ್ರದೇಶದಲ್ಲಿ ಭತ್ತ ಕಾಜೂರು ಪುಚ್ಚೆತ್ತಬೈಲು ಸುಮಾರು 100 ಎಕ್ರೆ ಸ್ಥಳದಲ್ಲಿ ಅಡಿಕೆ ಸುಮಾರು 25 ಎಕ್ರೆ ಸ್ಥಳದಲ್ಲಿ ತೆಂಗಿನ ಬೆಳೆಯೂ ಅಲ್ಲದೆ, ಗುಡ್ಡ ಪ್ರದೇಶವು ಗೇರು ಕೃಷಿಗೆ ಯೋಗ್ಯವಾಗಿದೆ. ಇಲ್ಲಿಂದ ಹರಿಯುವ ಮಂಜೇಶ್ವರ ಹೊಳೆಗೆ ಮೊದಲು ಅಲ್ಲಲ್ಲಿ ತಾತ್ಕಾಲಿಕ ಮಣ್ಣಿನ ಒಡ್ಡುಗಳನ್ನು ಕೂಡೇಲುಬೈಲು, ಪಾಪಿಲಗಳಲ್ಲಿಯು ಮಾತ್ರವಲ್ಲದೆ, ಬಡಾಜೆ, ಮುರುಕುಂಜಕತ್ತ ಸ್ಥಳಗಳಲ್ಲಿ ಕೃಷಿಕರಿಗೆ ನಿರ್ಮಿಸಿದಂತಹ ಕೊಳಗಳು ಉಪಯೋಗಶೂನ್ಯವಾಗಿದೆ. ಇದನ್ನು ಸದುಪಯೋಗಗೊಳಿಸಲು ಇಲಾಖೆಗಳಿಂದ ಪಂಪ್‌ಸೆಟ್, ವಿದ್ಯುತ್ ಇತ್ಯಾದಿ. ಸರಬರಾಜು ಮಾಡುವ ಬಗ್ಗೆ ಕೂಡಲೇ ತಕ್ಕ ಕಾರ್ಯಕ್ರಮವನ್ನು ಸರಕಾರದ ಉದ್ದೇಶವನ್ನು ಪೂರ್ತಿಗೊಳಿಸಬೇಕಾಗಿರುವುದು. ಇದರಿಂದಾಗಿ ಈ ಪ್ರದೇಶವು ನೀರಿನ ಅಭಿಮಾನವನ್ನು ತಕ್ಕ ಮಟ್ಟಿಗೆ ಪರಿಹರಿಸಬಹುದಾಗಿದೆ.

ಭತ್ತದ ಕೃಷಿಯು ಹೆಚ್ಚು ಲಾಭದಾಯಕವಲ್ಲವಾದ್ದರಿಂದ ಭೂಮಿಯು ಸಣ್ಣ ಸಣ್ಣ ಮಾಲಕತ್ವದಿಂದ ಜನ ಸಹಕಾರ ಕಡಿಮೆಯಾಗಿದೆ. ಈ ರೀತಿಯ ಒಡ್ಡುಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ಪಂಚಾಯತು ವಹಿಸಿಕೊಂಡು ನೀರಾವರಿಗೆ ಅನುಕೂಲವಾಗುವಂತೆ ಮಾಡಬೇಕು. ವರ್ಷದ ಕೆಲವೇ ತಿಂಗಳು ಮಾತ್ರ ಭತ್ತದ ಕೃಷಿಯಿರುವುದುದರಿಂದ ಈ ಕೆಲಸಕ್ಕೆ ಕೃಷಿ ಕಾರ್ಮಿಕರು ಸಿಗುವುದಿಲ್ಲ. ಇದಕ್ಕಾಗಿ ಈ ಪ್ರದೇಶದ ಜನರನ್ನು ಸಂಘಟಿಸಿ ಸಹಕಾರಿ ಪದ್ಧತಿ ಕೃಷಿ ಮಾಡುವ ವ್ಯವಸ್ಥೆಯಾಗಬೇಕು. ಅದರಂತೆ ಒಂದೊಂದು ಕೃಷಿ ವಲಯಕ್ಕೆ ಆಧುನಿಕ ಕೃಷಿ ಬೀಜಗಳನ್ನು ಒದಗಿಸಿ ಉತ್ತಮ ತರದ ಬೀಜವನ್ನು ಕೊಟ್ಟರೆ ಕೃಷಿ ಉತ್ಪತ್ತಿಯನ್ನು ಹೆಚ್ಚಿಸಬಹುದು. ಪಾಪಿಲ ಇತ್ಯಾದಿ ಗುಡ್ಡ ಪ್ರದೇಶದಲ್ಲಿ ಗೇರು ಕೃಷಿಗೆ ಯೋಗ್ಯ ಸ್ಥಳವಾಗಿದ್ದು ಖಾಲಿಯಾಗಿರುತ್ತದೆ. ಸುಮಾರು 200 ಎಕ್ರೆ ಭೂ ಪ್ರದೇಶದಲ್ಲಿ ಕೃಷಿ ಮಾಡಬಹುದು. ಮಚ್ಚಂಪಾಡಿ, ಕೂಡೇಲು ಹಳ್ಳವನ್ನು ದುರಸ್ತಿಗೊಳಿಸಿ ಮಳೆನೀರನ್ನು ಶೇಖರಣೆ ಮಾಡಿ ಕೊಡೇಲು ಮತ್ತು ನೀಟೆಕ್ಕಾರು ಬಯಲು ಪ್ರದೇಶಕ್ಕೆ ಪ್ರಯೋಜನ ಸಿಗುವುದು.

**ಕನಿಲ ಬಯಲು :** ಇಲ್ಲಿ ಸುಮಾರು 40 ಎಕ್ರೆ ಭತ್ತದ ಬೆಳೆ 35 ಎಕ್ರೆ ಅಡಿಕೆ, 30 ಎಕ್ರೆ ತೆಂಗು ಕೃಷಿಯಿದೆ. ಸುಮಾರು 30 ಎಕ್ರೆ ಗದ್ದೆ ಇಲ್ಲ. ಮೊದಲನೇ ಬೆಳೆ ಈಗ ಆಗುವುದಿಲ್ಲ. ಬಂಗ್ರ ಮಂಜೇಶ್ವ ಹೊಳೆಯನ್ನು ಆಳಗೊಳಿಸಿ ಸೈಡು ಬಂಡುಗಳನ್ನು ಕಟ್ಟಿದರೆ ಹೆಚ್ಚು ಕಡಿಮೆ 50 ಹೆಕ್ಟೇರು ಸ್ಥಳದಲ್ಲಿ ಮೊದಲನೇ ಎರಡನೇ ಹಾಗೂ 3ನೇ ಬೆಳೆಯನ್ನು ಮಾಡಬಹುದು. ಮೂರುಕುಂಜ ಎಂಬಲ್ಲಿ ವರ್ಷಂಪ್ರತಿ ಕಟ್ಟುವ ತಾತ್ಕಾಲಿಕ ಕಟ್ಟವನ್ನು ಹಾಕಿದರೆ 2ನೇ ಬೆಳೆಗೆ ನೀರಾವರಿಯಾಗುತ್ತದೆ.

**ಪೊಯ್ಯಕಂಡ ಪೊಸೊಟು ಬಯಲು :** ಈಗ ಈ ಪ್ರದೇಶದಲ್ಲಿ ಒಂದನೇ ಬೆಳೆ ಆಗುವುದಿಲ್ಲ. 2ನೇ ಬೆಳೆಯು ಆಗುವುದಿಲ್ಲ. ಸುರಮತೋಡು, ಮಂಜೇಶ್ವರ ಹೊಳೆಯ ಪ್ರದೇಶವು ಭತ್ತದ ಗದ್ದೆಗಳಿಂದ ಎತ್ತರಕ್ಕೆ ಮಣ್ಣು ಹಾಗೂ ಹೊಯ್ಗೆ ತುಂಬಿದ್ದು ಮಳೆಗಾಲದಲ್ಲಿ ಈ ಗದ್ದೆಗಳು ನೀರು ತುಂಬಿರುತ್ತದೆ. ಇದಕ್ಕಾಗಿ ಬಂಗ್ರ ಮಂಜೇಶ್ವರ ಹಾಗೂ ಸುರಮತೋಡುಗಳನ್ನು ಆಳಮಾಡಿ ಬಂಡುಗಳನ್ನು ಎತ್ತರಕ್ಕೆ ಕಟ್ಟಿದರೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸಬಹುದು. ಈ ಕೃಷಿ ಪ್ರದೇಶಕ್ಕೆ ಸಹಕಾರಿ ಪದ್ಧತಿಯಲ್ಲಿ ಕೃಷಿ ಮಾಡುವ ಆಧುನಿಕ ಯಂತ್ರೋಪಕರಣಗಳನ್ನು ಹೊಸ ಕೃಷಿ ಪದ್ಧತಿಯ ತರಬೇತಿಯನ್ನು ರೈತರಿಗೆ ನೀಡಿ ಕೃಷಿ ಉತ್ಪತ್ತಿಯನ್ನು ವೃದ್ಧಿಗೊಳಿಸಬಹುದು. ಈ ಬಯಲು ಪ್ರದೇಶದಲ್ಲಿ ಸಾಮೂಹಿಕ ಕೃಷಿ ಪದ್ಧತಿಯನ್ನು ಅಳವಡಿಸಿ ಬಂಜರು ಭೂಮಿಯನ್ನು ಹಿಂದಿನಂತೆ ಕೃಷಿ ಭೂಮಿಯಾಗಿ ಪರಿವರ್ತಿಸಬಹುದು. ಬಂಗ್ರ ಮಂಜೇಶ್ವರ ಹೊಳೆಗೆ ಮಲರಾಮ ದೇವಸ್ಥಾನದ ಹತ್ತಿರ ತಾತ್ಕಾಲಿಕ ಕಟ್ಟ ಕಟ್ಟಿ ಸಿಹಿನೀರು ಶೇಖರಿಸಿ ಉಪ್ಪುನೀರನ್ನು ತಡೆಗಟ್ಟಿದರೆ ಈ ಪ್ರದೇಶದ ಕೃಷಿ ಜನರಿಗೆ ಕುಡಿಯುವ ನೀರಿನ ಅಭಾವವನ್ನು ಕಡಿಮೆ ಮಾಡಬಹುದು.

**ಕೆಂಪುಗುಡ್ಡೆ :** ಸುಮಾರು 60 ಎಕ್ರೆ ವಿಸ್ತೀರ್ಣದ ಈ ಪ್ರದೇಶವೂ ಯಾವ ಕೃಷಿಯೂ ಇಲ್ಲದ ಪ್ರದೇಶವಾಗಿದೆ. ಇಲ್ಲಿ ಗೇರು, ತೇಗ, ಗಾಳಿಮರ ಇತ್ಯಾದಿ ಮರಗಳನ್ನು ಬೆಳೆಸಿದರೆ ಈ ಗುಡ್ಡೆ ಪ್ರದೇಶವು ಫಲವತ್ತಾದೀತು.

**ಬಡಾಜೆ :** ದೇವರ ಕಟ್ಟೆ ಎಂಬ ಸ್ಥಳದಲ್ಲಿ ಒಂದು ಚೆಕ್‌ಡ್ಯಾಮ್ ಹಾಕಿದರೆ ಸುಮಾರು 55 ಎಕ್ರೆ ಸ್ಥಳದಲ್ಲಿ ಭತ್ತ 35 ಎಕ್ರೆ ಸ್ಥಳದಲ್ಲಿ ಅಡಿಕೆ 15 ಎಕ್ರೆ ಪ್ರದೇಶದಲ್ಲಿ ತೆಂಗು ಕೃಷಿಗೆ ನೀರಾವರಿ ಮಾಡಬಹುದು. ಉತ್ಪತ್ತಿಯನ್ನು ದ್ವಿಗುಣಗೊಳಿಸಬಹುದು.

**ಗೇರುಕಟ್ಟೆ :** ಈ ಪ್ರದೇಶವು ಕೊರಗ ಸಮುದಾಯದವರು ಹೆಚ್ಚಿಗೆ ದೂರವಾಗಿರುವ ಸ್ಥಳವಾಗುತ್ತದೆ. ಈ ಪ್ರದೇಶವೂ ವಿಶಾಲವಾಗಿದ್ದರೂ ಕೃಷಿ ಮಾಡುವರೆ ಆರ್ಥಿಕ ಅಡಚಣೆಯಿಂದಲೂ ಕೃಷಿ ಮಾಡುವ ಬಗ್ಗೆ ಮಾಹಿತಿಯಿಲ್ಲದಿದ್ದುದರಿಂದ ಯಾವ ಸುಧಾರಣೆಯನ್ನೂ ಕಾಣದಾಗಿದೆ. ಇಲ್ಲಿಯ ಜನರನ್ನು ಸಂಘಟಿಸಿ ಅವರನ್ನು ಸ್ವತಂತ್ರರನ್ನಾಗಿ ಮಾಡಿದರೆ ಈ ಪ್ರದೇಶವು ಫಲವತ್ತಾದ ಭೂಮಿಯಾಗಬಹುದು. ಗೇರುಕಟ್ಟೆ ಪಳ್ಳದ ಮೇಲುಗಡೆಯಿರುವ ಪಳ್ಳದಲ್ಲಿ ಮಳೆನೀರು ನಿಲ್ಲುವಂತೆ ಮಾಡಿದರೆ ಪ್ರದೇಶದ ಕೆಳಭಾಗವು ನೀರಿನ ಅಭಾವದಿಂದ ಸ್ವಲ್ಪಮಟ್ಟಿಗೆ ಸುಧಾರಿಸಬಹುದು.

**ಕೀರ್ತೇಶ್ವರ :** ಸುಮಾರು 80 ಎಕ್ರೆ ಸ್ಥಳದಲ್ಲಿ ಭತ್ತದ ಕೃಷಿಯಾಗುತ್ತಿದೆ. 2ನೇ ಬೆಳೆಯ ಸಮಯದಲ್ಲಿ ತರಕಾರಿ ಬೆಳೆಯಾಗುತ್ತಿದೆ. ಸುಮಾರು 20 ಎಕ್ರೆ ಸ್ಥಳದಲ್ಲಿ ತೆಂಗು ಕೃಷಿ ಕಂಡು ಬರುತ್ತದೆ.

**ಕುಂಡುಕೊಳಕೆ :** ಈ ಪ್ರದೇಶದಲ್ಲಿ ಭತ್ತವು ಸುಮಾರು 200 ಎಕ್ರೆ ಪ್ರದೇಶದಲ್ಲಿ ಬೆಳೆಯುತ್ತದೆ. ಎರಡನೇ ಬೆಳೆ ತರಕಾರಿ, ಕಾಯಿಪಲ್ಯೆ.

**ಅಂಜರೆ :** ಈ ಪ್ರದೇಶದಲ್ಲಿ ತರಕಾರಿ ಬೆಳೆಗೆ ಅತ್ಯಂತ ಸೂಕ್ತ ಸ್ಥಳವಾಗಿದೆ. ಇಲ್ಲಿ ಪ್ರಮುಖವಾಗಿ ತೊಂಡೆ, ಬೆಂಡೆ, ಅಲಸಂಡೆ, ಹೀರೆಕಾಯಿ, ಕಾಯಿಮೆಣಸು ಮೊದಲಾದುವುಗಳನ್ನು ಬೆಳೆಸುತ್ತಾರೆ. ಆದರೆ ವ್ಯಾಪಾರಕ್ಕಾಗಿ ದೂರದ ಮಂಗಳೂರಿಗೆ ಅಥವಾ ಕಾಸರಗೋಡಿಗೆ ಸಾಗಿಸಬೇಕಾಗಿದೆ.

ಇದಕ್ಕಾಗಿ ಮಂಜೇಶ್ವರ ಹೊಸಂಗಡಿ ಬಳಿ ವಾರದ ಸಂತೆಯನ್ನು ಸಂಘಟಿಸಿದರೆ ಮದ್ಯವರ್ತಿಗಳ ಶೋಷಣೆ ತಡೆಗಟ್ಟಿ ಕೃಷಿಕರಿಗೆ ಉತ್ತಮ ಬೆಲೆ ಕೃಷಿ ಉತ್ಪನ್ನಗಳಿಗೆ ಸಿಗುವಂತಾಗುತ್ತದೆ.

ನೀರಾವರಿಗೆ ಉದ್ಯಾವರ, ಕುಂಜತ್ತೂರು ತೋಡಿಗೆ ಕಟ್ಟ ಕಟ್ಟಿ ಚಕ್ರತೀರ್ಥ ಎಂಬಲ್ಲಿ ಕ್ರಾಸ್‌ಬಾರ್ ಕಟ್ಟಿದರೆ ಈ ಪ್ರದೇಶದ ಮೂರು ಬೆಳೆಯನ್ನು ತೆಗೆಯುವ ಸಾಧ್ಯತೆಗಳಿವೆ. ಇದರಿಂದ ನಮ್ಮ ಕೃಷಿ ಉತ್ಪನ್ನವು ದ್ವಿಗುಣಗೊಳಿಸಬಹುದು. ಇಡ್ಲೆ ತೋಡಿನಿಂದ ಮಹಾಲಿಂಗೇಶ್ವರ ದೇವಸ್ಥಾನ ರಾಮಾಡಿಯಿಂದ, ಕಣ್ವತೀರ್ಥವ ಮೂಗುಳಿಯ ಕಾಂಜರ ಹಿತ್ತಿಲು ಎಂಬಲ್ಲಿಂದ ಹರಿದು ಬರುವ ತೋಡನನಲು ಆಳಗೊಳಿಸಿ ಎರಡು ಬದಿಗಳಲ್ಲಿ ದಂಡೆ ಕಟ್ಟಿದರೆ ಆ ಪ್ರದೇಶದ ಸುಮಾರು 400 ಎಕ್ರೆಯಲ್ಲಿ ಯೋಗ್ಯ ರೀತಿಯ ಬೆಳೆಯುವ ಸಾಧ್ಯತೆ ಇದೆ.

ಹೊಸಬೆಟ್ಟು ಗ್ರಾಮದಿಂದ ಮಂಜೇಶ್ವರ ಹೊಳೆಗೆ ಸೇರುವ ಕುರಮತೋಡನ 4 1/2 ಕಿ.ಮೀ. ವರೆಗೆ ಇದನ್ನು ಅಳವಡಿಸಿ ಎರಡು ಬದಿಗಳನ್ನು ಕಲ್ಲಿನಿಂದ ಎತ್ತರಕ್ಕೆ ಕಟ್ಟಿದರೆ ಇಲ್ಲಿ ಸಾಧಾರಣ 60 ಹೆಕ್ಟೇರ್‌ನಷ್ಟು ಭತ್ತದ ಕೃಷಿ ಮಾಡುವ ಸಾಧ್ಯತೆ (ಹಿಂದಿನ ಕೃಷಿ ನೆರೆ ನೀರಿನಿಂದ ನಿಂತು ಹೋಗಿದೆ)

ಬಡಾಜೆ ಪಡುಬೈಲು ಎಂಬಲ್ಲಿರುವ ಸಾರ್ವಜನಿಕ ಕೆರೆಯನ್ನು ದುರಸ್ತಿಗೊಳಿಸಿ ಸುಮಾರು 12 ಹೆಕ್ಟೇರ್ ಭೂಮಿಗೆ ಕೃಷಿ ಮಾಡಲು ಸಾಧ್ಯತೆ ಇದೆ.

ಬಡಾಜೆ ದೇವಸ್ಥಾನದ ಎದುರುಗಡೆ ಮಂಗಳಪಾರದಲ್ಲಿ ಕ್ರೋಸ್ ಬಾರ್ ಕಟ್ಟಿದರೆ 50 ಹೆಕ್ಟೇರ್ ಭೂಮಿ ಕೃಷಿಗೆ ಬಳಸಬಹುದು.

ಕುಂಜತ್ತೂರು ಪಳ್ಳದ ಬಳಿಯಿಂದ ಮುಂಡಲಡಿ ಸಂಕದ ವರೆಗೆ ಬದಿಯನ್ನು ಕಲ್ಲಿನಿಂದ ಕಟ್ಟಿದರೆ ಆ ನೀರಿನಿಂದ ಅಲ್ಲಿನ 25 ಹೆಕ್ಟೇರ್ ಬಂಜರು ಭೂಮಿಯನ್ನು ಕೃಷಿಗೆ ಬಳಸಬಹುದು.

ಹೊನ್ನೆಯಿಂದ ತಲಪಾಡಿ ವರೆಗೆ ತೋಡಿನ ಹೂಳೆತ್ತಿ ಆಳ ಮಾಡಿದರೆ ದಂಡೆ ಕಟ್ಟಿದರೆ ಸುಮಾರು 80 ಎಕ್ರೆ ಭೂಮಿ ಎಂದಿನಂತೆ ಕೃಷಿಗೆ ಅಳವಡಿಸಿ ಉತ್ತಮ ಬೆಳೆಯನ್ನು ಪಡೆಯಬಹುದು. ಉದ್ಯಾವರ, ಕುಂಜತ್ತೂರು ಅಂಜರೆ ಪ್ರದೇಶದಲ್ಲಿ ತರಕಾರಿ ಬೆಳೆ ಅಭಿವೃದ್ಧಿಗೊಳಿಸಲು ಉತ್ತಮ ತರದ ಬೀಜ (ಉತ್ತಮ ಇಳುವರಿ ಕೊಡುವ) ರಸಗೊಬ್ಬರ ಕೀಟನಾಶಕ ಔಷಧಿಗಳನ್ನು ಕೃಷಿಕರಿಗೆ ಕೃಷಿ ಭವನದ ಮುಖಾಂತರ ಸಕಾಲದಲ್ಲಿ ಸುಲಭ ಬೆಲೆಗೆ ಸಿಗುವಂತಾದರೆ ತಯಾರಿ ಉತ್ಪನ್ನಗಳು (ಬೆಳೆ) ದ್ವಿಗುಣಗೊಳಿಸಬಹುದು. ಕೃಷಿ ಭವನದ ವತಿಯಿಂದ ಸಾಪ್ತಾಹಿಕ, ಮಾಸಿಕ ಕೃಷಿ ಮಾಹಿತಿ ತರಬೇತಿ ಶಿಬಿರವನ್ನು ಏರ್ಪಡಿಸಿದರೆ, ಬೆಳೆಯ ನಾಶ ನಷ್ಟ, ಕೀಟಗಳ ಹತೋಟಿ, ಉತ್ತಮ ಬೀಜಗಳ ಆಯ್ಕೆಗಳು ಕೃಷಿಕರಿಗೆ ಸಾಧ್ಯವಾಗಬಹುದು.

**ಸಮಸ್ಯೆಗಳು :** ಮಂಜೇಶ್ವರ ಹೊಳೆ ಉಪ್ಪಳ ಹೊಳೆ ಹಲವಾರು ತೋಡುಗಳಲ್ಲಿ ತುಂಬಿರುವ ಹೊಯ್ಗೆ ಮಣ್ಣು ಈಗ ಕೃಷಿ ಮಾಡುವ ಭೂಮಿಗಿಂತಲೂ ಎತ್ತರದಲ್ಲಿರುವುದರಿಂದ ನೀರು ನಿಂತು ಮುಖ್ಯವಾಗಿ ಬತ್ತದ ಬೆಳೆ ಆಗುವುದಿಲ್ಲ.

**ಪರಿಹಾರ :** ಈ ನದಿ ಹಾಗೂ ತೋಡುಗಳ ಹೂಳೆತ್ತಿ ಅದರ ಬದಿಗಳನ್ನು ಎತ್ತರಕ್ಕೆ ಕಟ್ಟಿ ಅರಬೀ ಸಮುದ್ರಕ್ಕೆ ಸೇರುವ ಅಳುವೆಯನ್ನು ಅಗಲಗೊಳಿಸಿ ಹೊಳೆಯಲ್ಲಿ ಹರಿಯುವ ನೀರು ಸರಾಗವಾಗಿ ಸಮುದ್ರಕ್ಕೆ ಹರಿಯುವಂತೆ ಮಾಡುವುದು. ಅಲ್ಲದೆ ಸಿಗಡಿ ಮೀನಿನ ಕೊಳಗಳನ್ನು ದಿಯಿಂದ ನದಿ ಬದಿಯಲ್ಲಿ ಕಟ್ಟುವುದು. ಉಪ್ಪಳ ನದಿಯನ್ನು ಕೂಡಾ ಅಳಿವೆ ಬಾಗಿಲಲ್ಲಿ ಆಳ ಮಾಡುವುದು.

**ಸಮಸ್ಯೆಗಳು :** ಈ ಮೊದ್ಲಿದ್ದ ನೀರು ಶೇಖರಣೆ ಆಗುತ್ತಿದ್ದ ಕೊಳ ಪಳ್ಳಗಳ ನಾದುರಸ್ತಿಯಿಂದ ನೀರಿನ ಅಭಾವ.

**ಪರಿಹಾರ :** ಗೇರುಕಟ್ಟೆ ಹಳ್ಳ, ಅಡ್ಕಹಳ್ಳ, ಮಾಣಿಂಜ ಹಳ್ಳ ಮುಂತಾದ ಹಲವಾರು ಹಳ್ಳಗಳಲ್ಲಿ ಮಳೆಗಾಲದ ಸಂಪೂರ್ಣ ನೀರು ನಿಲ್ಲುವಂತೆ ಎತ್ತರಕ್ಕೆ ತಡೆಗೋಡೆಗಳನ್ನು ಕಟ್ಟಿದರೆ ಸುತ್ತಲಿನ ಭೂಮಿಗೆ ನೀರಿನ ಆಶ್ರಯಕ್ಕೆ ಸಹಕಾರಿಯಾಗಬಹುದು.

**ಸಮಸ್ಯೆಗಳು :** ಎತ್ತರದ ಗುಡೆಯಿಂದ ಮಳೆಗಾಲದಲ್ಲಿ ಮಳೆನೀರಿನಿಂದ ಕೊಚ್ಚಿ ಹೋಗುವ ಮಣ್ಣಿನ ಸಂರಕ್ಷಣೆ ಹಾಗೂ ಸಮುದ್ರಕ್ಕೆ ಸೇರುವ ನೀರನ್ನು ತಡೆಗಟ್ಟುವುದು

**ಪರಿಹಾರ :** ಚೆಂಬದಪುವಿನಿಂದ ಕಣುಲವಾಗಿ ಹೋಗುವ ಮಳೆ ನೀರನ್ನು ಕಾಜೂರು, ಪಾಪಿಲ ಇಡ್ಯ ಇತ್ಯಾದಿ ಭಾಗಗಳಿಗೆ ಮೇಳಿನ ಎತ್ತರದ ಗುಡ್ಡೆಯಿಂದ ಹರಿಯುವ ಮಳೆ ನೀರನ್ನು ಅಲ್ಲಲ್ಲಿ ಬಂಡುಗಳನ್ನು ಕಟ್ಟಿ ತಡೆದರೆ ಬೇಸಿಗೆಯಲ್ಲಿ ಕೃಷಿ ಭೂಮಿಗೆ ನೀರಿನ ಸೌಕರ್ಯವನ್ನು ಹೆಚ್ಚಿಸಬಹುದು.

**ಸಮಸ್ಯೆಗಳು :** ಕೃಷಿಯುತ್ಪತ್ತಿ ಕಡಿಮೆಯಾಗಿ ಕೃಷಿ ಕೂಲಿಗಾರರ ಮಜೂರಿ ಹೆಚ್ಚಾಗಿದ್ದು ಕೃಷಿಕರಲ್ಲಿ ಕೃಷಿ ಮಾಡುವ ಬಗ್ಗೆ ನಿರುತ್ಸಾಹುಂಟಾಗುತ್ತಿದೆ. ಹಾಗೂ ಅವಶ್ಯಕತೆಗೆ ಬೇಕಾದಷ್ಟು ಕೃಷಿ ಕಾರ್ಮಿಕರ ಅಭಾವವಿದೆ.

**ಪರಿಹಾರ :** ಒಂದೊಂದು ಕೃಷಿ ಪ್ರದೇಶಗಳನ್ನು ಆಯ್ದು ಅಲ್ಲಿ ಸಹಕಾರಿ ಪದ್ಧತಿಯಲ್ಲಿ ಕೃಷಿ ಮಾಡುವ ಬಗ್ಗೆ ಆಧುನಿಕ ಕೃಷಿ ಸಾಮಗ್ರಿಗಳಾದ

ಟ್ರಿಲ್ಲರ್, ಕ್ರಸರರ್, ಸ್ಪ್ರೇಯರ್, ಮತ್ತು ನೆಡುವ ಯಂತ್ರ, ಪಂಪುಸೆಟ್ಟು, ಪರಿಸ್ಕೃತ ಬೀಜ ಇತ್ಯಾದಿಗಳನ್ನು ಜವಾಬ್ದಾರಿಯುತ ಸಂಸ್ಥೆಗಳಲ್ಲಿ ಈ ಪ್ರದೇಶದ ಎಲ್ಲಾ ರೈತರು ಸದಸ್ಯರಾಗಿ ತಮ್ಮ ಸಮಸ್ಯೆಗಳನ್ನು ಪರಿಹರಿಸುವ ವ್ಯವಸ್ಥೆಯಾಗಬೇಕು. ಹನಿ ನೀರಾವರಿಗಾಗಿ Sprinklerಗಳನ್ನು ಸಸಿಡಿಯಲ್ಲಿ ರೈತರಿಗೆ ಒದಗಿಸುವುದು.

**ಸಮಸ್ಯೆಗಳು** : ಭೂಮಿಯ ಫಲವತ್ತತೆ ಕಡಿಮೆಯಾಗಿ ಕೃಷಿಯುತ್ಪತ್ತಿ ಕಡಿಮೆಯಾಗಿದೆ.

**ಪರಿಹಾರ** : ಸಾವಯವ ಗೊಬ್ಬರದ ಅಭಾವವೂ ರಾಸಾಯನಿಕ ಗೊಬ್ಬರದ ವಿಪರೀತ ಉಪಯೋಗವೂ ಇದಕ್ಕೆ ಮುಖ್ಯ ಕಾರಣ ಇದರ ಪರಿಹಾರಕ್ಕಾಗಿ ಜಾನುವಾರುಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸಾಕುವ ವ್ಯವಸ್ಥೆಯಾಗಬೇಕು. ಇದಕ್ಕಾಗಿ ಪ್ರತೀ ವಾರ್ಡಿನಲ್ಲಿ ಕಡಿಮೆ ಪಕ್ಷ ಒಂದೊಂದು ಹುಲ್ಲುಗಾವಲು ಕಾದಿರಿಸಬೇಕು. ಕರಾವಳಿ ಪ್ರದೇಶದ ತೆಂಗಿನ ಮರಗಳಿಗೆ ಮಣ್ಣು ಹಿಡಿಸುವುದಕ್ಕೂ ಅಡಿಕೆ ತೋಟಕ್ಕೆ ಮಣ್ಣು ಹಿಡಿಸುವುದಕ್ಕೂ ಸರಕಾರದಿಂದ ಧನ ಸಹಾಯ. ಬೇಂಕುಗಳಿಂದ ಸಾಲದ ಸವಲತ್ತು ಸಿಗುವಂತಾಗಬೇಕು.

**ಸಮಸ್ಯೆಗಳು** : ಕೃಷಿಕರಿಗೆ ಹೊಸ ವಿಧಾನ ಕೃಷಿ ಪದ್ಧತಿಯ ಮಾಹಿತಿ ಇಲ್ಲದಿರುವುದರಿಂದಲೂ ಉತ್ಪತ್ತಿ ಹೆಚ್ಚುವುದಿಲ್ಲ.

**ಪರಿಹಾರ** : ರೈತರಿಗೆ ಅತ್ಯಂತ ಆಧುನಿಕ ಕ್ರಮದ (ಟಿಸ್ಯುಕಲ್ಚರ್) ಒದಗಿಸಿ ಕೃಷ್ಯುತ್ಪನ್ನವನ್ನು ಹೆಚ್ಚಿಸುವಂತಿರಬೇಕು. ತರಬೇತಿ ಶಿಬಿರಗಳನ್ನು ಏರ್ಪಡಿಸಬೇಕು.

**ಸಮಸ್ಯೆಗಳು** : ಸಸ್ಯಗಳಿಗೆ ರೋಗ ಬಾಧೆ ಕೀಟ ಬಾಧೆಯ ಪರಿಹಾರ

**ಪರಿಹಾರ** : ಪ್ರಕೃತಿದತ್ತವಾದಂತಹ ನೀಯಂತ್ರಣಗಳನ್ನು ಅಳವಡಿಸಿ ಕಪ್ಪೆ, ಎರೆಹುಳ ಪಕ್ಷಿಗಳನ್ನು ರಕ್ಷಿಸುವಂತೆ ಹಾಲಿಬಿದ್ದಿರುವ ಗುಡ್ಡೆಗಳಲ್ಲಿ ಗುಡ್ಡೆಯ ಜರಿಗಳಲ್ಲಿ ಉತ್ತಮತರದ ಮರಗಳನ್ನು ಹೆಚ್ಚು ಬೆಳೆಸಬೇಕು. ಭತ್ತದ ಕೃಷಿಯಾದ ಕೂಡಲೇ ದ್ವಿದಳ ಧಾನ್ಯ ಇತ್ಯಾದಿ ಕೃಷಿ ಮಾಡುವಂತೆ ಪ್ರೋತ್ಸಾಹಿಸಬೇಕು.

**ಸಮಸ್ಯೆಗಳು** : ಕೃಷಿಯಾಗದೆ ಬಂಜರು ಇರುವ ಭೂಮಿಯನ್ನು ಪುನಹ ಕೃಷಿ ಮಾಡುವ ಪ್ರೋತ್ಸಾಹ

**ಪರಿಹಾರ** : ಬಂಜರಾದ ಭೂಮಿಯ ರೈತರನ್ನು ಕಂಡು ಅದಕ್ಕಾಗಿ ಆ ಪ್ರದೇಶದ ಇನ್ನಿತರ ರೈತರೊಂದಿಗೆ ಸೇರಿಕೊಂಡು ಸಹಕಾರಿ ಪದ್ಧತಿಯಲ್ಲಿ ಸಮಸ್ಯೆ 4ರಲ್ಲಿ ಹೇಳಿದಂತೆ ವ್ಯವಸ್ಥೆ ಮಾಡುವ ಬಗ್ಗೆ ಊರ ಪಂಚಾಯತಿನ ನೇತೃತ್ವದಲ್ಲಿ ನಡೆಯಬೇಕು.

**ಸಮಸ್ಯೆಗಳು** : ಕೃಷಿ ಸಂರಕ್ಷಣೆ (ಪ್ರಾಣಿಗಳಿಂದ )

**ಪರಿಹಾರ** : ಈಗಿರುವ ದೊಡ್ಡಿ ಕಾನೂನಿನಲ್ಲಿ ಕೃಷಿ ನಷ್ಟವನ್ನು ಕೇಳುವ ಹಕ್ಕಿರುವುದಿಲ್ಲ. ಅದಕ್ಕಾಗಿ ಈ ನಷ್ಟವನ್ನು ಗ್ರಾಮ ನ್ಯಾಯಾಲಯದ ಮುಖಾಂತರ ಪರಿಹರಿಸುವ ಏರ್ಪಾಡು

**ಸಮಸ್ಯೆಗಳು** : ಇಲ್ಲಿಯ ಕೃಷಿಯುತ್ಪನ್ನಗಳಿಗೆ ಸರಿಯಾದ ಬೆಲೆ ಸಿಗುವುದಿಲ್ಲ ಹಾಗೂ ಕೃಷಿ ಸಾಮಾಗ್ರಿಗಳೂ ಸಿಗುವುದಿಲ್ಲ.

**ಪರಿಹಾರ** : ನಮ್ಮ ಪಂಚಾಯತಿನ ಮುಖ್ಯವಾಗಿ ಕುಂಜತ್ತೂರು ಉದ್ಯಾವರ ಹೊಸಬೆಟ್ಟು ಬಡಾಜೆ ಇತ್ಯಾದಿ ಸ್ಥಳದಲ್ಲಿ ತರಕಾರಿ ಹೇರಳವಾಗಿ ಬೆಳೆಸುತ್ತಾ ಇದ್ದಾರೆ. ಇದರ ಮಾರಾಟಕ್ಕೆ ಹತ್ತಿರದ ಮಂಗಳೂರು ಅಥವಾ ದಕ್ಷಿಣದ ಕಾಸರಗೋಡು ಪ್ರದೇಶಗಳಿಗೆ ಹೋಗಬೇಕಾಗುತ್ತದೆ. ಇದನ್ನು ತಪ್ಪಿಸಲು ಹೊಸಂಗಡಿ ಸಮೀಪ ವಾರದ ಸಂತೆ ಆರಂಭಿಸಬೇಕು. ಒಂದು ವಾರದ ಸಂತೆಯನ್ನು ಸಂಗಡಿಸಬೇಕು.

**ಸಮಸ್ಯೆಗಳು**: ಸಮುದ್ರದ ಉಪ್ಪುನೀರು ತಡೆಗಟ್ಟುವ ಬಗ್ಗೆ

**ಪರಿಹಾರ** : ಬಂಗ್ರ ಮಂಜೇಶ್ವರದ ಮಲರಾಯ ದೇವಸ್ಥಾನದ ಹತ್ತಿರ ವರ್ಷಂಪ್ರತಿ ಹಾಕುವ ಕಟ್ಟವನ್ನು ಹಾಕಿದರೆ ಬಂಗ್ರ ಮಂಜೇಶ್ವರ ಪೊಸೋಟು ಕಣಿಲ, ಕೊರಗಟಮೊಗರುಇತ್ಯಾದಿ ಪ್ರದೇಶಗಳಿಗೆ ಉಪ್ಪು ನೀರಿನ ಭಾದೆ ಇಲ್ಲದಂತೆ ಮಾಡಬಹುದು. ಹಾಗೂ ವರ್ಷವಿಡೀ ಸಿಹಿನೀರಿನ ಕೊರತೆಯನ್ನು ಸುತ್ತುಮುತ್ತಲಿನ ಕುಡಿಯುವ ನೀರಿನ ಕೊರತೆಯನ್ನೂ ತಪ್ಪಿಸಬಹುದು. ಇದಕ್ಕಾಗಿ ಪಂಚಾಯತಿನ ಧನ ಸಹಾಯ ಪಂಚಾಯತಿನ ಮೇಲ್ವಿಚಾರಣೆಯಲ್ಲಿ ಆಗಬೇಕು.

**ಸಮಸ್ಯೆಗಳು** : ಇಲ್ಲಿ ಉತ್ಪತ್ತಿಯಾಗುವ ಭತ್ತವನ್ನು ಅಕ್ಕಿ ಮಾಡುವ ಬಗ್ಗೆ ಸೌಕರ್ಯವಿಲ್ಲ.

**ಪರಿಹಾರ** : ಈ ಪ್ರದೇಶದಲ್ಲಿ ಅಕ್ಕಿಯ ಮಿಲ್ಲು ಇಲ್ಲದ್ದರಿಂದ ನೇಶನಲ್ ಹೈವೇಗೆ ತಾಗಿ ಒಂದು ರೈಸ್ ಮಿಲಂ ತೆರೆಯುವ ಅಗತ್ಯವಿದೆ.

**ಸಮಸ್ಯೆಗಳು** : ವಿದ್ಯುತ್ ಅಭಾವ.

**ಪರಿಹಾರ** : ಕೃಷಿಕರಿಗೆ ಉತ್ತಮ ಕೃಷಿ ಮಾಡುವ ಬಗ್ಗೆ ವಿದ್ಯುತ್ ಒದಗಿಸುವುದಿಲ್ಲ. ಕುಂಜತ್ತೂರ್ ಚಕ್ರತೀರ್ಥ ಇತ್ಯಾದಿ ಸ್ಥಳಗಳಿಗೆ ತರಕಾರಿ

ಬೇಸಾಯಕ್ಕೂ ಇನ್ನಿತರ ಕೃಷಿಗೂ ವಿದ್ಯುತ್ ಅಗತ್ಯವಾಗಿದೆ. ಭತ್ತ, ತೆಂಗು, ಅಡಿಕೆ, ತರಕಾರಿ ಎಂಬೀ ಕೃಷಿಗೆ ಸೌಜನ್ಯ ವಿದ್ಯುತ್ ಪೂರೈಸುವುದು.

**ಸಮಸ್ಯೆಗಳು** : ಕೊಳವೆ ಬಾವಿಯಿಂದ ಬರುವ ಸಮಸ್ಯೆಗಳು

**ಪರಿಹಾರ** : ಈ ಪ್ರದೇಶದ ಮಣ್ಣು ಹೊಯ್ಗೆ ಮಿಶ್ರಿತವಾಗಿ ಪಕ್ಕನೆ ನೀರು ಇಂಗಿ ಹೋಗುವ ಗುಣವಿರುವುದರಿಂದ ಕೊಳವೆ ಬಾವಿ ಪರಿಣಾಮವಾಗಿ ಸಾಧಾರಣ ಕೆರೆ ಬಾವಿಗಳಲ್ಲಿ ಮಳೆ ನಿಲ್ಲುವಾಗಲೇ ಸಂಪೂರ್ಣ ಬತ್ತಿ ಹೋಗುತ್ತದೆ. ಇದನ್ನು ತಡೆಗಟ್ಟುವುದೇ ಕೊಳವೆ ಬಾವಿಗಳನ್ನು ನಿರ್ಮಿಸುವ ಬಗ್ಗೆ ಸರಕಾರದ ಅನುಮತಿ ವಿನಃ ಕೊಳವೆ ಬಾವಿ ನಿರ್ಮಿಸಬಾರದು.

**ಸಮಸ್ಯೆಗಳು** : ಯುವಜನರಲ್ಲಿ ಕೃಷಿಯ ಬಗ್ಗೆ ಅರಿವಿಲ್ಲದಿರುವಿಕೆ

**ಪರಿಹಾರ** : ಈಗಿನ ವಿದ್ಯಾಭ್ಯಾಸ ಪದ್ಧತಿಯು ಕೇವಲ ಡಿಗ್ರಿ ಪಡೆಯುವರೆ ಮಾತ್ರವಾಗಿದೆ. ಇದರಿಂದಾಗಿ ಸ್ವ ಉದ್ಯೋಗ, ಸ್ವಾವಲಂಬನೆ ಇಲ್ಲವಾಗಿದೆ. (ಕಡಿಮೆಯಾಗಿದೆ) ದೇಶದಲ್ಲಿ 80 ಶೇಕಡಾಕ್ಕೂ ಹೆಚ್ಚು ಜನರು ಕೃಷಿಯನ್ನೇ ಅವಲಂಬಿಸಿರುವುದರಿಂದ ಕೃಷಿಕ ಪ್ರಜ್ಞೆ ಪ್ರತಿಯೊಬ್ಬನಲ್ಲಿಯೂ ಅಗತ್ಯವಿದೆ. ಅದಕ್ಕಾಗಿ ಪ್ರಾಥಮಿಕ ಶಾಲೆಗಳಿಂದಲೇ ಕೃಷಿಯ ಹೊಸ ವಿಧಾನದ ಬಗ್ಗೆ ವಿದ್ಯಾಭ್ಯಾಸದಲ್ಲಿ ಬದಲಾವಣೆಯಾಗಬೇಕು. ಹಾಗೂ ಪ್ರತೀ ಶಾಲೆಯಲ್ಲಿಯೂ ಕೃಷಿ ಮಾಡುವ ಕ್ಷೇತ್ರಗಳೂ (ಸಾಧ್ಯವಾದಲ್ಲಿ) ಸರಕಾರಿ ಕ್ಷೇತ್ರವಾದರೂ ಪಾಠಪಟ್ಟಿಯಲ್ಲಿ ಕೃಷಿಗೆ ಸಮುಚಿತ ಸ್ಥಾನ ನೀಡುವಂತಾಗಬೇಕು. ಕಡ್ಡಾಯವಾಗಿ ಮಾಡುವಂತಾದ್ರೆ ಮುಂದಿನ ಜನಾಂಗದಲ್ಲಾದರೂ ಕೃಷಿಯ ಅವಗಣನೆಯನ್ನು ನಿವಾರಿಸಬಹುದು.

**ಸಮಸ್ಯೆಗಳು** : ಕೃಷಿಕರ ಗ್ರಾಮೀಣ ಕ್ರೀಡೆಯಾದ ಕಂಬಳ

**ಪರಿಹಾರ** : ಕೇರಳ ಪ್ರಾಂತ್ಯದ ಉತ್ತರ ಭಾಗವಾದ ಮಂಜೇಶ್ವರದಲ್ಲಿ ಮಾತ್ರ ಕಾಣಬಹುದಾದ ಕೋಣಗಳ ಓಟದ ಸ್ಪರ್ಧೆಯನ್ನು ಸರಕಾರವು ಕೃಷಿಕರ ಗ್ರಾಮೀಣ ಕ್ರೀಡೆಯೆಂದು ಅಂಗೀಕರಿಸಿ ವರ್ಷಂಪ್ರತಿ ಪ್ರದರ್ಶನವೇರ್ಪಡಿಸಿ ಉತ್ತಮ ಜಾನುವಾರುಗಳಿಗೆ ಬಹುಮಾನವನ್ನು ಹಾಗೂ ಉತ್ತಮ ಕೃಷಿ ಉತ್ಪನ್ನಗಳ ಪ್ರದರ್ಶನವನ್ನು ಏರ್ಪಡಿಸಿ ಕೃಷಿಕರನ್ನು ಪ್ರೋತ್ಸಾಹಿಸುವುದು.



# ಕೈಗಾರಿಕೆಗಳು 5-3

ಮಂಜೇಶ್ವರವು ಕೇರಳದ ಅತೀ ಉತ್ತರದ ಗಡಿ ಪ್ರದೇಶದಲ್ಲಿ ವ್ಯಾಪಿಸಿಕೊಂಡಿರು ಒಂದು ಪಂಚಾಯತು ಆಗಿರುತ್ತದೆ. ಇದು ಕರ್ನಾಟಕದ ಅತೀ ದೊಡ್ಡ ಕೈಗಾರಿಕೆ ಮತ್ತು ವ್ಯಾಪಾರ ಕೇಂದ್ರವಾದ ಮಂಗಳೂರು ಪಟ್ಟಣದಿಂದ 16 ಕಿಲೋಮಿಟರ್ ದಕ್ಷಿಣಕ್ಕಿದೆ. ಪ್ರಧಾನ ಸಾರಿಗೆ ವ್ಯವಸ್ಥೆಯಾದ N-H-17 ಮತ್ತು ರೈಲು ಮಾರ್ಗಗಳು ಕೂಡಾ ಈ ಪಂಚಾಯತಿನ ಮೂಲಕ ಹಾದು ಹೋಗುತ್ತದೆ. ಪಶ್ಚಿಮ ಕರಾವಳಿಯಲ್ಲಿ ಸುಮಾರು 9 ಕಿ.ಮಿ.ಗಳಷ್ಟು ಸುಂದರವಾದ ಸಮುದ್ರ ಕರಾವಳಿಯನ್ನು ಕೂಡಾ ಹೊಂದಿರುತ್ತದೆ. ಇದು ಹಿಂದಿನ ಕಾಲದಲ್ಲಿ ಸಣ್ಣ ಒಂದು ಬಂದರು ಕೂಡಾ ಆಗಿತ್ತು. ಬಂಗ್ರಮಂಜೇಶ್ವರ ಹೊಳೆಯಲ್ಲಿ ``ಅಡಿಕೆಗುಂಡಿ" [``ತುಳುವಿನಲ್ಲಿ ``ಕೊಟ್ಯೆಗುಂಡಿ"] ಎಂದು ಹೆಸರಿದ್ದ ಸ್ಥಳಕ್ಕೆ ಹಳೆಕಾಲದಲ್ಲಿ ಮಂಜುಗಳು ಬರುತ್ತಿದ್ದುವು.

ಮಂಜೇಶ್ವರದಲ್ಲಿ ಪಾಂಡಿಯಾಲು [ಪಾಂಡಿಯಾಲು ಎಂದರೆ ರಫ್ತು ಮಾಡುವ ಸಾಮಗ್ರಿಗಳನ್ನು ಸಂಗ್ರಹಿಸಿಡುವ ಗೋದಾಮು] ಇತ್ತು. ಈಗಿನ ಹೊಸಬೆಟ್ಟು ಕಡಪ್ಪುರದಲ್ಲಿ ಹಡಗುಗಳಲ್ಲಿ ವಿದೇಶಕ್ಕೆ ನಮ್ಮ ಊರಿನಲ್ಲಿ ಬೆಳೆಯುವ ಅಡಿಕೆ, ತೆಂಗಿನಕಾಯಿ, ಮೀನು ಮಾತ್ರವಲ್ಲದೆ ಸೌದಿ ಅರೇಬಿಯಾದ ಪ್ರಧಾನ ಪುಣ್ಯ ಕೇಂದ್ರವಾದ ಮಕ್ಕಾ ಪಟ್ಟಣಕ್ಕೆ ಸಾಗುವಾನಿ ಮರಗಳನ್ನು ಕೂಡಾ ಈ ಬಂದರು ಪ್ರದೇಶದಿಂದ ರಫ್ತು ಮಾಡುತ್ತಿದ್ದರು.

ಇಲ್ಲಿಯ ವಿದ್ಯಾವಂತ ಯುವಕ ಯುವತಿಯರು ಇಲ್ಲಿ ಸರಿಯಾದ ಉದ್ಯೋಗ ಅವಕಾಶವಿಲ್ಲದುದರಿಂದ ಕರ್ನಾಟಕದ ಮಂಗಳೂರಿಗೆ ಹೋಗಿ ಅತೀ ಕಡಿಮೆ ಸಂಬಳಕ್ಕೆ ದುಡಿದು ಶೋಷಿಸಲ್ಪಡುವ ಪರಿಸ್ಥಿತಿಗೆ ಬಂದಿರುತ್ತಾರೆ. ಯುವಕರು ಕೊಲ್ಲಿ ರಾಷ್ಟ್ರಕ್ಕೆ ಹೋಗುವ ಕನಸ್ಸನ್ನು ಕಂಡು ಅಲ್ಲಿಗೆ ಹೋಗಿ ಸರಿಯಾದ ತಾಂತ್ರಿಕ ಜ್ಞಾನವಿಲ್ಲದುದರಿಂದ ಕಡಿಮೆ ಸಂಬಳಕ್ಕೆ ದುಡಿಯುವ ದುಃಸ್ಥಿತಿ ಬಂದಿರುತ್ತದೆ. ಸರಕಾರಿ ಹುದ್ದೆಗಳಲ್ಲಿ ಹೆಚ್ಚಾಗಿ ಕನ್ನಡ ಬಲ್ಲವರನ್ನೇ ಈ ಪ್ರದೇಶದಲ್ಲಿ ನೇಮಕಗೊಳಿಸದೆ ಕೇರಳದ ಇತರ ಜಿಲ್ಲೆಗಳಿಂದ ಬಂದು ಉದ್ಯೋಗವನ್ನು ಪಡೆದುದರಿಂದ ಇಲ್ಲಿಯ ಜನರಿಗೆ ಉದ್ಯೋಗ ಅವಕಾಶವು ಕಡಿಮೆಯಾಗಿರುತ್ತದೆ. ಆದುದರಿಂದ ಈ ಪ್ರದೇಶ ಜನರ ಅಭಿವೃದ್ಧಿಗೆ ಉದ್ಯೋಗ ಅವಕಾಶ ತುಂಬಾ ಅಗತ್ಯವಾಗಿದೆ. ಕಿರು ಕೈಗಾರಿಕಾ ಘಟಕಗಳನ್ನು ತೆರೆದು ಗ್ರಾಮ ಪಂಚಾಯತು ಯುವಕ ಯುವತಿಯರಿಗೆ ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವುದು ತುಂಬಾ ಅಗತ್ಯವಾಗಿದೆ.

ಈ ಕರಾವಳಿಯಲ್ಲಿ ಸಂಗಮಗೊಳ್ಳುವ ಮೂರು ಸಣ್ಣ ಹೊಳೆಗಳಿವೆ. ಈ ಹೊಳೆಗಳಲ್ಲಿ ಭರತ ಇಳಿತಗಳು ಪ್ರಭಾವವೂ ಇರುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಇಲ್ಲಿನ ಹೆಚ್ಚಿನ ಜನರು ಕೃಷಿಯಿಂದ ಮತ್ತು ಕರಾವಳಿಯ ಜನರು ಮಿನುಗಾರಿಕೆಯಿಂದ ಜೀವಿಸುತ್ತಿದ್ದರು. ಆದರೆ ಈಗ ಹೆಚ್ಚಿನ ಜನರು ಬೀಡಿ ಕೆಲಸಗಾರರಾಗಿರುತ್ತಾರೆ. ಕೃಷಿ ಭೂಮಿ (ಭತ್ತದ ಗದ್ದೆಗಳು) ಈಗ ತೆಂಗಿನ ತೋಟ, ಆಡಿಕೆ ತೋಟ ಮತ್ತು ಮನೆ ಸೈಟುಗಳಾಗಿ ಪರಿವರ್ತನೆ (Convertion) ಗೊಳ್ಳುತ್ತಾ ಇದೆ. ಹಾಗಾಗಿ ಹೆಚ್ಚಿನ ಪ್ರದೇಶಗಳಲ್ಲಿ ನೋಡಿದರೆ ಗದ್ದೆ ಬೇಸಾಯ ಮಾಡಿರುವುದಿಲ್ಲ.

**ಗುಡಿ ಕೈಗಾರಿಕೆಗಳು:** ಹಿಂದಿನ ಪರಂಪರಾಗತ ಕುಲ ಕಸುಬುಗಳಾದ ಮಡಿಕೆ ತಯಾರಿ, ಮಗ್ಗದ ಕೆಲಸ, ಚರ್ಮದ ಕೈಗಾರಿಕೆಗಳು ಚಾಪೆ ತಯಾರಿ, ಹುರಿಹಗ್ಗ ತಯಾರಿ, ಮಡಲು ಹೆಣೆಯುವುದು ಮತ್ತು ಗಾಣದಿಂದ ಎಣ್ಣೆ ತೆಗೆಯುವ ಕಾಯಕಗಳೆಲ್ಲಾ ಸಂಪೂರ್ಣವಾಗಿ ನಶಿಸಿ ಹೋಗಿರುತ್ತದೆ. ಈಗ ಹೆಚ್ಚಿನ ಮನೆಗಳಲ್ಲಿ ಬಳಸುವ ವಸ್ತುಗಳು ಅಲ್ಲೂಮಿನಿಯಾಂ, ಸ್ಟೀಲ್ ಮತ್ತು ಪ್ಲಾಸ್ಟಿಕ್‌ಗಳಾಗಿರುತ್ತದೆ. ಆದರೆ ಇವುಗಳನ್ನು ತಯಾರು ಮಾಡುವಂತಹ ಯಾವುದೇ ಕೈಗಾರಿಕೆಗಳು ಈ ಪಂಚಾಯತಿನಲ್ಲಿ ತುಂಬಾ ಕಡಿಮೆ. (ಇಲ್ಲವೆಂದೇ ಹೇಳಬಹುದು) ಈಗ ಹೆಚ್ಚಿನ ಕುಟುಂಬಗಳ ಬೀಡಿ ಉದ್ದಿಮೆಯಿಂದ ಜೀವನ ಸಾಗಿಸುತ್ತಾರೆ.

ಈ ಪ್ರದೇಶದಲ್ಲಿ ಇರುವ ಕೈಗಾರಿಕೆಗಳು ಅಥವಾ ಉದ್ಯೋಗ ನಿರತರಾದವರ ಕಸುಬುಗಳ ವಿವರಣೆಗಳನ್ನು ಈ ಕೆಲಗಿನಂತೆ ಕೊಡಲಾಗಿದೆ.

## ಕೋಷ್ಟಕ -1 ಮಂಜೇಶ್ವರ ಪಂಚಾಯತಿನಲ್ಲಿ ಇರುವ ಕೈಗಾರಿಕೆಗಳು

| ಕ್ರಮ ನಂ. | ವಿಭಾಗ | ಯಾನಿಟುಗಳು | ಕೆಲಸಗಾರರ ಸಂಖ್ಯೆ | | |
|---|---|---|---|---|---|
| | | | ಗಂ. | ಹೆ. | ಒಟ್ಟು |
| 1. | ಬೀಡಿ ತಯಾರಿಕಾ ಘಟಗಳು | | 600 | 6,000 | 6,600 |
| 2. | ಕೆಂಪು ಕಲ್ಲು ಕಡಿಯುವುದು | 5 | 28 | - | 28 |
| 3. | ಕಬ್ಬಿಣದ ಉಪಕರಣಗಳ ತಯಾರಿ | 5 | 6 | - | 6 |
| 4 | ಚಿನ್ನದ ಆಭರಣ ತಯಾರಿ | 8 | 12 | - | 12 |
| 5. | ಮರದ ಪೀಠೋಪಕರಣ ತಯಾರಿ | 10 | 32 | - | 32 |
| 6. | ಟೈಲರಿಂಗ್ ಮತ್ತು ರೆಡಿಮೇಡ್ ಗಾರ್ಮೆಂಟ್ಸ್ | - | 25 | 20 | 45 |

| | | | | | |
|---|---|---|---|---|---|
| 7. | ಭಕ್ಷ್ಯ ಸಂಸ್ಕರಣ (ಬೇಕರಿ ಇತ್ಯಾದಿ) | 5 | 12 | 8 | 20 |
| 8. | ಮರ ಸಿಗಿಯುವ ಮಿಲ್ಲು | 5 | 56 | - | 56 |
| 9. | ಟಯರ್ ರಿಟ್ರೀಡಿಂಗ್ | 3 | 7 | - | 7 |
| 10. | ಆಟೋಮೊಬೈಲ್ ವರ್ಕ್‌ಶಾಪ್ (ಗ್ಯಾರೇಜು) | 14 | 105 | - | 105 |
| 11. | ಸೋಫ ತಯಾರಿ ಕೇಂದ್ರ | 3 | 8 | - | 8 |
| 12. | ಪೇಬ್ರಿಕೇಶನ್ ವೆಲ್ಡಿಂಗ್ ಮತ್ತು ಗ್ರಿಲ್ಸ್ | 5 | 16 | - | 16 |
| 13. | ಪ್ರಿಂಟಿಂಗ್ ಪ್ರೆಸ್ | 5 | 10 | 15 | 25 |
| 14. | ರೈಸ್ ಪ್ಲೋರ್ ಮಿಲ್ | 3 | 3 | - | 3 |
| 15. | ಸ್ಟುಡಿಯೋ (ಫೋಟೋ) | 4 | 6 | - | 6 |
| 16. | ಕೊಬ್ಬರಿ ಸಂಸ್ಕರಣೆ | 3 | 3 | - | 3 |
| 17. | ಚಪ್ಪಲಿ ತಯಾರಿ ಕೇಂದ್ರ | 1 | 8 | - | 8 |
| 18. | ಸಿಮೆಂಟು ಕಲ್ಲು, ಇಟ್ಟಿಗೆ ತಯಾರಿ ಘಟಕ | 1 | 8 | - | 8 |
| 19. | ಪ್ಲಾಸ್ಟಿಕ್ ಇಂಡಸ್ಟ್ರೀಸ್ | 2 | 10 | - | 10 |
| 20. | ಶ್ರೀಗಂಧದ ಎಣ್ಣೆಯ ಕಾರ್ಖಾನೆ | 2 | 15 | - | 15 |
| 21. | ಪ್ಲೈವುಡ್ ಕಾರ್ಖಾನೆ | 3 | 24 | 2 | 26 |
| 22. | ಆಯುರ್ವೇದ ಮದ್ದು ತಯಾರಿಕೆ | 1 | 1 | 1 | 2 |
| 23. | ಕೋಳಿ ಸಾಕಣೆ | 2 | 2 | 2 | 4 |
| 24. | ನೈಲನ್ ನೂಲಿನಿಂದ ಚೀಲ ನೇಯುವುದು | 6 | - | 8 | 8 |
| 25. | ದೀಪದ ಬತ್ತಿ ತಯಾರಿ | 1 | 1 | 1 | 2 |
| 26. | ಇಲೆಕ್ಟ್ರಿಕ್ ವಸ್ತುಗಳ ರಿಪೇರಿ | 5 | 21 | - | 21 |

ಬೀಡಿ ಉದ್ದಿಮೆಯಿಂದ ಜೀವನ ಸಾಗಿಸುತ್ತಾರೆ.

ಈ ಪ್ರದೇಶದಲ್ಲಿ ಇರುವ ಕೈಗಾರಿಕೆಗಳು ಅಥವಾ ಉದ್ಯೋಗ ನಿರತರಾದವರ ಕಸುಬುಗಳ ವಿವರಣೆಗಳನ್ನು ಕೆಳಗಿನಂತೆ ಕೊಡಲಾಗಿದೆ.

## ಕೋಷ್ಠಕ-2

## ಮಂಜೇಶ್ವರ ಪಂಚಾಯತಿನಲ್ಲಿ ಈಗ ಇರುವ ವ್ಯವಸಾಯ ಸಹಕಾರಿ ಸಂಘಗಳು

| ಕ್ರಮ ನಂಬ್ರ | ಸಹಕಾರಿ ಸಂಘಗಳ ಹೆಸರು | ಕೆಲಸಗಾರರ ಸಂಖ್ಯೆ | | |
|---|---|---|---|---|
| | | ಗಂಡು | ಹೆಣ್ಣು | ಒಟ್ಟು |
| 1. | ಮಂಜೇಶ್ವರ ದಿನೇಶ್ ಬೀಡಿ ಕೋ ಆಪರೇಟಿವ್ ಸೊಸೈಟಿ | 100 | 500 | 600 |
| 2. | ಮಂಜೇಶ್ವರ ಮರದ ಕೆಲಸಗಾರರ ಸಹಕಾರಿ ಸಂಘ | 6 | - | 6 |
| 3. | ಮಂಜೇಶ್ವರ ಗುಡಿ ಕೈಗಾರಿಕಾ ವ್ಯವಸಾಯ ಸಂಘ | (ಉತ್ಪಾದನೆ ತೊಡಗಲಿಲ್ಲ) | | |

## ಮಹಿಳೆಯರ ಭಾಗವಹಿಸುವಿಕೆ

ಈ ಪಂಚಾಯತಿನ ಹೆಚ್ಚಿನ ಮಹಿಳೆಯರೂ ಬೀಡಿ ಕೆಲಸಗಳಲ್ಲಿ ನಿರತರಾಗಿರುತ್ತಾರೆ.(90%) ಹಿಂದಿನ ತಲೆಮಾರಿನ ಮುದುಕಿ ಹೆಂಗಸರು ಮಾತ್ರ ಕೃಷಿ ಕೂಲಿ ಕಾರ್ಮಿಕರಾಗಿರುತ್ತಾರೆ. ವಿದ್ಯಾವಂತ ಯುವತಿಯರು ಉಡುಪು ತಯಾರಿ ಘಟಕ, ಬ್ಯಾಗು ತಯಾರಿ ಮತ್ತು ಪ್ರೆಸ್‌ಗಳಲ್ಲಿ ದುಡಿಯುತ್ತಾರೆ.

ಕೆಲವು ಕೈಗಾರಿಕೆಗಳನ್ನು ಮಹಿಳೆಯರೇ ನಡೆಸುತ್ತಿದ್ದಾರೆ. ಬ್ಲೋಕಿನ ಅಧೀನದಲ್ಲಿ ಒಂದು D.W.C.R.A. ಪ್ರಕಾರ ಒಂದೊಂದು ಮಡಲು ಮತ್ತು ಚರ್ಮ ನಿರ್ಮಾಣ ಶಾಲೆಗಳಿವೆ. ಮಹಿಳೆಯರ ಉದ್ಯೋಗ ಸಾಧ್ಯತೆಯನ್ನು ಹೆಚ್ಚಿಸಲು ಇಲ್ಲಿ ವಿಫುಲ ಅವಕಾಶಗಳಿವೆ.

## ಹೊಸ ಕೈಗಾರಿಕೆ ಸ್ಥಾಪಿಸಲು ಇರುವ ಅವಕಾಶಗಳು

ಇಲ್ಲಿಯ ಪ್ರಧಾನ ಕೃಷಿ ಉತ್ಪನ್ನಗಳು ತೆಂಗು, ಭತ್ತ, ಅಡಿಕೆ, ಗೇರು ಬೀಜ, ಮಾವು ಮತ್ತು ಹಲಸು. ದೀರ್ಘವಾದ ಕರಾವಳಿಯಿರುವುದರಿಂದ ಮಿನುಗಾರಿಕೆಗೂ ಹೆಚ್ಚು ಸಾಧ್ಯತೆಗಳಿವೆ. ಪಂಚಾಯತಿನ ಎಲ್ಲಾ ಪ್ರದೇಶಗಳಲ್ಲಿಯೂ ಸಂಚಾರ ಯೋಗ್ಯ ಮಾರ್ಗಗಳಿವೆ. ವಿದ್ಯುತ್ ಮತ್ತು ನೀರಿನ ಕ್ಷಾಮ ತುಂಬಾ ಇದೆ. ಹಾಗಾಗಿ ಈಗಿರುವ ಹೆಚ್ಚಿನ ಕೈಗಾರಿಕೆಗಳೂ ನಷ್ಟದಲ್ಲಿರುವುದು. ಈ ಪಂಚಾಯತಿನಲ್ಲಿ ಬೇಕಾದಷ್ಟು ಸರಕಾರಿ ಮಿಚ್ಚ ಭೂಮಿ ಇದ್ದು ಸಾಕಷ್ಟು ಪರಿಣತರ ಸಹಾಯದಿಂದ ಹೊಸದಾಗಿ ಕೈಗಾರಿಕಾ ಯೋಜನೆಗಳನ್ನು ಮಾಡುವರೇ ವಿಫುಳ ಅವಕಾಶ ಇರುವುದು.

ಈ ಕೆಳಗಿನ ವ್ಯವಸ್ಥೆಗಳನ್ನು ಮಾಡಿದಲ್ಲಿ ಈ ಗ್ರಾಮ ಪಂಚಾಯತು ಒಂದು ಉತ್ತಮ ಕೈಗಾರಿಕಾ ಕೇಂದ್ರವಾಗಬಹುದು.

1. ವಿದ್ಯುತ್ತಿನ ಕ್ಷಾಮ ನಿವಾರಣೆ.
2. ಸಾಕಷ್ಟು ನೀರಿನ ಲಭ್ಯತೆಗೆ ಏರ್ಪಾಡು.
3. ನಿರುದ್ಯೋಗಿ ಯುವಕ ಯುವತಿಯರಿಗೆ ಈ ಕೆಳಗಿನವುಗಳಲ್ಲಿ ತರಬೇತು ಕೇಂದ್ರಗಳ ಸ್ಥಾಪನೆ.
   - a) ರೆಡಿ ಮೇಡ್ ಗಾರ್ಮೆಂಟ್ಸ್
   - b) ಪ್ಲಾಸ್ಟಿಕ್ ಸಾಮಾಗ್ರಿಗಳ ತಯಾರಿ.
   - c) ಎಲ್ಲೂಮಿನಿಯಂ, ಸ್ಟೀಲ್ ಸಾಮಾಗ್ರಿಗಳ ತಯಾರಿ
   - d) ವಿದ್ಯುತ್ ಉಪಕರಣಗಳ ರಿಪೇರಿ
   - e) ಚರ್ಮದ ವಸ್ತುಗಳ ತಯಾರಿ
   - f) ಹುರಿ ಹಗ್ಗ ಕೈಗಾರಿಕೆ.
   - g) ಹೈನುಗಾರಿಕೆ.
   - h) ಕೃಷಿ ಆಧಾರಿತ ಗುಡಿ ಕೈಗಾರಿಕೆ
   - i) ಮಿನುಗಾರಿಕಾ ಉತ್ಪನ್ನಗಳು.
   - j) ಕೋಳಿ ಸಾಕಣೆ.
   - k) ಜೇನು ಸಾಕಣೆ.

**ಮಾರುಕಟ್ಟೆ ವ್ಯವಸ್ಥೆ:-**

ಖಾಸಗಿಯವರೊಂದಿಗೆ ಪೈಪೋಟಿ ನಡೆಸಲು ಸಮರ್ಥವಾದ ಸಹಕಾರಿ ಮಾರು ಕಟ್ಟೆಗಳ ಸ್ಥಾಪನೆ. ಹಾಗೂ ಪಂಚಾಯತು ಸ್ಥಳಗಳಲ್ಲಿ ಮಿನಿ ಇಂಡಸ್ಟ್ರಿಯಲ್ ಎಸ್ಟೇಟುಗಳ ನಿರ್ಮಾಣ. ಸಹಕಾರಿ ಸಂಘಗಳ ಮೂಲಕ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸುವುದು. ಅಂತೆಯೇ ಯೋಗ್ಯ ತರಬೇತಿ ಪಡೆದ ಯುವಕ ಯುವತಿಯರಿಗೆ ಮಾರುಕಟ್ಟೆ ತರಬೇತಿ ಕೊಡುವುದು ಮತ್ತು ಉದ್ದಿಮೆ ಸ್ಥಾಪಿಸಲು ಸವಲತ್ತುಗಳನ್ನು ಒದಗಿಸುವುದು.

## ಗ್ರಾಮ ಪಂಚಾಯತಿನಲ್ಲಿ ಸ್ಥಾಪಿಸಬಹುದಾದ ಕೈಗಾರಿಕೆಗಳು

ಈ ಪಂಚಾಯತಿನ ವಾರ್ಡು ಮಟ್ಟದ ಚರ್ಚೆಗಳಲ್ಲಿ ಮತ್ತು ಪಂಚಾಯತು ಮಟ್ಟದ ಸಭೆಗಳಲ್ಲಿ ಮಾಡಿದ ನಿರ್ಧಾರದಂತೆ ಈ ಪಂಚಾಯತಿನ ಜನರ ಔದ್ಯೋಗೀಕರಣಕ್ಕಾಗಿ ಸ್ಥಾಪಿಸಬಹುದಾದಂತಹ ಹೊಸ ಕೈಗಾರಿಕೆಗಳು.

1. ಕೃಷಿ ಉತ್ಪನ್ನ ಆಧಾರಿತ ಕೈಗಾರಿಕೆಗಳು.
2. ಮಿನುಗಾರಿಕಾ ಉತ್ಪನ್ನ ಕೈಗಾರಿಕೆಗಳು.
3. ಪ್ಲಾಸ್ಟಿಕ್ ಕೈಗಾರಿಕೆಗಳು
4. ಸ್ಟೀಲ್ ಮತ್ತು ಎಲ್ಯೂಮಿನಿಯಂ ಕೈಗಾರಿಕೆಗಳು

5. ಐಸ್ ಪ್ಲಾಂಟ್‌ಗಳು.
6. ಸೋಪ್ ಕೈಗಾರಿಕೆಗಳು
7. ರೆಡಿಮೇಡ್ ಗಾರ್ಮೆಂಟ್ಸ್ ತಯಾರಿ ಘಟಕಗಳು
8. ಅಗರ್ ಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳ ತಯಾರಿ
9. ಇಲೆಕ್ಟ್ರೋನಿಕ್ ಕೈಗಾರಿಕೆಗಳು
10. ಕಬ್ಬಿಣದ ಕೃಷಿ ಉಪಕರಣಗಳ ತಯಾರಿ ಘಟಕಗಳು
11. ಹುರಿ ಹಗ್ಗ ಉದ್ಯಮಗಳು.
12. ಹಾಳೆಯ ಪಾತ್ರೆಗಳು ಮತ್ತು ಗೆರಟೆಯ ಕರಕುಶಲ ವಸ್ತುಗಳ ತಯಾರಿ ಘಟಕ.
13. ಕೋಳಿ ಸಾಕಣೆ ಕೇಂದ್ರಗಳು
14. ಗಾಜು ತಯಾರಿ ಘಟಕ.
15. ಆಟೋ ಮೋಬೈಲ್ ವರ್ಕ್‌ಶಾಪ್‌ಗಳು ಮತ್ತು ಫೇಬ್ರಿಕೇಶನ್ ಘಟಕಗಳು.
16. ಬುಟ್ಟಿ ಹಾಗೂ ಚಾಪೆ ಹೆಣೆಯುವ ಕೇಂದ್ರಗಳು.
17. ಪ್ಲಾಸ್ಟಿಕ್ ಮತ್ತು ರಬ್ಬರ್‌ನ ಚಪ್ಪಲಿ, ಬೇಗ್ ತಯಾರಿ ಘಟಕಗಳು.
18. ವಿದ್ಯುತ್ ಉಪಕರಣಗಳ ರಿಪೇರಿ ಘಟಕಗಳು.
19. ವಿದ್ಯುತ್ ಕಂಬಗಳ ನಿರ್ಮಾಣ ಘಟಕಗಳು

ಈ ಮೇಲಿನ ಕೈಗಾರಿಕೆಗಳನ್ನು ಸ್ಥಾಪಿಸುವಲ್ಲಿ ಖಾಸಗಿ ವ್ಯಕ್ತಿಗಳಿಗೆ ಪ್ರೋತ್ಸಾಹ ಕೊಡುವುದು ಮತ್ತು ಹೊಸ ಹೊಸ ಸಹಕಾರಿ ಸಂಘಗಳನ್ನು ಸ್ಥಾಪಿಸಿ, ವಹಿಸಿ ಕೊಡುವುದು.

## ಕೈಗಾರಿಕೆಗಳು (ಅವಶ್ಯಕತೆಗಳು)

ಮಂಜೇಶ್ವರ ಗ್ರಾಮ ಪಂಚಾಯತಿನಲ್ಲಿ ಪ್ರಕೃತ ಬೇಕಾದಷ್ಟು ವಿದ್ಯಾವಂತ ಯುವಕ ಯುವತಿಯರು ನಿರುದ್ಯೋಗಿಗಳಾಗಿ ನೆರೆಯ ರಾಜ್ಯಗಳಿಗೆ ಹೋಗಿ ಹಲವಾರು ಉದ್ದಿಮೆಗಳಲ್ಲಿ ಅತೀ ಕಡಿಮೆ ಆರ್ಥಿಕ ಸಂಪಾದನೆ ಪಡೆಯುತ್ತಿದ್ದಾರೆ ಅಥವಾ ಕಷ್ಟಕ್ಕೊಳಗಾಗಿದ್ದಾರೆ. ಎಷ್ಟೋ ಯುವಕ ಯುವತಿಯರು ಇಲ್ಲೇ ಉದ್ಯೋಗವಿಲ್ಲದೆ ಅಂಡಲೆಯುತ್ತಿದ್ದಾರೆ. ಹೀಗೆ ನಮ್ಮ ಪಂಚಾಯತಿನ ಮಾನವ ಸಂಪನ್ಮೂಲವನ್ನು ಸರಿಯಾದ ಉಪಯೋಗ ಪಡೆಯುವರೇ ಈ ಕೆಳಗೆ ನಿರ್ದೇಶಿಸಿದ ಕೈಗಾರಿಕೆಗಳಲ್ಲಿ ತೊಡಗಿಸಲು ಇಲ್ಲಿ ಧಾರಾಳ ಆಸ್ಪದವಿರುವುದು.

**RESOURSE BASED**

1. ಈ ಪ್ರದೇಶದಲ್ಲಿ ಸರಕಾರಿ ಮಿಚ್ಚ ಭೂಮಿ ಧಾರಾಳವಿದ್ದು, ಈ ಪಂಚಾಯತಿನ ವಿವಿಧ ಕಡೆಗಳಲ್ಲಿ ಆರಿಸಿ, ಒಂದು ಕೈಗಾರಿಕೆಯ ಅಭಿವೃದ್ಧಿಯ ಕ್ಷೇತ್ರಗಳಾಗಿ ವಿಂಗಡಿಸಿ ಅಲ್ಲಿಗೆ ವಿದ್ಯುಚ್ಛಕ್ತಿ, ನೀರು ಸರಬರಾಜು ಮತ್ತು ಅಗತ್ಯದ ಮಾರ್ಗಗಳನ್ನು ನಿರ್ಮಿಸಿ ಕೈಗಾರಿಕೆಗಳಲ್ಲಿ ಆಸಕ್ತಿಯುಳ್ಳ ಫಲಾನುಭವಿಗಳಿಗೆ ಅವರ ಯೋಜನೆಗೆ ಅನುಗುಣವಾಗಿ ಹಂಚಿಕೊಡುವುದು. (Industrial Estate)
2. ಈ ಪಂಚಾಯತು ಕ್ಷೇತ್ರದಲ್ಲಿ ಸಂಗ್ರಹಿಸಬಹುದಾದ ತೆಂಗಿನ ಸಿಪ್ಪೆಗಳ ಆಧಾರದಲ್ಲಿ ಇಲ್ಲಿಯ ಯೋಗ್ಯ ಸ್ಥಳದಲ್ಲಿ Mechanised Fibric Unitsಗಳನ್ನು ಸರಕಾರಿವತಿಯಿಂದ ಸ್ಥಾಪಿಸುವುದು.
3. ಈ ಪಂಚಾಯತಿನ ಯೋಗ್ಯ ಸ್ಥಳದಲ್ಲಿ ಒಂದು ಗೇರುಬೀಜ ಸಂಸ್ಕರಣಾ ಕಾರ್ಖಾನೆ. (Cashewnut Factory)

## DEMAND BASED

ವರ್ಷ ಕಳೆದಂತೆ ಈ ಪಂಚಾಯತಿನ ಜನಸಂಖ್ಯೆ ದಿನೇ ದಿನೇ ಹೆಚ್ಚುತ್ತಾ ಇದ್ದು ಜನರ ಸಾಮಾಜಿಕ, ಆರ್ಥಿಕತೆಗಳು ಬೆಳವಣಿಗೆಯನ್ನು ಹೊಂದುತ್ತಾ ಇದ್ದು, ಎಲ್ಲಾ ಕುಟುಂಬಗಳ ದಿನಬಳಕೆಯ ವಸ್ತುಗಳು ಆಧುನಿಕ ರೀತಿಯ ಸವಲತ್ತುಗಳು ಮತ್ತು ಸೌಖರ್ಯಗಳನ್ನು ಹೊಂದುತ್ತಾ ಬರುವುದರಿಂದ ಇವುಗಳ ದುರಸ್ತಿ ರಿಪೇರಿಗಳಿಗಾಗಿ ಹಾಗೂ ಅವುಗಳ ಬಿಡಿಭಾಗಗಳ ಪೂರೈಕೆಗಾಗಿ ಈ ಕೆಳಗಿನ ಕೆಲವು ಯೂನಿಟುಗಳನ್ನು ಅಥಾವಾ ವ್ಯವಸಾಯಗಳನ್ನು ಆರಂಭಿಸಲು ಗ್ರಾಮ ಸಭೆಗಳಲ್ಲಿ ತೆಗೆದ ತೀರ್ಮಾನದಂತೆ ಆರಂಭಿಸಲು ಉದ್ದೇಶಿಸಲಾಗಿದೆ.

**A. Artisan / Tiny Units**

| Sl. No. | ಕೈಗಾರಿಕೆಯ ಹೆಸರು | No of Unis Proposeding next 5 years | Total Estimaed Cost. |
|---|---|---|---|
| 1. | Cobblers/Footwear | 10 | 2,00,000/= |
| 2. | Tailoring/Ready made | 50 | 5,00,000/= |
| 3. | Blacksmith / Tinsmith | 20 | 4,00,000/= |
| 4. | Carpentry / Furnitures/ Construction Materials | 25 | 12,50,000/= |
| 5. | Electrical repairs and rewinding | 20 | 8,00,000/= |
| 6. | Electrical / Electronics Servicing Unit | 10 | 4,00,000/= |
| 7. | Plumbing / Small repair works | 20 | 4,00,000/= |
| 8. | Pump set repairs and service. | 10 | 2,00,000/= |
| 9. | General Engineering / Fabrications / repairs | 20 | 15,00,000/= |

**B Small Scale Industries (ಕಿರು ಕೈಗಾರಿಕೆಗಳು)**

| | | | |
|---|---|---|---|
| 1. | P.V.C. Specials | 1 | 30,00,000/= |
| 2. | M.C. Sheets | 2 | 40,00,000/= |
| 3. | Rubber moulded goods | 2 | 20,00,000/= |
| 4. | Plastic L.D.P.E/HDPE/HMHDP | 5 | 75,00,000/= |
| 5. | Iron Foundry | 2 | 16,00,000/= |
| 6. | Engineering Tool room shop | 1 | 10,00,000/= |

ಈ ಎಲ್ಲಾ ಕೈಗಾರಿಕಾ ಘಟಕಗಳಿಗೆ 75% Bank ಸಾಲವಾಗಿಯೂ 15% ಯೋಜನಾ ಸಬ್ಸಿಡಿ ಸರಕಾರದಿಂದ ಅಥವಾ ಸರಕಾರೀ ಏಜನ್ಸಿಗಳಿಂದಲೂ 10% ಹೂಡಿಕೆದಾರರ (Enterprenures) ಮೂಲಕವೂ ಕ್ರೋಢೀಕರಿಸಿ ಯಶಸ್ವಿಯಾಗಿ ಈ ಪಂಚಾಯತಿನಲ್ಲಿ ಬರುವ 9ನೇ ಪಂಚವಾರ್ಷಿಕ ಯೋಜನೆಯ ಐದು ವರ್ಷಗಳಲ್ಲಿ ಕಾರ್ಯಗತ ಗೊಳಿಸಬಹುದಾಗಿದೆ.

# ವನಿತಾ ಕ್ಷೇಮ 5-9

1991ರ ಜನಗಣತಿ ಪ್ರಕಾರ ಮಂಜೇಶ್ವರ ಪಂಚಾಯತಿನ ಒಟ್ಟು ಜನಸಂಖ್ಯೆ 32,100.ಅದರಲ್ಲಿ ಮಹಿಳೆಯರು 16.520. ಮಹಿಳೆಯರಲ್ಲಿ 20% ವಿದ್ಯಾಭ್ಯಾಸ ಪಡೆದವರು. 40% ಸಾಮಾನ್ಯ ವಿದ್ಯಾಭ್ಯಾಸ ಪಡೆದವರು. 20% ಸಾಕ್ಷರರಾದ್ದಾರೆ. 20% ಅವಿದ್ಯಾವಂತರೂ ಆಗಿದ್ದಾರೆ. ಸಾಕ್ಷರತಾ ಕಾರ್ಯಕ್ರಮದ ಯೋಜನೆಯಲ್ಲಿ ಮಹಿಳೆಯರ ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಲಾಗಿದೆ. ಮಂಜೇಶ್ವರ ಪಂಚಾಯತಿನ ಮಹಿಳೆಯರಲ್ಲಿ 60% ವಿವಿಧ ರಂಗದಲ್ಲಿ ದುಡಿಯುವ ಕಾರ್ಮಿಕರಾಗಿದ್ದಾರೆ. 10% ಮಹಿಳೆಯರು ಮಾತ್ರ ಸರಕಾರಿ ಉದ್ಯೋಗಸ್ಥರಾಗಿದ್ದಾರೆ. 30% ಮಹಿಳೆಯರು ಯಾವ ಉದ್ಯೋಗದಲ್ಲಿಯೂ ಇರದೇ ಆರ್ಥಿಕ ಭದ್ರತೆಯೂ ಇಲ್ಲದೆ ಪರಾವಲಂಬಿಗಳಾಗಿದ್ದಾರೆ.

ನಮ್ಮ ಪಂಚಾಯತಿನ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪ್ರಧಾನ ದೌರ್ಭಲ್ಯ ಕಾಣುವುದು ಮಹಿಳೆಯ ಪಾಲುಗಾರಿಕೆಯಲ್ಲಿ ಈ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಇಂದು ನಮ್ಮ ಪಂಚಾಯತಿನ ನೆಲೆಯಲ್ಲಿ ನಡೆಯುತ್ತಿರುವ ಎಲ್ಲಾ ಪ್ರಾದೇಶಿಕ ಜನ ಯೋಜನಾ ಕಾರ್ಯಕ್ರಮದಲ್ಲಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರನ್ನು ಪಾಲ್ಗೊಳಿಸಬೇಕಾಗಿದೆ.

**ಮಂಜೇಶ್ವರ ಪಂಚಾಯತಿನ ಮಹಿಳೆಯ ಸ್ಥಿತಿಗತಿ.**

**ಸ್ಥಿತಿಗತಿ ಅವರು ಒಗ್ಗೂಡಿ ಸ್ಥಾಪಿಸಿದ ಕಿರು ಕೈಗಾರಿಕಾ ಯೂನಿಟ್‌ಗಳು**

1. ಕಚ್ಚಾ D.W.C.R.A. ಯೂನಿಟ್ VIIನೇ ವಾರ್ಡ್‌ನಲ್ಲಿದೆ.
2. ವಾಮಂಜೂರು D.W.C.R.A. ಯೂನಿಟ್, (garments)
3. ಮರಿಯಾಶ್ರಮ D.W.C.R.A. ಹಂದಿ ಸಾಕಣೆ II

**ಮಂಜೇಶ್ವರ ಪಂಚಾಯತಿನ ಮಹಿಳೆಯ ಈಗಿನ ಸ್ಥಿತಿ**

ಇಲ್ಲಿರುವ ಬೀಡಿ ಕಾರ್ಮಿಕರಿಗೂ, ಕೃಷಿಕಾರ್ಮಿಕ, ಮಿನುಗಾರಿಕ ಕಾರ್ಮಿಕ ಮಹಿಳೆಯರ ಆರ್ಥಿಕ ಸ್ಥಿತಿ ಗತಿ ಶೋಚನೀಯವಾಗಿದೆ. ಬೀಡಿ ಕಾರ್ಮಿಕ ಮಹಿಳೆಯರಲ್ಲಿ ಅನೇಕರು ಅನಕ್ಷರರಾದ ಕಾರಣ ಅವರನ್ನು ಕೂಲಿಕೊಡುವಲ್ಲಿ ಶೋಷಿಸುತ್ತಾರೆ. ಕೃಷಿ ಕಾರ್ಮಿಕರಲ್ಲಿ ಮಹಿಳಾ ಕಾರ್ಮಿಕರಿಗೆ ಕೊಡುವ ಕೂಲಿ ಪುರುಷರಿಗಿಂತ ಕಡಿಮೆ. ಮಿನುಗಾರಿಕೆಯಲ್ಲಿ ಮಹಿಳೆ ಕಾರ್ಮಿಕರು ಕೊಟ್ಟ ಕೂಲಿ ಪಡೆಯಬೇಕೆಂಬ ಹೊಸ ನಿಯಮ ಕೈಗಾರಿಕಾ ವಿಭಾಗದಲ್ಲಿ ಮಹಿಳೆಯರಿಗೆ ಪ್ರೋತ್ಸಾಹವು ಕಡಿತದಲ್ಲಿ ಮಾತ್ರ ಕಾಣಿಸಲಾಗುತ್ತದೆ. ಬೆರಳೆಣಿಕೆಯ ಒಂದೆರಡು ಚಿಕ್ಕ ಉದ್ಯಮಗಳು ಸ್ಥಾಪಣೆಗೊಂಡರೂ ಸರಿಯಾದ ಮಾರ್ಗದರ್ಶನ ಆತ್ಮಸ್ಥೈರ್ಯದ ಕೊರತೆಯಿಂದಾಗಿ ದಿನದಿಂದ ದಿನಕ್ಕೆ ಕ್ಷೀಣಿಸುತ್ತದೆ. ಧೈರ್ಯವಹಿಸಿ ಮುಂದೆ ಬರುವ ಮಹಿಳೆಯರಿಗೆ ಸರಿಯಾದ ಸಮಯದಲ್ಲಿ ಆರ್ಥಿಕ ಸಹಾಯ ತಾಂತ್ರಿಕ ಸಹಾಯ ನೀಡುವವರಿಲ್ಲದೆ ಅವರ ಉತ್ಸಾಹ ಮೊಳಕೆಯಲ್ಲೆ ಚಿವುಟಲ್ಪಡುತ್ತದೆ. ಮಹಿಳೆಯರ, ಗರ್ಭಿಣಿಯರ, ಶಿಶುಗಳ ಆರೋಗ್ಯ ಸಂರಕ್ಷಣೆಗಾಗಿ ಮಂಗಲ್ಪಾಡಿ Primary Healthನ ವತಿಯಿಂದ ಸ್ಥಾಪಿಸಲಾದ Family Welfare Centerಗಳು ನಾಮಕಾವಸ್ಥೆಯಲ್ಲಿ ಕಾರ್ಯವೆಸಗುತ್ತಿವೆ. ಅಂತು ಸರಿಯಾದ ರೀತಿಯಲ್ಲಿ ಮಹಿಳೆಯರ ಆರೋಗ್ಯ ರಕ್ಷಣೆ, ಗರ್ಭಿಣಿಯರ ತಪಾಸಣೆ, ಚುಚ್ಚುಮದ್ದು ಹಾಕಿಸುವಿಕೆಯು ಉತ್ತಮವಾದ ರೀತಿಯಲ್ಲಿ ನಡೆಯುವುದಿಲ್ಲವೆಂದು ಗ್ರಾಮ ಸಭೆಗಳ ವರದಿಯಿಂದ ಖಾತರಿಯಾಗಿದೆ.

**ಮಹಿಳೆಯರಿಗಾಗಿ ಇರುವ ಕೆಲವು ಸವಲತ್ತುಗಳು ಸ್ಕೀಮುಗಳು.**

1. IRDP ಸ್ಕೀಮಿನಲ್ಲಿ ಮಹಿಳೆಯರಿಗಾಗಿ ಮಿಸಲಾದ ಕಿರುಕೈಗಾರಿಕಾ ಸ್ಥಾಪನೆಗೆ ತರಬೇತಿ, ಆರ್ಥಿಕ ಸಹಾಯವನ್ನು ಒದಗಿಸಬೇಕಾಗಿದೆ.
2. ವಿಧವೆಯರಿಗೆ, ಅಂಗವಿಕಲರಿಗೆ ಪಿಂಚಣಿ ವ್ಯವಸ್ಥೆ ಮಾಡಬೇಕಾಗಿದೆ.
3. ಸ್ವಯಂ ಆಡಳಿತ ಸಂಸ್ಥೆ, ಸಹಕಾರಿ ಸಂಸ್ಥೆ, ನಿಯಮಸಭೆ, ಲೋಕ ಸಭೆಗಳಲ್ಲಿ ಮಿಸಲಾತಿ ಸ್ಥಾನಗಳು ದೊರೆಯುವಂತಾಗಬೇಕು.
4. ಮಹಿಳಾ ಸಂಘಟನೆಗಳು
5. ಪ್ರಿಯದರ್ಶಿನಿ ಮಹಿಳಾ ಸಮಾಜ
6. ಕೀರ್ತಿ ಮಹಿಳಾ ಸಮಾಜ
7. ಕಣ್ವತೀರ್ಥ ಮಹಿಳಾ ರಂಗ
8. ಪಾತಿಮತ್ ಜುಹೂರ ಮಹಿಳಾ ಬಳಗ

1. ರಮಾಬ್ಯಾ ಮಹಿಳಾ ಸಮಾಜ ಅಂಗಡಿ ಪದವು
2. ರಥಬೀದಿ ಮಹಿಳಾ ಸಮಾಜ

3. ಮಿಲನ ಮಹಿಳಾ ಬಳಗ ಅಂಬೇಡ್ಕರ್ ನಗರ.

4. ಗುಡ್ಡೆಕೇರಿ, ಪೋಸೋಟು ವನಿತಾ ಕೇಂದ್ರ ಇವುಗಳಲ್ಲಿ ಕೆಲವು ಮಾತ್ರ ಕಾರ್ಯ ಪ್ರವೃತ್ತರಾಗಿರುತ್ತವೆ. ಮಿಕ್ಕವುಗಳನ್ನು ಪುನರ್ಜೀಗೊಳಿಸಬೇಕು.

ಮುಂದಿನ 5 ವರ್ಷಗಳಲ್ಲಿ 9ನೇ ಜನಕೀಯ ಯೋಜನೆಯಲ್ಲಿ ಮಂಜೇಶ್ವರ ಪಂಚಾಯತಿನ ಮಹಿಳೆಯರ ವಿಕಸನಕ್ಕಾಗಿ ಆರ್ಥಿಕ, ಸಮೂಹಿಕ, ರಾಜಕೀಯ. ಪ್ರಾದೇಶಿಕ ರಂಗದಲ್ಲಿ ಮಹಿಳೆಯ ಪಾಲ್ಗೊಳ್ಳಿಸುವಿಕೆ ಅಧಿಕಗೊಳಿಸಲು ನಿಯೋಜಿಸಬೇಕಾದ ಕಾರ್ಯಕ್ರಮಗಳು.

1. ಮಹಿಳಾ ಸಂಧ್ಯಾ ಶಾಲೆ ಶಿಕ್ಷಣ ಯೋಜನೆ.

2. F.W Centreಗಳನ್ನು ಮಂಜೇಶ್ವರ ಸರಕಾರಿ ಆಸ್ಪತ್ರೆಯಲ್ಲಿ ಆಡಳಿತಕ್ಕೆ ಒಳಪಡಿಸಿ ಸೇವಾ ಕಾರ್ಯಗಳನ್ನು ಕ್ರಮಬದ್ಧಗೊಳಿಸುವುದು.

3. ಮಹಿಳಾ ಕಾರ್ಮಿಕರ ಸಂಘ ಸ್ಥಾಪನೆ, ಮಹಿಳೆಯರ ಶೋಷಣೆಗೆ ಪ್ರತಿಭಟನೆ ಕಾರ್ಯ ತತ್ಪರತೆ ಹೆಚ್ಚಿಸುವುದು. ಸರಿಯಾದ ಮಾರ್ಗದರ್ಶನ ಆತ್ಮಸ್ಥೈರ್ಯ ತುಂಬಿಸುವುದು. ತಮ್ಮ ಸವಲತ್ತು ಮಿಸಲಾತಿಗಳ ಕುರಿತು ಅರಿವು ಮೂಡಿಸುವುದು.

4. I.R.D.P. ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಳಿಸಲು ಗರಿಷ್ಠ ಸಂಖ್ಯೆಯಲ್ಲಿ ಗ್ರಾಮ ಸೇವಕಿಯರ ಸಹಾಯವನ್ನು ಮಹಿಳೆಯರಿಗೆ ಒದಗಿಸುವುದು.

5. ಮಹಿಳಾ ತಾಂತ್ರಿಕ ತರಬೇತಿ ಕಾರ್ಯಕ್ರಮ ವರ್ಷಕ್ಕೆರಡು ಬಾರಿ ಸಂಘಟಿಸಿದರೆ ಮಹಿಳೆಯರದೇ ಆದ ಕಿರು ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಬೇಕಾದ ತಾಂತ್ರಿಕ ನೈಪುಣ್ಯತೆ ಮಹಿಳೆಯಲ್ಲಿ ಹೆಚ್ಚಿಸುವಿಕೆ.

6. ಮಹಿಳಾ ಸಹಕಾರಿ ಮಾರುಕಟ್ಟೆ ಕೇಂದ್ರವನ್ನು ಸ್ಥಾಪಿಸುವುದು. ಗೃಹ ಉತ್ಪಾದನಾ ವಸ್ತುಗಳಿಗೆ ಮಾರುಕಟ್ಟೆ ಸೌಕರ್ಯ ಲಭಿಸುವಂತೆ ಮಾಡುವುದು.

7. ಮಹಿಳೆಯ ಮೇಲೆ ನಡೆಯುವ ದೌರ್ಜನ್ಯ, ವರದಕ್ಷಿಣೆ ಪಿಡುಗು, ವಧುದಹನ ಮಿಸಲಾತಿಗೆ ತಡೆ ಒಡ್ಡುವುದು ಮೊದಲಾದುವುಗಳನ್ನು ಪತ್ತೆ ಹಚ್ಚುವುದು. ವಿಷಯ ತಿಳಿದು ಬಂದಾಗ ಬೇಕಾದ ಕ್ರಮ ತೆಗೆದುಕೊಳ್ಳಲು ಹಾಗೂ ಗುಪ್ತರೀತಿಯಲ್ಲಿ ಸಮಸ್ಯೆ ಪತ್ತೆ ಹಚ್ಚುವ ಒಂದು ಸಮಿತಿಯನ್ನು ಪಂಚಾಯತ್‌ನಲ್ಲಿ ಮಹಿಳಾ ಪ್ರತಿನಿಧಿ, ಜನ ಪ್ರತಿ ನಿಧಿಗಳನ್ನು ಒಡಗೂಡಿಸಿ ರೂಪಿಕರಿಸಬೇಕು. ದೂರು ದಾಖಲಿಸುವ ಕಡತ ಪಂಚಾಯತ್ ಆಫೀಸಿನಲ್ಲಿರುವಂತಾಗಬೇಕು.

8. ಬಡ ಮಹಿಳೆಯರಿಗೆ (ವಿಧವೆ, ಅಂಗವಿಕಲೆಯರಿಗೆ, ಮನೆ ನಿವೇಶನ, ಕೊಡುವ ಯೋಜನೆ) ಮನೆಕಟ್ಟಲು ಸಹಾಯ ಕೊಡಲು ವ್ಯವಸ್ಥೆ ಮಾಡಬೇಕು.

9. ನಮ್ಮ ಪಂಚಾಯತಿನ ಮಹಿಳೆಯರ ಜ್ಞಾನ ವರ್ಧನೆಗಾಗಿ ಪ್ರತ್ಯೇಕವಾದ ವಾಚನಾಲಯ, ಮಾಹಿತಿ ಕೇಂದ್ರವನ್ನು ಸ್ಥಾಪಿಸಿದರೆ ಮಹಿಳೆಯ ತಿಳುವಳಿಕೆ ಮಟ್ಟ, ವಿದ್ಯಾ ಮಟ್ಟ ಉತ್ತಮಗೊಳ್ಳಬಹುದು.

10. ಮಹಿಳೆಯ ಪರಂಪರಾಗತ ಉದ್ಯೋಗಗಳಾದ ದನ, ಆಡು, ಕೋಳಿಸಾಕಣೆ ಅವುಗಳ ಪಾಲನೆ ರೋಗ ತಡೆಗಟ್ಟುವಿಕೆ, ಉತ್ಪಾದನೆ ಹೆಚ್ಚಳದ ಕುರಿತು ಅನುಸರಿಸಬೇಕಾದ ಜಾಗೃತೆಗಳ ಕುರಿತು ಅರಿವು ಮೂಡಿಸುವ ಮಾಹಿತಿ ಕೇಂದ್ರ ಮೃಗಾಸ್ಪತ್ರೆಯಲ್ಲಿರುವುದು ಉತ್ತಮ.

ಈ ಎಲ್ಲಾ ವಿಶೇಷ ಸವಲತ್ತು ಮಹಿಳೆಯರಿಗೆ ಒದಗಿಸಿ ಅವರನ್ನು ಪ್ರೋತ್ಸಾಹಿಸಿದರೆ ಖಂಡಿತವಾಗಿಯೂ ಮಹಿಳೆಯ ಸಹಭಾಗಿತ್ವವು ಎಲ್ಲಾ ರಂಗದಲ್ಲಿ ಸಮರ್ಪಕವಾಗಿ ಮೇಲೆರುವುದು.

ಸ್ತ್ರೀಯೊಬ್ಬಳು ವಿದ್ಯಾವಂತೆ, ಆರೋಗ್ಯವಂತೆಯಾದರೆ ಆ ಮನೆಯ ಎಲ್ಲಾ ಸದಸ್ಯರು ವಿದ್ಯಾವಂತರೂ, ಆರೋಗ್ಯವಂತರೂ ಕ್ರಿಯಾಶೀಲರೂ ಆಗುವರು. ಹೀಗೆ ಎಲ್ಲಾ ಮನೆಗಳು ಅಭಿವೃದ್ಧಿ ಹೊಂದಿದರೆ ನಮ್ಮ ಇಡೀ ಪಂಚಾಯತೇ ಅಭಿವೃದ್ಧಿ ಗೊಳ್ಳುವುದು.

# 5.4 ವಿದ್ಯಾಭ್ಯಾಸ

ಮಂಜೇಶ್ವರವು ಕೇರಳ ರಾಜ್ಯದ ಉತ್ತರ ತುದಿಯ ಕರಾವಳಿ ಗ್ರಾಮ ಪಂಚಾಯತು ಆಗಿದೆ. ಚಾರಿತ್ರಿಕವಾಗಿ ವಿಜಯನಗರ ಸಾಮ್ರಾಜ್ಯದ ಪರಿಧಿಯೊಳಪಟ್ಟಿದ್ದ ಈ ಪ್ರದೇಶವು ಬ್ರಿಟಿಷರ ಕಾಲದಲ್ಲಿ ಮದ್ರಾಸು ಸಂಸ್ಥಾನದ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿತ್ತು. ಆ ಕಾಲದ ವಿದ್ಯಾ ಇಲಾಖೆಯ ಡಿಸ್ಟ್ರಿಕ್ಟ್ ಬೋರ್ಡ್‌ನ ನೇತೃತ್ವದಲ್ಲಿ ವಿದ್ಯಾ ಪ್ರಚಾರ ಕಾರ್ಯವು ಇಲ್ಲಿ ನಡೆದಿರುವುದು. ಕಣ್ವತೀರ್ಥ ಬೋರ್ಡು ಎಲಿಮೆಂಟರಿ ಶಾಲೆ, ಶ್ರೀ ಅನಂತೇಶ್ವರ ದೇವಸ್ಥಾನದ ಶಾಲೆ ಮತ್ತು ಬಂಗ್ರ ಮಂಜೇಶ್ವರ ಬೋರ್ಡು ಎಲಿಮೆಂಟರಿ ಶಾಲೆ ಮತ್ತು ಹೊಸಬೆಟ್ಟು ಸರಕಾರಿ ಮುಸ್ಲಿಂ ಪ್ರಾಥಮಿಕ ಶಾಲೆಗಳು ಪುರಾತನ ಹಿನ್ನೆಲೆಗಳ ಪ್ರತೀಕಗಳಾಗಿವೆ. ಕೇರಳ ರಾಜ್ಯ ಸ್ಥಾಪನೆಯ ಸಮಯದಲ್ಲಿ ಅಸ್ತಿತ್ವದಲ್ಲಿನ ವಿದ್ಯಾಲಯಗಳ ಭಡ್ತಿಯ ವಿನಹ ಹೊಸ ವಿದ್ಯಾಲಯಗಳ ಸ್ಥಾಪನೆಯು ಈ ಗ್ರಾಮ ಪಂಚಾಯತಿನಲ್ಲಿ ನಡೆದಿಲ್ಲ. ಆಂಗ್ಲ ಮಾಧ್ಯಮ ಶಾಲೆಗಳು ಮತ್ತು ನೆರೆಯ ಕರ್ನಾಟಕ ವಿದ್ಯಾಲಯಗಳ ವಿಶೇಷ ಆಕರ್ಷಣೆಗಳು ವಿದ್ಯಾರ್ಥಿಗಳ ವಲಸೆಗೆ ಪ್ರೇರಕವಾಗಿ ಇಲ್ಲಿಯ ವಿದ್ಯಾಲಯಗಳಿಗೆ ಪ್ರತ್ಯಾಘಾತಕರ ಪರಿಣಾಮಗಳನ್ನುಂಟು ಮಾಡಿರುವುದಾದರೂ ಸಮರ್ಪಿತ ಸೇವಾ ಮನೋಭಾವ ಇಲ್ಲಿಯ ವಿದ್ಯಾಲಯಗಳನ್ನು ಉಳಿಸಲು ಮತ್ತು ಬೆಳೆಸಲು ಸಹಕಾರಿಯಾಗಿದೆ.

ಮಹಾಕವಿ ಗೋವಿಂದ ಪೈ ಸ್ಮಾರಕ ಕಲಾ ಮಹಾವಿದ್ಯಾಲಯ ಮತ್ತು ಔದ್ಯೋಗಿಕ ತಾಂತ್ರಿಕ ಪ್ರೌಢ ಶಾಲೆ ಕುಂಜತ್ತೂರುಗಳು ಸರಕಾರಿ ಸಂಸ್ಥೆಗಳಾಗಿವೆ. ಇವುಗಳ ಬೆಳವಣಿಗೆಗೆ ಆರ್ಥಿಕ ಮತ್ತು ಆಡಳಿತಾತ್ಮಕ ಮತ್ತು ಸೌಲಭ್ಯಗಳ ಕಾಯಕಲ್ಪಗಳ ಆದ್ಯತೆಗೆ ಗಮನ ಅನಿವಾರ್ಯವಾಗಿದೆ.

ಈ ಪಂಚಾಯತು ಕೇರಳ ಮತ್ತು ಕರ್ನಾಟಕ ರಾಜ್ಯದ ಗಡಿ ಪ್ರದೇಶದಲ್ಲಿರುವ ಒಂದು ಭೂಪ್ರದೇಶವಾಗಿದೆ. ಮಂಜೇಶ್ವರ ಗ್ರಾಮ ಪಂಚಾಯತ್‌ನ ಪರಿಧಿಯಲ್ಲಿ ನಾನಾ ಭಾಷೆಯನ್ನಾಡುವ ಜನರು ವಾಸವಾಗಿದ್ದರು. ಸಾಧಾರಣ 35 ವರ್ಷಗಳ ಹಿಂದೆ ಪಕ್ಕದ ಪಂಚಾಯತ್‌ಗಳಾದ ಮಂಗಲ್‌ಪಾಡಿ, ವರ್ಕಾಡಿ, ಮೀಂಜ, ಪೈವಳಿಕೆ ಕೇಂದ್ರ ಬಿಂದುವಾಗಿ ಇದ್ದ ಒಂದು ಪ್ರೌಢ ಶಾಲೆ ಶ್ರೀ ಮದನಂತೇಶ್ವರ ಹೈಸ್ಕೂಲ್ (S.A.T.) ಆಗಿದೆ. ಈ ಪ್ರದೇಶದ ಜನರ ಎಲ್ಲಾ ವಿಧದ ಸಂಪರ್ಕವು ಹತ್ತಿರದ ಕರ್ನಾಟಕದ ಮಂಗಳೂರು ಆಗಿರುವುದರಿಂದ ಎಲ್ಲಾ ವಿಭಾಗದ ಎನರೂ ಕೂಡಾ ಕನ್ನಡ ಮಾಧ್ಯಮದಲ್ಲಿಯೇ ವಿದ್ಯಾಭ್ಯಾಸ ಕಲಿಯುತಿದ್ದರು. 1980ನೇ ಇಸವಿಯ ನಂತರ ಕುಂಜತ್ತೂರು, ಹೊಸಬೆಟ್ಟು, ಬಂಗ್ರ ಮಂಜೇಶ್ವರ ಪ್ರದೇಶದಲ್ಲಿ ಮಲೆಯಾಳ ಮಾಧ್ಯಮದಲ್ಲಿ ಶಾಲೆಗಳು ಪ್ರಾರಂಭವಾಯಿತು. ಹಿಂದಿನ ಕಾಲದಲ್ಲಿ ಮೀನುಗಾರರ ಮಕ್ಕಳು ದಲಿತ ವರ್ಗದವರ ಮಕ್ಕಳು ಶಾಲೆಗೆ ಹೋಗದೆ ಹಿಂದುಳಿದು ಬಿಟ್ಟಿದ್ದಾರೆ. ಈಗ ಪರಿವರ್ತನೆಯಾಗಿ ಶಾಲೆಗೆ ಹೋಗುತ್ತಾರೆ. ವಿದ್ಯಾಭ್ಯಾಸ ರಂಗದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿರುವುದು ಗೋಚರವಾಗುತ್ತದೆ. ಈ ಪ್ರದೇಶದ ವಿದ್ಯಾರ್ಥಿಗಳು S.S.L.C. ವಿದ್ಯಾಭ್ಯಾಸದ ನಂತರ ಮಂಗಳೂರು ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮುಂದುವರಿಸುತ್ತಿದ್ದಾರೆ. ರಾಷ್ಟ್ರಕವಿ ಗೋವಿಂದ ಪೈ ಸರಕಾರಿ ಕಾಲೇಜು ಸ್ಥಾಪಿಸಲ್ಪಟ್ಟರೂ ಈ ಪ್ರದೇಶದಲ್ಲಿನ ವಿದ್ಯಾರ್ಥಿಗಳೂ ಮಂಗಳೂರಿನಲ್ಲಿ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಹೋಗುತ್ತಿದ್ದಾರೆ. ಇತರ ಪ್ರದೇಶದವರು ಈ ಕಾಲೇಜುಗಳಿಗೆ ಬರುತ್ತಾರೆ. ಇಲ್ಲಿ ವಿದ್ಯಾಭ್ಯಾಸದ ಮಟ್ಟವು ಬಹಳ ಕುಂಠಿತವಾಗಿದೆ. ಅಧ್ಯಾಪಕರ ಕೊರತೆ ಮತ್ತು ತಾಂತ್ರಿಕ ಕೊರತೆ ಹಾಗೂ ವಾಸ್ತವ್ಯ ಕೊರತೆಯಿಂದಾಗಿ ಕಾಲೇಜಿನ ಕಲಿಕೆಯ ಗುಣಮಟ್ಟ ಕಡಿಮೆಯಾಗಿದೆ. ಇದರಿಂದ ವಿದ್ಯಾರ್ಥಿಗಳು ಮಂಗಳೂರಿನ ಕಡೆಗೆ ಆಕರ್ಷಿತರಾಗಿರುವುದು. ಸಾಕ್ಷತಾ ರಂಗದಲ್ಲಿ ಒಂದನೇ ಮತ್ತು 2ನೇ ಘಟಕದಲ್ಲಿ ಈ ಪಂಚಾಯತ್‌ನ ಎಲ್ಲಾ ವಾರ್ಡುಗಳಲ್ಲಿ ಸಾಕ್ಷರತಾ ಕಾರ್ಯಕ್ರಮ ನಡೆದಿದ್ದರೂ ಕೂಡ ಈ ಪ್ರದೇಶದ ಜನರ ಮತ್ತು ಉದ್ಯೋಗಸ್ಥರು, ಮತ್ತು ಹೆಚ್ಚಿನ ಅಧ್ಯಾಪಕರ ಸಾಕಷ್ಟು ಸಹಕಾರ ಸಿಕ್ಕದ್ದರಿಂದ ಸಾಕ್ಷರತಾ ಕಾರ್ಯಕ್ರಮವು ಸಂಪೂರ್ಣ ಯಶಸ್ವಿಯಾಗಲು ಅಸಾಧ್ಯವಾಯಿತು. ಈ ಪ್ರದೇಶದಲ್ಲಿ ಸಾಕ್ಷರತಾ ಪ್ರಮಾಣ ಪೂರ್ಣವಾಗದುದರಿಂದ ಮುಂದುವರಿಸುವುದು ಅಗತ್ಯವಾಗಿದೆ.

ಸರಕಾರಿ ಪ್ರಾಥಮಿಕ ಶಾಲೆಗಳು ವಿದ್ಯಾಭ್ಯಾಸದ ಸೌಕರ್ಯಗಳಲ್ಲಿ ಬಹಳ ಹಿಂದುಳಿದಿದೆ. ಈ ಪ್ರದೇಶದ ಹೆಚ್ಚಿನ ಶಾಲೆಗಳು ಖಾಸಗಿ ಒಡೆತನಕ್ಕೆ ಸೇರಿದ್ದು ಮತ್ತು ಈಗಾಗಲೇ ಮಂಜೇಶ್ವರ ಮತ್ತು ಮಂಗಲ್ಪಾಡಿಯಲ್ಲಿರುವ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಆಕರ್ಷಿತರಾಗುವುದು ಮಾತ್ರವಲ್ಲದೆ ಹೆಚ್ಚಿನ ಆರ್ಥಿಕ ಬಾಧ್ಯತೆಗಳನ್ನು ಸಹಿಸಿಕೊಂಡು ಆಂಗ್ಲ ಮಾಧ್ಯಮ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುತ್ತಾರೆ.

ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಬೌದ್ಧಿಕ ಆವಶ್ಯಕತೆಗಳನ್ನು ಪೂರ್ತಿಕರಿಸದಿದ್ದಲ್ಲ. ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸದಿದ್ದಲ್ಲಿ ಅನ್ ಎಯಿಡೆಡ್ ಶಾಲೆಗಳಿಗೆ ಮಕ್ಕಳ ಸಂಖ್ಯೆ ಹೆಚ್ಚಬಹುದು. ಜೂನ್ ತಿಂಗಳಲ್ಲಿ ಶಾಲೆಗಳು ಪ್ರಾರಂಭವಾದರೂ ಅಕ್ಟೋಬರ್, ನವಂಬರ್ ತಿಂಗಳ ತನಕ ಅಧ್ಯಾಪಕರ ನೇಮಕಾತಿ ಪೂರ್ಣವಾಗುವುದಿಲ್ಲ ಮತ್ತು ಪಠ್ಯ ಪುಸ್ತಕಗಳ ವಿತರಣೆ ಆಗುವುದಿಲ್ಲ.

ಈ ಕೊರತೆಗಳಿಂದಾಗಿ ನಮ್ಮ ಸರಕಾರಿ ಹೈಸ್ಕೂಲುಗಳ ಫಲಿತಾಂಶವು 10%ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿದೆ ಎಂಬುದು ಖೇದಕರ.

ನಮ್ಮ ಕೇರಳ ರಾಜ್ಯದಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚುತ್ತಿರುವುದರಿಂದ ಈ ಸಂದರ್ಭದಲ್ಲಿ ವೃತ್ತಿ ತರಬೇತಿ, ತಾಂತ್ರಿಕ ತರಬೇತಿ

ಕೇಂದ್ರಗಳು ಅಗತ್ಯವಿದೆ. ಆದರೆ ತಾಂತ್ರಿಕ ಕೇಂದ್ರಗಳು ಇನ್ನೂ ಪ್ರಾರಂಭವಾಗಿಲ್ಲ. ಕುಂಜತ್ತೂರು H.S.ನ್ನು ಕಳೆದ ನಾಲ್ಕು ವರ್ಷಗಳಿಂದ ಸರಕಾರವು V.H.S. ಆಗಿ ಪರಿವರ್ತಿಸಿರುವುದು. ಕೆಲವು ವಿಭಾಗಗಳಿಂದ ಕಂಪ್ಯೂಟರ್ ತರಬೇತಿಯನ್ನು ಆರಂಭಿಸಿದ್ದರೂ ವಿದ್ಯಾರ್ಥಿಗಳು ಸಾಕಷ್ಟು ಪ್ರಮಾಣದಲ್ಲಿ ಇಲ್ಲ. ಈ ಎರಡು ಕೋರ್ಸ್‌ಗಳಲ್ಲಿ ಕಂಪ್ಯೂಟರ್‌ಗೆ ಮಾತ್ರ 10 ವಿದ್ಯಾರ್ಥಿಗಳು ಸೇರಿ ಪ್ರಾರಂಭಿಸಲಾಯಿತು.

ಇಲ್ಲಿನ ಪ್ರವೇಶದಲ್ಲಿ ಆಕರ್ಷಕ ಕೋರ್ಸ್‌ಗಳನ್ನು ತೆರೆಯುವುದರೊಂದಿಗೆ ತಾಂತ್ರಿಕ ತರಬೇತಿ ವಿಭಾಗಗಳಿಗೆ ಹೆಚ್ಚು ಮಹತ್ವ ಕೊಟ್ಟು ಸ್ವಲ್ಪ ಪಾಲಿನ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬಹುದು. ನಮ್ಮ ಮಕ್ಕಳಿಗೆ, ವಿದ್ಯಾಭ್ಯಾಸ ಮತ್ತು ವೈಜ್ಞಾನಿಕವಾಗಿ ಬೆಳೆಸಲು ಈ ಪ್ರದೇಶದಲ್ಲಿ ಸೌಕರ್ಯದ ಕೊರತೆಯಾಗಿರುವುದು. ಲೈಬ್ರರಿಗಳ ಕೊರತೆ, ಪತ್ರಿಕೆಯನ್ನು ಓದುವವರು, ಕಡಿಮೆ ಪ್ರಮಾಣದಲ್ಲಿದ್ದಾರೆ. ಶಾಲೆಗಳಲ್ಲಿನ ವಾಚನಾಲಯಗಳನ್ನು ಜೀವಂತಗೊಳಿಸುವುದು. ಮುಚ್ಚಿರುವ ಸಾರ್ವಜನಿಕ ವಾಚನಾಲಯಗಳನ್ನು ತೆರೆಯುವುದು ಮುಖ್ಯವಾಗಿದೆ. ಆದುದರಿಂದ ಎಲ್ಲಾ ವಿಧದ ಸೌಕರ್ಯವಿರುವ 4 ವಾಚನಾಲಯಗಳು ಬೇಕಾಗಿದ್ದು, 3ನೇ ವಾರ್ಡಿನಲ್ಲಿ L.P. ಶಾಲೆ ಅಗತ್ಯವಿದ್ದು SC, STಯ 4ನೇ ವಾರ್ಡಿನಲ್ಲಿ ಒಂದು L.P. ಶಾಲೆ ಅಗತ್ಯವಿದೆ.

ನಮ್ಮ ವಿದ್ಯಾರ್ಥಿ ರಂಗದಲ್ಲಿ, ರಕ್ಷಕರಿಗೂ ಅಧ್ಯಾಪಕರಿಗೂ ಹೆಚ್ಚಿನ ಮಹತ್ವ ಕಲ್ಪಿಸಿಕೊಡಲು ಪ್ರಯತ್ನಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

**2. ಸರಕಾರಿ ಮತ್ತು ಅನುದಾನಿತ ವಿದ್ಯಾಲಯಗಳು**

| | | ವಿದ್ಯಾರ್ಥಿಗಳು | | | ಅಧ್ಯಾಪಕರು | | |
|---|---|---|---|---|---|---|---|
| | | ಗ | ಹೆ | ಒಟ್ಟು | ಗ | ಹೆ | ಒಟ್ಟು |
| 1. | ಸ.ಕಿ. ಪ್ರಾ. ಶಾಲೆ ವಾಮಂಜೂರು | 186 | 159 | 345 | 4 | 9 | 13 |
| 2. | ಸ.ಹ.ಕಿ. ಪ್ರಾ. ಶಾಲೆ ಮಂಜೇಶ್ವರ | 90 | 60 | 150 | 2 | 3 | 5 |
| 3. | ಸ.ಮು. ಕಿ.ಪ್ರಾ. ಶಾಲೆ ಹೊಸಬೆಟ್ಟು | 110 | 112 | 222 | 2 | 7 | 9 |
| 4. | ಶ್ರೀ ಅನಂತೇಶ್ವರ ಪಾ. ಶಾ. ಮಂಜೇಶ್ವರ | 177 | 167 | 344 | 1 | 7 | 8 |
| 5. | ಸ.ಕಿ. ಪ್ರಾ. ಶಾಲೆ ಉದ್ಯಾವರ | 182 | 186 | 368 | 1 | 10 | 11 |
| 6. | ಸ.ಕಿ. ಪ್ರಾ. ಶಾಲೆ ಉದ್ಯಾವರ ತೋಟ | 56 | 50 | 106 | 1 | 4 | 5 |
| 7. | ಸ.ಕಿ. ಪ್ರಾ. ಶಾಲೆ ಕುಂಜತ್ತೂರು | 279 | 279 | 524 | 4 | 13 | 17 |
| 8. | ಉ.ಭ. ಕಿ.ಪ್ರಾ. ಶಾಲೆ ಮಂಜೇಶ್ವರ | 62 | 48 | 100 | 1 | 4 | 5 |
| 9. | ಮ. ಕಿ. ಪ್ರಾ. ಶಾಲೆ ಕುಂಜತ್ತೂರು | 88 | 89 | 177 | 3 | 4 | 7 |
| 10. | ಸ.ಕಿ.ಪ್ರಾ. ಶಾಲೆ ಕಣ್ವತೀರ್ಥ | 188 | 171 | 359 | 4 | 6 | 10 |
| 11. | ಸ.ಕಿ. ಪ್ರಾ. ಶಾಲೆ ಉಡಾಜೆ | 95 | 106 | 201 | 1 | 4 | 5 |
| 12. | ಸ.ಮಾ. ಶಾಲೆ ಉದ್ಯಾವರ | 150 | 160 | 310 | 4 | 4 | 8 |
| 13. | ಸ.ಪ್ರಾ. ಶಾಲೆ ಬಂಗ್ರ ಮಂಜೇಶ್ವರ | 700 | 690 | 1390 | 16 | 20 | 36 |
| 14. | ಸ. ಪ್ರೌ. ಶಾಲೆ ಕುಂಜತ್ತೂರು | 800 | 700 | 1500 | 18 | 22 | 40 |
| 15. | ಶ್ರೀ ಅ. ಪ್ರೌಢ ಶಾಲೆ ಮಂಜೇಶ್ವರ | 550 | 600 | 1150 | 7 | 12 | 19 |

**3. ವಿದ್ಯಾಭ್ಯಾಸ ಪರವಾದ ಯೋಜನೆಗಳು**

**A. ಹೊಸ ಶಾಲೆಗಳ ತೆರೆಯುವಿಕೆ**

1. ಕುಂಜತ್ತೂರು ಹೈಸ್ಕೂಲು ಬಳಿ L.P. ಶಾಲೆ ತೆರೆಯುವುದು
2. ಪಾಪಿಲ ಎಂಬಲ್ಲಿ L.P. ಶಾಲೆ ತೆರೆಯುವುದು
3. ಉದ್ಯಾವರ U.P. ಶಾಲೆಯಲ್ಲಿ L.P. ವಿಭಾಗ ತೆರೆಯುವುದು.
4. ಅಂಗಡಿ ಪದವಿನಲ್ಲಿ ವಾಮಂಜೂರು L.P. ಶಾಲೆಯ ಸ್ಥಳದಲ್ಲಿ U.P. ಶಾಲೆ ತೆರೆಯುವುದು.
5. ಪೊಸೋಟುವಿನಲ್ಲಿ L.P ಶಾಲೆ ತೆರೆಯುವುದು.

6. ಉದ್ಯಾವರ ಜುಮ್ಮಾ ಮಸೀದಿ ಬಳಿ L.P. ಶಾಲೆ ತೆರೆಯುವುದು.

**B. ಭಡ್ತಿಗೊಳಿಸುವುದು**

1. ಕಣ್ವತೀರ್ಥ ಶಾಲೆಯನ್ನು U.P. ಶಾಲೆಯಾಗಿ ಮಾಡುವುದು.
2. ಮರಿಯಾಶ್ರಮ ಶಾಲೆಯನ್ನು U.P. ಶಾಲೆಯಾಗಿ ಮಾಡುವುದು.
3. ಭಗವತಿ L.P.S.ನ್ನು U.P.ಯಾಗಿ ಮಾಡುವುದು.
4. ಬಡಾಜೆ L.P. ಶಾಲೆಯನ್ನು U.P ಮಾಡುವುದು.
5. ವಾಮಂಜೂರು L.P. ಶಾಲೆಯನ್ನು U.P. ಮಾಡುವುದು.
6. ಹೊಸಬೆಟ್ಟು L.P.S.ನ್ನು U.P.ಯನ್ನಾಗಿ ಮಾಡುವುದು.
7. Udyavara Thota L.P.S.ನ್ನು U.P. ಮಾಡುವುದು.
8. Kunjathoor L.P.S.ನ್ನು U.P. ಮಾಡುವುದು.

**C. ನರ್ಸರಿ ಶಾಲೆಗಳನ್ನು ತೆರೆಯುವುದು.**

1. ತೂಮಿನಾಡು, ಕಣ್ವತೀರ್ಥ, ಮಹಾಲಿಂಗೇಶ್ವರ ದೇವಸ್ಥಾನದ ಬಳಿ.
2. ಮರಿಯಾಶ್ರಮ, ಭಗವತಿ ಶಾಲೆಗಳ ಬಳಿ
3. ಅರಿಮಲೆ, ಪಾಪಿಲ, ಇಡ್ಯ, ಕಾಜೂರು ಬಳಿ ಆಚಾರಿ ಮೂಲೆಯಲ್ಲಿ ಅಂಗನವಾಡಿ ತೆರೆಯುವುದು.
4. ಸರಕಾರಿ ಕಾಲೇಜಿನ ಬಳಿ ಅಂಗನವಾಡಿ ತೆರೆಯುವುದು.
5. ಉದ್ಯಾವರ ಗೇಟಿನ ಬಳಿ ಅಂಗನವಾಡಿ
6. ಬಂಗ್ರ ಮಂಜೇಶ್ವರ L.P.S.ನಲ್ಲಿ ನರ್ಸರಿ
7. ವಾಮಂಜೂರು ಶಾಲೆಯಲ್ಲಿ ನರ್ಸರಿ
8. ಪೋಸೋಟ್ಟುವಿನಲ್ಲಿ ಅಂಗನವಾಡಿ
9. ಹೊಸಬೆಟ್ಟುವಿನಲ್ಲಿ ಅಂಗನವಾಡಿ
10. ಉದ್ಯಾವರ ಜುಮ್ಮಾ ಮಸೀದಿ ಸಮೀಪ ಅಂಗನವಾಡಿ
11. ಕುಂಜತ್ತೂರಿನ L.P.S.ನಲ್ಲಿ ನರ್ಸರಿ ಶಾಲೆ.

**D. ಹೈಸ್ಕೂಲುಗಳ ಸ್ಥಾಪನೆ**

1. ಉದ್ಯಾವರ U.P. ಶಾಲೆಯನ್ನು H.S. ಮಾಡುವುದು.

**E. ತಾಂತ್ರಿಕ ಶಾಲೆಗಳ ತೆರೆಯುವಿಕೆ**

1. ವಾರ್ಡು 4ರಲ್ಲಿ ತಾಂತ್ರಿಕ ಶಾಲೆ ಮತ್ತು ಟೈಪ್‌ರೈಟಿಂಗ್ ಶಾಲೆ ತೆರೆಯುವುದು.
2. ವಾರ್ಡು 1ರಲ್ಲಿ ತಾಂತ್ರಿಕ ಶಾಲೆ ತೆರೆಯುವುದು.
3. ವಾರ್ಡು 12ರಲ್ಲಿ ಟೈಪ್‌ರೈಟಿಂಗ್ ಶಾಲೆ ಮತ್ತು ಕಂಪ್ಯೂಟರ್ ಟ್ರೈನಿಂಗ್ ಸೆಂಟರ್ ತೆರೆಯುವುದು.

**F. ಶಾಲಾ ಕಟ್ಟಡಗಳ ರಚನೆ**

1. ಕಣ್ವತೀರ್ಥ ಶಾಲೆಗೆ ಹೊಸ ಕಟ್ಟಡ ಮತ್ತು ತರಗತಿ ಏರ್ಪಾಡು ಗೋಡೆ ರಚನೆ.
2. ಕುಂಜತ್ತೂರು ಹೈಸ್ಕೂಲು ಕಟ್ಟಡ ರಿಪೇರಿ ಮತ್ತು ಸುತ್ತು ಗೋಡೆ ರಚನೆ
3. ಉಡಾಜೆ L.P. ಶಾಲೆಗೆ ಹೊಸ ಕಟ್ಟಡ
4. ಬಂಗ್ರ ಮಂಜೇಶ್ವರ L.P.Sಗೆ ಹೊಸ ಕಟ್ಟಡ ಮತ್ತು ಸುತ್ತು ಗೋಡೆ ರಚನೆ
5. ಅಂಗಡಿಪದವು ನರ್ಸರಿ ಶಾಲೆಗೆ ಕಟ್ಟಡ
6. ಹೊಸಬೆಟ್ಟು L.P. ಶಾಲೆಗೆ ಸುತ್ತುಗೋಡೆ.

7. ಕುಂಜತ್ತೂರು L.P. ಶಾಲೆಗೆ ಹೊಸ ಕಟ್ಟಡ ಮತ್ತು ವಠಾರ ಸುತ್ತು ಗೋಡೆ ರಚನೆ. ಕಕ್ಕುಸು ಮತ್ತು ಮೂತ್ರದೊಡ್ಡಿ ರಚನೆ.

G. **ಸಮಸ್ಯೆಗಳು ಮತ್ತು ಪರಿಹಾರಗಳು**

1. ಎಲ್ಲಾ L.P. ಶಾಲೆಗಳಲ್ಲಿ Pre-primary ವಿಭಾಗ ತೆರೆಯುವುದು.
2. ಎಲ್ಲಾ ಶಾಲೆಗಳಲ್ಲಿ ಕುಡಿಯುವ ನೀರು, ಕ್ಲಾಸುಕೋಣೆ, ಮೂತ್ರದೊಡ್ಡಿ, ಕಕ್ಕುಸು, ಆಟದ ಸ್ಥಳ ಒದಗಿಸಬೇಕು.
3. ಅಧ್ಯಾಪಕರ ನೇಮಕ, ವರ್ಗಾವಣೆ ವರ್ಷಾರಂಭದಲ್ಲೇ ಮಾಡುವುದು.
4. ಪಂಚಾಯತು ಮಟ್ಟದಲ್ಲಿ ವಿದ್ಯಾಲಯ ಪರಿಣತರ ಸಮಿತಿ ರಚಿಸಿ ಶಾಲೆಯ ಚಟುವಟಿಕೆಗಳ ಪರಿಶೀಲನೆ
5. ಮಧ್ಯಾಹ್ನದ ಊಟವನ್ನು ಹೈಸ್ಕೂಲು ತನಕ ಒದಗಿಸುವುದು.
6. ಬೇಕಾದ ಪೀಠೋಪಕರಣಗಳನ್ನು ಒದಗಿಸುವುದು.
7. ಪುಸ್ತಕ ವಿತರಣೆಯನ್ನು ವರ್ಷಾರಂಭದಲ್ಲಿ ಮಾಡುವುದು. ಧರ್ಮಾರ್ಥ ವಿತರಣೆಯ ಪುಸ್ತಕಗಳನ್ನು ಗಂಡು ಮಕ್ಕಳಿಗೂ ಕೊಡುವುದು.
8. Primary ಶಾಲಾ ಮುಖ್ಯೋಪಾಧ್ಯಾಯರ ತರಗತಿ ಚಾರ್ಜನ್ನು ವಿನಾಯತಿಗೊಳಿಸುವುದು.
9. ಕುಂಜತ್ತೂರು V.H.S.S.ನ್ನು politechnic ಶಾಲೆಯಾಗಿ ಪರಿವರ್ತಿಸುವುದು.
10. ಎಲ್ಲಾ H.S.ಗಳಲ್ಲಿ +2 ತರಗತಿ ಆರಂಭಿಸುವುದು.
11. SC, ST ಮಕ್ಕಳಿಗೆ Hostel ಸೌಕರ್ಯ ಏರ್ಪಡಿಸುವುದು.
12. ಮಂಜೇಶ್ವರ ಸರಕಾರೀ ಕಾಲೇಜಿನಲ್ಲಿ ವಿಜ್ಞಾನ ಮತ್ತು ಗಣಿತ ತರಗತಿಗಳನ್ನು ಆರಂಭಿಸಿ Senior grade ಕಾಲೇಜಾಗಿ ಭಡ್ತಿಗೊಳಿಸುವುದು. BA (Kannada)ದಲ್ಲಿ 100% ಮತ್ತು I & II rank ಗಳಿಸಿದ ಕಾಲೇಜಾದುದರಿಂದ ಇಲ್ಲಿ Kannada Post graduate course ಆರಂಭಿಸಬೇಕು.
13. ಮಕ್ಕಳನ್ನು ಉತ್ತೀರ್ಣಗೊಳಿಸಲು ಶೇಕಡಾವಾರು ಕ್ರಮವನ್ನು ರದ್ದುಗೊಳಿಸಿ ಕಲಿಯುವ ಮಟ್ಟವನ್ನು ಗುರುತಿಸಿ ತೇರ್ಗಡೆಗೊಳಿಸುವ ಕ್ರಮ ಆರಂಭಿಸಬೇಕು.
14. VIIನೇ ತರಗತಿಯಲ್ಲಿ ಪಬ್ಲಿಕ್ ಪರೀಕ್ಷೆ ಆರಂಭಿಸಬೇಕು.
15. ಕನ್ನಡ ಮಕ್ಕಳಿಗೆ ಮಲೆಯಾಳ ಭಾಷೆಯನ್ನು ಮಲೆಯಾಳ ಮಕ್ಕಳಿಗೆ ಕನ್ನಡ ಭಾಷೆಯನ್ನು ಕಲಿಯಲು ಸೌಕರ್ಯ ಮಾಡಬೇಕು.
16. ಶಾಲೆಗಳಲ್ಲಿ ವಸತಿ ಸೌಕರ್ಯಗಳನ್ನು ಏರ್ಪಡಿಸಬೇಕು.

4 ಈ ಪಂಚಾಯತಿನ ಎಲ್ಲಾ ವಿದ್ಯಾಲಯಗಳಲ್ಲೂ P.T.A ಕಾರ್ಯವೆಸಗುತ್ತದೆ. ವಿದ್ಯಾರ್ಥಿಗಳ ತಂದೆ ಯಾ ತಾಯಿ ಇದರ ಸದಸ್ಯರಾಗಿರುವರು. ಶಾಲೆಯ ಎಲ್ಲಾ ಚಟುವಟಿಕೆಗಳೂ P.T.A.ಯಿಂದ ಸಹಕರಿಸಲ್ಪಡುತ್ತವೆ. ವಿದ್ಯಾಲಯಗಳ ಶಿಸ್ತು ಪಾಲನೆಯಲ್ಲಿ P.T.A. ಬಹಳ ಸಹಕಾರಿಯಾಗಿದೆ.

ವಿದ್ಯಾರ್ಥಿಗಳ ಹಾಜರಾತಿ, ಕಲಿಯುವಿಕೆ, ಆರೋಗ್ಯ ಪಾಲನೆಗಲಲ್ಲಿ ತಾಯಂದಿರ ಸ್ಥಾನವು ಮಹತ್ತರವಾಗಿದೆ. ಆದುದರಿಂದ "ಮಾತೃ ಸಂಘ" (MPTA) ರಚಿಸಲಾಗಿದೆ. ಎಲ್ಲಾ ತಾಯಂದಿರಿಗೆ ಮಕ್ಕಳ ಕುರಿತು ಮಾಹಿತಿಯನ್ನು ನೀಡಲಾಗುವುದು.

ಈಗಿನ ವಿದ್ಯಾಲಯಗಳ ಅಗತ್ಯಗಳು, ಸಮಸ್ಯೆಗಳು ಹೆಚ್ಚಾಗುತ್ತಿರುವುದರಿಂದ ಸಮಾಜ ಸೇವಾ ಕಾರ್ಯಕರ್ತರ ಮತ್ತು ರಾಜಕಾರಣಿಗಳ ಸಹಕಾರ ಪಡೆಯುವುದಕ್ಕಾಗಿ ಎಲ್ಲಾ ಶಾಲೆಗಳಲ್ಲಿ (SDF) ಜನಸಭೆಯನ್ನು ರಚಿಸಲಾಗಿದೆ.

ಕರಾವಳಿ ಪ್ರದೇಶದ ಮೀನುಗಾರರ ಮಕ್ಕಳು ಮತ್ತು ಒಳನಾಡಿನ ಗುಡ್ಡಕಾಡು ಪ್ರದೇಶಗಳಲ್ಲಿ ವಾಸಿಸುವ ಬಡವರಾದ ಹಿಂದುಳಿದ ಜಾತಿಯ ಮಕ್ಕಳಿಗೆ ಕನಿಷ್ಟ ವ್ಯಾಸಂಗ ಅವಕಾಶ ಉಂಟು ಮಾಡುವ ಗುರಿಯನ್ನು ಹೊಂದಬೇಕಾಗಿದೆ.

ಪಂಚಾಯತು ಮಟ್ಟದಲ್ಲಿ ವಿದ್ಯಾಲಯಗಳ ಪಾಠ ಮತ್ತು ಪಾಠೇತರ ಚಟುವಟಿಕೆಗಳನ್ನು ಜರಗಿಸಿ ಪ್ರೋತ್ಸಾಹಿಸಬೇಕಾಗಿದೆ.

ಹೀಗೆ ಮಹಾತ್ಮಾಗಾಂಧೀಜಿಯರ ರಾಮರಾಜ್ಯದ ಕನಸು ನೆನಸಾಗಲೆಂದು ಹಾರೈಸೋಣ.

# ಆರೋಗ್ಯ ಕುಡಿಯುವ ನೀರು, ಪರಿಸರ ಶುಚಿತ್ವ

। ನಮ್ಮ ಪಂಚಾಯತಿನಲ್ಲಿರುವ ಬಾವಿಗಳು, ಬೋರ್‌ವೆಲ್‌ಗಳು, ಕೆರೆಗಳು ಪೈಪು ನೀರಿನ ಲಭ್ಯತೆಗಳು ನಮ್ಮ ಪಂಚಾಯತಿನ ಜನರ ಕುಡಿಯುವ ನೀರಿನ ಅವಶ್ಯಕತೆಗಳನ್ನು 40/- ಮಾತ್ರ ಪೂರ್ಣಗೊಳಿಸಿರುತ್ತದೆ. ಇನ್ನು 60%ರಷ್ಟು ಕುಡಿಯುವ ನೀರಿನ ಕೊರತೆಯನ್ನು ನಾವು ಮುಂದಿನ 9ನೇ ಯೋಜನೆಯಡಿಯಲ್ಲಿ ಅವಶ್ಯವಾಗಿ ಪೂರೈಸಬೇಕಾಗಿದೆ. ಮನುಷ್ಯನ ಪ್ರಾಥಮಿಕ ಅವಶ್ಯಕತೆಗಳಲ್ಲಿ ಒಂದಾದ ಕುಡಿಯುವ ನೀರು ನಾಗರಿಕರಿಗೆ ಪೂರೈಸುವುದು ನಮ್ಮ ಕರ್ತವ್ಯವಾಗಿದೆ.ಜನರ ಆರೋಗ್ಯ ಸಂರಕ್ಷಿಸಲೂ ಹಾಗೂ ರೋಗ ಹರಡುವಿಕೆಯನ್ನು ತಡೆಗಟ್ಟಲು ಶುದ್ಧವಾದ ಕುಡಿಯುವ ನೀರಿನ ಪೂರೈಕೆ ಅವಶ್ಯಕವಾಗಿದೆ.

ನಮ್ಮ ಪಂಚಾಯತಿನ ಹಾಗೂ ಬ್ಲೋಕ್ ವತಿಯಿಂದ ಕುಡಿಯುವ ನೀರಿನ ಪೂರೈಕೆಗಾಗಿ ನಿರ್ಮಿಸಿದ ಬಾವಿ, Borewell, ಕೊಳಗಳ ಸಂಖ್ಯೆಗಳು ಹೆಚ್ಚಾಗಿದೆ. ಆದರೆ ಅವುಗಳು ಪೂರೈಸುವ ಕುಡಿಯುವ ನೀರಿನ ಪ್ರಮಾಣ ಕಡಿಮೆಯಾಗಿದೆ. Water tapಗಳು ಹೆಚ್ಚು ಸಂಖ್ಯೆಯಲ್ಲಿ ಕಂಡು ಬರುತ್ತದೆ. ಆ tapಗಳಲ್ಲಿ ಕುಡಿಯುವ ನೀರಿನ ಪೂರೈಕೆ ಬಹಳ ಕಡಿಮೆಯಾಗಿರುತ್ತದೆ. ಇನ್ನು ಕೆಲವು ಪ್ರದೇಶಗಳಲ್ಲಿ ವರ್ಷದಿಂದ ವರ್ಷಕ್ಕೆ ನೀರಿನ ಒಸರೇ ಬತ್ತಿ ಬರಡಾಗಿದೆ. ಈ ಪ್ರದೇಶಗಳಲ್ಲಿ ಬಾವಿ ತೋಡಿದರೂ, ಬೋರ್‌ವೆಲ್ ಹಾಕಿಸಿದರೂ ನೀರಿನ ಲಭ್ಯತೆ ಶೂನ್ಯವಾಗಿದೆ. ಆ ಪ್ರದೇಶದವರ ಕುಡಿಯುವ ನೀರಿನ ಹಾಹಾಕಾರ ಮುಗಿಲು ಮುಟ್ಟಿದೆ. ಇಂತಹ ಪ್ರದೇಶಗಳಿಗೆ ಕುಡಿಯುವ ನೀರನ್ನು ಪೂರೈಸುವುದು ಪಂಚಾಯತಿನ ಮಾನವೀಯ ಕರ್ತವ್ಯವಾಗಿದೆ.

**ಮಂಜೇಶ್ವರ ಪಂಚಾಯತಿನ ಕುಡಿಯುವ ನೀರಿನ ಲಭ್ಯತೆ**

ಸ್ವಂತ ಕುಡಿಯುವ ನೀರಿನ ಲಭ್ಯತೆ ಇರುವವರು - 20%
ಪಂಚಾಯತು ಬಾವಿ, Borewellಗೆ ಅವಲಂಬಿಸಿರುವವರು - 20%
ವರ್ಷದ ಎಲ್ಲಾ ತಿಂಗಳುಗಳಲ್ಲಿ ಕುಡಿಯುವ ನೀರಿಗಾಗಿ ಬಾವಿ, ಕೆರೆ,
Borewell ಲಭ್ಯತೆ ಇಲ್ಲದೆ ದೂರದ ಪ್ರದೇಶದಿಂದ ನೀರನ್ನು
ಅವಲಂಬಿಸಿಕೊಂಡು ಜೀವಿಸುವವರು - 40%

**ಪಂಚಾಯತು ಮತ್ತು ಬ್ಲೋಕ್ ಮುಖಾಂತರ ಸಾರ್ವಜನಿಕರಿಗೆ ಕುಡಿಯುವ ನೀರಿನ ಪೂರೈಕೆಗೆ ಇರುವ ವ್ಯವಸ್ಥೆಗಳು**

| Ward | ಬಾವಿ | (Borewell) ಕೊಳವೆ ಬಾವಿ | ನೀರಿನ ಪೈಪ್ ಟೇಪ್‌ಗಳ ಸಂಖ್ಯೆ |
|---|---|---|---|
| I | 6 | 5 | 12 |
| II | 2 | 2 | 15 |
| III | 3 | 4 | - |
| IV | 3 | 2 | - |
| V | 4 | 3 | 10 |
| VI | 3 | 4 | 11 |
| VII | 2 | 3 | - |
| VIII | 5 | 4 | 42 |
| IX | 7 | 4 | - |
| X | 1 | 2 | - |
| XI | 2 | 2 | - |
| XII | 1 | 1 | - |
| Total | 39 | 36 | 96 |

ಉತ್ತಮ ಸ್ಥಿತಿಯಲ್ಲಿ ಕುಡಿಯುವ ನೀರು ಪೂರೈಸುವ ಬಾವಿ ಬೋರ್‌ವೆಲ್ Tapಗಳು

| | Panchayath | Block (MJR) |
|---|---|---|
| ಬಾವಿಗಳು | 20 | 22 |
| ಕೊಳವೆ ಬಾವಿಗಳು | 20 | - |
| Tap ನೀರಿನ ಟೇಪ್‌ಗಳು | 42 | - |

**ಪರಿಹಾರಗಳು :**

**ದುರಸ್ತಿಗೊಳಿಸಬೇಕಾದ ಬಾವಿಗಳು**

1) VI ವಾರ್ಡಿನ ಶಾಂತಿನಗರದಲ್ಲಿರುವ 2 ಬಾವಿಗಳು ಜರಿದು ಬಿದ್ದು ನೀರಿನ ಒರತೆ ಮುಚ್ಚಿ ಹೋಗಿದೆ.

2) VIII ವಾರ್ಡಿನ ಹಳೆ Police Stationನ ಬಳಿಯ ಬಾವಿಯ ಹೂಳೆತ್ತಿ ನೀರಿನ ಒರತೆ ಶಕ್ತಿಗೊಳಿಸುವುದು.

3) ಮಂಜೇಶ್ವರ ಪಂಚಾಯತಿನ ದೊಡ್ಡಿ, ಬಳಿ ಇರುವ ಬಾವಿ ವರ್ಷದಿಂದ ವರ್ಷಕ್ಕೆ ಜರಿದು ಬೀಳುತ್ತಾ ಇದೆ. ಇದಕ್ಕೆ ಕೂಡಾ ಕಲ್ಲು ಕಟ್ಟಿಸುವುದು. ಪೂರ್ತಿ ಜರಿದು ಬಿದ್ದ ಬಾವಿ ಮುಚ್ಚಿ ಹೋಗದಂತೆ ಕಾರ್ಯ ಪ್ರವೃತ್ತರಾಗುವುದು ಅಗತ್ಯವಾಗಿದೆ.

4) ಮಂಜೇಶ್ವರ ಪಂಚಾಯತಿನ ಇತರ 16 ಬಾವಿಗಳ ನೀರನ್ನು ಕುಡಿಯಲು ಯೋಗ್ಯವಾಗುವಂತೆ ಶುದ್ಧೀಕರಣ ಕಾರ್ಯವಾಗಬೇಕು.

**ದುರಸ್ತಿಗೊಳಿಸಬೇಕಾದ Borewellಗಳು**

5) ಬಡಾಜೆ ಪಾಪಿಲ ಬಳಿ ಇದ್ದು Borewell ಹಾಳಾಗಿದೆ. ನೀರೆತ್ತುವ Hand ರಿಪೇರಿ ಆಗಬೇಕಾಗಿದೆ.

6) ಶಾಂತಿ ನಗರ (VI) ನಲ್ಲಿರುವ ಬೋರ್‌ವೆಲ್‌ಗಳ ನೀರು ಕೆಂಪಗಾಗಿದ್ದು ಕಬ್ಬಿಣದ ವಾಸನೆಯಿಂದ ಕೂಡಿದೆ. ಇದರ ದುರಸ್ತಿಯಾಗಬೇಕು.

7) G.P.M. ಕಾಲೇಜ್ ಹತ್ತಿರ ಇರುವ ಬೋರ್‌ವೆಲ್ ಹಾಳಾಗಿದೆ. ನೀರೆತ್ತಲು ಸಾಧ್ಯವಾಗುವುದಿಲ್ಲ.

1ನೇ ವಾರ್ಡಿನ ST ಕಾಲೋನಿಯಲ್ಲಿರುವ ಬೋರ್‌ವೆಲ್ಲನ್ನು ಪುನರ್ನಿರ್ಮಾಣ ಮಾಡುವುದು.

9ನೇ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಕೈಗೊಳ್ಳಬೇಕಾದ ಕುಡಿಯುವ ನೀರಿನ ಯೋಜನೆಗಳು.

**ಈಗ ಇರುವ ಸ್ಕೀಂ**

**ಮಂಜೇಶ್ವರದಲ್ಲಿ ಈಗ ಇರುವ ಕೇರಳ ಅಥೋರಿಟಿಯ ಕೆಲವು ಸ್ಕೀಂಗಳು :**

1) ಹೊಸಬೆಟ್ಟು TB

2) ವಾಮಂಜೂರು ಕಜೆ

3) ಅಂಗಡಿ ಪದವು

4) ಹೊಸಬೆಟ್ಟು ಅಂಬೇಡ್ಕರ್ ಗ್ರಾಮ

5) ತಲಪಾಡಿ ಹಾಗೂ ಕುಂಜತ್ತೂರು O.L.H.S. Colony ಆಗಿರುತ್ತದೆ.

1) ಪಂಚಾಯತ್ ಸಮೀಪದ ಬಂಗ್ಲೆಯ ಹತ್ತಿರ Over tank ನಿರ್ಮಿಸಿ, ಹತ್ತಿರದ ಗುಡ್ಡೆಕೇರಿಯಿಂದ ಸಾಧಾರಣ 250 ಮೀಟರ್‌ಗಳಷ್ಟು ದೂರದಲ್ಲಿ ಸಸಿಹಿತ್ಲು, ಬಂಗ್ರ ಮಂಜೇಶ್ವರದ ವರೆಗೆ ಕುಡಿಯುವ ನೀರಿನ ಸರಬರಾಜು.

2) V ವಾರ್ಡಿನಲ್ಲಿರುವ ನೀರಾವರಿ ಕೊಳವಿದೆ. ಇದು ಹಾಳು ಬಿದ್ದಿದೆ. ಇದರ ಸಮಗ್ರ ದುರಸ್ತಿ ಮಾಡಿ motor ಅಳವಡಿಸಿ ಅಂಬೇಡ್ಕರ್ ನಗರ, ಉದ್ಯಾವರ ಗುತ್ತು, G.P.M. ಕಾಲೋನಿನ ಹತ್ತಿರ ಸುಮಾರು 200 ಮೀಟರ್‌ಗಳ ನಳ್ಳಿ ನೀರಿನ ಸರಬರಾಜು.

3) ಪೊಸೋಟು ಚಾಡಿಪಡ್ಪುವಿನಲ್ಲಿರುವ ಕೆರೆ ದುರಸ್ತಿಗೊಳಿಸಿ 200 ಮೀಟರ್‌ಗಳ ನೀರಿನ ಸರಬರಾಜು ಮಾಡಬಹುದಾಗಿದೆ.

4) G.H.S. ಬಂಗ್ರ ಮಂಜೇಶ್ವರದ ಹತ್ತಿರ ಇರುವ Borewellಗೆ motorನ್ನು ಅಳವಡಿಸಿ ಇದರ ನೀರನ್ನು ನಳ್ಳಿ ಮೂಲಕ ವಾಮಂಜೂರು ಕಜೆ ಮಿನಿ ನೀರಿನ ಟ್ಯಾಂಕಿಗೆ ಸೇರಿಸುವುದು.

5) ಕೀರ್ತೇಶ್ವರದ ಬಯಲಿನಲ್ಲಿ ಅಪಾರ ಭೂಮಿ ಸಂಪತ್ತು ಇದೆ. ಇಲ್ಲಿ ಕೆರೆ ನಿರ್ಮಿಸಿ over tank ಕಟ್ಟಿ ಹತ್ತಿರ IX ಮತ್ತು Vನೇ ವಾರ್ಡುಗಳಿಗೆ ಕುಡಿಯುವ ನೀರಿನ ಸರಬರಾಜು ಮಾಡಬಹುದಾಗಿದೆ.

6) ಕುಂಜತ್ತೂರು ಮಾಡದ ಬಳಿದ ಇರುವ ಪಂಚಾಯತ್ ಕೆರೆಗೆ over tank ನಿರ್ಮಿಸಿ ನಳ್ಳಿ ಮೂಲಕ ಕಣ್ವತೀರ್ಥ ಹಾಗೂ ಮಾಲಾಸ ರೋಡಿನ ವರೆಗೆ ಸುಮಾರು 600 ಮೀಟರ್ ಕುಡಿಯುವ ನೀರಿನ ಸರಬರಾಜು.

7) Railway Station ಬಳಿ ಇರುವ Borewellಗೆ motor ಅಳವಡಿಸಿ ಸುಮಾರು 250 ಮೀಟರ್ ನಳ್ಳಿ ಮೂಲಕ ಕುಡಿಯುವ ನೀರಿನ ಸರಬರಾಜು ಮಾಡುವುದು.

8) ಮಠದ ಗುಡ್ಡೆ, ಬಡಾಜೆ ಇಂತಹ ಕೆಲವು ಪ್ರದೇಶಗಳಲ್ಲಿ ಹೊಸ ಬಾವಿ ನಿರ್ಮಾಣ. a) ಕುಂಜತ್ತೂರಿನಲ್ಲಿರುವ ಈಗಿನ Tankನ್ನು ವಿಸ್ತರಿಸುವುದು ಮತ್ತು ನೀರಿನ ಪ್ರಮಾಣವನ್ನು ಜಾಸ್ತಿಗೊಳಿಸಬೇಕು. ಗ್ರಾಮ ಸಭೆಗಳಿಂದ ಬಂದ ಹಾಗೂ ಪಂಚಾಯತು ಪರ್ಯಟನೆಯಿಂದ ಹಾಗೂ ದ್ವಿತೀಯ ಮಾಹಿತಿ ಸಂಗ್ರಹದ ಆಧಾರದಿಂದ ಪಂಚಾಯತಿನ ಕುಡಿಯುವ ನೀರಿನ ಸಮಸ್ಯೆ ಹಾಗೂ ಪರಿಹಾರಗಳು ಸೂಚಿತವಾಗಿವೆ. ಮುಂದಿನ 9ನೇ ಜನಕೀಯ ಯೋಜನೆಯಲ್ಲಿ ನಮ್ಮ ಕುಡಿಯುವ ನೀರಿನ ಅಭಾವ ನೀಗಿಸಲು ಮೇಲೆ ಹೇಳಿದ ಯೋಜನೆಗಳು ಕಾರ್ಯಗತವಾದಲ್ಲಿ ತುಂಬಾ ಸಹಕಾರಿಯಾಗಿರುವುದು.

10) Hill Side Talkies ನಿಂದ ಪ್ರಕೃತ ಇರುವ ನೀರಿನ pipelineನ್ನು ಭಟ್ರ ಮೂಲೆಗೆ ವಿಸ್ತರಿಸುವುದು. ಸುಮಾರು 150 ಮನೆಗಳಿಗೆ ಇದರಿಂದ ಪ್ರಯೋಜನವಿದೆ.

11) ವಾಮಂಜೂರು ಶುದ್ಧ ಜಲಕ್ಷಾಮ ನಿವಾರಣೆಗಾಗಿ ಪೆಲಪ್ಪಾಡಿ, ಆಚಾರಿ ಮಠ ಉಪ್ಪಳ ನದಿ ತನಕ, ಶಕ್ತಿನಗರ, ರಾಮತ್ತ ಮಜಲು, ಮೇಲಂಗಡಿ ಪ್ರದೇಶ ಸುಮಾರು 2 ಕಿಲೋಮೀಟರಿನಷ್ಟು ಪೈಪ್‌ಲೈನ್ ಸ್ಥಾಪಿಸಿ, ವಾಮಂಜೂರು ಶಾಲೆಯ ಪರಿಸರವನ್ನು ಕೇಂದ್ರೀಕರಿಸಿ ಸಣ್ಣ ನೀರಾವರಿ ಯೋಜನೆಯನ್ನು ತಯಾರಿಸುವುದು. ಇದರಿಂದ ಸುಮಾರು 300 ಮನೆಗಳಿಗೆ ಪ್ರಯೋಜನವಿದೆ.

12) ಬಂಗ್ರ ಮಂಜೇಶ್ವರ ಅಂಗಡಿ ಪದವು ಮಿನಿ ವಾಟರ್ ಟ್ಯಾಂಕ್ ಪರಿಧಿಯಲ್ಲಿರುವ Check postನಿಂದ ಉತ್ತರಕ್ಕೆ N.H. 17ರಲ್ಲಿ ಹೊಸಂಗಡಿ ತನಕ ಸುಮಾರು 1 km ಪೈಪ್‌ಲೈನನ್ನು ವಿಸ್ತರಿಸುವುದು. ಚೆಕ್‌ಪೋಸ್ಟಿನಿಂದ ಪಶ್ಚಿಮಕ್ಕೆ ಉಪ್ಪಳ ನದಿಯ ವರೆಗೆ 400 ಮೀಟರ್ ತನಕ ಪೈಪ್‌ಲೈನ್ ವಿಸ್ತರಿಸುವುದು. ಸುಮಾರು 50 ಮನೆಗಳಿಗೆ ಇದರಿಂದ ಪ್ರಯೋಜನವಿದೆ.

13) ರಾಮತ್ತ ಮಜಲಿನಲ್ಲಿ ಒಂದು ಕುಡಿ ನೀರಿನ ವ್ಯವಸ್ಥೆ. ಸುಮಾರು 25 ಮನೆಗಳಿಗೆ ಪ್ರಯೋಜನವಿರುವುದು.

14) ಉದ್ಯಾವರದಲ್ಲಿ ಈಗ ನೀರಿನ ಅಭಾವವಿರುವುದರಿಂದ ರಾಷ್ಟ್ರೀಯ ಹೆದ್ದಾರಿಯಿಂದ (10ನೇ ಮೈಲುಗಲ್ಲು) ಉದ್ಯಾವರ ಜಮ್ಮಾ ಮಸೀದಿಯ ವರೆಗೆ pipelineನ್ನು ವಿಸ್ತರಿಸುವುದರಿಂದ ಸುಮಾರು 200 ಮನೆಗಳಿಗೆ ನೀರಿನ ಪ್ರಯೋಜನ ಸಿಗುವುದು.

15) ಗೇರುಕಟ್ಟೆ ಜಂಕ್ಷನ್‌ನಿಂದ ಮಚ್ಚಂಪಾಡಿ ಪಳ್ಳ, ಕಾವೂರು ಗಡಿ ವರೆಗೂ, ಪುಚ್ಚತಬೈಲಿನಿಂದ ಮಟ್ಟಂಪಾಡಿ ಜುಮ್ಮಾ ಮಸೀದಿ ವರೆಗೂ pipeline ವಿಸ್ತರಿಸಬೇಕು. ಇದರಿಂದ ಸುಮಾರು 200 ಮನೆಗಳಿಗೆ ಪ್ರಯೋಜನ ಸಿಕ್ಕುತ್ತದೆ.

16) ಗಾಡಿ ಕಡಂಬಾರಿನಿಂದ ಇಡ್ಯ ಹರಿಜನ ಕಾಲೋನಿಯಾದ ಕಿಬ್ಬ ಗುಂಡಿಯವರೆಗೂ pipeline ವಿಸ್ತರಿಸಬೇಕು. ಇದರಿಂದ ಸುಮಾರು 150 ಮನೆಗಳಿಗೆ (SC ಸಮೇತ) ಪ್ರಯೋಜನವಾಗುತ್ತದೆ.

## 5.5 ಸಾರ್ವಜನಿಕ ಆರೋಗ್ಯ

**ಆರೋಗ್ಯ :**

ಕರ್ನಾಟಕದ ಗಡಿಯಲ್ಲಿರುವ ಮಂಜೇಶ್ವರ ಪಂಚಾಯತ್‌ನಲ್ಲಿ ಭಿನ್ನ ಪ್ರದೇಶಗಳ ಸಂಸ್ಕೃತಿಗಳು ಮಿಶ್ರಗೊಂಡಿದೆ. ಇಲ್ಲಿ ತುಳುವರು, ಕನ್ನಡಿಗರು, ಮಳೆಯಾಳಿಗಳು, ಉರ್ದು, ಕೊಂಕಣಿ, ಮರಾಠಿಗಳೂ ನೆಲೆಸಿದ್ದಾರೆ. ಇವರ ಆಚಾರ ವಿಚಾರಗಳಲ್ಲಿ ವ್ಯತ್ಯಾಸವಿದ್ದರೂ ಆರೋಗ್ಯದ

ದೃಷ್ಟಿಯಲ್ಲಿ ಪರಂಪರಾಗತವಾದ ನಂಬಿಕೆಗಳೂ ಆಚಾರವಿಚಾರಗಳೂ ಬಹು ಮುಖ್ಯ ಪಾತ್ರ ವಹಿಸುತ್ತದೆ. ಸಮೃದ್ಧ ಶುದ್ಧಗಾಳಿ, ಪರಿಶುದ್ಧವಾದ ಪರಿಸರ, ಶುದ್ಧ ನೀರುಗಳಿದ್ದರೆ ಮನುಷ್ಯನ ಆರೋಗ್ಯಕ್ಕೆ ಯಾವುದೇ ವೈದ್ಯಕೀಯ ಪರಿಕರಗಳು ಬೇಡ.

ಉತ್ತಮವಾದ ನೀರು ಆರೋಗ್ಯ ಪೂರ್ಣ ಗಾಳಿ ಕುಡಿಯುವ ನೀರಿನ ಸೌಲಭ್ಯವಿದ್ದರೂ ಬೇಸಿಗೆಯ ಕಾಲದಲ್ಲಿ ಕೆಲವು ಪ್ರದೇಶದಲ್ಲಿ ಉಪ್ಪು ನೀರು ಕುಡಿಯುವ ದುಸ್ಥಿತಿಯು ಈ ಪ್ರದೇಶದ ಜನರದ್ದಾಗಿದೆ.

ಈ ಪಂಚಾಯತ್‌ನಲ್ಲಿ ಮರಣದ ಪ್ರಮಾಣವು ಸರಾಸರಿ 5.9% ಆಗಿದ್ದರೂ ನಮ್ಮ ರಾಜ್ಯದ ಪ್ರಮಾಣಕ್ಕಿಂತ ಕೆಳಗಿದೆ. ಹಾಗೆಯೇ ಜನನ ಪ್ರಮಾಣವು ಕೇರಳದಲ್ಲಿ 17% ಆಗಿದ್ದರೆ ಮಂಜೇಶ್ವರ ಪಂಚಾಯತ್‌ನಲ್ಲಿ 16.64%ದಷ್ಟು ಆಗಿದೆ. ಈ ಮೂರು ವರ್ಷಗಳಲ್ಲಿ ಶಿಶುಗಳ ನಿಶ್ಚಿತ ಮರಣ ಪ್ರಮಾಣದ ಬಗ್ಗೆ ತಿಳಿದು ಬಂದಿಲ್ಲವಾದರೂ ಕೇವಲ 6 ಮರಣಗಳನ್ನು ದಾಖಲೆಗಳಿಂದ ತಿಳಿಯಬಹುದು. ಗರ್ಭಿಣಿಯರು ಹೆರಿಗೆ ಸಮಯದಲ್ಲಿ ಅಥವಾ ಹೆರಿಗೆಯ ನಂತರ ಸತ್ತ ದಾಖಲೆಗಳು ಲಭ್ಯವಿಲ್ಲ.

ನಮ್ಮ ಪಂಚಾಯತ್ ಪರಿಧಿಗೊಳಪಟ್ಟ ಪ್ರದೇಶಗಳಲ್ಲಿ ಜನರ ಆರೋಗ್ಯ ಹಾಗೂ ಆರೋಗ್ಯದ ಬಗ್ಗೆ ಸರಿಯಾದ ತಿಳುವಳಿಕೆ ಅಗತ್ಯವಾಗಿರುತ್ತದೆ. ಆದರೆ ಪ್ರಕೃತ ಆಸ್ಪತ್ರೆಗಳಲ್ಲಿ ಸರಿಯಾದ ಸಿಬ್ಬಂದಿಗಳ ಕೊರತೆ, ಜೊತೆಗೆ ಬೇಕಾದ ಔಷಧದ ಕೊರತೆಯನ್ನು ನಮ್ಮ ಆಸ್ಪತ್ರೆಗಳನ್ನು ಗಮನಿಸಬಹುದು. ಇದು ಬಹಳ ದುಃಖಕರವಾದ ವಿಷಯ.

ಅಲೋಪತಿ ಚಿಕಿತ್ಸಾ ವಿಧಾನದಲ್ಲಿ ಈ ಪಂಚಾಯತ್‌ನಲ್ಲಿ ಒಂದು ಸರಕಾರಿ ಆಸ್ಪತ್ರೆಯಿದೆ. ಜೊತೆಗೆ ಖಾಸಗಿಯವರು 5 ದವಾಖಾನೆಗಳೂ, 7 ಜನ ವೃತ್ತಿ ನಿರತ ಡಾಕ್ಟರರು ಸೇವಾ ನಿರತರಾಗಿದ್ದಾರೆ. ಮಧ್ಯಮ ವರ್ಗದ ಜನರು ಸಾಧಾರಣ ಸರಕಾರಿ ಆಸ್ಪತ್ರೆ ಆಶ್ರಯಿಸಿದ್ದರೂ ಉಳಿದ ಜನರುಗಳು ಸಂಪೂರ್ಣ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆ. ಮಾತ್ರವಲ್ಲದೆ ಉಳಿದ ಪಂಚಾಯತ್‌ಗಳಲ್ಲಿ ಒಂದೊಂದು ಆರೋಗ್ಯ ಕೇಂದ್ರವಿದೆ. ಆದರೆ ಈ ಪಂಚಾಯತ್‌ನಲ್ಲಿ ಅದು ಲಭ್ಯವಿಲ್ಲ. ಆದುದರಿಂದ ಸಕಾಲದಲ್ಲಿ ರೋಗಗಳನ್ನು ಪತ್ತೆ ಹಚ್ಚಲು ಸಾಧ್ಯವಾಗುವುದಿಲ್ಲ. ಮಾತ್ರವಲ್ಲದೇ ಈ ಪಂಚಾಯತ್‌ನಲ್ಲಿ ಆಯುರ್ವೇದಿಕ್ ಚಿಕಿತ್ಸಾ ಪದ್ಧತಿಯನ್ನು ಆಸ್ಪತ್ರೆಯನ್ನು ರೂಪೀಕರಿಸುವುದು ಅಗತ್ಯವಿದೆ.

ಆರೋಗ್ಯ ಇಲಾಖೆಯಲ್ಲಿ ಸಾಮಾನ್ಯ ಜನರ ಸಂಪರ್ಕ ಇಲಾಖೆಯ ಮಂದಿಗೆ ಅಗತ್ಯ. ಆದರೆ ಮುಖ್ಯವಾಗಿ ಕೇರಳದ ದಕ್ಷಿಣ ಭಾಗದಿಂದ ಇಲ್ಲಿಗೆ ವರ್ಗಾವಣೆಯಾಗಿ ಬಂದವರಿಗೆ ವಸತಿ ಸೌಕರ್ಯವಿಲ್ಲ. ಮಾತ್ರವಲ್ಲ ಭಾಷೆಯ ವ್ಯತ್ಯಾಸವು ಕೂಡಾ ಒಂದು ಪ್ರಧಾನ ಭಾಗವಾಗಿರುತ್ತದೆ. ಅದಕ್ಕಾಗಿ ಕಾಸರಗೋಡು, ಅದರಲ್ಲೂ ಮಂಜೇಶ್ವರ ಪ್ರದೇಶದ ಜನರಿಗೆ ಇಲ್ಲಿಯ ಸಿಬ್ಬಂದಿಗಳಾಗಿ ನೇಮಿಸಿದ್ದಲ್ಲಿ ಈ ಮೂಲಭೂತ ಪ್ರಶ್ನೆಯನ್ನು ತೊಡೆದು ಹಾಕಬಹುದು.

**ಆರೋಗ್ಯ ಕೇಂದ್ರ ಹಾಗೂ ಉಪಕೇಂದ್ರಗಳು :**

ಮಂಜೇಶ್ವರ ಪಂಚಾಯತ್‌ನಲ್ಲಿ ಸುಮಾರು 35 ಸಾವಿರಕ್ಕೂ ಮಿಕ್ಕಿದ ಜನಸಂಖ್ಯೆಗಳಿವೆ. ಆದರೆ ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪಕೇಂದ್ರಗಳು 4. ಅದರಲ್ಲೂ ಸರಿಯಾದ ಉದ್ಯೋಗಿಗಳು ಇಲ್ಲ. ಜೊತೆಗೆ ಒಂದಕ್ಕೂ ಸ್ವಂತ ಕಟ್ಟಡವಿಲ್ಲ. ಸರಾಸರಿ 5000 ಜನರಿಗೆ ಒಂದು ಉಪ ಆರೋಗ್ಯ ಕೇಂದ್ರ ಎಂಬುದು ಸರಕಾರಿ ಲೆಕ್ಕ. ಈ ಪ್ರಕಾರ ನಮ್ಮ ಗ್ರಾಮ ಪಂಚಾಯತಿಗೆ ಇನ್ನೂ 3 ಆರೋಗ್ಯ ಉಪಕೇಂದ್ರಗಳನ್ನು ತೆರೆಯಬೇಕು. ಜೊತೆಗೆ ಅನಾರೋಗ್ಯ ಪರಿಸರವನ್ನು ಹೋಗಲಾಡಿಸಿ ಆರೋಗ್ಯಪೂರ್ಣವಾಗಿರಿಸುವ ಪರಿಸರ ನಿರ್ಮಿಸಲು ಯತ್ನಿಸಬೇಕು. ಸರಿಯಾದ ರೀತಿಯಲ್ಲಿ ತಕ್ಕ ಸಮಯದಲ್ಲಿ ರೋಗಗಳನ್ನು ತಿಳಿಯಲು ಸೂಕ್ತ ಕ್ರಮ ಕೈಗೊಳ್ಳಲು ಈ ಕೆಲವು ಮೂಲ ಅವಶ್ಯಕತೆಗಳು ಬೇಕಾಗಿವೆ. ಸುಮಾರು 7 Junior Health Inspectorಗಳು ಮತ್ತು 7 Junior Health Nurseನವರ ಅಗತ್ಯವಿದೆ. ಮಾತ್ರವಲ್ಲದೆ ನಮ್ಮ ಪಂಚಾಯತ್‌ನಲ್ಲಿ ಸರಕಾರಿ ಆಸ್ಪತ್ರೆಯಲ್ಲಿ Lab Techniciansನ ನೇಮಕ ಮಾಡಬೇಕು. (ರಕ್ತ ಪರಿಶೋಧನೆಯ ಕೇಂದ್ರ) ಅಲ್ಲದೇ ಮಂಜೇಶ್ವರ ಸರಕಾರಿ ಆಸ್ಪತ್ರೆಗೆ ಈ ಕೂಡಲೇ ಲಭ್ಯವಿರುವ ಡಾಕ್ಟರರನ್ನು ನೇಮಿಸಬೇಕು. ಈಗಾಗಲೇ ಎರಡು ಡಾಕ್ಟರುಗಳು ಇರಬೇಕಾದ್ದು ಒಂದೇ ಡಾಕ್ಟರು ಕಾರ್ಯನಿರತರಾಗಿದ್ದಾರೆ. ರಾತ್ರಿ ಹಗಲೂ, ಈ ಆಸ್ಪತ್ರೆ ತೆರೆದು ಸಾಕಷ್ಟು ಔಷಧಿಗಳೂ ಇದ್ದು ಇನ್ನು ಹೆಚ್ಚುವರಿ 2 ಡಾಕ್ಟರ ಸೇವೆಗಳು ಲಭ್ಯವಾದರೆ ಈ ಆಸ್ಪತ್ರೆ ಮಂಜೇಶ್ವರ ಜನತೆಗೆ ವರದಾಯಕವಾಗಿಯೂ ಜನ ಉಪಯೋಗ್ಯವಾಗಿಯೂ ನಡೆಸಬಹುದು. ಈ ಆಸ್ಪತ್ರೆಗೆ 75 ವರ್ಷಗಳ ಇತಿಹಾಸವಿದ್ದು ಮಂಜೇಶ್ವರ ವರ್ಕಾಡಿ ಮೀಂಜ ಪಂಚಾಯತುಗಳಿಂದ ಜನರು ಔಷಧಿಗಳಿಗಾಗಿ ಬರುತ್ತಿದ್ದಾರೆ. ಆಗ ಊಟದ ವ್ಯವಸ್ಥೆ ಇತ್ತು. ಇಲ್ಲಿ ರೋಗಿಗಳಿಗೆ ಉತ್ತಮ ಶುಶ್ರೂಷೆಯನ್ನು ಒದಗಿಸಲಾಗುತ್ತಿತ್ತು. ಈಗ ಮತ್ತೆ ಈ ವ್ಯವಸ್ಥೆ ಪುನರ್‌ಜೀವಗೊಳಿಸಬೇಕು. ಮಂಜೇಶ್ವರ ಆಸ್ಪತ್ರೆಗೆ ಹುಚ್ಚು ನಾಯಿ ಕಡಿತದ ಮದ್ದುಗಳನ್ನು ವಿತರಿಸುವುದು ಅಗತ್ಯ. ಮಂಜೇಶ್ವರ ಪಂಚಾಯತ್‌ನಲ್ಲಿ 3 ಆಯುರ್ವೇದ ಅಂಗಡಿಗಳು ಕೆಲಸ ಮಾಡುತ್ತಿದ್ದು ಮಾತ್ರವಲ್ಲ ಒಂದೆರಡು ಕಡೆಗಳಲ್ಲಿ ಮಾತ್ರ ಸಿದ್ಧ ನಾಟಿ ವೈದ್ಯ ಪದ್ಧತಿ ಜಾರಿಯಲ್ಲಿದೆ.

ಕರಾವಳಿಯ ತೀರ ಪ್ರದೇಶದಲ್ಲಿ ಹಾಗೂ ಗುಡ್ಡಗಾಡು ಪ್ರದೇಶಗಳಿಂದ ಸಮ್ಮಿಳಿತವಾದ ಪಂಚಾಯತು ನಮ್ಮದು. ಇಲ್ಲಿ ಶುದ್ಧ ನೀರಿನ ಕೊರತೆ ಬಹಳಷ್ಟು ಇದೆ. Januaryಯಿಂದ May ತನಕ ಉಪ್ಪು ನೀರು ಹಾಗೂ ನೀರಿನ ಬರಗಾಲ ಇಲ್ಲಿ ಬಾಧಿತವಾಗುತ್ತದೆ. ಕೊಳ, ಕೆರೆ ಹಾಗೂ ಸರಕಾರಿ ಬಾವಿಗಳನ್ನೂ ಶುದ್ಧಗೊಳಿಸುವ ಅಥವಾ ಸೊಳ್ಳೆಗಳನ್ನು ನಿಯಂತ್ರಿಸುವ ಮದ್ದನ್ನು ಉಪಯೋಗಿಸುವುದಿಲ್ಲ. ಶುದ್ಧ ಜಲದ ಕೊರತೆಯಿದೆ. ಇದರಿಂದ ಸಾಂಕ್ರಮಿಕ ರೋಗಗಳು ಹರಡಲು ಸಾಧ್ಯವಿದೆ. ಶುದ್ಧವಾದ ಪರಿಸರವನ್ನು ನಿರ್ಮಿಸಬೇಕು. ಇದರಿಂದ ಆರೋಗ್ಯವನ್ನು ಕಾಪಾಡಬಹುದು.

**ರೋಗಗಳು ಹರಡಲು ಮುಖ್ಯ ಕಾರಣ :**

ಗಡಿನಾಡಿನ ಪ್ರದೇಶವಾದರೂ ಜನರು ತಮ್ಮ ಮುಖ್ಯ ಹಾಗೂ ದೈನಂದಿನ ಚಟುವಟಿಕೆಗಳಿಗೆ ನೆರೆಯ ಪಟ್ಟಣವನ್ನು ಆಶ್ರಯಿಸಿದ್ದಾರೆ. ಅಲ್ಲಿಂದ ಮಾರಕ ರೋಗಗಳಾದ ಮಲೇರಿಯಾವೂ ಇದೆ. ಸಾಂಕ್ರಮಿಕ ರೋಗವನ್ನು ಮಂಜೇಶ್ವರಕ್ಕೂ ಹರಡಲು ಸಹಾಯವಾಗಿದೆ. ಆದರೆ ಇಲ್ಲಿ ಸೊಳ್ಳೆಯ ನಿಯಂತ್ರಣ ಹತೋಟಿಯಲ್ಲಿರುವುದರಿಂದ ಅಷ್ಟೊಂದು ಬಾಧಕವಾಗಿಲ್ಲ. ಆದರೂ ಸುಮಾರು 15 ಜನರಿಗೆ ಮಲೇರಿಯಾ ಬಾಧಕವಾಗಿದೆ. ಕ್ಷಯ ಕುಷ್ಠ ರೋಗಿಗಳು ಬಹಳ ಕಡಿಮೆ ಪ್ರಮಾಣದಲ್ಲಿದ್ದಾರೆ. ಆನೆ ಕಾಲು ರೋಗ ಪ್ರಸ್ತುತ ಹಲವರಿಗೆ ಬಾಧಿಸಲ್ಪಟ್ಟಿದೆ.

**ಮಕ್ಕಳ ಆರೋಗ್ಯ :**

ಮಕ್ಕಳು ನಮ್ಮ ದೇಶದ ಬಹುಮೂಲ್ಯವಾದ ಆಸ್ತಿ. ಮಕ್ಕಳ ಆರೋಗ್ಯದ ಬಗ್ಗೆ ನಾವು ಸಾಕಷ್ಟು ಗಮನಕೊಡಬೇಕು. ಮಕ್ಕಳಿಗೆ ಬಹಳಷ್ಟು ರೋಗಗಳು ಬಹು ಬೇಗನೆ ಅಂಟಿಕೊಳ್ಳುತ್ತದೆ. ಪೋಲಿಯೋ ವಿಷಮ ಜ್ವರ ಹಾಗೂ ಇನ್ನಿತರ ರೋಗಗಳಿಗೆ ಸರಕಾರ ಉಚಿತ ಮದ್ದುಗಳನ್ನು ಕೂಡಾ ವಿತರಿಸುವ ಯೋಜನೆಯನ್ನು ರೂಪೀಕರಿಸಿದೆ. ಈ ಪಂಚಾಯತ್‌ನಲ್ಲಿ ಮಕ್ಕಳ ಆರೋಗ್ಯ ಪ್ರಮಾಣವು ಗರಿಷ್ಠ ಮಿತಿಯಲ್ಲಿದೆ. ಅತೀ ಕಡಿಮೆ ಮಕ್ಕಳೂ ಮಾತ್ರ ಪೌಷ್ಠಿಕಾಂಶದ ಕೊರತೆಯಿರುವ ಮಕ್ಕಳಾಗಿದ್ದಾರೆ. ಗರ್ಭಿಣಿಯರಿಗೆ ಮತ್ತು ಮಕ್ಕಳಿಗೆ ಕೊಡುವ ಚುಚ್ಚು ಮದ್ದುಗಳನ್ನು ಸಂಪೂರ್ಣತೆಯನ್ನು ಸಾಧಿಸಲಾಗಿದೆ (100%).

**ಅವಶ್ಯಕತೆಗಳು :**

ಮಂಜೇಶ್ವರದ ಎಲ್ಲಾ ಗ್ರಾಮ ಸಭೆಗಳಲ್ಲಿ ಕೂಡಿ ಬಂದ ವಿಷಯ ಮಂಜೇಶ್ವರದಲ್ಲಿ ಒಂದು P.H.C. ಅತೀ ಅಗತ್ಯವಾಗಿದೆ ಎಂಬುದಾಗಿರುತ್ತದೆ.

ಹಿಂದೆ ಮಂಜೇಶ್ವರ Block level PHCಯು ಕುಂಬ್ಳೆಯಾಗಿತ್ತು. ಈಗ ಅದನ್ನು C.H.C. ಆಗಿ ಬದಲಾವಣೆ ಮಾಡಲಾಗಿದೆ. (ಸಾಮೂಹಿಕ ಆರೋಗ್ಯ ಕೇಂದ್ರ) ಆದುದರಿಂದ 1 ಮಂಜೇಶ್ವರದಲ್ಲಿ Block level PHCಯನ್ನು ಸ್ಥಾಪಿಸಬೇಕು.

ಕಣ್ವತೀರ್ಥದಲ್ಲಿ ಒಂದು ಆರೋಗ್ಯ ಉಪಕೇಂದ್ರವನ್ನು (PHC) ಮೀನುಗಾರಿಕಾ ಆಸ್ಪತ್ರೆಯನ್ನು ತೆರೆಯುವುದು ಅಗತ್ಯ. SC ಮತ್ತು ST ವಿಭಾಗದ ಕಾಲೋನಿಯಲ್ಲಿ ಎಲ್ಲರಿಗೂ ಸೌಕರ್ಯವಾಗುವ ರೀತಿಯಲ್ಲೂ ಸರಕಾರಿ ಭೂಮಿ ಇದ್ದು ಇಲ್ಲಿ ಹೋಮಿಯೋಪತಿ ಆಸ್ಪತ್ರೆಯನ್ನು ತೆರೆಯಬೇಕು.

ಮಚ್ಚಂಪಾಡಿಯಲ್ಲಿ PHCಯನ್ನು ಸ್ಥಾಪಿಸುವುದು ಅಗತ್ಯವಾಗಿದೆ.

ಶಾಲೆಗಳಲ್ಲಿ ಪ್ರಾರಂಭಿಸಲಾದ ಆರೋಗ್ಯ ಕಾರ್ಯಕ್ರಮಗಳನ್ನು ಊರ್ಜಿತಗೊಳಿಸಬೇಕು.

AIDS, Maleria ತಪಾಸಣಾ ವಿಭಾಗವನ್ನು ಈ ಕೇಂದ್ರಗಳಲ್ಲಿ ಪ್ರಾರಂಭಿಸುವುದು ಅಗತ್ಯವಾಗಿದೆ.

ಪ್ರಕೃತ ಮೂರು ವಾರ್ಡುಗಳಿಗೆ ಒಂದೇ sub centre ಕಟ್ಟಡ ಇದ್ದು ಇದರ ಸೌಲಭ್ಯ ಸೀಮಿತವಾಗಿರುವುದರಿಂದ SC, ST ಜನರು ಧಾರಾಳ ಇರುವುದರಿಂದ ಇಲ್ಲಿ ಇನ್ನೊಂದು ಪ್ರತ್ಯೇಕ Sub centre ಅಗತ್ಯವಾಗಿದೆ.

ಸೊಳ್ಳೆ ನಿಯಂತ್ರಣಕ್ಕೆ ಮದ್ದು ಸಿಂಪಡಿಸಲು ಖಾಯಂ ನೌಕರರನ್ನು ನೇಮಿಸಬೇಕು. ಮಕ್ಕಳ ಆರೋಗ್ಯವನ್ನು ಸಂರಕ್ಷಿಸಲು, ಬಾಲವಾಡಿ/ ಅಂಗನವಾಡಿಗಳನ್ನು ಸ್ಥಾಪಿಸುವಿಕೆ ಬೇಕು.

**ಪರಿಸರ ಶುಚಿತ್ವ :**

ಪರಿಸರ ನೈರ್ಮಲ್ಯದ ಅಗತ್ಯವು ಅತೀ ಮಹತ್ವದ್ದಾಗಿದೆ. ಇದರಿಂದ ನಮ್ಮ ಆರೋಗ್ಯಕ್ಕೆ ಉತ್ತಮ ಪ್ರಯೋಜನವಿರುವುದು. ನಮ್ಮ ಮನೆಯ ಸುತ್ತ ಕೊಳಚೆ, ಕಸಗಿಡಗಳನ್ನು ಬೆಳೆಸದೆ ಇಟ್ಟುಕೊಳ್ಳುವಿಕೆ.

ಶುಚಿತ್ವ ಇಲ್ಲವಾದಲ್ಲಿ ಮನುಷ್ಯನ ದೇಹದೊಳಗೆ ರೋಗಾಣುಗಳು ಪ್ರವೇಶವಾಗಿ ಹಲವಾರು ರೋಗಗಳು ಬರುತ್ತದೆ. ವಾಂತಿ ಭೇದಿ, ಸನ್ನಿಪಾತ ಜ್ವರ, ಪೋಲಿಯೋ, ಹಳದಿ ಕಾಯಿಲೆ ಮೊದಲಾದ ಮಾರಣಾಂತಿಕ ರೋಗಗಳು ಬರುತ್ತವೆ.

ಆರೋಗ್ಯ = ಶುದ್ಧ ವಾಯು + ಶುದ್ಧ ನೀರು + ಶುಚಿತ್ವವುಳ್ಳ ಪರಿಸರ

. ಪಂಚಾಯತ್‌ನಲ್ಲಿ ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ. ಮಾತ್ರವಲ್ಲದೆ ಮರಗಳನ್ನು ಕಡಿದು ಕಟ್ಟಡ ನಿರ್ಮಾಣ ಮಾಡಿದ್ದಾರೆ. ಕಾರ್ಖಾನೆಗಳು ಹಾಗೂ ಇತರ ಕೆಲವು ಮಲೀನ ನೀರಿನಿಂದಾಗಿ ಶುದ್ಧವಾಯು ನಮಗೆ ಲಭ್ಯವಾಗುವುದಿಲ್ಲ. ಅಂಗಡಿ, ಮನೆ, ಮಠಗಳಲ್ಲಿನವರು ತ್ಯಾಜ್ಯ ವಸ್ತುಗಳನ್ನು ಮಾರ್ಗಕ್ಕೆ ಬಿಸಾಡುವುದು.

ರಸ್ತೆ ಬದಿಯಲ್ಲಿರುವ ನಲ್ಲಿ ನೀರನ್ನು ಹಾಳು ಮಾಡಿ ರಸ್ತೆಗಳಿಗೆ ಬಿಡುವಂತದ್ದು, ಗ್ಯಾರೇಜುಗಳಲ್ಲಿನ ಕೊಳಚೆ ವಸ್ತುಗಳಾದ ಟಯರ್‌ನ ಅವಶೇಷಗಳನ್ನು ರಸ್ತೆಗೆ ಹಾಕಿರುವುದು.

ಶಾಲೆಗಳಲ್ಲಿನ ಮೂತ್ರದೊಡ್ಡಿಗಳಿಗೆ ನೀರಿನ ವ್ಯವಸ್ಥೆ ಮಾಡಿಕೊಡುವುದು.

ಅಧಿಕೃತ ಮತ್ತು ಅನಧಿಕೃತ ಮಾಂಸದ ಅಂಗಡಿಗಳ ತ್ಯಾಜ್ಯ ವಸ್ತುಗಳನ್ನು ನದಿಗಳಿಗೆ ಎಸೆದು ಕೊಳಚೆ ಪ್ರದೇಶ ನಿರ್ಮಿಸುವುದು ಬಹುದೊಡ್ಡ ಸಮಸ್ಯೆಯಾಗಿದೆ.

**ಪರಿಹಾರಗಳು**

1) ಎಲ್ಲಾ ಪ್ರದೇಶಗಳಿಗೆ ಮಾರ್ಗದ ಬದಿಗಳಲ್ಲಿ ಒಳ ಚರಂಡಿ ವ್ಯವಸ್ಥೆ ಮಾಡುವುದು.

2) ಸರಿಯಾದ ವ್ಯವಸ್ಥೆ ಇರುವ ಮೂತ್ರದೊಡ್ಡಿ ಮತ್ತು ಶೌಚಾಲಯಗಳನ್ನು ಮಾಡುವಾಗ ನೀರಿನ ವ್ಯವಸ್ಥೆ ಜನರು ಸೇರುವ ಸ್ಥಳಗಳಾದ ಬಸ್ಸು ನಿಲುಗಡೆ ಕೇಂದ್ರ, ಮಾರ್ಕೆಟು ಸ್ಥಳಗಳ ಸ್ಥಾಪನೆ.

3) ಎಲ್ಲಾ ಶಾಲೆಗಳಲ್ಲಿ ಶೌಚಾಲಯಕ್ಕೆ ಬೇಕಾದ ನೀರಿನ ವ್ಯವಸ್ಥೆ ಮಾಡುವುದು.

4) ಪಂಚಾಯತ್‌ನ ಪ್ರಮುಖ ಸ್ಥಳಗಳಲ್ಲಿ ಕಸದ ತೊಟ್ಟಿಗಳನ್ನು ನಿರ್ಮಿಸುವುದು, ಮಾತ್ರವಲ್ಲದೆ ಅದನ್ನು ಕಾಲಕಾಲಕ್ಕೆ ಶುದ್ಧಗೊಳಿಸಲು ವ್ಯವಸ್ಥೆಯನ್ನು ಮಾಡುವುದು.

5) ಶೌಚಾಲಯ ಇಲ್ಲದ ಮನೆಗಳಿಗೆ ಶೌಚಾಲಯದ ವ್ಯವಸ್ಥೆ ಮಾಡುವುದು, ಕಾಲನಿಗಳಲ್ಲಿ 10 ಮನೆಗಳಿಗೆ ಒಂದು ದೊಡ್ಡ ಟ್ಯಾಂಕ್ ಮಾಡುವುದು, ಮಾತ್ರವಲ್ಲದೆ ಮನೆಗಳಿಗೆ ಶೌಚಾಲಯ ಮಾಡುವುದು.

6) ಕೊಳಚೆಗಳನ್ನು ಮಾರ್ಗಕ್ಕೆ ಅಥವಾ ಪರಿಸರಕ್ಕೆ ಬಿಡುವ ಹೋಟೆಲ್‌ಗಳ ಪರವಾನಿಗೆ ರದ್ದತಿ ಹಾಗೂ ಹೊಸ ಹೋಟೆಲ್‌ಗಳಿಗೆ ಪರವಾನಿಗೆ ಕೊಡುವಾಗ ಸ್ಥಳ ಪರಿಶೀಲನೆ ನಡೆಸಿ ಕೊಡುವುದು.

7) ಸೀಯಾಳ ಮಾರುವ ಅಂಗಡಿಗಳಲ್ಲಿನ ಅದರ ಉಳಿದ ಭಾಗವನ್ನು ಮಾರ್ಗದಲ್ಲಿ ಬಿಸಾಡುವ ಅಂಗಡಿಯವರ ಮೇಲೆ ಕಠಿಣ ಕ್ರಮ ಕೈಗೊಳ್ಳುವುದು.

8) ಪ್ಲಾಸ್ಟಿಕ್ ಇತರ ತ್ಯಾಜ್ಯ ವಸ್ತುಗಳನ್ನು ಮಾರ್ಗಕ್ಕೆ ಚೆಲ್ಲುವುದರ ಬಗ್ಗೆ ಸರಿಯಾದ ಮಾರ್ಗದರ್ಶನ ನೀಡುವುದು.

9) ಬೀದಿ ನಾಯಿಗಳ ನಿರ್ಮೂಲನ ಮಾಡುವುದು.

10) ಸಾಕು ನಾಯಿಗಳಿಗೆ ಲೈಸನ್ಸ್ ಮಾಡಿಸುವುದು

11) ಅಲೆಮಾರಿ ದನಗಳ ಒಡೆಯನ ಮೇಲೆ ಕಾನೂನು ಕ್ರಮ ಕೈಗೊಳ್ಳುವುದು.

12) ಮೀನು ಮಾರ್ಕೆಟ್‌ನ ಕೊಳಚೆ ನೀರುಗಳನ್ನು ಸಾರ್ವಜನಿಕ ಪ್ರದೇಶಗಳಿಗೆ ಬಿಡದಿರುವುದು. ಅದಕ್ಕೆ ಏರ್ಪಾಡು ಮಾಡುವುದು.

13) ನಳ್ಳಿಯಿಂದ ಹರಿದು ಹಾಳಾಗುವ ನೀರನ್ನು ಡ್ರೈನೇಜ್‌ಗೆ ಹೋಗುವ ಕೆಲಸ ಮಾಡುವುದು.

ಪರಿಸರ ಮಲೀನ ಮಾಡುವುದರಲ್ಲಿ ಬೀದಿ ನಾಯಿ, ಪಶುಗಳು ಕೂಡಾ ಮುಖ್ಯ ಪಾತ್ರ ವಹಿಸುವಿಕೆ. ಇವುಗಳು ಪರಿಸರದಲ್ಲಿ ಕೊಳು

ಮಾಡಿಬಿಡುವುದು.

ಈ ಪಂಚಾಯತಿನಲ್ಲಿ ಸುಮಾರು 60 ಶತಾಂಶದಷ್ಟು ಕುಟುಂಬಗಳು ಶೌಚಾಲಯದ ಅನುಕೂಲತೆ ಇದ್ದರೂ ಇನ್ನುಳಿದ 40% ಶತಾಂಶದಷ್ಟು ಕುಟುಂಬಗಳಿಗೆ ಶೌಚಾಲಯದ ವ್ಯವಸ್ಥೆಗಳಿಲ್ಲ.

ಇದು ಪರಿಸರಕ್ಕೆ ಮಾಲಿನ್ಯಕ್ಕೆ ಬಹಳಷ್ಟು ಹಾನಿ ಮಾಡುವಂತಾಗುತ್ತದೆ. ಕಡಲು ತೀರ ಪ್ರದೇಶ ಹಾಗೂ ಇತರ ಪ್ರದೇಶಗಳಲ್ಲಿ ಕೂಡಾ ಈ ಸಮಸ್ಯೆ ಕಂಡು ಬರುತ್ತದೆ. ಎಲ್ಲಾ ಕುಟುಂಬಗಳಿಗೂ ಶೌಚಾಲಯದ ಪೂರೈಕೆ ಅಗತ್ಯವಾಗಿದೆ.

ಅತೀ ಹೆಚ್ಚು ಪ್ರಮಾಣದಲ್ಲಿ ಬಳಸುವ ಪ್ಲಾಸ್ಟಿಕ್ ತೊಟ್ಟೆಗಳನ್ನು ನಾವು ಪರಿಸರದಲ್ಲಿ ಬಿಸಾಡುವುದರಿಂದ ತೊಂದರೆಯಾಗುತ್ತದೆ. ಪ್ಲಾಸ್ಟಿಕ್ ಚೀಲಗಳನ್ನು ಉರಿಸಿ ನಾಶಪಡಿಸುವುದರಿಂದ ಇದನ್ನು ತಡೆಗಟ್ಟಬಹುದು.

| ವಾಡು ನಂಬ್ರ | ಶೌಚಾಲಯ ಇಲ್ಲದ ಮನೆ |
|---|---|
| I | 270 |
| II | 222 |
| III | 215 |
| IV | 208 |
| V | 259 |
| VI | 305 |
| VII | 195 |
| VIII | 283 |
| IX | 238 |
| X | 135 |
| XI | 120 |
| XII | 75 |

ಇವಿಷ್ಟು ಮನೆಗಳಿಗೆ ಈ ಸೌಕರ್ಯ ಇಲ್ಲವಾಗಿದೆ.

ಪಂಚಾಯತಿನ ಪ್ರಧಾನ ಕೇಂದ್ರಗಳಲ್ಲಿ ಡ್ರೈನೇಜ್‌ನ ಕೊರತೆ ಇದ್ದು ಹೋಟೆಲ್, ಮೀನು ಮಾರ್ಕೆಟ್‌ನ ಕೊಳಚೆ ನೀರುಗಳನ್ನು Roadಗಳಿಗೆ ಬಿಟ್ಟು ಬಹಳಷ್ಟು ತಾಪತ್ರಯಕ್ಕೆ ಒಳಗಾಗುತ್ತಿರುವುದು. ಇದೇ ರೀತಿಯಲ್ಲಿ ಪ್ರಧಾನದಾದ ಸ್ಥಳಗಳಲ್ಲಿ ಮೂತ್ರದೊಡ್ಡಿಗಳಲ್ಲದೇ ಈ ಪಂಚಾಯತ್‌ನಲ್ಲಿ ಸಮಸ್ಯೆಯಾಗಿರುವುದು.

ಸೀಯಾಳದ ಮಾರುಕಟ್ಟೆಯಲ್ಲಿ ಸೀಯಾಳ ಕುಡಿದು ಅದನ್ನು ರಾಶಿ ಹಾಕಿದ್ದರ ಫಲವಾಗಿ ಸೊಳ್ಳೆಗಳು ಹುಟ್ಟಿಕೊಳ್ಳಲು ಸಹಾಯವಾಗುವುದು.

# ರಸ್ತೆ - ಸಾರಿಗೆ ವಿದ್ಯುಚ್ಛಕ್ತಿ

ನಮ್ಮ ನಡೆ, ನುಡಿ, ವ್ಯವಹಾರ ಎಲ್ಲದಕ್ಕೂ ನಮ್ಮ ಜೀವನದಲ್ಲಿ ಒಂದು ವಿಶಿಷ್ಟ ಸ್ಥಾನವಿದ್ದುದರಿಂದ ನಾವು ಇಟ್ಟ ಪ್ರತಿ ಹೆಜ್ಜೆಯೂ ಹಾದಿ-ದಾರಿ ಎಂದು ನಮ್ಮ ಪ್ರಾಚೀನರಿಂದ ಗುರುತಿಸಲ್ಪಟ್ಟಿತು. ಕಾಲವು ಪ್ರಗತಿಗೊಂಡಂತೆ ನಾವು ನಡೆದ ಹಾದಿಯನ್ನು ಗುರುತಿಸುವುದು, ನಿತ್ಯ ಜೀವನದಲ್ಲಿ ಅದರ ಉಪಯೋಗ, ವಿರುದ್ಧ ಸ್ಥಗಳ ಗಡಿ ಜೋಡಣೆ, ಅದಕ್ಕೊಂದು ಹೆಸರು, ಹೀಗೆ ಒಂದಕ್ಕೊಂದು ಪೂರಕವಾಗುವಂತೆ ತಾನು ನಡೆದಾಡುವ ಭೂಮಿಯನ್ನು ಅನುಕೂಲಕರವಾಗಿ ಬಳಸಿಕೊಳ್ಳುವುದರಲ್ಲಿ ತನ್ನ ಮೇಧಾಶಕ್ತಿಯನ್ನು ಮಾನವನು ತೊಡಗಿಸಿದ್ದರಿಂದ ಇಂದು ಜಗತ್ತನ್ನು ಸಂಪರ್ಕಿಸುವ ಅದ್ಭುತ ಶಕ್ತಿಯಾಗಿ ರಸ್ತೆ ಎಂಬುದು ನಿರ್ಮಾಣಗೊಂಡಿತು.

**ಪ್ರಾಚೀನ ಸಾರಿಗೆ ವ್ಯವಸ್ಥೆ :**

ಸರಿಸುಮಾರು ಐದು ನೂರು ವರುಷಗಳ ಹಿಂದೆ ಮಂಜೇಶ್ವರ ಪಂಚಾಯತ್‌ಗೆ ಮಂಜೇಶ್ವರ ಪೇಟೆ ಎಂಬ ಹೆಸರು ಬಳಕೆಯಲ್ಲಿತ್ತು. ಸಂಪದ್ಭರಿತವಾಗಿ, ಕೃಷಿ ಉತ್ಪನ್ನಗಳಿಂದ ಫಲಭರಿತವಾಗಿ ಪ್ರಮುಖ ಜಲದಾರಿಯ ವಾಣಿಜ್ಯೋದ್ಯಮ ಕೇಂದ್ರವಾಗಿತ್ತು. ಬಂಗ ಅರಸರ ಆಳ್ವಿಕೆಗೆ ಒಳಪಟ್ಟ ಬಂಗರ ಮಂಜೇಶ್ವರ ರಾಜಧಾನಿಯಾಗಿ ದೇಶ ವಿದೇಶಗಳ ಎಲ್ಲೆ, ವ್ಯಾಪಾರ, ವಹಿವಾಟು ರಾಜನೀತಿ ಎಲ್ಲವೂ ಜಲದಾರಿಯಾಗಿ ನಡೆಯುತ್ತಿತ್ತು ಎಂದು ತಿಳಿದು ಬರುತ್ತದೆ. ಸಮುದ್ರದ ಅಳಿವೆ ಬಾಗಿಲು ಮುಖಾಂತರ ಬಂಗ್ರ ಮಂಜೇಶ್ವರ ಹೊಳೆಯಲ್ಲಿ ಅಳಿವೆ ಬಾಗಿಲು ಮುಖಾಂತರ ಬಂಗ್ರ ಮಂಜೇಶ್ವರ ಹೊಳೆಯಲ್ಲಿ ಘನವಾದ ಸರಕು ತುಂಬಿದ ಮಂಜಿಗಳು ಸುಮಾರು 5 ಕಿ.ಮೀ. ದೂರದ ಕೊಟ್ಟಾಯಿಗುಂಡಿ ಎಂಬಲ್ಲಿಗೆ ಸಂಚರಿಸುತ್ತಿದ್ದವು. ಎಂದರೆ ಈ ಹೊಳೆಯ ಆಳ, ವಿಶಾಲತೆಯ ಕುರಿತು (ಈಗಿನ ಸ್ಥಿತಿ ಕಂಡು) ಆಶ್ಚರ್ಯವಾಗಬಹುದು.

ಅಂದಾಜು ಆರು ಅತಿ ಅಗಲ ರಸ್ತೆ ಎನ್ನುವ ಕೊರಕಲು ದಾರಿಯು ಪ್ರಮುಖ ಸ್ಥಳಗಳಲ್ಲಿ ಇರುತ್ತಿದ್ದವು. ಅವುಗಳು ಹೆಚ್ಚಾಗಿ ರಾಜ ಪರಿವಾರಕ್ಕೆ -ಸೈನ್ಯಕ್ಕೆ ಮಾತ್ರ ಮೀಸಲಾಗಿ ಪ್ರಜೆಗಳು ಗುಡ್ಡೆ, ಕಾಡು ಮೇಡುಗಳನ್ನು ತಮ್ಮ ಬಳಕೆಯ ದಾರಿಯಾಗಿ ಉಪಯೋಗಿಸುತ್ತಿದ್ದರು. ನದಿಗಳಿಗೆ ಸೇತುವೆಗಳಿಲ್ಲದೆ ದೋಣಿ ಮತ್ತು ತೆಪ್ಪಗಳನ್ನು ಸಂಪರ್ಕ ಸಾಧನವಾಗಿ ಬಳಸುತ್ತಿದ್ದರು.

ಆಂಗ್ಲರ ಆಳ್ವಿಕೆಯ ನಂತರವೇ ರಸ್ತೆಗಳು ಎಂಬುದಕ್ಕೆ ಮಹತ್ವ ಲಭಿಸಿ ಜನಜೀವನದಲ್ಲಿ ಬೆಸೆದುಕೊಂಡಿತು.

**ರಸ್ತೆ-ಸಾರಿಗೆ ಬೆಳವಣಿಗೆ :**

ಅಂದು ಎತ್ತಿನಗಾಡಿಗಳೇ ನಮ್ಮ ಸಾರಿಗೆ ವ್ಯವಸ್ಥೆಯಾಗಿ ಸರಕು ಸಾಗಾಟ, ಮದುವೆ ದಿಬ್ಬಣ, ಪ್ರಯಾಣ ಇವುಗಳಿಗಾಗಿ ಇದರ ಉಪಯೋಗವಾಗುತ್ತಿತ್ತು. ಶ್ರೀಮಂತ ವರ್ಗಗಳಲ್ಲಿ ಮಾತ್ರ ಕುದುರೆ ಪ್ರಯಾಣವಿತ್ತು.

ಜನಜೀವನ ಪ್ರಗತಿಗೊಂಡಂತೆ ಮಂಜೇಶ್ವರದಲ್ಲಿ ಉಗಿಚಾಲಿತ ಪ್ರಯಾಣಿಕರನ್ನು ಒಯ್ಯುವ ಯಂತ್ರವಾಹನವು ರಸ್ತೆಯಲ್ಲಿ ಓಡತೊಡಗಿತು.

ಮುಂದಕ್ಕೆ KBT ಕಂಪೆನಿಯವರು ಮಂಜೇಶ್ವರ ಪುತ್ತೂರು ಮಾರ್ಗವಾಗಿ ಪೆಟ್ರೋಲ್ ಚಾಲಿತ ಬಸ್ ಹಾಕಿದರು. ಹೀಗೆ ದೋಣಿಯಿಂದ ಆಧುನಿಕ ಯಂತ್ರಯುಗದ ವರೆಗೆ ನಾನಾ ಸಾರಿಗೆ ಮುಖಗಳನ್ನು ನಮ್ಮ ಪಂಚಾಯತ್ ಕಂಡಿದೆ.

**ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಮೊದಲು :**

ತಲಪಾಡಿ ಹೊಳೆಯಿಂದ ದಕ್ಷಿಣಕ್ಕೆ ಹಿಂದಿನ ಬ್ರಿಟಿಷ್ ರಸ್ತೆಯು ಪ್ರಾರಂಭಗೊಂಡು ಹೆದ್ದಾರಿಯ ಸಮೀಪವೇ ಸಾಗಿ ಉದ್ಯಾವರ ಬಳಿ ಕವಲೊಡೆದು ಸಾಸ್ತಾವೇಶ್ವರ ಗುಡಿಯ ಬಳಿ ರೈಲ್ವೆ ಗೇಟನ್ನು ಹಾದು ರಿಜಿಸ್ಟ್ರಿ ಆಫೀಸು ದಾಟಿ ಬಂಗ್ರ ಮಂಜೇಶ್ವರ ಸೇತುವೆ ಮುಖಾಂತರ ಬಂಗ್ರ ಮಂಜೇಶ್ವರವನ್ನು ಪ್ರವೇಶಿಸುತ್ತದೆ. ಅಲ್ಲಿಂದ ಮುಂದುವರಿದು ವಾಮಂಜೂರು ಶಾಲೆಯ ಮುಂಭಾಗದಲ್ಲಿ ಇಬ್ಭಾಗವಾಗಿ ಒಂದು ರಸ್ತೆಯು ದಕ್ಷಿಣಕ್ಕೆ ತಿರುಗಿ ಆಚಾರಿ ಮಠದ ಮುಂದಿನಿಂದ ಉಪ್ಪಳ ಹೊಳೆಯ ದಂಡೆಯಲ್ಲಿ ಕೊನೆಗೊಳ್ಳುತ್ತದೆ. ಇನ್ನೊಂದು ರಸ್ತೆ ಪೂರ್ವ ದಿಕ್ಕಿಗೆ ನೇರವಾಗಿ ಹೊಸಂಗಡಿ ಜಂಕ್ಷನ್ ದಾಟಿ ಪುತ್ತೂರು ರಸ್ತೆಯಲ್ಲಿ ಸಾಗಿ ದುರ್ಗಿಪಳ್ಳ ಎಂಬ ಪಂಚಾಯತ್‌ನ ಗಡಿ ವ್ಯಾಪ್ತಿಯೊಂದಿಗೆ ಅಂತ್ಯಗೊಳ್ಳುತ್ತದೆ.

ರಾಷ್ಟ್ರೀಯ ಹೆದ್ದಾರಿ 17 ತಲಪಾಡಿ ಗಡಿಯಿಂದ ವಾಮಂಜೂರು ಚೆಕ್‌ಪೋಸ್ಟ್ ಸೇತುವೆ ವರೆಗೆ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತದೆ.

**ಪಂಚಾಯತ್ ವ್ಯಾಪ್ತಿಯಲ್ಲಿ ಇರುವ ರಸ್ತೆಗಳು :**

**ಕೋಷ್ಟಕ 1**

1. **ರಾಷ್ಟ್ರೀಯ ಹೆದ್ದಾರಿ**

| | |
|---|---|
| ತಲಪಾಡಿಯಿಂದ ವಾಮಂಜೂರು ಚೆಕ್‌ಪೋಸ್ಟ್ ವರೆಗೆ | 19 K.M. ಟಾರು ರಸ್ತೆ |
| 2. **ಮುಖ್ಯರಸ್ತೆ (Main Road) PWD** ಉದ್ಯಾವರದಿಂದ ಒಳಭಾಗವಾಗಿ ಬಂಗ್ರ ಮಂಜೇಶ್ವರದಿಂದಾಗಿ ದುರ್ಗಿಪಳ್ಳದ ವರೇಗೆ | 8 K.M. ಟಾರು ರಸ್ತೆ |
| 3. ಕುಂಜತ್ತೂರು ಕೆದಂಬಾಡಿ ನಂದಾರ್ ಪದವು ವರೇಗೆ | 11 K.M. ಟಾರು ರಸ್ತೆ |
| 4. ಮಂಜೇಶ್ವರ - ತೌಡುಗೋಳಿ ಪಂಚಾಯತ್ | 5.6 K.M. |
| ಗೇರು ಕಟ್ಟೆ - ವರ್ಕಾಡಿ | 5 K.M. |

ಕ್ರ. ಸಂಖ್ಯೆ 4ರ ರಸ್ತೆಗಳು ಪಿಡಬ್ಲ್ಯುಡಿಯಿಂದ ಮಂಜೇಶ್ವರ ಪಂಚಾಯತ್‌ಗೆ ವರ್ಗಾಯಿಸಲಾಗಿದೆ.

**ಕೋಷ್ಟಕ 3**

**ಬಸ್ಸು ಸರ್ವೀಸು ಸಾಧ್ಯತೆಗಳಿರುವ ಮಾರ್ಗಗಳು :**

1. ಕಡಂಬಾರು ಶಾಲೆ ಬಳಿಯಿಂದ ಪಾಪಿಲ ಗಾಂಜಳದ ವರೇಗೆ ಮಿನಿ ಬಸ್
2. ಗಾಡಿ ಕಡಂಬಾರಿನಿಂದ ಕಾಜೂರು ವರೇಗೆ ಮಿನಿಬಸ್.
3. ಕೆಮಿಕಲ್ಸ್‌ನಿಂದ ಗೋವಿಂದ ಪೈ ಕಾಲೇಜ್ ಆಗಿ ಬಡಾಜೆ
4. ಹೊಸಬೆಟ್ಟಿನಿಂದ ಫಿಶರೀಸ್ ರಸ್ತೆಯಲ್ಲಿ ತಲಪಾಡಿ ವರೇಗೆ ಮಿನಿಬಸ್.
5. ತೂಮಿನಾಡು ಜಂಕ್ಷನ್ NH 17ರಿಂದ ಕಣ್ವತೀರ್ಥ ರಾಮಾಡಿ ಪೊಯ್ಯತ್ತೋಡು ವರೇಗೆ ಮಿನಿಬಸ್.
6. N.H. 17ರಿಂದ ತೂಮಿನಾಡಾಗಿ ಕುಂಜತ್ತೂರು ಪದವಿನಿಂದ ಮಹಾಲಿಂಗೇಶ್ವರ ದೇವಸ್ಥಾನದ ವರೇಗೆ ಮಿನಿಬಸ್.

**ಕೋಷ್ಟಕ 4**

**ಆಗಬೇಕಾಗಿರುವ ಹೊಸ ರಸ್ತೆಗಳು :**

1. ಗೋವಿಂದ ಪೈ ಕಾಲೇಜಿನ ಮುಂದಿನಿಂದ ಬಡಾಜೆ ದೇವಸ್ಥಾನಕ್ಕೆ ಹೋಗುವ ದಾರಿ ಬಯಲಿನ ವರೇಗೆ ಇದೆ. ಅಂದಾಜು 300 ಮೀಟರ್ ರಸ್ತೆ ಮಾಡಿದರೆ ದೇವಸ್ಥಾನದ ವರೇಗೆ ವಾಹನ ಸಂಚಾರ ಸೌಲಭ್ಯ ದೊರಕುತ್ತದೆ. - 50 ಮನೆಗಳು
2. ಮಾಡಾ to ದಯ ಕುಚ್ಚಿಕ್ಕಾಡು 25 ಪಳ್ಳರೋಡು 2 K.M.
3. ಸನ್ನಡ್ಕ to ಗೇರುಕಟ್ಟೆ 2 K.M. 50 ಮನೆಗಳು
4. ಇಡಿಯ to ಕಿಟ್ಟಗುಂಡಿ 1 1/2 ಕಿ.ಮೀ. 40 ಮನೆಗಳು.
5. ಪಾಪಿಲ ರೋಡ್ to ಪಚ್ಚಂಪಾಡಿ ಸೇತುವೆ 60 ಮನೆಗಳು.
6. ಹೊಸಬೆಟ್ಟು ವಾರ್ಡು 9ರಿಂದ ಟೌನ್‌ನಿಂದ ಕಡಲ ಕಿನಾರೆಯಾಗಿ ತಲಪಾಡಿ ತನಕ ಫಿಶರೀಸ್ ರೋಡು ನಿರ್ಮಾಣ ಡಾಮಾರು - 50 ಮನೆಗಳು.
7. ಸತ್ಯಡ್ಕದಿಂದ ಅರಿಮಲೆಗೆ ರಸ್ತೆ - 40 ಮನೆಗಳು.
8. 7ನೇ ವಾರ್ಡು ಕಜೆ ಎಂಬಲ್ಲಿಂದ ಮೂಸೋಡಿಗೆ ತೂಗು ಸೇತುವೆ 100 ಮನೆಗಳು
9. ಕುಂಜತ್ತೂರು ಪಳ್ಳದಿಂದ ಕುಚ್ಚಿಕ್ಕಾಡು ಆಗಿ ಕೆಳಗಿನ ಬೀಡಿಇಂದ ಉದ್ಯಾವರ ಜುಮ್ಮಾ ಮಸೀದಿ ವರೆಗೆ ರಸ್ತೆ - 50 ಮನೆಗಳು
10. ಕುಚ್ಚಿಕ್ಕಾಡು ಎಂಬಲ್ಲಿಂದ ಉದ್ಯಾವರ ಜುಮ್ಮಾ ಮಸೀದಿ ರೋಡು (Via) ಬಿ.ಎಸ್. ನಗರ

ಕಣ್ವತೀರ್ಥದಿಂದ ಕುಚ್ಚಿಕ್ಕಾಡು ಆಗಿ ಉದ್ಯಾವರ ಮಾಡಾ ದೈವಸ್ಥಾನದ ವರೆಗೆ ರಸ್ತೆ.

11. ತೂಮಿನಾಡು R.S. No. 131ರ ಪಶ್ಚಿಮ ದಿಕ್ಕಿನಲ್ಲಿ. ಸುಮಾರು 400 ಮೀ. ಉದ್ದದ ಹೊಸ ರಸ್ತೆ ಮತ್ತು ಕಲ್ವರ್ಟ್

12. ಇಲ್ಲಿಂದಲೇ ಮೂಡುದಿಕ್ಕಿಗೆ ರಾಣಿ ಅಬ್ಬಕ್ಕನ ಗಡಿಯಲ್ಲಿ 200 ಮೀ. ಹೊಸರಸ್ತೆ ಮತ್ತು ಕಲ್ವರ್ಟ್

13. ಕರೋಡ ಕ್ರೀಸ್ ರೋಡ್ ಪೊಯ್ಯಕಂಡ 300 ಮೀ.

14. ಪುದಿಯಾನ -ಪಾಣೆಯೂರು 500 ಮೀ.

15. ಉದ್ಯಾವರ ಭಂಡಾರ ಮನೆಯಿಂದ N.H. ವರೆಗೆ 500 ಮೀ.

16. ಕ್ಯಾಂಪ್ಕೋ ಕ್ರಾಸ್‌ನಿಂದ ಅರವಾರಕ್ಕೆ 600 ಮೀ.

17. N.H. to ಹೂಮಣ್ಣು ರೋಕು ಪಾವೂರು 200 ಮೀ.

18. ಶಾಂತಿನಗರ-ಎರ್ಮುಡೆಲು ರಸ್ತೆ ಜೋಡಣೆ (VI ವಾರ್ಡು)

19. ಬಂಗ್ರಮಂಜೇಶ್ವರ Bus Stop ಬಳಿಯಿಂದ ಪೂರ್ವಕ್ಕೆ ಅಂದಾಜು 600 ಮೀ. ದೂರಕ್ಕೆ ಸುಮಾರು 50ಕ್ಕೂ ಮೇಲ್ಪಟ್ಟು ಮನೆಗಳಿರುವ ಪೊಯ್ಯೆ ಕಂಡ ಎಂಬ ಪ್ರದೇಶವಿದೆ.

**ಕ್ರ. ಸಂಖ್ಯೆ 19ರಿಂದ (ಹೊಸ ರಸ್ತೆ)**

ಮಳೆಗಾಲದಲ್ಲಿ ನೆರೆ ಪೀಡಿತ ಪ್ರದೇಶವಾಗಿದ್ದು ಬೇಸಿಗೆ ಕಾಲದಲ್ಲಿ ಈ ಪ್ರದೇಶದ ಬಾವಿಗಳಲ್ಲಿ ಉಪ್ಪುನೀರು ತುಂಬುತ್ತಿದೆ. ರಸ್ತೆ ನಿರ್ಮಾಣದಿಂದ ನೀರಿನ ಪೈಪ್ ವಿಸ್ತರಣೆ ಮಾಡಲು ಸಾಧ್ಯವಿದೆ. ಪೇಟೆಯಲ್ಲಿ ಒಂದು ಕಟ್ಟಡ ನಿರ್ಮಾಣ ವೆಚ್ಚವು 60 ಸಾವಿರದಲ್ಲಾದರೆ ಈ ಪ್ರದೇಶದಲ್ಲಿ ಅದೇ ರೀತಿಯ ರಚನೆಗೆ ಒಂದು ಲಕ್ಷ ವೆಚ್ಚವಾಗುತ್ತದೆ. ಸಾಗಾಟದ ವೆಚ್ಚ ಅಧಿಕವಾದ್ದರಿಂದ ಪೊಯ್ಯಕಂಡದಿಂದ ರೈಲ್ವೆ ಸೇತುವೆಯ ಕೆಳಭಾಗದಿಂದ ರಸ್ತೆಯನ್ನು ವಿಸ್ತರಿಸಿದರೆ ಹೊಸಬೆಟ್ಟು ಎನ್.ಎಚ್. ಸೇತುವೆ ಬಳಿ ಸಂಪರ್ಕವನ್ನು ಪಡೆಯಬಹುದು. ರೈಲ್ವೆ ಗೇಟು ಮುಚ್ಚಿದ ವೇಳೆ ತುರ್ತು ಸಂದರ್ಭದಲ್ಲಿ ಈ ರಸ್ತೆಯ ಉಪಯೋಗವನ್ನು ಪಡೆಯಲು ಸಾಧ್ಯವಿದೆ. ಈ ಸೌಲಭ್ಯವು ದೊರೆತಲ್ಲಿ ಈ ಪ್ರದೇಶದ ಹೆಚ್ಚಿನ ಕೃಷಿಕರಿಗೂ ಬಹಳಷ್ಟು ಅನುಕೂಲವಾಗುತ್ತದೆ. ಕನಿಷ್ಠ ಮುಖ್ಯರಸ್ತೆಯಿಂದ ಪೊಯ್ಯಕಂಡ ರೈಲ್ವೆ ಹಳಿಗಳ ವರೇಗೆ ರಸ್ತೆಯನ್ನು ವಿಸ್ತರಿಸಿದರೂ ಆಗಬಹುದು.

ಸರ್ವ ಧರ್ಮೀಯರಿಂದಲೂ ಆರಾದಿಸಿಕೊಂಡು ಬರುವ ಗ್ರಾಮ ದೇವತೆ ಕನಿಲ ಶ್ರೀ ಭಗವತಿಯ ಉತ್ಸವ ಮೆರವಣಿಗೆಯೂ ಪ್ರಾಚೀನ ಕಾಲದಿಂದಲೂ ಇದೇ ಪೊಯ್ಯ ಕಂಡದ ದಾರಿಯಾಗಿ ತೆರಳುವುದು ಸರ್ವವಿದಿತ. ಧಾರ್ಮಿಕ ನಿಟ್ಟಿನಲ್ಲೂ ಈ ಪ್ರದೇಶಕ್ಕೆ ರಸ್ತೆ ನಿರ್ಮಾಣ ಅತ್ಯಂತ ಅವಶ್ಯವಾಗಿದೆ. ಮುಖ್ಯವಾಗಿ ಪ್ರಸ್ತಾಪಿತ ರಸ್ತೆ ಪ್ರದೇಶ ಖಾಸಗಿ ಸ್ಥಳಗಳಾಗಿದ್ದು ಸಂಬಂಧಿತ ಅಧಿಕೃತರ ಪ್ರಯತ್ನದಿಂದ ಖಂಡಿತಾ ಸಾಧ್ಯವಿದೆ.

20. ಮಂಜೇಶ್ವರ ಪೇಟೆಯನ್ನು ಸಂಪರ್ಕಿಸುವ N.H. 17ನ್ನು ಉದ್ಯಾವರ ಮತ್ತು ಹೊಸಂಗಡಿಯ ಬಳಿಯ ಎರಡು ರೈಲ್ವೆ ಗೇಟುಗಳಿಂದಾಗಿ ರೈಲು ಬರುವ ವೇಳೆ ಗೇಟು ಹಾಕುತ್ತಾರೆ. ಆಗ ಹೆದ್ದಾರಿಯಿಂದ ಮಂಜೇಶ್ವರ ಪೇಟೆಗೆ ಸಂಚಾರ ಸ್ಥಗಿತಗೊಳ್ಳುತ್ತದೆ. NH 17ರಲ್ಲಿ ಹೊಸಬೆಟ್ಟು ಬಳಿ ಸಮಿತ್ ಆಯಿಲ್ ಮಿಲ್ ಎಂಬ ಹಳೇ ಕಟ್ಟಡವಿದೆ. ಅಲ್ಲಿಂದ ರೈಲು ಮಾರ್ಗವನ್ನು ಧಾಟಿ (ಲೆವೆಲ್ ಕ್ರಾಸಿಂಗ್ ಮಾಡಬೇಕು) ಬೈಲಿನಿಂದ ಸೂರಮ್ಮ ತೋಡು ಮುಖಾಂತರ ಬಂಗ್ರ ಮಂಜೇಶ್ವರ ಸೇತುವೆ ಬಳಿ ಸಂಪರ್ಕ ರಸ್ತೆ.

21. ವಾಮಂಜೂರು ಶಾಲೆಯಿಂದ ರಾಮತ್ತಮಜಲು ರಾಜಾರಾಮ ಗ್ರೌಂಡಿಗೆ ರಸ್ತೆ 500 ಮೀಟರ್

22. ಕಟ್ಟೆಬಜಾರ್ to ಕೊಪ್ಪಳದ ವರೆಗೆ 1 ಕಿ.ಮೀ. 100 ಮನೆಗಳು

23. ಪೆಲಪ್ಪಾಡಿಯಿಂದ ಶಕ್ತಿನಗರಕ್ಕೆ 500 ಕಿ.ಮೀ. 50 ಮನೆಗಳು

**ದುರಸ್ತಿಗೊಳ್ಳಬೇಕಾದ ರಸ್ತೆ ಮತ್ತು ಕಲ್ವರ್ಟ್‌ಗಳು**

1. ಕುಂಜತ್ತೂರು ಮಹಾಲಿಂಗೇಶ್ವರ ದೇವಸ್ಥಾನದಿಂದ ಜುಮ್ಮಾ ಮಸೀದಿ ರಸ್ತೆ (ಕುಂಜತ್ತೂರು)

2. ಕಡಂಬಾರಿನಿಂದ ಅರಿಮಲೆ.

3. ಹೊಸಂಗಡಿ ಜಂಕ್ಷನ್ ಅಭಿವೃದ್ಧಿ ಮತ್ತು ಕಲ್ವರ್ಟ್‌ಗಳು.

4. ಇಡಿಯ SC ಕಾಲನಿ ರಸ್ತೆ.

5. ಕಣ್ವತೀರ್ಥ -ರಾಮಾಡಿ ಕಲ್ವರ್ಟ್, ಒಳಚರಂಡಿ (ಡಾಮಾರೀಕರಣ)

6. ಕ್ಯಾಂಪ್ಕೋ ಕ್ರಾಸ್ ರೋಡಿನಿಂದ ಹೈಗ್ರೋದಿ ವರೇಗೆ ಪಾವೂರು 1000 ಮೀ.

7. ಸನ್ನಡ್ಕದಿಂದ ಬಯಲು ಕೃಷಿ ಪ್ರದೇಶ ರಸ್ತೆ 350 ಮೀ.

8. ಕುಂಜತ್ತೂರು N.H.ನಿಂದ ಪೂರ್ವದಾರಿಯಾಗಿ ಅರವಾರ ಬಡಗು ಬಯಲು ರಸ್ತೆ ಮತ್ತು ಕಲ್ವರ್ಟ್ ನಿರ್ಮಾಣ

9. ಉದ್ಯಾವರ ತೋಟ ಶಾಲೆಯ ಪಕ್ಕ ರಸ್ತೆಯಲ್ಲಿ ನೀರು ತುಂಬುವುದರಿಂದ ಒಳಚರಂಡಿ.

10. VI ವಾರ್ಡು SC ಕಾಲನಿಗೆ ಹೋಗುವ ದಾರಿ, ಸರ್ಕಾರಿ ಬಾವಿ ಬಳಿ ರಸ್ತೆಮಟ್ಟಕ್ಕೆ ದಾರಿಯನ್ನು ಎತ್ತರಿಸಿ ಮಳೆಗಾಲದ ಕೆಸರು ತುಂಬುವಿಕೆಯನ್ನು ತಪ್ಪಿಸುವುದು ಚರಂಡಿ ವ್ಯವಸ್ಥೆ.

11. ಕಟ್ಟೆ ಬಜಾರ್ ಕಲ್ವರ್ಟ್ ಮತ್ತು 50 ಮೀ. ಉದ್ದಕ್ಕೆ ರಸ್ತೆ ಚರಂಡಿ ರಿಪೇರಿ.

12. ಅನಂತೇಶ್ವರ ದೇವಸ್ಥಾನದ ಕೆಳಗಿನ ರಸ್ತೆಯಿಂದ ಕಾಶಿಮಠಕ್ಕೆ ಹೋಗುವ ದಾರಿಯಲ್ಲಿನ ಕಲ್ವರ್ಟನ್ನು ಕೂಡಲೇ ದುರಸ್ತಿ ಮಾಡುವುದು. ಪಂಚಾಯತ್‌ನ ಎಲ್ಲಾ ಸೊಳ್ಳೆಗಳು ಇಲ್ಲಿ ಜನ್ಮತಾಳುತ್ತಿದೆ ಮತ್ತು ಪಕ್ಕದ ಚರಂಡಿ ರಿಪೇರಿ

13. ಬಂಗ್ರ ಮಂಜೇಶ್ವರ ಅಕ್ಕಾಫಾರಂ ಆಫೀಸುನಿಂದ ದಕ್ಷಿಣ ದಿಕ್ಕಿನ ಜುಮ್ಮಾ ಮಸೀದಿ ವರೆಗಿನ 50 ಮಿ. ರಸ್ತೆಯನ್ನು ಒಂದು ಅಡಿ ಎತ್ತರಕ್ಕೇರಿಸುವುದು. ರಸ್ತೆ ತಗ್ಗಾಗಿದ್ದು ಚರಂಡಿ ವ್ಯವಸ್ಥೆ ಸರಿ ಇಲ್ಲದೆ ಮಳೆಗಾಲದಲ್ಲಿ ನೆರೆ ನೀರು ರಸ್ತೆಯಲ್ಲಿ ಉಕ್ಕಿ ಹರಿದು ಪಾದಾಚಾರಿಗಳಿಗೆ ಬಹಳಷ್ಟು ತೊಂದರೆಯುಂಟಾಗುತ್ತದೆ. ಬಸ್ಸು, ಲಾರಿ, ರಿಕ್ಷಾಗಳ ಪೈಪೋಟಿಯಲ್ಲಿ ಜೀವಕ್ಕೆ ಸಂಚಕಾರ. ಈ ಕಡೆಗೆ ಗಮನ ಹರಿಸುವುದು.

14. ವಾಮಂಜೂರು ಕಜೆ - ಕಲ್ವರ್ಟ್

15. ಕೊಪ್ಪಳ ಬಾದೆ ಮಾರು ಕಲ್ವರ್ಟ್

**ಟಾರು ರೋಡು ರಿಪೇರಿ**

1. ಕಟ್ಟೆ ಬಜಾರ್ ಬಳಿ 50 ಮೀ.

2. ಹೊಸಬೆಟ್ಟು ಫಿಶ್‌ಕ್ಯೂರಿಂಗ್ ರೋಡು 1 1/2 K.M.

3. ಉದ್ಯಾವರ ಮಾಡಾ to ಉದ್ಯಾವರ ಮಸೀದಿ.

4. ಗೇರುಕಟ್ಟೆ to ಮಚಂಪಾಡಿ ಪಳ್ಳರೋಡು 2 K.M.

5. N.H. to ಕಣ್ವತೀರ್ಥ ರೋಡು 1 1/2 ಕಿ.ಮೀ.

6. ಕುಂಡುಕೊಳಕೆ to ಕಣ್ವತೀರ್ಥ 3 K.M.

7. ಅಂಗಡಿ ಪದವು to SC ಕಾಲೋನಿ 1 K.M.

**ಡಾಮಾರು ಹಾಕಬೇಕಾದ ರಸ್ತೆಗಳು**

1. N.H. to ಕುಂಜತ್ತೂರು ಕೆದಂಬಾಡಿ 3 1/2 ಕಿ.ಮೀ.

2. ಪುಚ್ಚತ್ತಬೈಲು ರೋಡು 1 1/2 ಕಿ.ಮೀ.

3. ಕಣ್ವತೀರ್ಥ ಶಾಲೆಯಿಂದ ವಯ ಬೋಲ್‌ಗುಡ್ಡೆ ಗೇರುಕಟ್ಟೆ ST ಕಾಲನಿ 5 K.M.

4. ಕುಂಜತ್ತೂರು ಪದವಿನಿಂದ ಕಣ್ವತೀರ್ಥ ಕ್ರಾಸ್ 1 K.M.

5. N.H. to ಕುಂಜತ್ತೂರು ಪಳ್ಳ ರೋಡು 1 1/2 ಕಿ.ಮೀ.

6. 10ನೇ ಮೈಲಿಯಿಂದ ವಯ ಮೌಲಾನ ರೋಡು to ಸ್ಮಶಾನ 1 K.M.

7. ಉದ್ಯಾವರ ಗುಡ್ಡೆ ರಾಗಂ ಹೋಟೆಲಿನಿಂದ ಅಂಬೇಡ್ಕರ್ ಕಾಲನಿ 2 K.M.

8. ಚೌಕಿಯಿಂದ ಗೇರುಕಟ್ಟೆ ಕ್ರಾಸ್ 600 K.M.

9. ಬಡಾಜೆ ಮಹಾಲಿಂಗೇಶ್ವರ ದೇವಸ್ಥಾನ 1 KM

10. ಕಡಂಬಾರು ಅರಿಮಲೆ 1 1/2 K.M.

11. ಪಾಪಿಲ ರೋಡು 1 K.M.

12. ದುರ್ಗಿಪಳ್ಳದಿಂದ ಕನಿಲ

13. ವಾಮಂಜೂರಿನಿಂದ (ಕಜೆ)ಗೆ

14. ಉದ್ಯಾವರ ಪೂಮಣ್ಣು ರೋಡು 500 ಮೀ.

15. ಉದ್ಯಾವರ ಪೂಮಣ್ಣು ರೋಡು 500 ಮೀ.

16. ಕುಂಜತ್ತೂರು ಐಗೋದಿ II ಪೋಸ್ಟ್ 500 ಮೀ.

17. ಇಡಿಯ SC ಕಾಲನಿ 2 K.M.

18. ಕಣ್ವತೀರ್ಥದಿಂದ ಬೆಂಗ್ರೆ ಫಿಶರಿಸ್ ರೋಡು

19. ಹಿಲ್‌ಸೈಡ್ ಥಿಯೇಟರ್ ಮುಂದಿನಿಂದ ಐರಾರ ಮೂಲೆ (ಭದ್ರಮೂಲೆ) ವರೆಗೆ.

20. ಕುಂಜತ್ತೂರು ಬಸ್ ನಿಲ್ದಾಣದ ಸಮೀಪ.

21. ಅಂಗಡಿ ಪದವು SC ಕಾಲನಿ ಎಲ್ಲಾ ರಸ್ತೆಗಳು.

22. ಕಾಲನಿಯಿಂದ ಚೆಕ್ ಪೋಸ್ಟ್ ವರೆಗಿನ ರಸ್ತೆ ಅಗಲಗೊಳಿಸಿ ಡಾಮಾರು

23. ಎಲ್ಲಾ ಡಾಮಾರು ರಸ್ತೆಗಳ ಇಕ್ಕೆಲಗಳನ್ನು ಡಾಮರಿಗೆ ಸರಿಯಾಗಿ ಸಮತಟ್ಟು ಮಾಡುವುದು. ಮಾಡದಿದ್ದಲ್ಲಿ ಪಾದಾಚಾರಿಗಳಿಗೆ ಮತ್ತು ಪ್ರಯಾಣಿಕರಿಗೆ ಹಾಗೂ ವಾಹನಗಳಿಗೆ ಅತ್ಯಂತ ಅಪಾಯಕಾರಿ.

24. ಕುಂಡುಕೊಳಕೆಯಿಂದ ಭಗವತಿ ಶಾಲೆ

25. N.H. 17ರಿಂದ ಕಣ್ವೀರ್ಥ ರೈಲ್ವೆ ಕ್ರಾಸಿಂಗ್ ವರೆಗೆ

26. ಕಣ್ವತೀರ್ಥ ರೈಲ್ವೆ ಕ್ರಾಸಿಂಗ್‌ನಿಂದ ರಾಮಾಡಿ ವರೇಗೆ 3 K.M.

27. ಕಣ್ವತೀರ್ಥ ರಸ್ತೆ

28. ತೂಮಿನಾಡು ಕುಂಜತ್ತೂರು ಪದವು

29. ಕುಂಜತ್ತೂರು ಪದವಿನಿಂದ ಮಹಾಲಿಂಗೇಶ್ವರ ದೇವಸ್ಥಾನ 4 K.M.

30. ತೂಮಿನಾಡು ಕೆದಂಬಾಡಿಯಿಂದ ಕರ್ನಾಟಕ ಗಡಿ 10 K.M.

**ಫುಟ್‌ಪಾತ್‌ಗಳು**

1. ಕುಂಜತ್ತೂರು ಸನ್ನಡ್ಕದಿಂದ ಬಯಲು ಪ್ರದೇಶಕ್ಕೆ ಫುಟ್‌ಪಾತ್ ನಿರ್ಮಾಣ.
2. ಬಂಗ್ರ ಮಂಜೇಶ್ವರ ಅಕ್ಕಾಫಾರಂ ಆಫೀಸು ಬಳಿಯ ಓಗೆಯಲ್ಲಿ ಫುಟ್‌ಪಾತ್ ನಿರ್ಮಾಣ.

**ರೈಲು ಮಾರ್ಗಗಳು :**

1. ಪಂಚಾಯತ್ ವ್ಯಾಪ್ತಿಯಲ್ಲಿ ತಲಪಾಡಿ ಗಡಿಯಿಂದ ಉಪ್ಪಳ ಹೊಳೆ ವರೇಗೆ ರೈಲು ಹಾದಿ ಸಾಗುತ್ತದೆ. ಅಂದಾಜು 9 K.M.

**ಲೆವೆಲ್ ಕ್ರಾಸಿಂಗ್** : 1) ಕಣ್ವತೀರ್ಥ.

2) ರೈಲ್ವೆ ಸ್ಟೇಷನ್ ಸಮೀಪ.

ರೈಲ್ವೆಗೇಟು : (1) ಉದ್ಯಾವರ ಸಾಸ್ತಾವೇಶ ಗುಡಿಯ ಬಳಿ.

(2) ಹೊಸಂಗಡಿ ಜಂಕ್ಷನ್ ಬಳಿ.

ರೈಲ್ವೆ ಸ್ಟೇಷನ್ : ಗೂಡ್ಸ್ ಪಾರ್ಸೆಲ್ ವ್ಯವಸ್ಥೆ ಇದೆ. ಕ್ರಾಸಿಂಗ್ ವ್ಯವಸ್ಥೆ ಪ್ಯಾಸೆಂಜರ್ ಗಾಡಿನಳು ಕೆಲವು ಎಕ್ಸ್‌ಪ್ರೆಸ್ ಗಾಡಿಗಳಿಗೆ ನಿಲುಗಡೆ ಇದೆ. ಮಂಗಳೂರಿನಿಂದ ದಕ್ಷಿಣ ದಿಕ್ಕಿಗೆ ಪ್ರಯಾಣಿಸಬೇಕಾದರೆ ಯಾವುದೇ ರೈಲು - ಗೂಡ್ಸ್ ಇತ್ಯಾದಿ ಮಂಜೇಶ್ವರವನ್ನು ಹಾದು ಹೋಗಬೇಕು.

**ಆವಶ್ಯವಾಗಿ ಆಗಬೇಕಾದುದು (ರೈಲ್ವೆ)**

1. ರೈಲು ನಿಲ್ದಾಣದಿಂದ ವಿಜಯಾ ಬೇಂಕ್ ವರೆಗಿನ ರೈಲ್ವೆ ರಸ್ತೆಯ ರಿಪೇರಿ, ಡಾಮಾರಿಕರಣ.

ರಸ್ತೆಯ ಇಕ್ಕೆಲಗಳಲ್ಲಿ ಆಳೆತ್ತರ ಬೆಳೆದು ನಿಂತಿರುವ ಗಿಡ, ಪೊದೆಗಳನ್ನು ಕಡಿದು ಪರಿಸರ ನೈರ್ಮಲ್ಯವನ್ನುಂಟು ಮಾಡುವುದು. ಈಗಿನ ಸ್ಥಿತಿಯಲ್ಲಿ ಮಕ್ಕಳಿಗೂ ಸ್ತ್ರೀಯರಿಗೂ ಅಪಾಯಕಾರಿ ಸ್ಥಳ. ರಸ್ತೆ ದೀಪ ಅಳವಡಿಸುವುದು. ವಿಷ ಜಂತುಗಳ ಸಂಚಾರ ಮಾಮೂಲು. ರೈಲು ಬರುವ ವೇಳೆ ಕಾರು, ರಿಕ್ಷಾಗಳಿಗೆ ಸ್ಟೇಷನ್ ವಠಾರದಲ್ಲಿ ಪಾರ್ಕಿಂಗ್ ವ್ಯವಸ್ಥೆ. ಇತರ ಪ್ರಯಾಣಿಕ ಸೌಲಭ್ಯಗಳು. ರಾತ್ರಿ ವೇಳೆ ಸ್ಟೇಷನ್ ಪರಿಸರದಲ್ಲಿ ಉಜ್ವಲ ಬೆಳಕಿನ ವ್ಯವಸ್ಥೆ ಬೇಕು.

**ಇನ್ನೊಂದು ರೈಲ್ವೆ ಸ್ಟೇಷನ್**

ಅನೇಕಲ್ಲು, ಸಾಲೆತ್ತೂರು, ಬಾಕ್ರಬೈಲು, ಮೀಂಜಾ, ಈ ಗ್ರಾಮಂತರ ಪ್ರದೇಶದ ಅಲ್ಲದೆ ಆಸುಪಾಸಿನ ಜನತೆಗೆ ಪ್ರಯಾಣ, ವ್ಯಾಪಾರ, ವಹಿವಾಟು ಸಾಗಾಟ ಇತ್ಯಾದಿಗಳಿಗೆ ಹೊಸಂಗಡಿ ಜಂಕ್ಷನ್ ಸೂಕ್ತ ಸ್ಥಳವಾಗಿದೆ. ಅಲ್ಲದೆ ಮಂಗಳೂರು ಹಾಗೂ ಕಾಸರಗೋಡು ಕಡೆಯಿಂದ ಬರುವ ಎಲ್ಲಾ ಪ್ರಯಾಣಿಕರಿಗೂ ವಾಹನಗಳಿಗೂ ಕೃಷಿಕರು, ವಿದ್ಯಾರ್ಥಿಗಳೂ, ಉದ್ಯೋಗಿಗಳು ಹೀಗೆ ಹಲವು ರೀತಿಯಲ್ಲಿ ಇದು ಕೇಂದ್ರ ಸ್ಥಳವಾಗಿರುತ್ತದೆ.

ಶೋರನೂರ್ to ಮಂಗಳೂರು ರೈಲು ಹಳ್ಳಿಗಳ ದ್ವಿಗುಣಗೊಳಿಸುವಿಕೆ ಕಾಮಗಾರಿಯು ಈ ಭಾಗದಲ್ಲಿ ತ್ವರಿತವಾಗಿ ಸಾಗುತ್ತಿದ್ದು ಕೃಷಿ ಪ್ರಧಾನವೂ, ವಾಣಿಜ್ಯವೂ ಮತ್ತು ಸಾಂಸ್ಕೃತಿಕವಾಗಿ ಅಭಿವೃದ್ಧಿಗೊಳ್ಳುತ್ತಿರುವ ಈ ಪ್ರದೇಶದ ಸೂಕ್ತ ಸ್ಥಳದಲ್ಲಿ ರೈಲು ನಿಲ್ದಾಣ ರಚನೆಗೊಳ್ಳುವುದರಿಂದ ನಾಗರೀಕರಿಗೆ ಸೌಲಭ್ಯ ದೊರಕುವುದರೊಂದಿಗೆ ರೈಲ್ವೆ ಇಲಾಖೆಗೂ ಗ್ರಾಮ ಪಂಚಾಯತಿಗೂ ಆದಾಯ ಇಮ್ಮಡಿಗೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ. ತೊಕ್ಕೊಟ್ಟುವಿನಂತೆ ನಿಲುಗಡೆ ಲಭಿಸಿದರೂ ಪರಾವಾಯಿಲ್ಲ. ಆದರೆ, ಗೂಡ್ಸ್ ಪಾರ್ಸೆಲ್ ವ್ಯವಸ್ಥೆ ಇರಲೇ ಬೇಕು. ಅಧಿಕೃತರು ಈ ಬಗ್ಗೆ ಶ್ರದ್ಧೆ ವಹಿಸಬೇಕು.

ಓವರ್ ಬ್ರಿಡ್ಜ್ :




ಇದೊಂದು ಹೊಸಂಗಡಿ ಜಂಕ್ಷನ್‌ನ ಸ್ಕೆಚ್. ಜಂಕ್ಷನ್‌ನಿಂದ ಮಂಜೇಶ್ವರ ಪೇಟೆಗೆ ಬರಬೇಕಾದರೆ ಬೀಗ ಮುಂದ್ರ ಇರುವ ರೈಲ್ವೆಗೇಟು ಮತ್ತು ಕಾವಲುಗಾರ. ರೈಲು ಸಂಚಾರದ ಕೆಲವು ನಿಮಿಷಗಳ ಮೊದಲು ಕೆಲವೊಮ್ಮೆ ಕಾಲು ಘಂಟೆ ಕೂಡಾ ಆಗುವುದು ಇದೆ. ರೈಲು ನೋಟನ್ನು ಮುಚ್ಚಿ ಬೀಗ ಜಡಿಯುವುದು. ರೈಲು ದಾರಿ ದುರಸ್ತಿ ಸಂದರ್ಭ ರಸ್ತೆಯನ್ನೇ ಬೆಳಗ್ಗಿನಿಂದ ಸಂಜೆ ವರೆಗೆ ಮುಚ್ಚುವುದರಿಂದ ಯಾವುದೇ ವಾಹನ ಸಂಚಾರ

ಸಾಧ್ಯವಿಲ್ಲ. ಈ ಸನ್ನಿವೇಶಗಳಲ್ಲಿ ಮಂಜೇಶ್ವರವು ಪೂರ್ಣವಾಗಿ ನಿರ್ಜೀವವಾಗಿರುತ್ತದೆ. ಇದು ವಾಸ್ತವ ಚಿತ್ರಣ. ಮಂಜೇಶ್ವರ-ಬಂಗ್ರ ಮಂಜೇಶ್ವರ. ಈ ಪ್ರದೇಶವು ನಮ್ಮ ಗ್ರಾಮ ಪಂಚಾಯತ್‌ನ ಕೇಂದ್ರ ಸ್ಥಳ ಮತ್ತು ಊರ ಪರವೂರ ಜನತೆಯ ಜೀವನಾಡಿ. ಸರ್ವರ ಹೃದಯ, ಉಸಿರು ಅಡಗಿರುವುದೇ ಇಲ್ಲಿ.

ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಔದ್ಯೋಗಿಕ, ಸಾಂಸ್ಕೃತಿಕ, ಇನ್ನೂ ಸಮಾಜ ಬೆಳವಣಿಗೆಗೆ ಪೂರಕವಾದ ಎಲ್ಲಾ ಅಂಶಗಳ ಮಾತೃ ಸ್ಥಾನ ಇದಾಗಿದೆ. ಕೇಂದ್ರ, ರಾಜ್ಯ ಸರಕಾರಿ ಆಫೀಸುಗಳು ಬೇಂಕುಗಳು ಆರಾಧನಾಲಯಗಳೂ, ಮೀನುಗಾರಿಕೆ, ಹೈಸ್ಕೂಲ್‌ಗಳೂ, ಪೊಲೀಸ್ ಸ್ಟೇಶನ್ ಮತ್ತು ನಮ್ಮ ಗ್ರಾಮ ಪಂಚಾಯತ್ ಇಲ್ಲೇ ಇರುವುದರಿಂದ ಜೀವನ ಪ್ರಾರಂಭಗೊಳ್ಳಬೇಕಾದದ್ದು ಇಲ್ಲಿ. ಹೀಗೆ ಅತ್ಯಂತ ಪ್ರಧಾನ ಪಟ್ಟ ಸ್ಥಳವಾದ ಈ ಭಾಗವು ರೈಲು ಗೇಟು ಹಾಕುವುದರಿಂದ ಎಲ್ಲವೂ ಸ್ಥಗಿತ ಗೊಳ್ಳುವುದು.

ಕೋಮುಗಲಭೆ, ದಂಗೆ, ಅಗ್ನಿ ಅನಾಹುತ ಮುಂತಾದ ಭೀಕರ ಘಟನೆಗಳು ಸಂಭವಿಸಿದಾಗ ನಿಯಂತ್ರಿಸುವ, ಪೊಲೀಸ್, ಅಗ್ನಿಶಾಮಕದಳಗಳು ಊರವರ ಪ್ರಾರಬ್ಧದಿಂದಾಗಿ ಅದೇ ವೇಳೆ ರೈಲು ಗೇಟು ಹಾರಿದಲ್ಲಿ ಮುಂದಿನ ಭಯಾನಕ ಚಿತ್ರಣ ಊಹಿಸಿಕೊಳ್ಳಲು ಸಾಧ್ಯವಗಲಾರದು.

ವಿತ್ತಹಾನಿ, ಜೀವಹಾನಿ, ಸ್ವತ್ತು ಹಾನಿ ಇವುಗಳಿಂದ ಉಳಿಯಬೇಕಾದರೆ ಇಲ್ಲೊಂದು ಓವರ್ ಬ್ರಿಡ್ಜ್ ಆಗಲೇಬೇಕಾಗಿದೆ.

ಅಥವಾ ಪರ್ಯಾಯವಾಗಿ ಬೇರೊಂದು ವ್ಯವಸ್ಥೆ ಅಧಿಕೃತರು ಮಾಡಲೇಬೇಕಾಗಿದೆ.

ರೈಲ್ವೆ ಕಾಮಗಾರಿ ಈಗಾಲೇ ಪ್ರಾರಂಭಗೊಂಡಿರುತ್ತದೆ.

**ಪೇಟೆಯಲ್ಲಿ ಬಸ್ಸು ಸಂಚಾರದ ಕುರಿತು**

ಒಳ ಪರ್ಮಿಟ್ ಇರುವ ಬಸ್ಸುಗಳು ಪೇಟೆಯಿಂದಲೇ ಹೋಗಬೇಕು. ಮಿನಿಬಸ್‌ಗಳಿಗೆ ಒಳ ಪೇಟೆಯಿಂದ ಪರ್ಮಿಟ್ ಕೊಡಿ. ಕಾಸರಗೋಡು ಕಡೆಗೆ ಪೇಟೆಯಿಂದ ಸಂಚರಿಸಲು ಸೂಚನೆ ಕೊಡಬೇಕು.

**ಸಮಸ್ಯೆಗಳು - ಪರಿಹಾರಗಳು :**

ಮೂರನೇ ದರ್ಜೆಯ ಕಳಪೆ ರಸ್ತೆ ಡಾಮಾರುಗಳು, ಕಚಡಾ ರಸ್ತೆಗಳು, ಕುಸಿದು ಬಿದ್ದಿರುವ ಚರಂಡಿಗಳು, ರೋಗದ ಮೂಲವಾಗಿರುವ ಮುಖ್ಯವಾಗಿ ಕಾಶಿಮಠ ಕ್ರಾಸ್‌ನ (VIII ವಾರ್ಡು) ಕೊಳಚೆ ತುಂಬಿ ನಾತಗೆಟ್ಟ ಕಲ್ವರ್ಟ್, ಅದೇ ಪ್ರಕಾರ ಕಟ್ಟೆ ಬಜಾರ್‌ನ ಕಲ್ವರ್ಟ ಮತ್ತು ಪಂಚಾಯತ್ ಎಲ್ಲಾ ಭಾಗದ ಕಲ್ವರ್ಟ್, ಚರಂಡಿ, ರಸ್ತೆ ಇದೇ ರೀತಿ ಇದ್ದಲ್ಲಿ ಅದರ ಶೀಘ್ರ ದುರಸ್ತಿ.

ಬಡಾಜೆ ಗ್ರಾಮವು ಪಂಚಾಯತ್‌ನ ನೀರು-ಕೃಷಿಯಿಂದ ಅತ್ಯಂತ ಸಂಪದ್ಭರಿತ ಸ್ಥಳವಾಗಿದೆ. ಅದೇ ವೇಳೆ ನಾಗರೀಕ ಸೌಲಭ್ಯಗಳಿಂದ ವಂಚಿತ ಪ್ರದೇಶವು ಕೂಡಾ ಇದಾಗಿದೆ. ಏಕೆಂದರೆ ಪೇಟೆಯನ್ನು ಸಂಪರ್ಕಿಸಲು ಸರಳವಾದ, ಯೋಗ್ಯವಾದ ವಾಹನ ಸಂಚಾರ ರಸ್ತೆ ಇಲ್ಲದಿರುವುದು ಈ ರಸ್ತೆ ವ್ಯವಸ್ಥೆಯನ್ನು ಸಮರ್ಪಕವಾಗಿ ಈ ಭಾಗಕ್ಕೆ ಜೋಡಿಸಿದಲ್ಲಿ ಗರಿಷ್ಠ ಆರ್ಥಿಕ ಲಾಭವನ್ನು ಪಂಚಾಯತ್ ಗಳಿಸಬಹುದು.

ಮುಖ್ಯ ತೊಡಕೆಂದರೆ ರಸ್ತೆ ಬೇಕೆನ್ನುವ ಸ್ಥಳಗಳು ಕೃಷಿ ಪ್ರಧಾನ ಸ್ಥಳಗಳಲ್ಲಿರುವುದರಿಂದ ಅವುಗಳು ಖಾಸಗಿ ಒಡೆತನದಲ್ಲಿರುವುದರಿಂದ ಈ ಎಲ್ಲಾ ಅಂಶಗಳಿಂದ ಇಲ್ಲಿನ ಅಭಿವೃದ್ಧಿಗೆ ಹಿನ್ನಡೆಯುಂಟಾಗಿದೆ. ಭೂ ಒಡೆಯರನ್ನು ಮನ ಒಲಿಸಿ ಯಶಸ್ಸು ಪಡೆಯಲು ಸಾಧ್ಯವಿದೆ.

**ಗ್ರಾಮ ಸ್ವರಾಜ್ಯದ ಸಾಕಾರ ರಸ್ತೆಯಿಂದ ಪರಿಹಾರ :**

ಆಂಗ್ಲರು ರಾಷ್ಟ್ರದ ಆಡಳಿತವನ್ನು ನಮ್ಮ ಕೈಗೆ ಒಪ್ಪಿಸಿದ ಮೇಲೆ ಸಮಗ್ರ ದೇಶದ ಅಭಿವೃದ್ಧಿ ದೃಷ್ಟಿಯಿಂದ ಕೇಂದ್ರ ಸರಕಾರವು ಪಂಚವಾರ್ಷಿಕ ಯೋಜನೆಯನ್ನು ಸ್ವೀಕರಿಸಿ ಇದೀಗ ಒಂಬತ್ತನೇ ವರುಷಕ್ಕೆ ಕಾಲಿರಿಸುತ್ತಿದ್ದೇವೆ.

ಈ ನಿಟ್ಟಿನಲ್ಲಿ ನಮ್ಮ ಗ್ರಾಮದ ಮುಖ್ಯವಾಗಿ ರಸ್ತೆಗಳ ಕುರಿತು ಅವಲೋಕಿಸುವಾಗ ನಾವು ಕಲ್ಪಿಸಿಕೊಂಡಂತೆ ಗ್ರಾಮಗಳು ರಸ್ತೆ ಸಂಪರ್ಕವಿಲ್ಲದೆ ಬಹಳಷ್ಟು ಹಿಂದಿಳುದಿವೆ ಎಂಬುದನ್ನು ವಿಷಾದಪೂರ್ವಕವಾಗಿ ಹೇಳಲೇಬೇಕಾಗಿದೆ.

ಯಾವುದೇ ಸ್ಥಳಕ್ಕೆ ಮೌಲ್ಯತೆಯಾಗಲಿ, ಕೃಷಿಗೆ ಪ್ರಾಧಾನ್ಯತೆಯಾಗಲಿ, ವಾಣಿಜ್ಯವಾಗಲಿ ವಿಕಸನಗೊಳ್ಳುವುದು ರಸ್ತೆಯಿಂದ ಮಾತ್ರ ಸಾಧ್ಯ.

ಮುಖ್ಯ ರಸ್ತೆಗಳನ್ನು ಹೊರತುಪಡಿಸಿದರೆ ಮಂಜೇಶ್ವರ ಪಂಚಾಯತ್‌ನ ಅನೇಕ ಗ್ರಾಮಾಂತರ ಪ್ರದೇಶಗಳು ರಸ್ತೆ ಸೌಲಭ್ಯದಿಂದ ವಂಚಿತವಾಗಿ ಅಸ್ಪೃಶ್ಯ ಕ್ಷೇತ್ರಗಳಾಗಿ ಉಳಿದುಕೊಂಡಿದೆ.

ಅಭಿವೃದ್ಧಿ ಎಂಬುದು ಕೇವಲ ಪೇಟೆಗೆ ಮಾತ್ರ ಸೀಮಿತಗೊಂಡು ಪೇಟೆಯಿಂದ ಗ್ರಾಮ-ಅಂತರಗೊಂಡರೆ ಈ ಸಮಸ್ಯೆಯು ಪಂಚಾಯತ್ ಮಾತ್ರವಲ್ಲ ಇಡೀ ದೇಶಕ್ಕೆ ಅನ್ವಯಗೊಳ್ಳುತ್ತದೆ.

ಒಂಬತ್ತನೇ ಜನಕೀಯ ಪಂಚವಾರ್ಷಿಕ ಯೋಜನೆಗೆ ತಕ್ಕ ಪ್ರಾಶಸ್ತ್ಯವು ದೊರಕಿ ಪರಿಪೂರ್ಣವಾಗಬೇಕಾದರೆ ಗ್ರಾಮ-ಪೇಟೆಗೆ ಸಂಚಾರ ಯೋಗ್ಯ ರಸ್ತೆಯ ನಿರ್ಮಾಣಕ್ಕೆ ಪ್ರತಮ ಆದ್ಯತೆ ಕೊಡಬೇಕು. ಇದರಿಂದ ಮಾತ್ರವೇ ಗ್ರಾಮ ಸ್ವರಾಜ್ಯದ ಕಲ್ಪನೆ ಸಾಕಾರಗೊಳ್ಳುವುದು.

## ವಿದ್ಯುಚ್ಛಕ್ತಿ

ಕೇರಳ ರಾಜ್ಯದ ರಚನೆಯಾದ ಬಳಿಕ ನಮ್ಮ ಈ ಕರಾವಳಿ ಪಂಚಾಯತಿನಲ್ಲಿ ವಿದ್ಯುಚ್ಛಕ್ತಿಯ ಬಳಕೆ ಆರಂಭವಾಯಿತು. ಈ ರಾಜ್ಯದ ಉತ್ತರ ತುದಿಯಲ್ಲಿರುವ ಭಾಗವಾಗಿರುವುದರಿಂದ ಮತ್ತು ಸಮೀಪವಾಗಿ ಯಾವುದೇ ವಿದ್ಯುಚ್ಛಕ್ತಿ ಯೋಜನೆಗಳು ಇಲ್ಲದಿದ್ದುದರಿಂದ ನಮಗೆ ವಿದ್ಯುಚ್ಛಕ್ತಿ ಕ್ಷಾಮ ಸದಾಕಾಲ ಬಾಧಿಸಿದೆ. ಇದರಿಂದಾಗಿ ಇಲ್ಲಿಯ ಕೃಷಿ, ಕೈಗಾರಿಕೆ ಮತ್ತು ಸಾಮಾಜಿಕ ಅನುಕೂಲತೆಗಳಲ್ಲಿ ಇಲ್ಲಿಯ ಜನರು ಸಮೃದ್ಧರಾಗಲು ಇದುವರೆಗೆ ಸಾಧ್ಯವಾಗಲಿಲ್ಲ. ಆದುದರಿಂದ ಪೂರಕ ಯೋಜನೆಗಳು ಬೇಕಾಗಿವೆ.

| | | |
|---|---|---|
| ಪ್ರಕೃತ ನಮ್ಮ ಪಂಚಾಯತಿನಲ್ಲಿರುವ ಬಳಕೆದಾರರು 4340 | ಗೃಹ ಬಳಕೆದಾರರು | 3300 |
| | ವ್ಯಾಪಾರ ಬಳಕೆದಾರರು | 810 |
| | ಕೈಗಾರಿಕಾ ಬಳಕೆದಾರರು | 80 |
| | ಕೃಷಿ ಬಳಕೆದಾರರು | 150 |
| ಪ್ರಕೃತ ನಮ್ಮ ಪಂಚಾಯತ್‌ಗೆ ಬೇಕೂರು ಸಬ್ ಸ್ಟೇಶನ್‌ನಿಂದ ವಿದ್ಯುತ್ ಪೂರೈಸಲಾಗುತ್ತದೆ. | | |
| ಪ್ರಕೃತ ಈ ಪಂಚಾಯತಿನಲ್ಲಿ ವಿದ್ಯುತ್ ಪಡೆಯುವರೇ ಕಾದಿರುವವರು 832 | ಸಾಮಾನ್ಯ | 750 |
| | OTP | 2 |
| | OYEC | 80 |
| ಪ್ರಕೃತ ಈ ಪಂಚಾಯತಿನಲ್ಲಿ 4 ಹರಿಜನ ಕೊಲನಿಗಳು ಪೂರ್ಣವಾಗಿ ವಿದ್ಯುತ್ ಸೌಲಭ್ಯ ಕೊಡಲಾಗಿದೆ | ವಿದ್ಯುತ್ ಪಡೆದ ಕುಟುಂಬಗಳು | 84 |
| | ಸೌಜನ್ಯವಾಗಿ ವಿದ್ಯುತ್ ಪಡೆದವರು | 72 |
| | ಹಣಕೊಟ್ಟು ವಿದ್ಯುತ್ ಪಡೆದವರು | 12 |

ಪ್ರಕೃತ ಈ ಪಂಚಾಯತಿನಲ್ಲಿ 29 Trawnsformer ಗಳು ಬಳಕೆಯಲ್ಲಿವೆ. ಪ್ರಕೃತ ಬೀದಿ ದೀಪಗಳಿಗೆ 80 Wats ಟ್ಯೂಬ್‌ಗಳು ಮಾತ್ರ ಬಳಕೆಯಾಗುತ್ತವೆ. ಪಂಚಾಯತು ರೂ. 3696.50ನ್ನು ಪ್ರತಿ ತಿಂಗಳು ಇದಕ್ಕಾಗಿ ವ್ಯಯಿಸುತ್ತದೆ.

### ಅವಶ್ಯಕತೆಗಳು

1. ಪಂಚಾಯತಿನ ಯಾವ ವಾರ್ಡಿಗೂ ಪೂರ್ಣವಾಗಿ ವಿದ್ಯುತ್ ಸೌಲಭ್ಯ ದೊರೆತಿಲ್ಲ. ಆದುದರಿಂದ ಎಲ್ಲಾ ಮನೆಗಳಿಗೂ, ಸಂಸ್ಥೆಗಳಿಗೂ ವಿದ್ಯುತ್ ಸೌಲಭ್ಯ ದೊರಕಬೇಕು.
2. ವಿದ್ಯುಚ್ಛಕ್ತಿ ಆಫೀಸುಗಳಲ್ಲಿ ಬೇಕಾದ ಉದ್ಯೋಗಸ್ತರ ಕೊರತೆ ವಿದ್ಯುತ್ ಕನೆಕ್ಷನ್ ಕೊಡಲು ಬೇಕಾದ ವಸ್ತುಗಳ ಕೊರತೆಗಳನ್ನು ನೀಗಿಸಬೇಕು.
3. 9000 ವಿದ್ಯುತ್ ಸಂಪರ್ಕವಿರುವ ಮಂಜೇಶ್ವರ ಕಚೇರಿಯನ್ನು Major Section ಆಗಿ ಭಢ್ತಿಗೊಳಿಸಬೇಕು.
4. ಹಳೆಯ ಮರದ ಕಂಬಗಳನ್ನು ಬದಲಾಯಿಸಿ ಕಾಂಕ್ರೀಟು ಕಂಬಗಳನ್ನು ಹಾಕಬೇಕು.
5. ಕೆಳಗಿನ ಪ್ರದೇಶಗಳಿಗೆ ಟ್ರಾನ್ಸ್‌ಫಾರ್ಮರನ್ನು ಒದಗಿಸಬೇಕು.
   1. ಗೇರುಕಟ್ಟೆ ಜಂಕ್ಷನ್
   2. ಕುಂಜತ್ತೂರು ಪದವು
   3. ಅಂಗಡಿ ಪದವು
   4. ಬಂಗ್ರ ಮಂಜೇಶ್ವರ ಪೆಲಪ್ಪಾಡಿ ಮಜಲು
   5. ಪೊಸೋಟು
   6. ಪಾಪಿಲ
   7. ಹೊಸಬೆಟ್ಟು (ಬೊಬ್ಬರ್ಯ ಕಲ್ಲು)

8. ಮನುಷ್ಯನ ಅತೀ ಅಗತ್ಯದ ಅವಶ್ಯಕತೆಯಾಗಿ ವಿದ್ಯುಚ್ಛಕ್ತಿ ಬಂದಿರುತ್ತದೆ. ಕೃಷಿ, ವ್ಯವಸಾಯ ರಂಗದಲ್ಲಿ ಜನರ ಅಭಿವೃದ್ಧಿ ಆಗಬೇಕಾದರೆ ನೀರು, ವಿದ್ಯುಚ್ಛಕ್ತಿ ಕೊರತೆಯಾದರೆ ಆ ಪ್ರದೇಶವು ನಿರ್ಜೀವವಾಗುವುದು. ಇದರಿಂದಾಗಿ ನೀರಿನ ವ್ಯವಸ್ಥೆಯನ್ನು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಹೆಚ್ಚಿಸಬಹುದು. ಮಂಜೇಶ್ವರ ಗ್ರಾಮ ಪಂಚಾಯತಿನಲ್ಲಿ ವಿದ್ಯುತ್‌ಚ್ಛಕ್ತಿಯಿಂದ ಕೈಗಾರಿಕೆ, ಕೃಷಿಯನ್ನು ಉತ್ತಮ ಮಟ್ಟಕ್ಕೆ ಅಭಿವೃದ್ಧಿಪಡಿಸಲು ಸಾಧ್ಯವಿದೆ. ಕೃಷಿಕರಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಪೂರೈಸುವುದು ಅತೀ ಅಗತ್ಯ.

9. ವಿದ್ಯುತ್ ಸಂಪರ್ಕ ಇಲ್ಲದ ಪ್ರದೇಶಕ್ಕೆ Solar Street light ನ್ನು ಸ್ಥಾಪಿಸುವ ಸಂವಿಧಾನವನ್ನು ಉಂಟು ಮಾಡುವುದು.

10. ಪಂಚಾಯತು ಪ್ರದೇಶದಲ್ಲಿ ಪ್ರಕೃತ Street light ಇಲ್ಲದ ಮಾರ್ಗಗಳಲ್ಲಿ Street light ನಿರ್ಮಾಣ ಮಾಡುವುದು.

## ಇಂಧನ

ಮಂಜೇಶ್ವರ ಪಂಚಾಯತಿನ ಇಂಧನ ಸಮಸ್ಯೆಯನ್ನು ಪೂರ್ಣವಾಗಿ ಪರಿಹರಿಸುವುದಕ್ಕಾಗಿ ಸೌರಶಕ್ತಿ ಮತ್ತು ಗಾಳಿಶಕ್ತಿಯನ್ನು ಉಪಯೋಗಿಸಬೇಕಾಗಿದೆ. ಇದಕ್ಕಾಗಿ ಕರಾವಳಿ ಪ್ರದೇಶವನ್ನು ಬಳಸಬಹುದಾಗಿದೆ. ಈ ಕಾರ್ಯಕ್ರಮಕ್ಕಾಗಿ ಈ ಕೆಳಗಿನ ವ್ಯವಸ್ಥೆಗಳನ್ನು ಬಳಸಬಹುದಾಗಿದೆ. ಇದಕ್ಕಾಗಿ Anertನ ಒಂದು Sub-unit ಇಲ್ಲಿಗೆ ಬೇಕಾಗಿದೆ.

ಸಮುದ್ರ ಕರಾವಳಿಯಲ್ಲಿ 110 KV ಗೋಪುರ ರಚಿಸಿ ಸೌರಶಕ್ತಿ ಪ್ಲೇಟು ಮತ್ತು ಗಾಳಿ ಬೀಸಣಿಕೆಗಳನ್ನು ಸಿಕ್ಕಿಸಿ ಸೌರಶಕ್ತಿಯನ್ನು ಮತ್ತು ಗಾಳಿಶಕ್ತಿಯನ್ನು ಪ್ರಕೃತಿಯಿಂದ ಪಡೆಯಬಹುದು.

ಈ ರೀತಿ ಪಡೆದ ಶಕ್ತಿಯಿಂದ 250 M.V. ಜನರೇಟರಿನ ಮೂಲಕ ವಿದ್ಯುಚ್ಛಕ್ತಿ ಪಡೆದು ಟ್ರಾನ್ಸ್‌ಫಾರ್ಮರಿನ ಮೂಲಕ ಸಂಗ್ರಹಿಸಿ, ಕೈಗಾರಿಕೆಗಳಲ್ಲಿ ಪರಿಸರದ ಹಳ್ಳಿಗಳಿಗೂ ವಿತರಣೆ ಮಾಡಬಹುದು.

ಸೌರಶಕ್ತಿಯಿಂದ ದೊರಕುವ ವಿದ್ಯುತ್‌ಶಕ್ತಿಯನ್ನು ಬ್ಯಾಟರಿಗಳ ಮೂಲಕ ಸಂಗ್ರಹಿಸಿ ಬೆಳಕು ಮತ್ತು ಕೃಷಿ ಮತ್ತು ಕೈಗಾರಿಕೆಗೂ ಉಪಯೋಗಿಸಬಹುದಾಗಿದೆ. ಇದಕ್ಕೆ ತೀವ್ರವಾದ ಪ್ರಚಾರ ಕಾರ್ಯ, ಆರ್ಥಿಕ ಸಹಾಯದ ಅಗತ್ಯ ಇದೆ.

ಈ ವ್ಯವಸ್ಥೆಗೆ ಹೂಡಲಾದ ಮೂಲಧನವು ದೀರ್ಘಕಾಲದ ಹೂಡಿಕೆಯಾಗಿದೆ. ಆದುದರಿಂದ ವಾಣಿಜ್ಯ ಉದ್ದೇಶಗಳನ್ನು ಪೂರೈಸಲು ಪಂಚಾಯತು ಯೋಜನೆಗಳನ್ನು ಮಾಡಬಹುದಾಗಿದೆ.

ಸ್ವಯಂ ಉದ್ಯೋಗ ನಿರ್ವಹಣೆಗಾಗಿ ಈ ಯೋಜನೆಯ ವಿದ್ಯುತ್ ಉಪಯೋಗಿಸಬಹುದಾಗಿದೆ. ಸಣ್ಣ ಕೈಗಾರಿಕೆಗಳು ಈ ವ್ಯವಸ್ಥೆಯ ಸಹಾಯದಿಂದ ಉತ್ತೇಜಕವಾಗಿ ಬೆಳೆಯಬಹುದಾಗಿದೆ.

ಇದಕ್ಕೆ ಬೇಕಾದ ಸಿದ್ಧಗೋಪುರವನ್ನು BHELನ ಮೂಲಕ ಪಡೆಯಬಹುದಾಗಿದೆ. ಸಾರ್ವತ್ರಿಕ ಪ್ರಚಾರ ಮತ್ತು ಹೊಣೆಗಾರಿಕೆಯಿಂದ ಇದನ್ನು ನಿರ್ವಹಿಸಬಹುದಾಗಿದೆ.

### ವಿವಿಧ ರೀತಿ ಇಂಧನ ಬಳಕೆದಾರರು

ಈ ಪಂಚಾಯತಿನ ಒಟ್ಟು ಮನೆಗಳು 5500

| ಕ್ರ.ಸಂ. | ಇಂಧನ ವಿವರಗಳು | ಬಳಕೆದಾರರು ಮನೆಗಳು |
|---|---|---|
| 1. | ಕಟ್ಟಿಗೆ ಒಲೆ | 5000 |
| 2. | ಗೇಸ್ (LPG) | 440 |
| 3. | ಸೀಮೆ ಎಣ್ಣೆ ಸ್ಟೌ | 1100 |
| 4. | ಹೊಗೆ ಇಲ್ಲದ ಒಲೆ | 1100 |
| 5. | ವಿದ್ಯುತ್ ಒಲೆ | 110 |
| 6. | ಗೋಬರ್ ಗೇಸ್ | 4 |
| 7. | ಸೌರಶಕ್ತಿ ಒಲೆ | 4 |

ಕಟ್ಟಿಗೆಗೆ ಬಳಕೆದಾರರ ಸಂಖ್ಯೆ ಅತೀ ಹೆಚ್ಚಾಗಿದೆ. ಆದುದರಿಂದ ಮುಂದಿನ ವರ್ಷಗಳಲ್ಲಿ ಕಟ್ಟಿಗೆಯ ಅಭಾವ ತಲೆದೋರುವುದು ಸಹಜವಾಗಿದೆ. ಕಾಡುಗಳ, ಮರಮಟ್ಟುಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುವುದರಿಂದ ಜನರು ಇತರ ಇಂಧನ ಮೂಲಗಳನ್ನು ತಮ್ಮ ಅವಶ್ಯಕತೆಗಳಿಗೆ ಉಪಯೋಗಿಸುವುದು ಅಗತ್ಯವಾಗಿದೆ. ಇದಕ್ಕೆ ಸರಿಯಾದ ಇತರ ಇಂಧನದ ತಿಳುವಳಿಕೆಯನ್ನು ಜನರಲ್ಲಿ ಮೂಡಿಸುವುದು ಅತೀ ಅಗತ್ಯ. HP Gasನ ವಿತರಣಾ ಕೇಂದ್ರ ಮಂಜೇಶ್ವರದಲ್ಲಿಯೇ ಸ್ಥಾಪಿಸಿ ಕ್ಲಪ್ತ ಸಮಯಕ್ಕೆ ಸರಿಯಾಗಿ ಸಿಗುವಂತೆ ಮಾಡುವುದು. ಅಲ್ಲದೆ LPG Gas ಅಪೇಕ್ಷಿತರಿಗೆ ಕೂಡಲೇ ಸಿಗುವಂತೆ ಮಾಡುವುದು.

ಹೊಗೆ ಇಲ್ಲದ ಒಲೆಯನ್ನು (Anert)ನ ಸಹಾಯದಿಂದ ಎಲ್ಲಾ ಮನೆಯವರಿಗೆ ಸೌಜನ್ಯ ರೀತಿಯಲ್ಲಿ ಸಿಗುವಂತೆ ಮಾಡುವುದು.

## 5-6 ಮಾರ್ಕೆಟಿಂಗ್ (ಮಾರುಕಟ್ಟೆ)

ಪ್ರಕೃತಿ ಸಂಪತ್ತು, ಕೈಗಾರಿಕೆ, ಕೃಷಿ ಮೊದಲಾದ ಸಂಪನ್ಮೂಲಗಳನ್ನು ಸಂಗ್ರಹಿಸಿ, ಜನಕೇಂದ್ರ ಸ್ಥಳಗಳಲ್ಲಿ ಮಾರುಕಟ್ಟೆಯಲ್ಲಿ ಮಾರಿ ಉತ್ಪಾದನೆಯನ್ನು ಸ್ವೀಕರಿಸಿ ಜೀವನ ಮಾಡುವುದು ಉತ್ತಮ ಪದ್ಧತಿಯಾಗಿರುತ್ತದೆ. ಹಿಂದಿನ ಕಾಲದಲ್ಲಿ ಆರ್ಥಿಕಸ್ಥಿತಿ ಉತ್ತಮವಿರಲಿಲ್ಲ. ಆಗ ಕೇವಲ ವಸ್ತುಗಳನ್ನೇ ಬದಲಾಯಿಸಿಕೊಂಡು (Barter System) ತಮ್ಮ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದು ಪದ್ಧತಿ ಇತ್ತು. ನಂತರದ ಕಾಲದಲ್ಲಿ ಮಧ್ಯವರ್ತಿಗಳು (ವ್ಯಾಪಾರಿಗಳು) ಸಾಂಕೇತಿಕ ಲಾಭದಲ್ಲಿ ವ್ಯಾಪಾರವನ್ನು ಮಾಡ ಜನರ ಅವಶ್ಯಕತೆಗಳ್ನು ಪೂರೈಸುತ್ತಿದ್ದರು. ಈಗ ಈ ಮಧ್ಯವರ್ತಿಗಳ ಹಾವಳಿ ತುಂಬಾ ಹೆಚ್ಚಾಗಿರುತ್ತದೆ. ಲಾಭವನ್ನು ಅತೀ ಹೆಚ್ಚು ತಾವೇ ಪಡೆದು ನೆಟ್ಟು ಬೆಳೆಯಿಸಿದ ಕೃಷಿಕನಿಗೆ ತೀರಾ ಕಡಿಮೆ ಹಣ ಸಿಗುವುದು. ಅವನ ಜೀವನ ದುಸ್ತರವಾಗಿರುವುದು ಕಂಡು ಬರುತ್ತದೆ.

ಕೃಷಿಕನಿಗೆ ಸರಿಯಾದ ಮಾರುಕಟ್ಟೆ ಇದ್ದರೆ ಆತನೇ ತನ್ನು ಉತ್ಪಾದನೆಗಳನ್ನು ಮಾರಿ, ಹಣ ಪಡೆದು ಉತ್ತಮ ಜೀವನ ನಡೆಯಿಸಬಹುದು. ಮಧ್ಯವರ್ತಿಗಳ ಹಾವಳಿ ತಪ್ಪಿಸಬಹುದು. ಸರಕಾರದ ಮೇಲ್ನೋಟದಲ್ಲಿ ಈಗ ಇರುವ ಹಲವಾರು ಸಹಕಾರಿ ರಂಗವನ್ನು ಇನ್ನಷ್ಟು ಅಭಿವೃದ್ಧಿಗೊಳಿಸಿ ಕೃಷಿಕ, ಯಾ ವ್ಯವಸಾಯಗಾರ ತಾನೇ ವಸ್ತುಗಳನ್ನು ಮಾರುವ ಪರಿಸ್ಥಿತಿಯನ್ನು ಉಂಟು ಮಾಡುವುದು ಅತೀ ಅಗತ್ಯ. ಮಾರುವವನಿಗೆ ಪಡಕೊಳ್ಳುವವನಿಗೂ ಇದರಿಂದ ಲಾಭಕರವಾಗುವುದು. ಉತ್ತಮ ವಸ್ತುಗಳನ್ನು ಸರಿಯಾದ ಸಮಯಕ್ಕೆ ಮಾರಲು ಕೃಷಿಕನಿಗೆ, ವ್ಯವಸಾಯಿಗೆ ಸಹಾಯವನ್ನು ಸಹಕಾರ ರಂಗದಲ್ಲಿ ಮಾಡಬಹುದು. ನಮ್ಮ ಮಂಜೇಶ್ವರ ಗ್ರಾಮ ಪಂಚಾಯತಿನ ವಿವಿಧ ವಾರ್ಡುಗಳಲ್ಲಿ ಮುಖ್ಯ ಮತ್ತು ಆ ವಾರ್ಡುಗಳ ಅವಶ್ಯಕತೆಗಳನ್ನು ಈ ಕೆಳಗೆ ಸಮಸ್ಯೆಗಳನ್ನು ಮತ್ತು ಪರಿಹಾರಗಳನ್ನು ಸೂಚಿಸಲಾಗಿದೆ.

ಮಂಜೇಶ್ವರ ಗ್ರಾಮ ಪಂಚಾಯತಿನ ಕೆಳಗಿನ ಸ್ಥಳಗಳಲ್ಲಿ ಸಹಕಾರೀ ಮಾರುಕಟ್ಟೆಗಳ

1. ಸಹಕಾರಿ ವಿಭಾಗದಲ್ಲಿ ಒಂದು Shopping Complex ಹೊಸಗಂಡಿಯಲ್ಲಿ ಏರ್ಪಡಿಸುವುದು
2. ತರಕಾರಿ ವಸ್ತುಗಳನ್ನು ಪಡೆಯುವುದಕ್ಕಾಗಿ ಹಾಗೂ ಮಾರುವುದಕ್ಕಾಗಿ ಮಾರ್ಕೇಟು ಏರ್ಪಾಡು ಮಾಡುವುದು.
3. ಪ್ರಧಾನ ಬೆಳೆಯಾದ ತೆಂಗು, ಕೊಬ್ಬರಿಗೆ ಸಂಸ್ಕರಣ ಕೇಂದ್ರವನ್ನು ಸ್ಥಾಪಿಸುವುದು.
4. ಗೇರುಬೀಜದ ಸಹಕಾರಿ ಮಾರುಕಟ್ಟೆಯನ್ನು ಸ್ಥಾಪಿಸುವುದು.
5. ಹೊಸಂಗಡಿ, ಹೊಸಬೆಟ್ಟು, ಕುಂಜತ್ತೂರು, ಮಾಡದಲ್ಲಿ ಮೀನು ಮಾರ್ಕೆಟು ಮಾಡುವುದು.
6. ಮಾಂಸ ವಿತರಣಾ ಕೇಂದ್ರವನ್ನು ಹಾಗೂ ಮಾಂಸ ಮಾಡುವ ಕೇಂದ್ರವನ್ನು ಪಂಚಾಯತಿನ ಅನುಮತಿಯಿಂದ ಮಾಡುವುದು
7. ಹೊಸಂಗಡಿಯು ದೈನಂದಿನ, ಹತ್ತಿರದ ಪ್ರದೇಶಗಳಾದ ಮಂಗಳೂರು, ಪುತ್ತೂರು, ಕಾಸರಗೋಡು, ಬಂಗ್ರ ಮಂಜೇಶ್ವರ ಕಡೆಗೆ ಸಾವಿರಾರು ಜನರು ವ್ಯವಹರಿಸುವ ಕೇಂದ್ರ ಸ್ಥಳವಾಗಿರುತ್ತದೆ. ಆದುದರಿಂದ ಹೊಸಂಗಡಿಯಲ್ಲಿ ಬಸ್‌ಸ್ಟೇಂಡ್ ಮತ್ತು ಶೋಪ್ಪಿಂಗ್ ಕೊಂಪ್ಲೆಕ್ಸ್ ಹಾಗೂ ಮಾರ್ಕೇಟು ಸ್ಥಾಪನೆ ಅತೀ ಅಗತ್ಯ.

ಮಂಜೇಶ್ವರ ಗ್ರಾಮ ಪಂಚಾಯತಿನ ಕೆಳಗಿನ ಸ್ಥಳಗಳಲ್ಲಿ ಸಹಕಾರೀ ಮಾರುಕಟ್ಟೆಗಳ ಸ್ಥಾಪನೆ ಅತೀ ಅಗತ್ಯ

ಹೊಸಂಗಡಿ : ಮೀನು, ತರಕಾರಿ, ಅಡಿಕೆ, ತೆಂಗು ಮೊದಲಾದುವುಗಳಿಗೆ ಮಾರುಕಟ್ಟೆ ನಿರ್ಮಾಣ ಅಗತ್ಯವಾಗಿರುತ್ತದೆ.

ಮಂಜೇಶ್ವರ : ರೈಲ್ವೇ ನಿಲ್ದಾಣ ಯಾ NH- 17 ರ ಸಮೀಪದಲ್ಲಿ ಮೀನು ತರಕಾರಿ ಅಡಿಕೆ ತೆಂಗು ಮಾರುಕಟ್ಟೆ ನಿರ್ಮಾಣ

ಕುಂಜತ್ತೂರು ಶಾಲೆಯ ಬಳಿ : ಮೀನು ತರಕಾರಿ ಅಡಿಕೆ ತೆಂಗು ಮಾರುಕಟ್ಟೆ ಅಗತ್ಯವಾಗಿರುತ್ತದೆ

ಈ ಸಹಕಾರಿ ಮಾರುಕಟ್ಟೆಗಳಲ್ಲಿ ಜನರ ನಿತ್ಯ ಉಪಯೋಗಿ ವಸ್ತುಗಳನ್ನು ಮಾರುವ ಸೌಕರ್ಯವೂ ಕೂಡಾ ಅಗತ್ಯವಾಗಿರುತ್ತದೆ. ಮಂಜೇಶ್ವರವು ಮಿನಿಬಂದರಾಗಿ ರೂಪುಗೊಂಡಲ್ಲಿ ಸಹಕಾರಿ ಮಾರುಕಟ್ಟೆಗಳಿಗೆ ತುಂಬಾ ಅವಕಾಶಗಳಿವೆ ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು.

ಸಹಕಾರಿ ರಂಗದ ಕ್ರಮದಲ್ಲಿ (ಕೆಲವು ವ್ಯಕ್ತಿಗಳು ಸೇರಿಯೊ ಅಥವಾ ಪ್ರತೀ ವಾರ್ಡಿನ ಪ್ರಾತಿನಿಧ್ಯವಿದ್ದು ಸಂಘಟನೆ) ಕೃಷಿ ಉತ್ಪನ್ನಗಳು ಭತ್ತ, ಅಡಿಕೆ, ತೆಂಗು, ತರಕಾರಿ ಹಾಗೂ ಪ್ರಾಕೃತಿಕ ಸಂಪತ್ತು, ಮೀನು, ಇತ್ಯಾದಿಗಳನ್ನು ಮಾರುವರೇ ಸಹಕಾರಿ ಮಾರುಕಟ್ಟೆಗಳನ್ನು ಕೆಲವು ಕಡೆಗಳಲ್ಲಿ ಸ್ಥಾಪನೆಗೊಳ್ಳಬೇಕು. ಮಾರುಕಟ್ಟೆಗಳಲ್ಲಿ ತಂದ ವಸ್ತುಗಳ ಕೆಲದಿನ ಮಟ್ಟಿಗಾದರೂ ಹಾಳಾಗದಂತೆ ನೋಡಿಕೊಳ್ಳುವ ವ್ಯವಸ್ಥೆ ಶೈತ್ಯಾಗಾರ ಬಹಳ ಅಗತ್ಯವಾಗಿರುತ್ತದೆ.

# ವಸತಿ, ಭವನ ನಿರ್ಮಾಣ ಸಾಮಾಜಿಕ ಕ್ಷೇಮ

ಮಂಜೇಶ್ವರ ಪಂಚಾಯತಿನ ವಿಶಿಷ್ಟವಾದ ಜನವಾಸ ಪದ್ಧತಿಯು ಒಂದು ಸೋಜಿಗದ ಸಂಗತಿಯಾಗಿದೆ. ಕೆಲವು ಪ್ರದೇಶಗಳಲ್ಲಿ ಜನವಾಸವು ನಿಬಿಡವಾಗಿದೆ. ಕೆಲವು ಪ್ರದೇಶಗಳಲ್ಲಿ ಜನವಾಸವು ಕನಿಷ್ಠವಾಗಿದೆ. ಬಡಾಜೆ, ಕೀರ್ತೇಶ್ವರ, ಕುಂಜತ್ತೂರು, ಪದವು ಬೊಳುಡೆ ಪ್ರದೇಶದಲ್ಲಿ ಜನವಾಸ ವಸತಿಯೂ ವಿರಳವಾಗಿದೆ. ಇಲ್ಲಿ ಹೇರಳವಾದ ಸಮತಟ್ಟಾದ ಪ್ರದೇಶಗಳು, ಮನೆ ನಿರ್ಮಾಣಕ್ಕೆ ಇವೆ. ಆದರೆ ಈ ಪ್ರದೇಶದಲ್ಲಿ ಜನವಾಸವು ವಿರಳವಾಗಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಇಲ್ಲಿ ಜೀವಿಸಲು ಅವಶ್ಯವಾದ ಸೌಕರ್ಯಗಳು ಕುಡಿಯುವ ನೀರು, ಜನಸಂಚಾರಕ್ಕೆ ಸಾಮಾನು ಸಾಗಣೆಗೆ ರಸ್ತೆ ಸೌಕರ್ಯಗಳು ಇಲ್ಲವಾಗಿದೆ. ಉತ್ತಮ ಸೌಕರ್ಯಗಳಿರುವ ಪಟ್ಟಣಗಳಲ್ಲಿ ಜನನಿವಾಸವು ನಿಬಿಡವಾಗಿದೆ. ಇಲ್ಲಿ ವಸತಿ ನಿರ್ಮಾಣಗಳ ಸಂಖ್ಯೆ ತೀವ್ರಗತಿಯಲ್ಲಿ ಏರಿ ಇಲ್ಲಿನ ಜನ ಸಂಖ್ಯೆ ಹೆಚ್ಚಿ ಉಸಿರು ಕಟ್ಟುವಂತಾಗಿದೆ. ಆಧುನಿಕ ಸೌಕರ್ಯವು ಇಲ್ಲಿ ದೊರಕುವುದೆಂಬ ನಂಬಿಕೆಯಿಂದ ಆಶಯದಿಂದ ಜನರು ತಮ್ಮ ಮೂಲ ವಸತಿ ವಿಕ್ರಮಿಸಿ ಈ ಪಟ್ಟಣದ ಕಡೆಗೆ ವಲಸೆ ಬಂದು ಚಿಕ್ಕ ಗೂಡುಗಳಂತೆ ಮನ ಕಟ್ಟಿಯಾದರೂ ವಾಸಮಾಡುತ್ತಾರೆ.

ಮಂಜೇಶ್ವರ ಪಂಚಾಯತಿನ ಜನ ಸಂಖ್ಯೆ 35,438

ಕುಟುಂಬಗಳ ಸಂಖ್ಯೆ 6223.

ಮನೆಗಳ ಸಂಖ್ಯೆ6075

ಸರಾಸರಿ ಒಂದು ಮನೆಯಲ್ಲಿ ನಾಲ್ಕು+2 ಆರು ಜನರಂತೆ ವಾಸಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ನಮ್ಮ ಪಂಚಾಯತಿನಲ್ಲಿ ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆಯಾಗಿದೆ. ಪ್ರತಿಯೊಂದು ಅವಿಭಕ್ತಗಳು 1:5ರಂತೆ ಬೇರೆ ಬೇರೆ ಕುಟುಂಬಗಳಾಗಿ ಬೇರ್ಪಡುತ್ತಾ ಬರುವಾಗ ವಸತಿ ಮನೆಗಳ ಆವಶ್ಯಕತೆ ಹೆಚ್ಚುತ್ತಾ ಹೋಗಿದೆ. ಮಂಜೇಶ್ವರ ಪಂಚಾಯತಿನಲ್ಲಿರುವ ಮನೆ ವಸತಿಗಳ ಸ್ಥಿತಿಗಳ ಕೋಷ್ಠಕ.

**ಕೋಷ್ಟಕ I**

| ವಾರ್ಡು ನಂಬ್ರ | ಹುಲ್ಲಿನ ಮನೆಗಳು | ಹಂಚಿನ ಮನೆಗಳು | ಟೆರೆಸ್ ಮನೆಗಳು | ಒಟ್ಟು ಮನೆಗಳು |
|---|---|---|---|---|
| I | 50 | 760 | 90 | 900 |
| II | 17 | 590 | 83 | 690 |
| III | 25 | 525 | 48 | 598 |
| IV | 40 | 600 | 25 | 665 |
| V | 10 | 777 | 70 | 857 |
| VI | 25 | 538 | 125 | 588 |
| VII | 20 | 410 | 80 | 510 |
| VIII | 50 | 605 | 60 | 715 |
| IX | 10 | 555 | 40 | 605 |
| X | - | 650 | 62 | 712 |
| XI | 12 | 550 | 58 | 620 |
| XII | 4 | 475 | 46 | 525 |

**ಕೋಷ್ಟಕ II**

**ಮನೆಗಳು ಸಾಮಾನ್ಯ ಸೌಕರ್ಯಗಳು**

| ಒಟ್ಟು ಮನೆಗಳ ಸಂಖ್ಯೆ | ಕಕ್ಕುಸು | | ವಿದ್ಯುತ್ | | ಬಾವಿ | | ಕಂಪೌಂಡ್ ಗೋಡೆ ಇಲ್ಲ |
|---|---|---|---|---|---|---|---|
| | ಇದೆ | ಇಲ್ಲ | ಇದೆ | ಇಲ್ಲ | ಇದೆ | ಇಲ್ಲ | |
| 6300 | 2300 | 4000 | 2800 | 3500 | 3000 | 3300 | 4100 |

## ಕೋಷ್ಟಕ 3 ಮನೆ ನಿರ್ಮಾಣ

| ವರ್ಷ | ಹುಲ್ಲು ಮನೆಗಳು | ಶತಮಾನ | ಹಂಚು ಮನೆಗಳು | ಶತಮಾನ | ಟೆರೇಸ್ ಮನೆಗಳು | ಶತಮಾನ | ಒಟ್ಟು ಮನೆಗಳು |
|---|---|---|---|---|---|---|---|
| 92.93 | 372 | 15% | 4871 | 86.59% | 383 | 6.79% | 5625 |
| 93.94 | 350 | 16% | 5080 | 86.83% | 420 | 7.17% | 5850 |
| 94.95 | 310 | 19% | 5190 | 86.50% | 500 | 8.33% | 6000 |
| 95.96 | 245 | 25% | 5433 | 86.23% | 622 | 9.87% | 6300 |

## ಕೋಷ್ಟಕ 4 ಭವನ ನಿರ್ಮಾಣ ಸಂಬಂಧ ವಿವರಗಳು

| ವಾರ್ಡು ನಂಬ್ರ | ಮನೆ ಆವಶ್ಯವಿರುವವರ ಸಂಖ್ಯೆ | ವಿವಿಧ ಉದ್ದೇಶಕ್ಕೆ ಅನುಮತಿಸಿದ ಮನೆಗಳು | ಪೂರ್ತೀಕರಿಸಿದ ಮನೆಗಳು | ಅನುಮತಿಸಿದ ಮನೆಗಳ ಸಂಖ್ಯೆ. |
|---|---|---|---|---|
| I | 80 | 14 | 13 | 66 |
| II | 42 | 7 | 7 | 35 |
| III | 72 | 21 | 20 | 51 |
| IV | 48 | 13 | 13 | 35 |
| V | 67 | 10 | 10 | 57 |
| VI | 84 | 16 | 15 | 68 |
| VII | 79 | 8 | 7 | 71 |
| VIII | 92 | 29 | 29 | 61 |
| IX | 61 | 1 | 1 | 60 |
| X | 48 | 3 | 3 | 45 |
| XI | 36 | 1 | 1 | 35 |
| XII | 15 | - | - | 15 |

9ನೇ ಜನಕೀಯ ಯೋಜನೆಯಲ್ಲಿ ಮಂಜೇಶ್ವರ ಪಂಚಾಯತಿನಲ್ಲಿ ಮಾಡಲಿಚ್ಛಿಸುವ ಕಾರ್ಯಗಳು:-

1. ವಸತಿ ನಿರ್ಮಾಣ ಸಂಸ್ಥೆಗಳ ಹಾಗೂ ವಸತಿ ರಹಿತ ಕುಟುಂಬಗಳ ಮಾಧ್ಯವರ್ತಿಯಾಗಿ ಪಂಚಾಯತು ಕಾರ್ಯ ನಿರ್ವಹಿಸಿ ಅತೀ ಹೆಚ್ಚಿನ ಪ್ರಮಾಣದಲ್ಲಿ ವಸತಿ ನಿರ್ಮಾಣ ಕಾರ್ಯದಲ್ಲಿ ಪ್ರವರ್ತರಾಗುವಿಕೆ. ಉದಾ: ಹೌಸಿಂಗ್ ಬೋರ್ಡ್ ಇತ್ಯಾದಿ.
2. ಪ್ರಸ್ತುತ ಪಂಚಾಯತ್ ಕಟ್ಟಡದಲ್ಲಿ ವಸತಿ ನಿರ್ಮಾಣ ಸಂಸ್ಥೆಯ ಒಂದು ವಿಭಾಗವನ್ನು ತೆರೆದು ಸಾರ್ವಜನಿಕರಿಗೆ ಮಾಹಿತಿ ಹಾಗೂ ಸಹಾಯ ಹಸ್ತ ನೀಡುವಿಕೆ.
3. ಕಟ್ಟಡ ನಿರ್ಮಾಣ ಸಾಮಾಗ್ರಿಗಳನ್ನು ಸರಳ ಬೆಲೆಯಲ್ಲಿ ವಸತಿ ನಿರ್ಮಾಪಕರಿಗೆ ಒದಗಿಸಲು ಪಂಚಾಯತು ಕ್ರಮಕೈಗೊಳ್ಳುವುದು.
4. ಕಡಿಮೆ ವೆಚ್ಚದ ನಿರ್ಮಾಣದ ಕುರಿತು ಪಂಚಾಯತು ಮಟ್ಟದಲ್ಲಿ ಸಾರ್ವಜನಿಕ ಸಭೆಗಳನ್ನು ಜರಗಿಸಿ ಜನರಿಗೆ ಮಾಹಿತಿಯನ್ನು ಒದಗಿಸುವುದು.
5. ಕಾರ್ಮಿಕರ ನೈಪುಣ್ಯದ ವರ್ಧನೆಗಾಗಿ ತರಬೇತಿ ಕೇಂದ್ರವನ್ನು ಪಂಚಾಯತ್ ಮಟ್ಟದಲ್ಲಿ ನಿರ್ಮಿಸುವುದು.
6. ತ್ವರಿತ ಗತಿಯಲ್ಲಿ ಲೈಸನ್ಸ್ ನೀಡಲು ಪಂಚಾಯತ್ ವಿಭಾಗದಲ್ಲಿ ಖಾತೆ ತೆರೆಯುವುದು ಹಾಗೂ ಶೀಘ್ರವಾಗಿ ಲೈಸನ್ಸ್ ದೊರಕಿಸಿ ಕೊಡುವುದು.
7. ಭೂರಹಿತರಿಗೆ ಹಾಗೂ ಬಡವರಿಗೆ ಈ ಪಂಚಾಯತು ಮಟ್ಟದಲ್ಲಿ 1099 ಮನೆಗಳನ್ನು ನಿರ್ಮಿಸಿಕೊಡಬೇಕು. ಈ ಕುರಿತು IRDP ಸರ್ವೆ ಆಗಿದೆ. ರಿಪೋರ್ಟ್ ಪಂಚಾಯತಿಗೆ ದೊರಕಿದೆ.
8. ದುಂದುವೆಚ್ಚದ ಮನೆ ನಿರ್ಮಾಣವನ್ನು ನಿಯಂತ್ರಿಸಲು ತೆರಿಗೆಯನ್ನು ಹೆಚ್ಚಿಸಿ ನಿಯಂತ್ರಿಸುವುದು. ಅಂತಹ ಮನೆಗಳಿಗೆ ಲೈಸನ್ಸ್ ಒದಗಿಸುವ ಮುನ್ನ ಪರಿಶೀಲಿಸುವುದು.
9. ಪರಂಪರಾಗತ ವಾಸ್ತು ಶಿಲ್ಪದ ಕಟ್ಟಡದ ನವೀಕರಣ, ಹಾಗೂ ಕಾಯ್ದುಕೊಳ್ಳಲು ಧನ ಸಹಾಯ ಒದಗಿಸುವುದು.
10. ಸರಕಾರಿ ಖಾಲಿ ನಿವೇಶನಗಳನ್ನು ಗುರುತಿಸಿ ಅಂತಹ ನಿವೇಶನಗಳಲ್ಲಿ ಗೃಹ ಕಾಲನಿಗಳ ನಿರ್ಮಾಣವನ್ನು ಕೈಗೆತ್ತಿಕೊಂಡು ವಸತಿ ಸಮಸ್ಯೆಯನ್ನು ನೀಗಿಸಲು ಪ್ರಯತ್ನಿಸುವುದು.

11. ಮನೆ ನಿವೇಶನಗಳ ಆವರಣದಲ್ಲಿ ಜೈವ ಸಸ್ಯಗಳ ಬೆಳವಣಿಗೆಗಾಗಿ ಪಂಚಾಯತ್ ಮೂಲಕ ವರ್ಷಕ್ಕೊಮ್ಮೆ ಜೈವಿಕ ಇಂದನ ಮೂಲ ಸಸ್ಯಗಳನ್ನು ಧಾರಾಳ ಪ್ರಮಾಣದಲ್ಲಿ ಪುಕ್ಕಟೆಯಾಗಿ ವಿತರಣೆ ಮಾಡುವುದು. ಗೊಬ್ಬರದ ಸಸ್ಯಗಳ ಬಳಕೆಗೂ ಪ್ರೋತ್ಸಾಹಿಸುವುದು.

12. ನಮ್ಮ ಪಂಚಾಯತಿನಲ್ಲಿರುವ ಸರಕಾರಿ ಸಂಸ್ಥೆಗಳಲ್ಲಿ ವರ್ಗಾವಣೆಯಾಗಿ ಬಂದ ನಾಕರರಿಗಾಗಿಯೇ ವಸತಿ ನಿರ್ಮಾಣ ಮಾಡುವಿಕೆ ಇದರಲ್ಲಿ ಆರೋಗ್ಯ ಕ್ಷೇತ್ರದಲ್ಲಿನ ವೈದ್ಯರು, ದಾದಿಯರಿಗೆ ಆದಷ್ಟು ಆಸ್ಪತ್ರೆಯ ಹತ್ತಿರದಲ್ಲೆ ಮನೆಗಳನ್ನು ನಿರ್ಮಿಸುವಿಕೆ.

13. 25,50 ವರ್ಷಗಳಿಂದ ಬಾಡಿಗೆ ಮನೆಯಲ್ಲಿ ಒಂದು ಕೋಣೆಯ ಮನೆಯಲ್ಲಿ ನರಳುವ ಬಡವರಿಗೆ Housing Colony ನಿರ್ಮಿಸಿ ವಸತಿ ಸೌಕರ್ಯ ಏರ್ಪಡಿಸುವುದು.

## ಸಾಮಾಜಿಕ ಕ್ಷೇಮ

ಮಂಜೇಶ್ವರ ಪಂಚಾಯತಿನಲ್ಲಿ ಸುಮಾರು 6350 ಕುಟುಂಬಗಳಿದ್ದು ಅದರಲ್ಲಿ ಸುಮಾರು 50% ಕುಟುಂಬಗಳು ಬಡತನ ರೇಖೆಗಿಂತ ಕೆಳಮಟ್ಟದಲ್ಲಿದೆ. I.R.D.P. Servy ನಡೆಸಿದರಲ್ಲಿ 2525 ಕುಟುಂಬಗಳನ್ನು ದಾರಿದ್ರ್ಯರೇಖೆಗಿಂತ ಕೆಳಮಟ್ಟದವರೆಂದು ಗುರುತಿಸಲಾಗಿದೆ. ಆದರೆ ಈ ಸಂಖ್ಯೆಪುನರ್‌ವಿಮರ್ಶಾ ಸರ್ವೆ ನಡೆಸಿದರೆ ಹೆಚ್ಚಾಗಬಹುದು. ಸುಮಾರು 40% ಜನರಿಗೆ ಸುದ್ಧವಾದ ಕುಡಿಯುವ ನೀರು ಪೂರೈಸುವಲ್ಲಿ ಶ್ರಮ ನಡೆಸಲಾಗುತ್ತಿದೆ. 2000 ಮನೆಗಳಿಗೆ ಕಕ್ಕಸು ಒದಗಿಸುವ ಯೋಜನೆ ಕೈಗಿತ್ತಿಗೊಳ್ಳಲಾಗಿದೆ. ಇದರಲ್ಲಿ S.C. S.T. ವಿಭಾಗಕ್ಕೆ ವಿಶೇಷ ಗಮನ ಕೊಡಲಾಗಿದೆ. ಮಕ್ಕಳಿಗೆ ಬೇಕಾದ Nutrition Food ಮಾವೇಲಿಗಳಲ್ಲಿ ಸಿಗುವಂತಿರಬೇಕು.

**I.R.D.P Servayಯ ಸಮಿಕ್ಷೆ**

| ಗ್ರಾಮ ಪಂಚಾಯತು Manjeshwar | I.R.D.P. Servay ನಡೆಸಿದ ಕುಟುಂಬಗಳ ಸಂಖ್ಯೆ | S.C. S.T. ವಿಭಾಗ | I.R.D.P ಸಹಾಯ ಧನ ಸಿಕ್ಕಿದ ಕುಟುಂಬಗಳು | ಇದರಲ್ಲಿ S.C. S.T. |
|---|---|---|---|---|
| M.J.R. | 2525 | 90 | 496 | 45 |

ಈ ಧನ ಸಹಾಯ ದೊರಕಿದುದರಿಂದ 226 ಕುಟುಂಬಗಳು ಮನೆ ಕಟ್ಟಿ ವಾಸ ಮಾಡಿ ದಾರಿದ್ರ್ಯ ರೇಖೆಯಿಂದ ಮೇಲಕ್ಕೆತ್ತಲ್ಪಟ್ಟಿದ್ದಾರೆ.

**ಸಾಮಾಜಿಕ ಕ್ಷೇಮ ಅಭಿವೃದ್ಧಿಗಾಗಿ ನಮ್ಮ ಪಂಚಾಯತಿನಲ್ಲಿ ಜಾರಿಯಲ್ಲಿನ ಯೋಜನೆಗಳು**

**ಪಿಂಚಣಿಗಳು** 5

1. ವಿಧವೆಯರಿಗೆ 227 6
2. ಅಂಗವಿಕಲರಿಗೆ - 7
3. ವೃದ್ಧರಿಗೆ 33 8
4. ನಿರ್ಗತಿಕರಿಗೆ - 9

**ಇತರ ಕ್ಷೇಮ ಕಾರ್ಯಗಳು**

1. National Family Benifit Shermurs
2. ವಿಧವೆಯರ ಹೆಣ್ಣು ಮಕ್ಕಳ ಕಲ್ಯಾಣಕ್ಕಾಗಿ ಧನ ಸಹಾಯ - (Social) Welfare, Security Sdhamu

**ನಮ್ಮ ಪಂಚಾಯತಿನ ಪ್ರಸ್ತುತ ಸಮಸ್ಯೆಗಳು**

1. ಬಡತನ ನಿವಾರಣ ಯೋಜನೆಯಡಿಯಲ್ಲಿ ದೊರಕಿನ ಸಹಾಯ ಕಡಿಮೆ ಕುಟುಂಬಗಳಿಗೆ ಲಭಿಸಿದೆ (ಕನಿಷ್ಠ ಸಂಖ್ಯೆ)ಯಲ್ಲಿ
2. ಸಮಗ್ರವಾದ IRDP ಸರ್ವೆ ನಡೆಸಬೇಕಾಗಿದೆ ಕೇವಲ 2525 ಕುಟುಂಬಗಳನ್ನೂ ಮಾತ್ರ ಈ ಮೊದಲು ನಡೆಸಿದ ಸರ್ವೆ ಗುರುತಿಸಲಾಗಿದೆ.
3. ನಿರಕ್ಷತೆ ಮತ್ತು ಮಾಹಿತಿಗಳ ಕೊರತೆಯಿಂದಾಗಿ ಸಹಾಯ ಹಾಗೂ ಸವಲತ್ತುಗಳನ್ನು ಪಡಕೊಳ್ಳುವಲ್ಲಿ ಮದ್ಯವರ್ತಿಗಳ ಪ್ರದೇಷದಿಂದಾಗಿ ಸಹಾಯ ಧನ, ಅರ್ಧದಷ್ಟು ಮಾತ್ರ ಒಡವರಿಗೆ ಲಭಿಸುತ್ತದೆ.
4. ಯೋಜನೆ, ಸವಲತ್ತು ಸ್ಕೀಮುಗಳ ಕುರಿತು ಬಹುಭಾಗದ ಜನರಿಗೆ ಮಾಹಿತಿಗಳ ಲಭ್ಯತೆ ಇಲ್ಲದ ಕಾರಣ ಅದನು ಅರಿತ ಜನರು ಮಾತ್ರ ಅದರ ಬಹುಭಾಗವನ್ನೂ ದಕ್ಕಿಸಿ ಕೊಳ್ಳುತ್ತಾರೆ. ಇದರಿಂದ ನಿಜವಾಗಿಯೂ ಆ ಸವಲತ್ತು ನಡೆಯಬೇಕಾದವರು ವಂಚಿತರಾಗುತ್ತಾರೆ.
5. ನಮ್ಮ ಕೇರಳ ಸರಕಾರದಿಂದಾಗಲಿ, ಕೇಂದ್ರ ಸರಕಾರದಿಂದಾಗಲಿ ಆಯಾ ಸಮಯಕ್ಕೆ ಜ್ಯಾರಿ ಮಾಡುವ, ಸ್ಕೀಮು ಯೋಜನೆಗಳ ಕುರಿತಾದ ಪ್ರಕಟಣೆ, ಪತ್ರಿಕೆ, ದೂರದರ್ಶನ, ಆಕಾಶವಾಣಿಗಳಲ್ಲಿ ರಾಜ್ಯ ಭಾಷೆಯಲ್ಲಿ ಪ್ರಕಟನೆಗೊಳ್ಳುತ್ತದೆ. ಇದರಿಂದ ಬಹು ಭಾಗದ ಕನ್ನಡಿಗರಿಗೆ ಇದರ ಕುರಿತಾದ ಅರಿವು ತಿಳಿವು ಸಿಗದೆ ಅವರು ವಂಚಿತರಾಗುತ್ತಾರೆ.

ಪಂಚಾಯತು Act Book ಕೂಡಾ ರಾಜ್ಯ ಭಾಷೆಯಲ್ಲಿದ್ದು ಅದರ ಕುರಿತಾದ ಅರಿವು ತಿಳುವಳಿಕೆ ಪಡೆದುಕೊಳ್ಳಲು ಕಾತರಿಸುತ್ತಿರುವ ಮಂಜೇಶ್ವರ ಪಂಚಾಯತಿನ ನಾಗರೀಕರ ಕೂಗೂ ಅರಣ್ಯರೋದನವಾಗಿದೆ.

ಮೇಲಿನ ಎಲ್ಲ ಸಮಸ್ಯೆಗಳನ್ನು ಪರಿಹರಿಸುವಲ್ಲಿ 9ನೇ ಜನಕೀಯ ಯೋಜನೆಯಲ್ಲಿ ಮಂಜೇಶ್ವರ ಪಂಚಾಯತಿನ ಸಾಧ್ಯತೆಗಳು

1. ಈಗಾಗಲೇ ಸಿದ್ಧ ಪಡಿಸಿದ IRDP ಸರ್ವೆ listಗೆ ಹೆಚ್ಚಿನ ಕುಟುಂಬಗಳನ್ನು ಒಳಪಡಿಸುವುದು ಅವರ ಕುರಿತಾದ ಸಮಗ್ರ ಮಾಹಿತಿಯ Change ತಯಾರಿಸುವುದು.
2. ಮಹಿಳೆಯರಿಗಾಗಿಯೇ 10ರಿಂದ 15 ಹೊಸ D.W.C.R.A. ಘಟಕಗಳನ್ನು ಸ್ಥಾಪಿಸುವರೇ ಉತ್ತೇಜನ, ಸಹಯಕ ಒದಗಿಸುವುದು.
3. ಟ್ರೆಸಂ ತರಬೇತಿ ಹೊಂದಿದವರಿಗೆ ಉದ್ಯೋಗ ದೊರಕಿಸಿ ಕೊಡುವ ಘಟಕಗಳ ಆರಂಭಿಸುವಿಕೆ.
4. ವಿವಿಧ ಯೋಜನೆ, ಸ್ಕೀಮುಗಳ ಫಲಾನುಭವಿಗಳನ್ನು ಗುರುತಿಸುವುದು, ಇವರ ಅನಂತರ ಜೀವನ ಮಟ್ಟದ ಕುರಿತು ಗ್ರಾಮ ಸಭೆಗಳಲ್ಲಿ ಉಲ್ಲೇಖಿಸುವುದು. ಇನ್ನೂ ವಿವಿಧ ಯೋಜನೆಯಲ್ಲಿ ಸಹಾಯ ದೊರಕಿಸುವಿಕೆ, ಪಡೆಯಲು ಬೇಕಾದ ಮಾಹಿತಿಗಳು ಗ್ರಾಮ ಸಭೆಗಳಲ್ಲಿ ನೀಡುವ ಭರವಸೆ ಮೂಡಿಸುವುದು.
5. ಮಹಿಳಾ ಸಮಾಜ, ಬಾಲಿವಾಡಿ, ಸ್ವಯಂಸೇವಕ ಸಂಘಗಳನ್ನು ಪಂಚಾಯತಿನಲ್ಲಿ ನೊದಾಯಿಸಿ ಇದರ, ನೇತೃತ್ವಗಳು ಹಲವು ತರದ ಸಮಾಜಿಕ ಕ್ಷೇಮ ಕಾರ್ಯ ಪ್ರವರ್ತನೆಗಳನ್ನು ಆರಂಭಿಸುವುದು. ಮಂಜೇಶ್ವರದಲ್ಲಿ ಅಗ್ನಿಶಾಮಕ ದಳ ಕೇಂದ್ರ ಅವಶ್ಯಕ.
6. ಆರೋಗ್ಯ ಘಟಕಗಳಾದ F.W.C, ಶಿಶು ವಿಕಸನಾ ಅಂಗಗಳಾದ I.C.D.S. Unitಗಳನ್ನೂ ಪಂಚಾಯತು ನೆಲೆಯಲ್ಲಿ ಕೇಂದ್ರಿಕರಿಸಿ ಇವುಗಳ ಚಟುವಟಿಕೆಗಳನ್ನು ತೀವ್ರಗೊಳಿಸುವುದು.
7. ಗ್ರಾಮಿಣ ಬ್ಯಾಂಕಿಗೆ ಮಾದರಿಯಲ್ಲಿ ಸ್ವಉದ್ಯೋಗ ಕಾರ್ಯಗಳನ್ನು ಏರ್ಪಡಿಸುವುದು.
8. ಪಂಚಾಯತಿನಲ್ಲಿರುವ ಅಂಗವಿಕಲರು, ವಿಧವೆಯರು ಹಾಗೂ ಕಡು ಬಡಕುಟುಂಬ ಅಬ್ಯರ್ಥಿಗಳಿಗೆ 4th Class III Class ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಅದ್ಯತೆ ನೀಡಲು ಒಂದು ಠರಾವು ಜ್ಯಾರಿಗೆ ತರುವುದು.
9. ಪಂಚಾಯತು Act, ಉದ್ಯೋಗ ಮಾಹಿತಿಗಳು ವಿಶೇಷ, ಸ್ಕೀಮು, (ಉದಾ: Latrine Housing, Self Employment)ಗಳ ಕುರಿತಾದ, ಮಹಿತಿಗಳ Pomlat ಪ್ರಾದೇಶಿಕ ಭಾಷೆಯಲ್ಲಿ ಮುದ್ರಿಸಿ ಸ್ವಯಂ ಸೇವಕರಿಂದ ನಾಗರಿಕರಿಗೆ ತಲುಪಿಸುವಿಕೆ.

ಸಾಮಾಜಿಕ ಕ್ಷೇಮ ಕಾರ್ಯವು ಬರೇ ಪಂಚಾಯತಿನಿಂದ ಯಾ ಆಡಳಿತ ಸಮಿತಿಯಿಂದ ಮಾಡಲು ಅಸಾದ್ಯವಾದುದಾಗಿದೆ. ಅವರ ನೇತೃತ್ವದಲ್ಲಿ ಸಮಾಜ ಸೇವಕರು, ಸ್ವಯಂಸೇವಕರು, ನಾಗರೀಕರು, ಸೇವಾ ಸಂಸ್ಥೆಗಳೆಲ್ಲಾ ಒಗ್ಗೂಡಿ ನಡೆಸಬೇಕಾದ ಮಹಾನ್ ಕಾರ್ಯವಾಗಿದೆ. ಇವೆಲ್ಲರ ಸಹ ಭಾಗಿತ್ವದಿಂದ ಪ್ರದೇಶದ ಜನರ ಕ್ಷೇಮವನ್ನೂ, ಸೌಖ್ಯರವನ್ನು ಕಾಪಾಡುವಲ್ಲಿ ಕಾರ್ಯ ಪ್ರವರ್ತರಾಗಲು ಉತ್ಸಾಹ ಮೂಡಿಬಹುವುದು.

**D.W.C.R.A. ಪ್ರಕಾರ ನಡೆಸುವ ಯುನಿಟ್‌ಗಳ ವಿವರ**

| ವರ್ಷ | ಸ್ಥಳ ಮತ್ತು ಯುನಿಟ್‌ನ ಹೆಸರು | ಸದಸ್ಯರ ಸಂಖ್ಯೆ | ಸಾಲ | ಸಹಾಯಧನ ಫಂಡ್ | ರಿವಾಲಿಂಗ್ | ಸರಕಾರವತಿಯಿಂದ ಸಿಕ್ಕಿದ ಸಹಾಯಧನ (C.C.A. I.C.A) |
|---|---|---|---|---|---|---|
| 94-95 | ಮರಿಯಾಶ್ರಮ ಕುಂಜತ್ತೂರು ಹಂದಿಸಾಕಣೆ | 14 | 84,000 | 56,000 | 15,200 | 1,500+500 |
| 95-96 | ಕಜೆ ಬಂಗ್ರ ಮಂಜೇಶ್ವರ ಓಲೆ ಹೆಣೆಯುವುದು | 11 | 27,500 | 27,500 | 15,200 | 1,500+500 |
| 96-97 | ರಾಣಿ ಕಣ್ವತೀರ್ಥ ರೆಕ್ಸಿನ್ ಬ್ಯಾಗ್ ತಯಾರಿ | 12 | 1,32,000 | 48,000 | 25,000 | 1,500+500 |

Trysum:- ಪ್ರಕಾರ 18ರಿಂದ 35 ವರ್ಷದ ಪ್ರಕಾರ I.R.D.P ಸರ್ವೆ ಲಿಸ್ಟ್ ಪ್ರಾಕಾರ ಇದ್ದ ಕುಟುಂಬ ಸದಸ್ಯರಿಗೆ ಕೆಲಸದ ತರಬೇತಿಯ ಪದ್ಧತಿ ಪ್ರಕಾರ ಈ ಪಂಚಾಯತ್‌ನಲ್ಲಿ 20 ಮಂದಿಗೆ ತರಬೇತಿ ನೀಡಲಾಗಿದೆ. ಇದರಲ್ಲಿ 7 ಮಂದಿಗೆ Bank ಮುಖಾಂತರ ಸಾಲವನ್ನೂ ಸಹಾಯಧನವನ್ನೂ ಕೊಡಲಾಗಿದೆ. ಸ್ವುದ್ಯೋಗಕ್ಕೆ ಕಲ್ಪಿಸಲಾದ ಮಹಿಳೆಯರು ಬೇರೆಯವರ ಕೈಕೆಳಗೆ ಕೆಲಸ ಮಾಡುತ್ತಾರೆ.

Tool Kite

ಗ್ರಾಮಿಣ ಕರಕುಶಲ ಕೆಲಸ ಮಾಡುವವರಿಗೆ ಆಧುನಿಕ ಕೆಲಸದ ಉಪಕರಣಗಳನ್ನು ಕೊಡುವ ಪದ್ಧತಿ ಪ್ರಕಾರ 92-93-93-94-95-96 - 94 ಜನರಿಗೆ ಈ ಸಾಧನ ಸಲಕರಣೆಗಳನ್ನು ಕೊಟ್ಟಿರುತ್ತದೆ. ಇದನ್ನು ಅಪೇಕ್ಷಿತ ಹೆಚ್ಚಿನ ಜನರಿಗೆ ವಿತರಿಸುವುದು ಅಗತ್ಯವಾಗಿರುತ್ತದೆ.

Million Well:- ಈ ಪದ್ಧತಿ ಪ್ರಕಾರ ಒಟ್ಟು 13 ಭಾವಿಗಳನ್ನು ನೀಡಲಾಗಿದೆ ಇನ್ನೂ ಹಲವು ಬಾವಿಗಳು ಕೆಲವು ವಾರ್ಡಗಳಲ್ಲಿ ಅಗತ್ಯವಿದೆ.

# ಸಂಸ್ಕೃತಿ

ಮಂಜೇಶ್ವರ ಪಂಚಾಯತು ``ವಿವಿಧ ಸಂಸ್ಕೃತಿಯಲ್ಲಿ ಏಕತೆ"ಯ ಸ್ವಭಾವವನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ವಿಭಿನ್ನ ಸಂಸ್ಕೃತಿಗಳನ್ನು ಒಳಗೊಂಡು ವಿವಿಧ ಭಾಷೆಗಳಾನ್ನಾಡುವ ಜನರು ಇದ್ದಾರೆ. ಮಲೆಯಾಳ, ಕನ್ನಡ, ತುಳು, ಕೊಂಕಣಿ ಉರ್ದ ಮೊದಲಾದ ಪ್ರಾದೇಶಿಕ ಭಾಷೆಗಳಾನ್ನಾಡುವ ಸಂಗಮದ ಭೂಮಿ ಇದು ಆಗಿರುತ್ತದೆ.

ಕೇರಳದ ಏಕೀಕರಣಕ್ಕೆ ಮೊದಲು ಬ್ರಿಟಿಷ್ ಆಡಳಿತೆಯಲ್ಲಿ ಮದ್ರಾಸು ಸಂಸ್ಥಾನದ ಭಾಗವಾಗಿ, ದಕ್ಷಿಣ ಕನ್ನಡ ಜಿಲ್ಲೆಯ ಒಂದು ಅವಿಭಾಜ್ಯ ಅಂಗವಾಗಿತ್ತು. ಧಾರ್ಮಿಕವಾಗಿ ಹೇಳುವುದಾದರೆ ಹಿಂದು, ಮುಸ್ಲಿಂ ಕ್ರೈಸ್ತ, ಜೈನ ಎಂಬ ಪ್ರಮುಖ ಧರ್ಮಗಳ ಈ ಪಂಚಾಯತಿನ ಆಧಾರ ಸ್ತಂಭಗಳಾಗಿವೆ. ಇದರಲ್ಲಿ ಕ್ರೈಸ್ತರು ಜೈನರೂ ಅಲ್ಪಸಂಖ್ಯಾತಾರಾಗಿದ್ದಾರೆ.

ವಿವಿಧ ಜನವಿಭಾಗದಲ್ಲಿ ಪ್ರಾಚಾರದಲ್ಲಿರುವ ಜಾನಪದ ಸಂಸ್ಕೃತಿಯ ಬಿಂಬವಾಗಿ, ಯಕ್ಷಗಾನ, ಕೋಲುಕಳಿ, ದಪ್ಪು, ಕಳರಿ, ಆಟಿಕಳಂಜೆ, ಪಾಡ್ದನ, ಕರಂಗೋಲು, ಕೋಳಿಕಟ್ಟುವುದು, ಕಂಬಳ ಮೊದಲಾದುವುಗಳು ಇಲ್ಲಿನ ಪ್ರಮುಖ ಜಾನಪದ ಸಂಸ್ಕೃತಿಯಾಗಿದೆ. ಇದು ಬಹುಶಃ ಪ್ರಸಿದ್ಧವಾದ ಆಚರಣೆಯೂ ಕೂಡಾ ಆಗಿರುತ್ತದೆ.

ಸಾಹಿತ್ಯ, ಸಂಸ್ಕೃತಿಗಳು ಹಿಂದೂ ಮುಸ್ಲಿಂ, ಕ್ರೈಸ್ತರು ಜೈನರ ಐಕ್ಯತೆಗೆ ಒತ್ತು ಕೊಡುವ ಮುಖ್ಯ ಪಾತ್ರ ವಹಿಸುತ್ತದೆ.

## ವಾಚನಾಲಯ - ಗ್ರಂಥಭಂಡಾರ

ಓದುವುದು ಆರೋಗ್ಯವಂತ ಮನುಷ್ಯನ ಪ್ರಮುಖಗುಣ, ಜನರನ್ನು ವಿದ್ಯಾವಂತ ಸಂಪನ್ನರಾಗಿ ಮಾರ್ಪಡಿಸುವುದರಲ್ಲಿ ಗ್ರಂಥಾಲಯವು ಮಹತ್ವದ ಸ್ಥಾನವನ್ನು ಪಡೆದಿರುತ್ತದೆ. ಸಾಮಾನ್ಯ ಜನರಿಗೆ, ಆರ್ಥಿಕ ಅಡಚನೇಣೆ ತಾಪತ್ರಯದಿಂದಾಗಿ ಜನ ಓದಲು ಕ್ರಯಕೊಟ್ಟು ವಾರ್ತಾಪತ್ರಿಕೆ, ವಾರಪತ್ರಿಕೆ ಹಾಗೂ ಪುಸ್ತಕಗಳನ್ನು ಕೊಂಡುಕೊಳ್ಳಲಾರರು. ಇವರು ಸಮಕಾಲೀನ ಪ್ರಜೆಗಳ ಬಗ್ಗೆ ಅರಿವು ಇರುವ ಜನರಾಗಿರಬೇಕು. ಅದಕ್ಕೆ ಬೇಕಾಗಿ ಪಂಚಾಯತ್ ಕಛೇರಿ, ಹೊಸಂಗಡಿ, ಮಂಜೇಶ್ವರ ಗೋವಿಂದ ಪೈಯ ಸ್ಮಾರಕ, ಗ್ರಂಥಾಲಯ, ರೈಲ್ವೇ ನಿಲ್ದಾಣದ ಬಳಿ, ಕುಂಜತ್ತೂರು ಈ ಪ್ರದೇಶಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಿ ಜನರಿಗೆ ಜನರ ಭೌಧಿಕ ಮಟ್ಟವು ಉತ್ತಮಗೊಳ್ಳುವಂತೆ ಪ್ರಯತ್ನಿಸುವುದು ಅಗತ್ಯ.

### ಆಟದ ಬಯಲು:-

ಮಂಜೇಶ್ವರದ ಜನ ಕ್ರೀಡಾಸಕ್ತರು, ಕ್ರೀಡಾಭಿಮಾನಿಗಳು, ಆದರೆ ಕ್ರೀಡೆಗಳಿಗೆ ತಕ್ಕ ಅನುಕೂಲತೆಗಳಿಂದ ವಂಚಿತರು. ಆದುದರಿಂದ ಕ್ರೀಡಾಳುಗಳ ಅನುಕೂಲಕ್ಕಾಗಿ ಮಂಜೇಶ್ವರ ಪಂಚಾಯತ್‌ನ ವ್ಯಾಪ್ತಿಗೆ ಒಳಪಟ್ಟು ಬರುವ ರಾಜರಾಮ ಮೈದಾನ, ಅಂಬೇಡ್ಕರ್ ಗ್ರಾಮರಲ್ಲಿನ ಬಯಲು ಪ್ರದೇಶ, ಕುಂಜತ್ತೂರು High School Ground, ಪಂಚಾಯತ್ ಮಿನಿ ಕ್ರೀಡಾಂಗಣ, ಪಾವೂರು ಪಳ್ಳ ಪ್ರದೇಶದಲ್ಲಿ ಆಟದ ಉತ್ತಮ ಬಯಲು ಮೈದಾನವಾಗಿ ಪರಿವರ್ತಿಸಿ ಕ್ರೀಡಾ ಪಟುಗಳಿಗೆ ಅನುಕೂಲ ಮಾಡಿಕೊಡುವುದು.

### ರಂಗಮಂದಿರ

ಮಂಜೇಶ್ವರದ ಜನರಿಗೆ ನಾಟಕದಲ್ಲಿ ಆಸಕ್ತಿ ಇದೆ. ಯಕ್ಷಗಾನದಲ್ಲಿ ಅಭಿರುಚಿ ಇದೆ. ಇಲ್ಲಿ ನಾಟಕ, ಯಕ್ಷಗಾನ, ಜಾನಪದ ಕಲೆಗಳ ಪ್ರದರ್ಶನಗಳಿಗೆ ಸರಿಯಾದ ಅವಕಾಶವಿಲ್ಲದಾಗಿದೆ. ಮಂಜೇಶ್ವರ ಗೋವಿಂದಪೈ ಹಳೆ ಕಾಲೇಜನ್ನು ರಂಗಮಂಟಪವಾಗಿ ಮಾರ್ಪಡಿಸಬೇಕು. ಮಾತ್ರವಲ್ಲದೇ ಪಂಚಾಯತ್ ಗ್ರೌಂಡಿನಲ್ಲಿ ಒಂದು ಉತ್ತಮವಾದ ಆಧುನಿಕ ಸಕಲ ಸೌಕರ್ಯಗಳೂ ಇರುವ ಬಯಲು ರಂಗಮಂಟಪ ನಿರ್ಮಾಣವಾಗಬೇಕು.

### ಉದ್ಯಾನವನ

ಸೌಂದರ್ಯೋ ಪಾಸನೆಯೂ ಒಂದು ಸಾಂಸ್ಕೃತಿಕ ಪ್ರಕ್ರಿಯೆ ಈ ನಿಟ್ಟಿನಲ್ಲಿ ಉದ್ಯಾನಗಳ ಪಾತ್ರವು ಮಹತ್ವದ್ದು. ಆರೋಗ್ಯದ ದೃಷ್ಟಿಯಲ್ಲೂ ಕೂಡಾ. ನಮ್ಮ ಮಂಜೇಶ್ವರದಲ್ಲಿ ಒಂದೇ ಒಂದು ಸಾರ್ವಜನಿಕ ಉದ್ಯಾನ ಇಲ್ಲ. ಆದನ್ನು ಬಂಗ್ಲೆ ಗುಡ್ಡೆಯ ಪರಿಸರದಲ್ಲಿ ಸಾರ್ವಜನಿಕ ಉದ್ಯಾನವನವಾಗಿ ಮಾರ್ಪಡಿಸುವುದು ಬಹಳಷ್ಟು ಉತ್ತಮ. ಉದ್ಯಾವರ ಮಾಡದ ಪರಿಸರದಲ್ಲಿ ಅಬ್ರೇಲಾ ಸ್ಥಿತಿಯಲ್ಲಿರುವ ವಿಶಾಲವಾದ ಪ್ರದೇಶವನ್ನು ಈಜುಕೊಳವಾಗಿ ಪರಿವರ್ತಿಸಬೇಕು.

### ಯುವಜನೋತ್ಸ- ಬಾಲಕಲೋತ್ಸವ

ಸಾರ್ವಜನಿಕ ಪ್ರದರ್ಶನಕ್ಕೆ ಅವಕಾಶವಿತ್ತು ಪ್ರೋತ್ಸಾಹಿಸಿದಾಗ ಸುಪ್ತ ಪ್ರತಿಭೆಗಳು ಅಭಿವ್ಯಕ್ತವಾಗಿ ಬೆಳಕಿಗೆ ಬರುತ್ತವೆ. ಆದ್ದರಿಂದ ಪಂಚಾಯತ್ ಮಟ್ಟದಲ್ಲಿ ಯುವಜನೋತ್ಸವ - ಬಾಲಕಲೋತ್ಸವಗಳು ವರ್ಷಪ್ರತಿ ಆಚರಿಸಲ್ಪಡಬೇಕು.

**ಕಂಬಳ**

ತುಳುನಾಡಿನ ಜಾನಪದ ಸಂಸ್ಕೃತಿಯ ಬಗ್ಗೆ ಹೇಳುವಾಗ, ಕಂಬಳದ ಬಗ್ಗೆ ಹೇಳದಿರುವುದು ಸಾಧ್ಯವೇ ಇಲ್ಲ. ಇದರ ವೀಕ್ಷಣೆ ಒಂದು ರೋಮಾಂಚಕ ಅನುಭವವಾಗುತ್ತದೆ. ಈ ಕಂಬಳದ ಕೋಣಗಳನ್ನು ಸಾಕುವುದು ದುಬಾರಿ ವೆಚ್ಚದ ಕೆಲಸ. ಆದರ ಕಂಬಳದ ಬಗೆಗಿರುವ ಸಾಂಸ್ಕೃತಿಕ ಆಸಕ್ತಿ ಈ ಜಾನಪದ ಸಂಸ್ಕೃತಿಯನ್ನು ಇದುವರೆಗೂ ಪೋಷಿಸುತ್ತಾ ಬಂದಿದೆ. ಇದು ಇನ್ನೂ ಇದೇ ರೀತಿ ಮುಂದುವರಿಯುವುದು ಅಪೇಕ್ಷಣಿಯ ಆದುದರಿಂದ ಬಂಗ್ರ ಮಂಜೇಶ್ವರದ ಹೊಳೆಯಲ್ಲಿ ಪಂಚಾಯತು ಮಟ್ಟದಲ್ಲಿ ವರ್ಷಂಪ್ರತಿ ಕಂಬಳದ ವ್ಯವಸ್ಥೆ ಇರುವುದು. ಅದರೊಂದಿಗೆ ಕೃಷಿಕರಿಗೆ ಪ್ರೋತ್ಸಾಹಕವಾಗಿ ಜಾನುವಾರು ಪ್ರದರ್ಶನ ಹಾಗೂ ವಸ್ತು ಪ್ರದರ್ಶನ ತೋರ್ಪಡಿಸಬೇಕು.

**ಕಲಾ ಶಾಲೆಗಳು - ತರಬೇತಿ ಕೇಂದ್ರಗಳು**

ಸಂಗೀತ, ಸಾಹಿತ್ಯ ಯಕ್ಷಗಾನ, ನೃತ್ಯ ಮೊದಲಾದ ಕ್ಷೇತ್ರಗಳಲ್ಲಿ ಮಂಜೇಶ್ವರ ಜಿಲ್ಲಾ ಮಟ್ಟದ, ರಾಜ್ಯಮಟ್ಟದ ರಾಷ್ಟ್ರಮಟ್ಟಗಳಲ್ಲಿ ಕೀರ್ತಿಗಳಿಸಿದೆ. ಈ ಕೀರ್ತಿಯನ್ನು ಉಳಿಸಿ ಬೆಳೆಸುವುದಕ್ಕಾಗಿ ಈ ಕೆಳಗಿನವುಗಳು ಸರಕಾರದ ವತಿಯಿಂದ ಅಗತ್ಯವಾಗಿರುತ್ತದೆ.

೧. ಕೀತೇಶ್ವರ ವಠಾರದಲ್ಲಿ ಒಂದು ಸಂಗೀತ ಶಾಲೆ.

೨. ಹೊಸಂಗಡಿಯಲ್ಲಿ ಒಂದು ನೃತ್ಯ ಶಾಲೆ.

೩. ಕುಂಜತ್ತೂರಿನಲ್ಲಿ ಒಂದು ತರಬೇತು ಶಾಲೆ.

೪. ಅಂಬೇಡ್ಕರ್ ನಗರದಲ್ಲಿ ಒಂದು ಜಾನಪದ ಕಲಾತರಬೇತಿ ಕೇಂದ್ರ.

೫. ರೈಲ್ವೇ ನಿಲ್ದಾಣದ ಬಳಿ ಒಂದು ಯಕ್ಷಗಾನ ತರಬೇತಿ ಕೇಂದ್ರ.

೬. ಬಂಗ್ರ ಮಂಜೇಶ್ವರದ ಗ್ರಾಮದಲ್ಲಿ ಒಂದು ಮಾಪಿಳ್ಳ ಪಾಟ್, ಕೋಲುಕ್ಕಳ್ ಒಪ್ಪನ, ದಪ್ಪು, ತರಬೇತಿ ಕೇಂದ್ರಗಳು ಸ್ಥಾಪಿತವಾಗಿ ಕ್ರೀಯಾಶೀಲವಾಗಬೇಕು. ಇದರಿಂದ ಸಾಂಸ್ಕೃತಿಕ ವ್ಯವಸ್ಥೆಯು ಪುನರುಜ್ಜೀವ ಹೊಂದುವುದರಲ್ಲಿ ಸಂಶಯವಿಲ್ಲ.

4. ಮಂಜೇಶ್ವರ ಗೋವಿಂದ ಪೈ ಸ್ಮಾರಕ ಲೈಬ್ರರಿ ಹಾಲ್ ಪ್ರದೇಶದಲ್ಲಿ ಸಂಸ್ಕೃತಿಕ ಪ್ರಾಚೀನ ವಸ್ತುಗಳ ಸಂಗ್ರಹ ಕೇಂದ್ರವನ್ನಾಗಿ ಪರಿವರ್ತಿಸುವುದು.

5. ದೂರದರ್ಶನ ವೀಕ್ಷಣಾಲಯ. ಅಂಬೇಡ್ಕರ್ ಕಾಲನಿ ಮತ್ತು ಉದ್ಯಾವರ ಮಾಡಲು G.L.P School ಪರಿಸರದಲ್ಲಿ ಹೊಸಂಗಡಿಯಲ್ಲಿ ದೂರದರ್ಶನ ವೀಕ್ಷಣಾಲಯ ಅಗತ್ಯವಾಗಿದೆ.

6. ಅಂಬೇಡ್ಕರ್ ಕಾಲನಿಯಲ್ಲಿ ``ಮಾಗದರ್ಶನ"ಕೇಂದ್ರ ಸ್ಥಾಪನೆಯಾಗಬೇಕು.



# ಸಹಕಾರಿ ರಂಗ

ಸಹಕಾರಿ ರಂಗವು ಮಂಜೇಶ್ವರದಲ್ಲಿ 1907ರಲ್ಲಿ ಮೊಳಹಳ್ಳಿ ಶಿವರಾವ್ ಸ್ಥಾಪನೆ ಮಾಡಿದರು. ಮಂಜೇಶ್ವರ ಸಹಕಾರಿ ಬ್ಯಾಂಕ್‌ನ ಪ್ರಥಮ ಸದಸ್ಯತ್ವವನ್ನು ಶ್ರೀ ಅಮೃತ ಕೃಷ್ಣರಾವ್ ಪಡೆದಿರುವರು. 1904ರಲ್ಲಿ ಸಹಕಾರಿ ರಂಗದ ನಿಯಮವು ಜ್ಯಾರಿಯಾಯಿತು. ಭಾರತ ದೇಶದಲ್ಲಿ ಸಹಕಾರಿ ರಂಗದ ಪ್ರಸ್ತಾವನೆಯಲ್ಲಿ ಗ್ರಾಮಾಂತರ ಪ್ರದೇಶದ ಎಲ್ಲಾ ದುರ್ಭಲರಿಗೆ ಕ್ರಾಂತಿದಾಯಕ ರೀತಿಯಲ್ಲಿ ಸಹಕಾರವನ್ನು ನೀಡುವಲ್ಲಿ ಪ್ರಥಮ, ಹೆಜ್ಜೆ ಇರಿಸಿದು ಕೇರಳ ರಾಜ್ಯವಾಗಿದೆ. ಸಮೂಹದ ಜನರ ಸಹಕಾರದಿಂದ ಸಹಾಯದಿಂದ ಒಂದೆರಡು ಸಹಕಾರಿ ಸಂಘ ಬೇಂಕ್‌ಗಳು ಅಸ್ಥಿತ್ವಕ್ಕೆ ಬಂದಿವೆ. ಇವುಗಳಲ್ಲಿ ಮುಖ್ಯವಾದವುಗಳು.

1. ಮಂಜೇಶ್ವರ ಸರ್ವಿಸ್ ಕೋ ಒಪರಿಟಿವ್ ಬೇಂಕ್.
2. ಮಂಜೇಶ್ವರ ಬೀಡಿ ಕೆಲಸಗಾರರ ಸಹಕಾರಿ ಸಂಘ.
3. ಬಂಗ್ರ ಮಂಜೇಶ್ವರ ಮರದ ಕೆಲಸಗಾರರ ಸಹಕಾರ ಸಂಘ.
4. ಬಂಗ್ರ ಮಂಜೇಶ್ವರ ಮತ್ಸ್ಯ ಕಾರ್ಮಿಕರ ಸಹಕಾರ ಸಂಘ.

**ಆರಂಭಗೊಂಡ ಹೊಸ ಶಾಖೆಗಳು**

1. Manjeshwar Service Co-Operate Bank Branch Hosamddi.
2. Manjeshwar Service Cooperative Bank Branch at Kunjathur (ಆರಂಭವಾಗಲಿದೆ)

ಈ ಸಹಕಾರಿ ಬೇಂಕ್‌ನ ಕೈ ಕೆಳಗೆ ಒಂದು Consumer Co-Operative Stvoue ನಡೆಸಲ್ಪಡುತ್ತದೆ.

**ಮಂಜೇಶ್ವರ ಬೀಡಿ ಕೆಲಸಗಾರ ಸಂಘ**

ಬಂಗ್ರ ಮಂಜೇಶ್ವರದಲ್ಲಿ ಇದರ ಮೂಲ ಶಾಖೆ ಇದ್ದು ಕಂಜತ್ತೂರು, ಪಾವೂರು, ಗೇರುಕಟ್ಟೆ ರಥಬೀಧಿ, ಕೆದುಂಬಾಡಿ ಉದ್ಯಾವರದ (Near Railway Station)ಗಳಲ್ಲಿ ಸಹ ಶಾಖೆಗಳಿವೆ. ಇದರಲ್ಲಿ ಸಾದಾರಣ - 5000 ಸದಸ್ಯರು 1700 ಸದಸ್ಯ ಕೆಲಸಗಾರರು ಕಾರ್ಯನಿರತ ರೀತಿಯಲ್ಲಿ ನಡೆಯುತ್ತಾ ಬಂದು, ಆರ್ಥಿಕವಾಗಿ ತುಂಬ ಮುಂದುವರಿದಿತ್ತು. ಇತ್ತೀಚಿನ ವರ್ಷದಲ್ಲಿ ಈ ಸಂಘವು ನಷ್ಟದ ದಾರಿಯಲ್ಲಿ ನಡೆಯುತ್ತಿದೆ.

**ಬಂಗ್ರ ಮಂಜೇಶ್ವರ ಮರದ ಕೆಲಸಗಾರರ ಸಂಘ**

ಈ ಸಂಘವು ಸಹಾಯ ಧನ ಹಾಗೂ ಸದಸ್ಯರ ಕೊರತೆಯಿಂದ ಜೀರ್ಣಾವಸ್ಥೆಯಲ್ಲಿದೆ.

**ಮಂಜೇಶ್ವರ ಮತ್ಸ್ಯ ಕಾರ್ಮಿಕರ ಸಹಕಾರ ಸಂಘ**

ಇದರಲ್ಲಿ ಆರಂಭದಲ್ಲಿ 50 ಸದಸ್ಯರುಗಳಿದ್ದು ಪ್ರಸ್ತುತ ಈಗ ಸಾಧಾರಣ 1500 ಸದಸ್ಯರಿದ್ದು ಮಿನುಗಾರ ಕಾರ್ಮಿಕರಿಂದ ಬೇಕಾದ ಸಕಲ ಸಹಕಾರ, ಸಹಾಯವನ್ನು ಒದಗಿಸುತ್ತದೆ. ಇನ್ನು ಹಲವಾರು ಚಿಕ್ಕ ಚಿಕ್ಕ ಸಹಕಾರ ಸಂಘಗಳಲ್ಲಿ ನಮ್ಮ ಪಂಚಾಯತಿನಲ್ಲಿದೆ.

1. School - cooperative societies.
2. ಶೀವಳ್ಳಿ ಬ್ರಾಹ್ಮಣಗಳ ಸಹಕಾರಿ ಸಂಘ.

ಇವೆಲ್ಲವು ಇತ್ತೀಚಿನ ಕಾರ್ಯಪ್ರವರ್ತನೆಗಳಾಗಿವೆ.

**ಸಹಕಾರಿ ಸಂಘದ ಅವಶ್ಯಕತೆಗಳು**

ಗ್ರಾಮಾಂತರ ಪ್ರದೇಶಗಳಲ್ಲಿ ಸರಕಾರಿ ಸಂಘಗಳ ಅಗತ್ಯವಿದೆ. ಗುಡಿ ಕೈಗಾರಿಕೆ ರಂಗದಲ್ಲಿ ಹೋಲಿಗೆ, ಕೈಮಗ್ಗ S.C. S.T. ವಿಭಾಗಕ್ಕೆ ಹೈನುಗಾರಿಕೆ, ಕೋಳಿ ಸಾಕಣೆ, ತರಕಾರಿ, ಹಣ್ಣು ಹಂಪಲುಗಳ ಮಾರುಕಟ್ಟೆಗೆ ಸಹಕಾರಿ ಸಂಘಗಳ ಅವಶ್ಯವಿದೆ.

ಮಹಿಳೆಯರ ಉದ್ಯಮವನ್ನು ಪ್ರೋತ್ಸಾಹಿಸಲು ಮಹಿಳಾ ಸಹಕಾರಿ ಸಂಘಗಳು ಅಗತ್ಯವಾಗಿದೆ.

ಕೃಷಿ:- ಮಂಜೇಶ್ವರದ ಪ್ರಧಾನ ಕೃಷಿ ಭತ್ತ, ತೆಂಗು, ಅಡಿಕೆ ಮತ್ತು ತರಕಾರಿ ಆಗಿದೆ. ಕೃಷಿ ಉತ್ಪನ್ನವನ್ನು ನ್ಯಾಯವಾದ ಬೆಲೆಗೆ ಉಕ್ರಯಿಸಲು ಸಹಕಾರಿ ಸಂಘದ ಕೊರತೆ ಇದ್ದುದರಿಂದ ಹತ್ತಿರದ ಕರ್ನಾಟಕ ಮಂಗಳೂರಿಗೆ ಸಣ್ಣ ಕೃಷಿಕರು ತಲೆಹೊರೆಯಲ್ಲಿ ಹೋಗಿ ಮಾರಿ ಬರುವುದರಿಂದ

ಕೃಷಿಕರಿಗೆ ಸಿಗಬೇಕಾದ ನ್ಯಾಯ ಬೆಲೆಯು ಸಿಗುವುದಿಲ್ಲ. ಇದಕ್ಕೆ ಒಂದು ಮಾರ್ಕೆಟು ಬೇಕಾಗಿದೆ.

ಮಂಜೇಶ್ವರದ ಇನ್ನೊಂದು ಪ್ರಧಾನ ಗುಡಿಕೈಗಾರಿಕೆಯಾದ ಬೀಡಿ ಕೈಗಾರಿಕೆಯ ರಂಗದಲ್ಲಿ 6650 ಜನರು ಬೀಡಿ ಕಟ್ಟುತ್ತಿದ್ದು 25% ಕಾರ್ಮಿಕರಿಗೆ ಮಾತ್ರವೇ ಸಹಕಾರಿ ರಂಗದಲ್ಲಿ ನ್ಯಾಯವಾದ ಕೂಲಿ ಲಭಿಸುತ್ತಿದ್ದು ಬಾಕಿ ಬರುವ 75% ಕಾರ್ಮಿಕರು ಕರ್ನಾಟಕ ರಾಜ್ಯದ ವಿವಿಧ ಪ್ರದೇಶದಿಂದ Contract ಬೇಸಿನಲ್ಲಿ ಕೆಲಸ ಮಾಡುವುದರಿಂದ ನ್ಯಾಯವಾದ ಕೂಲಿ, ಇನ್ನಿತರ ಸೌಲಭ್ಯಗಳು ದೊರಕುವುದಿಲ್ಲ. ಆದುದರಿಂದ ಎಲ್ಲಾ ಕೈಗಾರಿಕೆ ಮಾಡುವವರಿಗೆ ಸಹಕಾರಿ ಸಂಘಗಳ ಮೂಲಕ ಪ್ರವೇಶವನ್ನು ಕೊಟ್ಟು, ಸೌಲಭ್ಯತೆಗಳನ್ನು ಕೊಡುವುದು ಅಗತ್ಯವಾಗಿದೆ.

ಮರದ ಮತ್ತು ಚಿನ್ನಾಭರಣಗಳ ಕಾರ್ಮಿಕರು ಈ ಪ್ರದೇಶದಲ್ಲಿ ಧಾರಳವಿದ್ದರೂ ಅವರಿಗೆ ಸರಿಯಾದ ಸಹಕಾರಿ ರಂಗಗಳ ಅಗತ್ಯವಿದೆ.

ಗುಡಿ ಕೈಗಾರಿಕಾ ರಂಗದಲ್ಲಿ (Tailoring/ಕೈಮಗ್ಗ) S.C. S.T. ವಿಭಾಗಕ್ಕೆ ಪ್ರೋತ್ಸಾಹಿತ ಸಹಕಾರಿ ರಂಗದ ಅಗತ್ಯವಿದೆ.

ಮಂಜೇಶ್ವರ ಪ್ರದೇಶಕ್ಕೆ ಬೇಕಾದ ಹಾಲುಗಳ ವಿತರತಣೆ ಪೂರ್ಣವಾಗಿ ಮಂಗಳೂರು ಮತ್ತು ಕನ್ನೂರಿನಿಂದ ಬರುತ್ತಿದ್ದೂ ದಿನಪ್ರತಿ ಸಾವಿರಾರು ಲೀಟರು ಹಾಲು ಈಲ್ಲಿ ವಿಕ್ರಯಿಸಲ್ಪಡುತ್ತಾರೆ. ಹಾಲು ಉತ್ಪಾದನಾ ರಂಗಗಳಲ್ಲಿ ಈ ಪ್ರದೇಶದ ಜನರಿಗೆ ಪ್ರೋತ್ಸಾಹವಿದ್ದರೂ ಅದಕ್ಕೆ ಬೇಕಾದ ಎಲ್ಲಾ ಸೌಕರ್ಯವಿದ್ದರೂ ಸಹಕಾರಿ ಸಂಘದಿಂದ ಅದಕ್ಕೆ ಬೇಕಾದ ಆರ್ಥಿಕ ಸಹಾಯವನ್ನೂ, ಉತ್ಪಾದಿಸಿದ ಹಾಲುನ್ನು ವಿಕ್ರಯಿಸಲು ಬೇಕಾದ ಸಹಕಾರಿ ಸಂಘಗಳ ರಚನೆಯಾದಲ್ಲಿ ಹಲವು ಕುಟುಂಬಗಳಗೆ ಉದ್ಯೋಗವನ್ನು ವರ ಮಾನವನ್ನು ಹೆಚ್ಚಿಸಬಹುದು.

ಈ ಪ್ರದೇಶದಲ್ಲಿ ಹಲವಾರು Tailorings ತರಬೇತಿ ಕೇಂದ್ರಗಳಿದ್ದೂ ಅಲ್ಲಿಂದ ತರಬೇತಿ ಪಡೆದವರಿಗೆ ತಮ್ಮ ಕಸಬನ್ನು ಮುಂದುವರಿಸುವ ಸಲುವಾಗಿ ವ್ಯವಸ್ಥಾಪಿತವಾದ ಸೌಕರ್ಯವಿಲ್ಲದಿದ್ದುದರಿಂದ ಸಹಕಾರಿ ಸಂಘದಿಂದ ಇವರನ್ನೆಲ್ಲಾ ಕೇಂದ್ರೀಕರಿಸಿದಲ್ಲಿ ನಮ್ಮ ಪ್ರದೇಶದ ನಿರುದ್ಯೋಗ ಸದಸ್ಯರಿಗೆ ಪರಿಹಾರವನ್ನು ಕಾಣಬಹುದು.

# 5.11 ಪರಿಶಿಷ್ಟ ವರ್ಗ ಮತ್ತು ಜಾತಿ

## ಪ್ರಾಚೀನ ಇತಿಹಾಸ :

ಭಾರತದ ಮೂಲ ನಿವಾಸಿಗಳಾದ ದ್ರಾವಿಡ ಜನಾಂಗದ ಉಪ ಜಾತಿಗಳಾದ ಮುಗೇರ ಯಾನೆ ಮೇರ, ಬಾಕುಡ, ಮುಂಡಾಲ, ನಲ್ಕೆ, ಚಮ್ಮಾರ, ಪರವ, ಪಂಬದ ಇತ್ಯಾದಿ ಜನಾಂಗದವರು ಮಂಜೇಶ್ವರದ ನಿವಾಸಿಗಳಾಗಿದ್ದಾರೆ.

ದಲಿತ ವರ್ಗದಲ್ಲಿ ಕೂಡಾ ರಾಜ ಮನೆತನದ ಇತಿಹಾಸಕ್ಕೆ ಸಂಬಂಧಪಟ್ಟ ವಿಚಾರಗಳು ಬೆಳಕಿಗೆ ಬರುತ್ತದೆ. ಸಾಧಾರಣ ಇತ್ತೀಚಿನ ತನಕ ಆಳಿತ ಉದಾಹರಣೆಗಳು ಕಂಡು ಬರುತ್ತದೆ. 'ಪಟ್ಟದ ಮೊಗರಿನ ಇತಿಹಾಸ, ಬಡಾಜೆಯ ಬಡಜನ ಅರಮನೆ ಮತ್ತು ಪಳ್ಳದ ಮುದ್ದಜ್ಜನ ಅರಮನೆಗಳೂ ಈಗಲೂ ಇದ್ದು ಪ್ರಸುತ್ತ ಮೇಲ್ವರ್ಗದವರ ಕೈವಶದಲ್ಲಿದೆ. ಹಾಗೆಯೇ ಈ ಪಟ್ಟದ ಮೊಗರಿನ ರಾಜನಾದ ಮೊಗೇರನು ಸಾಲಿಯಾನ್ ವಂಶಕ್ಕೆ ಸೇರಿದವನಾಗಿದ್ದಾನೆ (ಎಂದು ನಮ್ಮ ಹಿರಿಯ ತಲೆಮಾರಿನವರು ಹೇಳುತ್ತಾರೆ) ಅದೇ ರೀತಿಯಲ್ಲಿ ಇತರ ಪಂಗಡಗಳಾದ ಬಾಕುಡ, ಮುಂಡಾಲ, ನಲ್ಕೆಯವರು, ಮಾದಿಗರು ಕ್ರಮವಾಗಿ ನಾಗ ಮತ್ತು ಭೂತಾರಾಧನೆಯನ್ನು ಮೂಂಡಾಲದವರು ಕೋಟೆಯ ಬಬ್ಬುವನ್ನೂ ನಲ್ಕೆಯವರು ಭೂತಾರಾಧನೆಯನ್ನು ಮಾದಿಗರು (ಚಮ್ಮಾರರು) ಮಾರಿಯಮ್ಮನನ್ನು ಮತ್ತು ಪರವ ಪಂಬದರು ಭಗವತಿ ಹಾಗೂ ಇತರ ದೈವಗಳನ್ನು ಆರಾಧಿಸುತ್ತಾರೆ. ಮುಗೇರರು, ಮುಗೇರ ದೈವವನ್ನು ಆರಾಧಿಸುತ್ತಾರೆ.

## ಪ್ರಮುಖ ಹಬ್ಬಗಳು

ಈ ಜನಾಂಗದ ಪ್ರಮುಖ ಹಬ್ಬಗಳಾದ ವಿಶು (ಬಿಸು) ಶಿವರಾತ್ರಿ, ಭೂತಗಳ ಪರ್ಬ, ಪತ್ತನಾಜೆ, ಮೊದಲಾದವುಗಳನ್ನು ಕುಟುಂಬದ ಹಿರಿಯರೊಂದಿಗೆ ಸೇರಿ ಆಚರಿಸುತ್ತಾರೆ.

## ಸಂಪ್ರದಾಯ

ಈ ಮೇಲಿನ ಹೇಳಿದ ಜನಾಂಗಗಳ ನಡುವೆ ಯಾವುದೇ ವಿವಾಹ ಸಂಬಂಧ ನಡೆಯುವುದಿಲ್ಲ. ಮಾತ್ರವಲ್ಲ ಮದುವೆಯ ವಿಚಾರದಲ್ಲಿ ಭಿನ್ನತೆಗಳಿವೆ. ಈ ಜನಾಂಗಳಲ್ಲಿ ಸ್ತ್ರೀ ದಕ್ಷಿಣೆಯಿದೆ. ಅದು ಈಗಲೂ ಜಾಲ್ತಿಯಲ್ಲಿದೆ. ಸ್ತ್ರೀಯನ್ನು ಅಥವಾ ವಧುವನ್ನು ಹಣ ಕೊಟ್ಟು ಪಡೆದುಕೊಳ್ಳುವ ಸಂಪ್ರದಾಯವಿದೆ. ಈ ಎಲ್ಲಾ ವರ್ಗಗಳಲ್ಲಿ ಮದುವೆಯ ಸಂದರ್ಭದಲ್ಲಿ ಸೋದರ ಮಾವ, ತಂದೆ ತಾಯಿಯವರು ಪ್ರಮುಖ ಪಾತ್ರಗಳನ್ನು ವಹಿಸುತ್ತಾರೆ. ಆದರೆ ಈಗ ಸಂಪೂರ್ಣ ಬದಲಾಗುತ್ತಾ ಇದೆ.

## ಸಾಮಾಜಿಕ ನೆಲೆ

ತೀರಾ ಹಿಂದುಳಿದ ಸಮಾಜದಿಂದ ದುರ್ಬಲಗೊಂಡ ವಿಭಾಗವಾಗಿದೆ. ಜನಪದ ಸಾಂಸ್ಕೃತಿಕ ನೆಲೆಯಲ್ಲಿ ಮಹತ್ವವಾದ ಸ್ಥಾನ ಪಡೆದಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ತೀರ ಹಿಂದುಳಿದಿದೆ. ಮಾತ್ರವಲ್ಲದೆ, ಸಾಂಸ್ಕೃತಿಕ ರೀತಿಯಲ್ಲಿ ಮದುವೆ ಸಂದರ್ಭದಲ್ಲಿ ಹಾಡುವ ಜನಪದ ಪಾಡ್ದನಗಳೂ ಇವೆ. ಜನಪದ ನರ್ತನಗಳಾದ, ಚೆನ್ನು ನಲಿಕೆ, ಕರಂಗೋಲ್, ಆಟಿಕಳಂಜ ಮೊದಲಾದ ಕಲೆಗಳೂ ಈಗ ಸಮಾಜದಿಂದ ವಿರಳಗೊಂಡು, ಅಪೂರ್ವವಾಗಿದೆ.

ಒಂದೊಂದು ಸಮುದಾಯದ ಮುಖ್ಯ ವೃತ್ತಿಗಳೂ ಇವೆ. ಆದರೆ ಈ ಕಸುಬುಗಳು ಈಗ ಅಗೋಚರವಾಗಿದೆ. ಮಾತ್ರವಲ್ಲದೆ ಇದಕ್ಕೆ ಬೇಕಾಗುವ ಕಚ್ಚಾ ವಸ್ತುಗಳ ಅಭಾವ ಹಾಗೂ ಆರ್ಥಿಕತೆಯ ಅಡಚಣೆಯಾಗಿದೆ. ತೀರ ಹಿಂದುಳಿದ ಪ್ರದೇಶಗಳಲ್ಲಿ ಮಾತ್ರ ಕಂಡು ಬರುತ್ತದೆ.

ಪುರಾತನ ಗುಡಿ ಕೈಗಾರಿಕೆಗಳೂ ಈಗ ನಶಿಸುತ್ತಿರುವ ಘಟ್ಟದಲ್ಲಿದೆ. ಇದೆಲ್ಲವನ್ನೂ ಮತ್ತೆ ಪುನರ್ ಸ್ಥಾಪಿಸಿದರೆ ಉದ್ಯೋಗದ ಜೊತೆ ಅವರ ಸಾಮಾಜಿಕ ಸಾಂಸ್ಕೃತಿಕ ನೆಲೆಯನ್ನು ಜೀವಂತಗೊಳಿಸಬಹುದು. ಈ ನಿಟ್ಟಿನಲ್ಲಿ ಈ ವಿಭಾಗದ ಜನರಿಗೆ ಅತೀ ಹೆಚ್ಚಿನ ಸಹಾಯ ಸೌಲಭ್ಯಗಳನ್ನು ನೀಡಬೇಕು. ಇವಕ್ಕಾಗಿ ಪ್ರತ್ಯೇಕ ತರಬೇತಿಯನ್ನು ಏರ್ಪಡಿಸುವುದು ಇವರ ಆರ್ಥಿಕ ಪರಿಸ್ಥಿತಿಯಲ್ಲಿ ತೀರಾ ಗೊಂದಲವಿದೆ. ದಿನಾಲೂ ಕೂಲಿ ಉದ್ಯೋಗವನ್ನು ಮಾಡಬೇಕಾಗಿದ್ದು, ಅನಿವಾರ್ಯ ಕೆಳ ಮಟ್ಟದ ಸಂಬಳ, ಶೋಷಣೆ ಇತ್ಯಾದಿ ದೌರ್ಜನ್ಯಗಳು ನಡೆಯುತ್ತಲೇ ಇದೆ. ಈ ಜನಾಂಗದವರು ವಾಸಿಸುವ ಪರಿಸರದಲ್ಲಿನ ಮದ್ಯದಂಗಡಿಗಳನ್ನು ಮುಚ್ಚಿಸುವುದು ತೀರ ಅಗತ್ಯವಾಗಿದೆ. ಇದರ ಪರಿಣಾಮವಾಗಿ ಅವರು ತಮ್ಮ ಕುಟುಂಬವನ್ನು ಬೀದಿ ಪಾಲು ಮಾಡಿದ್ದಾರೆ. ಕುಡಿತ ಹಾಗೂ ಮಾದಕ ವಸ್ತುಗಳ ಬಗ್ಗೆ ಆ ಪ್ರದೇಶದಲ್ಲಿ ಜನ ಜಾಗೃತಿಯನ್ನು ಉಂಟುಮಾಡುವುದು ಅತ್ಯಂತ ಮಹತ್ವವಾಗಿದೆ.

## ವಸತಿ ಕಾರ್ಯ

ನಮ್ಮ ಪಂಚಾಯತಿಗೆ ಸಂಬಂಧಪಟ್ಟಂತೆ ಸುಮಾರು 2450ಕ್ಕೂ ಹೆಚ್ಚು ಜನಸಂಖ್ಯೆಯಿದೆ. ಇವರಿಗೆ ಒಟ್ಟು 370 ಮನೆಗಳೂ ಇವೆ. ಇದರಲ್ಲಿ 200 ಹಂಚಿನ ಮನೆಗಳೂ 170 ಹುಲ್ಲಿನ ಮನೆಗಳಿವೆ. ಇದರಲ್ಲಿ ST ಯವರ 80 ಮನೆಗಳಿವೆ ಅವುಗಳಲ್ಲಿ 50 ಹಂಚಿನ ಮನೆಗಳೂ ಉಳಿದ 30 ಮನೆಗಳಿಗೆ ಹಂಚು ಒದಗಿಸಲು ಸಹಾಯ ಧನ ಬೇಕಾಗಿದೆ.

ST ಯಲ್ಲಿನ ಕೊರಗ ಸಮುದಾಯದವರಿಗೆ ಅತೀ ಹೆಚ್ಚು ಮಹತ್ವವನ್ನೂ ವಿಶೇಷ ಸೌಲಭ್ಯವನ್ನೂ ಒದಗಿಸಬೇಕು. ಕೊರಗ ಸಮುದಾಯದ ಸ್ಥಳವನ್ನು ಕ್ರಿಶ್ಚನ್ ಮಿಶನರಿಯವರು ಕೈವಶದಲ್ಲಿ ಸಿರಿಕೊಂಡಿದ್ದಾರೆ. ಮಾತ್ರವಲ್ಲದೆ, ಇದರ ಸಂಪೂರ್ಣಪ್ರಯೋಜನವನ್ನು ಪಡೆಯಲು ಅಸಾಧ್ಯವಾಗಿದೆ. ಆದುದರಿಂದ ಈ ಸ್ಥಳವನ್ನು ಅವರದೇ ಆದ ಪ್ರಯೋಜನಕ್ಕೆ ವಿನಿಯೋಗಿಸಲು ಅವರಿಗೆ ಬೋಧನೆಯನ್ನು ಕೊಡುವುದು.

ಸುಮಾರು 100 ವರ್ಷಗಳಿಂದಲೂ ಕ್ರಿಶ್ಚಿನ್ ಸಮುದಾಯಕ್ಕೆ ಮತಾಂತರ ಗೊಂಡರೂ, ಇವರ ಸಾಮಾಜಿಕ ಆರ್ಥಿಕ ಪರಿಸ್ಥಿತಿ ಹಾಗೂ ಶಿಕ್ಷಣ ತೀರಾ ಹದಗೆಟ್ಟಿದೆ. ಉದಾ. : ಇಷ್ಟು ವರ್ಷಗಳಾದರೂ ಈ ಕ್ರೈಸ್ತ ಸಮುದಾಯದವರು ಅವರ ಮೂಲ ಶಿಕ್ಷಣದ ಕಡೆಗೂ ಆರ್ಥಿಕ ಸಮಸ್ಯೆಗೂ ಗಮನವನ್ನೇ ಕೊಟ್ಟಿಲ್ಲ. ಈ ತನಕ ಕೇವಲ ಮೂರು ಜನ ಮಾತ್ರ SSLC ಪಾಸಾದರು ಇರುವುದು. ಅವರಿಗೆ ಸರಿಯಾದ ಪ್ರಾಥಮಿಕ ಶಿಕ್ಷಣ ದೊರೆಯುವುದಿಲ್ಲ. ಅದಕ್ಕೆ ಬೇಕಾಗಿ ಒಂದು ರೆಸಿಡೆಂಟಲ್ ಶಾಲೆಯನ್ನು ತೆರೆಯುವುದು ಉತ್ತಮ. (ಕೋಷ್ಟಕ 1 ಮತ್ತು 2)

## ವಿದ್ಯಾಭ್ಯಾಸ

ಹಿಂದಿನ ಕಾಲದಲ್ಲಿ ಹೆಚ್ಚು ಶಾಲೆಗಳು ಇರಲಿಲ್ಲ. ಆದರೆ ಉಳಿದ ಶಾಲೆಗಳಲ್ಲಿ ಈ ವರ್ಗದವರನ್ನು ಸೇರುವಂತಿರಲಿಲ್ಲ. ಸಾಮಾಜಿಕ ವ್ಯವಸ್ಥೆಗಳು ತೀರಾ ಹದಗೆಟ್ಟಿದ್ದುವು. ಆದುದರಿಂದ ಹಿಂದಿನ ಕಾಲದಲ್ಲಿ ವಿದ್ಯಾಭ್ಯಾಸ ಪ್ರಮಾಮ ಕಡಿಮೆಯಲ್ಲಿತ್ತು. 20ನೇ ಶತಮಾನದಲ್ಲಿ ಸಾಮಾಜಿಕ ಕ್ರಾಂತಿಯೊಂದಿಗೆ ಬದಲಾವಣೆಯಾಗಿದೆ.

ಈಗ ವಿವಿಧ ರೀತಿಯ ವೃತ್ತಿಪರ, ಖಾಸಗಿ ವೈದ್ಯಕೀಯ, ಇಂಜಿನೀಯರಿಂಗ್, ಸ್ನಾತ್ತಕೋತ್ತರ ಪದವಿಗಳನ್ನು ಪಡೆದವರು ಕೇವಲ ಬೆರಳೆಣಿಕೆಯಷ್ಟು. ವಿದ್ಯಾಭ್ಯಾಸಕ್ಕೆ ಆರ್ಥಿಕ ಪರಿಸ್ಥಿತಿ ಕಾಡುತ್ತದೆ. ಜೊತೆಗೆ, ಬಡನತ, ಹಸಿವೆ, ವಸತಿಗಳ ಮತ್ತು ಬೆಳಕಿನ ಸಮಸ್ಯೆಗಳು ಕಾಡುತ್ತದೆ.

### ವಸತಿ 5 ಕೋಷ್ಟಕ 1

| ಈಗಿರುವ ಮನೆಗಳ ಸಂಖ್ಯೆ | | ಹಂಚಿನ ಮನೆಗಳ ಸಂಖ್ಯೆ | | ಹುಲ್ಲಿನ ಮನೆಗಳ ಸಂಖ್ಯೆ | | ಇನ್ನು ಆಗಬೇಕಾದ ಮನೆಗಳ ಸಂಖ್ಯೆ | | ಸ್ಥಳವೂ ಮನೆಯು ಇಲ್ಲದವರ ಸಂಖ್ಯೆ | | ಟೇರೆಸ್ ಮನೆಗಳ ಸಂಖ್ಯೆ | |
|---|---|---|---|---|---|---|---|---|---|---|---|
| SC | ST | SC | ST | SC | ST | SC | ST | SC | ST | SC | ST |
| 270 | 80 | 180 | 30 | 90 | 50 | 350 | 100 | 250 | 100 | 10 | 2 |

ಅಂಬೇಡ್ಕರ್ ನಗರ 4ನೇ ವಾರ್ಡ್‌ನಲ್ಲಿ ಇನ್ನೂ ಸುಮಾರು 90 ಮನೆಗಳೂ, 6ನೇ ಹಾಗೂ 1ನೇ ವಾರ್ಡಿನಲ್ಲಿವರು SC STಯವರಿಗೆ ಮನೆಗಳ ಸೌಲಭ್ಯ ದೊರೆತಿಲ್ಲ ಹಾಗೂ IHD ಕೊಲನಿಗಳಿಗೆ ಪರಿವರ್ತಿಸಬೇಕು ಇಲ್ಲಿ ಸುಮಾರು 150ಕ್ಕೂ ಹೆಚ್ಚು ಮನೆಗಳಿವೆ.

### ಕೋಷ್ಟಕ 2

| ಪರಿಶಿಷ್ಟ ವರ್ಗ ಹಾಗೂ ಪರಿಶಿಷ್ಟ ಪಂಗಡ (SC, ST)ಯವರ ಜನಸಂಖ್ಯೆಯ ವಿವರ | | | | | | | | | | | | | |
|---|---|---|---|---|---|---|---|---|---|---|---|---|---|
| 1994 ಜನಗಣತಿ ಪ್ರಕಾರ | | | | | | | | | | 1995-96 ಅಂಕಿ ಸಂಖ್ಯೆಗಳು | | | |
| ಒಟ್ಟು ಜನ ಸಂಖ್ಯೆ SC | ST | ಗಂಡಸು SC | ಸ್ತ್ರೀ | ಗಂ. ST | ಸ್ತ್ರೀ | SC ಗಂ. | ಸ್ತ್ರೀ | ST ಗಂ. | ಸ್ತ್ರೀ | 1 ರಿಂದ SSLC ವಿದ್ಯಾಭ್ಯಾಸ SC | ST | SC ಪದವಿ ಪಿಡಿಸಿ ಮಾಸ್ಟರ್ | ST ಹಾಗೂ ಇತರ ಡಿಗ್ರಿ |
| | | | | | | 1 ರಿಂದ 17ರ ವಯಸ್ಸಿನವರ ಸಂಖ್ಯೆ | | | | | | | |
| 1644 | 368 | 820 | 824 | 181 | 187 | 525 | 590 | 129 | 149 | 690 | 75 | 70 | 15 |

## ವಸತಿ

ಮನೆಗಳ ಹಂಚಿಕೆಯಲ್ಲಿ ಇದುವರೆಗೆ JRY Schcemನಲ್ಲಿ ಇದುವರೆಗೆ ನೀಡಿದ ಮನೆಗಳ ಅಂಕೆ. ಸಂಖ್ಯೆಗಳು ಈ ರೀತಿ ಇವೆ. 1993-'94 ರಿಂದ 1995-96ರ ತನಕ ಸಿಕ್ಕಿದ ಮನೆಗಳ ಒಟ್ಟು ಸಂಖ್ಯೆ 35 (ಪಂಚಾಯತ್‌ನಿಂದ) ಬ್ಲೋಕ್‌ನಿಂದ ಸಿಕ್ಕಿದ ಮನೆಗಳ ಅಂಕೆ ಸಂಖ್ಯೆ 85) ಆದರೆ ಅವರ ಪರಿಸರದಲ್ಲಿ ಶಾಲೆಗಳು ಕಾಲೇಜು ಯಾವುದೇ ಇಲ್ಲ. ಇದು ಒಂದು ಸಮಸ್ಯೆಗೆ ಪೂರಕವಾಗಿದೆ. ವಿದ್ಯಾಭ್ಯಾಸದ ಮಟ್ಟವನ್ನು ಗುರುತಿಸುವ ಕೋಷ್ಟಕ

### ಕೋಷ್ಟಕ 3

| | ಪರಿಶಿಷ್ಟ ವರ್ಗ ಮತ್ತು ಜಾತಿಯವರ ವಿದ್ಯಾಭ್ಯಾಸದಲ್ಲಿ ಹಿನ್ನಡೆ ತೋರಿಸುವ | | | | |
|---|---|---|---|---|---|
| ಮಂಜೇಶ್ವರ | ಪ್ರಾಥಮಿಕ<br>1 ರಿಂದ 4 | ಮಾಧ್ಯಮಿಕ<br>5-10 | PUC<br>PDC | ಪದವಿ | ಇತರ |
| | 150 | 100 | 25 | 10 | 2 |

ಇದು ಪ್ರತಿ ವರ್ಷದಲ್ಲಿ ಗೋಚರಿಸುವಂತದ್ದು ಆದರೆ ಇಂದು SC, ST ಯವರಿಗೆ ಸಿಗುವ ಸವಲತ್ತುಗಳಿಗಿಂತ ಮೊದಲು ಅವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯನ್ನು ಉತ್ತಮಗಳಿಸಿದರೆ ವಿದ್ಯಾಭ್ಯಾಸದ ಮಟ್ಟದಲ್ಲಿ ಮೇಲೆತ್ತಬಹುದು. ವೃತ್ತಿ ಪರ ಶಿಕ್ಷಣಕ್ಕಿಂತಲೂ ಶೋಷಣೆಯ ವಿರುದ್ಧ ಧ್ವನಿ ಎತ್ತಲು ಕನಿಷ್ಠ ಪಕ್ಷ SSLC ತನಕವಾದರೂ ವಿದ್ಯಾಭ್ಯಾಸಕ್ಕೆ ಒಂದು ಸರ್ವೆಯನ್ನು ತೆಗೆಸಿ ಅದರ ಅಧ್ಯಯನ ನಡೆಸುವ ಮತ್ತು ಜನಹಿತ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮುಂದಾಗಬೇಕು.

(ಶಾಲೆಗಳ ಕೋಷ್ಟಕ ನಂ. 4)

## ಪರಿಹಾರ

ST ವಿದ್ಯಾರ್ಥಿಗಳಂತೆಯೇ SC ವಿದ್ಯಾರ್ಥಿಗಳಿಗೆ ಉಚಿತ ಟ್ಯೂಶನ್ ಹಾಗೂ ತಿಂಗಳ ಭತ್ಯೆಯನ್ನು ಕೊಡುವುದು. ಮಾತ್ರವಲ್ಲದೆ, ರಾಜಕೀಯವನ್ನು ವಿದ್ಯಾರ್ಥಿ ಜೀವನದಿಂದ ದೂರವಿರಿಸುವುದು. SC, ST ಇರುವ ಪ್ರದೇಶಗಳಲ್ಲಿ LP ಮತ್ತು UP ಶಾಲೆಗಳನ್ನು ತೆರೆಯುವುದು. (ಕೋಷ್ಟಕ)

## ಆರೋಗ್ಯ

ಪ. ವರ್ಗ ಮತ್ತು ಪಂ.ದವರಲ್ಲಿ ಆರೋಗ್ಯದ ದೃಷ್ಟಿಯಲ್ಲಿ ಸಾಧಾರಣವಾಗಿದೆ. ಆದರೆ ಅವರ ಪರಿಸರದಲ್ಲಿ ಜನಸಾಂದ್ರತೆಯು ಜಾಸ್ತಿ ಆಗುವುದರಿಂದ ಆರೋಗ್ಯದ ದೃಷ್ಟಿಯಲ್ಲಿ ಮಹತ್ತರವಾದ ಬದಲಾವಣೆ ಬೇಕು. ಈ ಪ್ರದೇಶ ಜನರಲ್ಲಿ ಸಾಮಾನ್ಯ ಶೌಚಾಲಯವೂ ಇಲ್ಲ. ಮನೆಗೆ ಪೂರಕವಾದ, ಆರೋಗ್ಯಕ್ಕೆ ಪರಿಸರ ಮಾಲಿನ್ಯದ ಬಗ್ಗೆ ತರಬೇತಿ ಶಿಬಿರ ನೀಡಬೇರಕು. ಇವರ ಜನ ಮರಣದ ಅಂಕಿ ಸಂಖ್ಯೆಗಳನ್ನು ಈ ಕೆಳಗೆ ಕೊಡಲಾಗಿದೆ. ಕೋಷ್ಟಕ 5.

## ಮಂಜೇಶ್ವರ ಗ್ರಾಮ ಪಂಚಾಯತ್

SC, ST ಕಾಲನಿಗಳಲ್ಲಿ ಶಾಲೆ ಇದೆಯೋ ಇಲ್ಲವೋ ಕೋಷ್ಠಕ 4

| ವಾರ್ಡ್ ನಂಬ್ರ | L.P. School | UP School | HS | College | UHSC | ಬೇಕಾದ್ದು |
|---|---|---|---|---|---|---|
| 1 | 1 | 1 | 1 | - | 1 | LP, UP (1) |
| 2 | 1 | - | - | - | - | - - |
| 3 | - | - | - | - | - | LP, UP |
| 4 | - | 1 | - | 1 | - | LP |
| 5 | 1 | 1 | 1 | - | - | - |
| 6 | 1 | 1 | 1 | - | | 1.54 Acre Resource land LP, UP Shifted Rs. 9713 |
| 7 | - | - | - | - | - | - |
| 8 | - | - | - | - | - | - |
| 9 | - | - | - | - | - | - |
| 10 | - | - | - | - | - | - |
| 11+12 | - | - | - | - | - | ವಿದ್ಯಾ ಇಲಾಖೆಗೆ ಹಸ್ತಾಂತರಿಸಲಾಗಿದೆ. |

ಬಂಗ್ರ ಮಂಜೇಶ್ವರ 6ನೇ ವಾರ್ಡಿನ ವಾಮಂಜೂರು LP ಶಾಲೆಗಳಿಗೆ Rs. 97/3. 1.54 Acre ಸ್ಥಳವನ್ನು 1980 ರಲ್ಲಿ ಕಾದಿರಿಸಿದೆ. ಬಾಡಿಗೆ ಕಟ್ಟಡದಲ್ಲಿರುವ ಶಾಲೆಯನ್ನು ಹೊಸ ಕಟ್ಟಡಕ್ಕೆ ವರ್ಗಾಯಿಸಬೇಕು ಹಾಗೂ 4 ಮತ್ತು 3ನೇ ವಾರ್ಡ್‌ಗಳಲ್ಲಿ UP, LP ಶಾಲೆಗಳಲ್ಲಿ ತೆರೆಯಬೇಕು.

## ಮಂಜೇಶ್ವರ ಗ್ರಾಮ ಪಂಚಾಯತ್

**ಕೋಷ್ಠಕ 5**

| | SC, ST ಯವರ ಜನನದ ಅಂಕಿ ಅಂಶಗಳು | | | | ಮರಣದ ಪ್ರಮಾಣ | | |
|---|---|---|---|---|---|---|---|
| ವಾರ್ಡ್ | 92-93 | 93-94 | 94-95 | | 92-93 | 93-94 | 94-95 |
| 1 | 22 | 20 | 18 | | 4 | 1 | 2 |
| II | 26 | 21 | 20 | | 3 | 1 | 2 |
| III | 10 | 12 | 6 | | 1 | - | 1 |
| IV | 4 | 9 | 15 | | 5 | 5 | 10 |
| V | 2 | 1 | 3 | | - | 1 | 2 |
| VI | 8 | 13 | 10 | | 2 | 4 | 3 |
| VII | 4 | 6 | 4 | | 1 | - | 3 |
| VIII | 7 | 3 | 9 | | 1 | 3 | - |
| IX | 5 | 1 | 1 | | 1 | - | - |
| X | - | - | - | | - | - | - |
| XI | - | - | - | | - | - | - |
| XII | - | - | - | | - | - | - |
| Total | 88 | 72 | 76 | | 18 | 15 | 23 |

(ಗರ್ಭಿಣಿ ಸ್ತ್ರೀ ಮರಣ ಹಾಗೂ 1 ತಿಂಗಳಿನಿಂದ ಹಿಡಿದು 612 ತಿಂಗಳ ಒಳಗಿನ ಮಕ್ಕಳ ಮರಣದ ಪ್ರಮಾಣ ತಿಳಿದು ಬಂದಿಲ್ಲ.)

ರೋಗಗಳಿಂದ ಅಕಾಲಿಕ ಮರಣ ಹೊಂದಿದವರ ಬಗ್ಗೆ ವಿವರ ತಿಳಿದಿಲ್ಲ.

1ನೇ ವಾರ್ಡಿನಲ್ಲಿ STಯವರ 2 ಕುಟುಂಬಗಳಲ್ಲಿ T.B. ರೋಗದಿಂದ ಮೃತಪಟ್ಟಿದ್ದಾರೆ.

4ನೇ ವಾರ್ಡಿನಲ್ಲಿ ಇಬ್ಬರು ಬ್ಲಡ್ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಾರೆ.

6ನೇ ವಾರ್ಡಿನಲ್ಲಿ ಒಬ್ಬರು TBಯಿಂದಲೂ ಒಬ್ಬರು ಗರ್ಭಿಣಿ 42 ದಿನಗಳಲ್ಲಿಯೂ ಮೃತಪಟ್ಟಿದ್ದಾರೆ.

## ಮುಖ್ಯ ಕಸುಬುಗಳು

ಪರಂಪರಾಗತವಾಗಿ ಬಂದಿರುವ ಕಸುಬುಗಳು ಈಗ ನಾಶವಾಗುತ್ತಾ ಇದೆ. ಚಾಪೆ ಹೆಣೆಯುವುದು. ಬುಟ್ಟಿ ಹೆಣೆಯುವುದು. ಚರ್ಮ ಹದಮಾಡುವುದು. ಓಲೆ ಹೆಣೆಯುವುದು. ಸುಣ್ಣ ಮಾಡುವುದು. ಮುಟ್ಟಾಪಾಲೆ ಮಾಡುವುದು. ಈಗ ಕೇವಲ ಹೆಸರಿಗೆ ಮಾತ್ರ ಆದರೆ ಈ ಮೂಲಕ ಕುಲ ಕಸುಬುಗಳು. ಗುಡಿ ಕೈಗಾರಿಕೆಗಳು ನಾಶವಾಗುತ್ತಾ ಇವೆ. ಇದನ್ನು ಸ್ವಉದ್ಯೋಗ ಹಾಗೂ ಇತ್ತರ ಸಹಾಯಗಳನ್ನು ನೀಡಿ ಅದನ್ನು ಮತ್ತೆ ಪುನರ್‌ಜೀವನಗೊಳಿಸಬೇಕು.

## ಅಭಿವೃದ್ಧಿ ಹೇಗೆ ?

ಇದುವರೆಗೆ ನಮ್ಮ ಅಭಿವೃದ್ಧಿ ಕುಂಠಿತವಾಗಿದೆ ನಮ್ಮ ಅಭಿವೃದ್ಧಿಗೆ ಪೂರಕವಾದ ಹಲವಾರು ಕಾರ್ಯಕ್ರಮಗಳು.

1 ಸ್ವಂತವಾಗಿ ಮಾವೇಲಿ ಸ್ಟೋರ್‌ಗಳನ್ನು ಮಂಜೇಶ್ವರ ಪ್ರಮುಖ ಪ್ರದೇಶಗಳಲ್ಲಿ ಸ್ಥಾಪಿಸಿ ಉದ್ಯೋಗ ನೀಡುವಿಕೆ.

2. ಇಲ್ಲಿಯ ಪರಿಶಿಷ್ಟ ವರ್ಗ ಮತ್ತು ಪಂಗಡದವರು ಶ್ರಮ ಜೀವಿಗಳಾದವರು, ಇವರಿಗೆ ತಾಂತ್ರಿ, ವಿದ್ಯಾಭ್ಯಾಸದ ಕೊರತೆ ಅವರಲ್ಲಿರುವುದರಿಂದ ಆಧುನಿಕ ಉದ್ಯೋಗವಕಾಶಗಳಾದ, ಕಂಪ್ಯೂಟರ್, ಮೇರಿನ್ ಇಂಜಿನಿಯರಿಂಗ್ ಹಾಗೂ ಇತರ ತಾಂತ್ರಿಕ ಕೇಂದ್ರಗಳನ್ನು ತೆರೆದು ಆರ್ಥಿಕ ಸಹಾಯವನ್ನು ಒದಗಿಸಿ ತರಬೇತಿ ನೀಡುವುದು.

3. ಕೈಗಾರಿಕಾ ತರಬೇತಿ ಕೇಂದ್ರ ಬೇಕಾಗಿದೆ. ಜೊತೆಗೆ ಈ ಜನಾಂಗದ ವಿದ್ಯಾವಂತರಿಗೆ ಹೊಲಿಗೆ ತರಬೇತಿ, ಉತ್ಪಾದನಾ ಕೇಂದ್ರ ರೇಡಿಯೋ ಟಿ.ವಿ. ಇನ್ನಿತರ ಇಲೋಕ್ಟ್ರೋನಿಕ್ ತರಬೇತಿ ಕೇಂದ್ರಗಳು.

4. ಸ್ವ ಉದ್ಯೋಗದ ಸಾಲದ ಪ್ರಮಾಣವನ್ನು ಸರಳಗೊಳಿಸಬೇಕು. ಆದಾಯ ಮಿತಿಯನ್ನು ಈ ಸಮುದಾಯದವರಿಗಿರುವ ಮಾನದಂಡವನ್ನು ಮಾನದಂಡವನ್ನು ತೆಗೆದು ಹಾಕಬೇಕು.

5. ಬಾಲವಾಡಿ/ಅಂಗನವಾಡಿಗಳಲ್ಲಿ ಈ ವರ್ಗದ ಮಹಿಳೆಯರಿಗೆ ಮೊದಲ ಆದ್ಯತೆ ನೀಡುವುದು ಮಾತ್ರವಲ್ಲದೆ ಅದರ ತರಬೇತಿಗೆ ವಿದ್ಯಾವಂತ ನಿರುದ್ಯೋಗಿ ಮಹಿಳೆಯರನ್ನು ಕಳಿಸಿಕೊಡುವುದನ್ನು ಶೀಘ್ರವಾಗಿ ಮಾಡುವುದು, ಇಲ್ಲಿ ಎಷ್ಟೋ ಉದ್ಯೋಗದ ಅವಕಾಶಗಳು ವಿಫುಲವಾಗಿದೆ.

ನಕಲಿ ಜಾತಿ ಪ್ರಮಾಣ ಪತ್ರವನ್ನು ನೀಡುವುದನ್ನು ತಡೆಗಟ್ಟಬೇಕು, ಇದರಿಂದ ನಮ್ಮ ಮೂಲ ಹಕ್ಕನ್ನು ಕಳೆದುಕೊಳ್ಳುತ್ತೇವೆ.

**ಮಂಜೇಶ್ವರ ಗ್ರಾಮ ಪಂಚಾಯತ್** **ಕೋಷ್ಟಕ 7-6**

10-2 ಅಂಬೇಡ್ಕರ್ ಕಾಲನಿಗಳಿಗೆ ವಿದ್ಯುತ್ ಸಂಪರ್ಕ ನೀಡಲಾದ ಕುರಿತು ಮಾಹಿತಿಗಳು

| ವಾರ್ಡ್ ನಂಬ್ರ | ಕಾಲನಿಯ ಹೆಸರು | ವಿದ್ಯುತ್ ಸಂಪರ್ಕ ದೊರತ ಕುಟುಂಬಗಳು ಸಂಖ್ಯೆ | ಉಚಿತ ಸ್ಲಾಬನಲ್ಲಿ ನೀಡಲಾದ ವಿದ್ಯುತ್ ಸಂಪರ್ಕಗಳು ಸಂಖ್ಯೆ | ಹಣತೆತ್ತು ವಿದ್ಯುತ್ ಸಂಪರ್ಕ ಪಡೆದ ಕುಟುಂಬಗಳ ಸಂಖ್ಯೆ |
|---|---|---|---|---|
| I | ತೂಮಿನಕಾಡು | 25 | 25 | 10 |
| IV | ಅಂಬೇಡ್ಕರ್ | 55 | 55 | 10 |
| VI | ಶಾಂತಿನಗರ ಮತ್ತು ಪರಿಸರ | - | - | 15 |

## ಇನ್ನು ಸೌಲಭ್ಯ ದೊರೆಯಬೇಕಾದ ಮನೆಗಳ ಸಂಖ್ಯೆ

| ವಾರ್ಡ್ ನಂಬ್ರ | ಕಾಲನಿಯ ಹೆಸರು | ವಿದ್ಯುತ್ ಸೌಲಭ್ಯ ದೊರೆಯಬೇಕಾದ ಮನೆ | ಉಚಿತ ಸ್ಲಾಬ್‌ನಲ್ಲಿ | |
|---|---|---|---|---|
| 1 | ತೂಮಿನಕಾಡು | 30 | 30 | - |
| II | - | 5 | 5 | - |
| III | ಇಡ್ಯ ಕೊಲನಿ | 3 | 3 | - |
| IV | ಅಂಬೇಡ್ಕರ್ ಗ್ರಾಮ | 50 | 50 | - |
| V | - | 8 | 8 | - |
| VI | ಶಾಂತಿನಗರ | 100 | 100 | - |
| VII | - | 3 | 3 | - |
| VIII | - | 5 | 5 | - |
| IX | - | - | - | - |
| X | - | - | - | - |
| XI | - | - | - | - |
| XII | - | - | - | - |
| | ಒಟ್ಟು ಮೊತ್ತ | 201 | 201 | |

ಇಲ್ಲಿರುವ ಯಾವುದೇ ಕೊಲನಿಗೆ ದಾರಿ ದೀಪದ ವ್ಯವಸ್ತೆ ಇಲ್ಲ. ಈ ಕೊಲನಿಗಳಿಗೆ ದಾರಿ ಸರಿಯಾಗಿ ಇಲ್ಲ ಆದರೂ ವಿದ್ಯುತ್ ಸೌಲಭ್ಯಗಳಿರುವ ಪ್ರದೇಶಗಳಲ್ಲಿ ದಾರಿ ದೀಪದ ವ್ಯವಸ್ಥೆಯನ್ನು ಮಾಡಲೇಬೇಕು.

## ಮಂಜೇಶ್ವರ ಗ್ರಾಮ ಪಂಚಾಯತ್ ಕೋಷ್ಟಕ 7

## ST ಕೊಲನಿ

## ವಿದ್ಯುತ್ ಸಂಪರ್ಕದ ಬಗ್ಗೆ

| ವಾರ್ಡ್ ನಂಬ್ರ | ಕಾಲನಿಯ ಹೆಸರು | ವಿದ್ಯುತ್ ಸಂಪರ್ಕ ದೊರೆತ ಕುರುಬ ಸಂಖ್ಯೆ | ಉಚಿತ ಸ್ಲಾಬ್‌ನಲ್ಲಿ ನೀಡಲಾದ ಸಂಖ್ಯೆ | ಹಣತೆತ್ತು ಸಿಕ್ಕಿದ್ದು | ಇನ್ನೂ ದೊರೆಯ ಬೇಕಾದ ವಿದ್ಯುತ್‌ಸೌಲಭ್ಯ |
|---|---|---|---|---|---|
| 1 | ST Coolny (ಕೊರಗ) | 80 | 80 | - | 35 |
| " | 80 | 80 | - | - | 35 |

ಪ್ರತಿ ಕೊಲನಿಗೆ ಹೋಗುವ ದಾರಿಗೆ ದಾರಿ ದೀಪದ ವ್ಯವಸ್ಥೆಯನ್ನು ಮಾಡಲು ಮೊದಲ ಆದ್ಯತೆಯನ್ನು ನೀಡಬೇಕು. ಬಹುಶ ಅದು ಇನ್ನೂ ದೊರೆತಿಲ್ಲ.

SC ಮತ್ತು STಯವರಿಗೆ ಬೆಳಕಿನ ಅವಶ್ಯಕತೆ ಇದೆ. ಉಚಿತ ಈ ವಿದ್ಯುತ್ ಸೌಲಭ್ಯಗಳಿಗೆ 4 ಅಥವಾ 5 ವರ್ಷಗಳೂ ಕಾದರೂ ಸಿಗುವುದು ದುಸ್ತರವಾಗಿದೆ. ಕೃಷಿ ಮಾಡುವ, ಅಥವಾ ಯಾವುದೇ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯವಾಗದು. ಈ ವಿದ್ಯುತ್ ಸರಬರಾಜು ಮಾಡುವುದು ಮೂಲ ಅವಶ್ಯಕತೆಗಳಲ್ಲಿ ಒಂದಾಗಿದೆ.

ಇನ್ನೂ ಸುಮಾರು 250 ಕ್ಕಿಂತಲೂ ಅಧಿಕ ಮನೆಯವರು ಬೆಳಕಿನ ಸೌಕರ್ಯವಿದೆ ಇದ್ದಾರೆ. ಎಂಬುದಕ್ಕೆ ಈ ಕೋಷ್ಟಕ ಉದಾಹರಣೆ

ಈ ಪ್ರದೇಶ ದಾರಿಗಳಿಗೂ ದಾರಿ ದೀಪದ ವ್ಯವಸ್ಥೆ ಇಲ್ಲ.

# ಮಂಜೇಶ್ವರ ಗ್ರಾಮ ಪಂಚಾಯತ್ ಕೋಷ್ಟಕ 8

## ಪರಿಶಿಷ್ಟ ಜಾತಿ ಮತ್ತು ಜಾತಿಯ ಕೊಲನಿಗಳಿಗೆ ಬೇಕಾದ ಹೊಸ ರಸ್ತೆಗಳು ಮತ್ತು ಅದರ ವಿವರಗಳು

| ವಾರ್ಡ್ | ಮಣ್ಣಿನ ರಸ್ತೆ | ಡಾಮರೀಕರಣದ ರಸ್ತೆ ರಿಪೇರಿ | ಇನ್ನು ಆಗಬೇಕಾದ ರಸ್ತೆ | ಹಾಳಾದ ರಸ್ತೆ | ಷರಾ |
|---|---|---|---|---|---|
| | ಕುಂಜುತ್ತೂರು ಬಸ್‌ಸ್ಟ್ಯಾಂಡ್‌ನಿಂದ | ತೂಮಿನಕಾಡು | 2 ಕಿ.ಮೀ. | ಹೌದು | ಡಾಮರೀಕರಣ ಮತ್ತು |
| 1 | ಕೆದುಂಬಾಡಿ | ನಿಂದ | - | | ನೀರಿನ ನಲ್ಲಿ ವ್ಯವಸ್ಥೆ |
| | (ಮಹಾಕಾಳ ದೇವಸ್ಥಾನ ರಸ್ತೆ) | ಕೆದುಂಬಾಡಿ | | | ಚರಂಡಿ ವ್ಯವಸ್ಥೆ |
| | ಕುಂಜುತ್ತೂರು ಬಸ್‌ಸ್ಟ್ಯಾಂಡ್ | - | 2 ಕಿ.ಮೀ. | ಹೌದು | ದಾರಿದೀಪದ |
| | ಒಳಗಾನ ರಸ್ತೆಯಾಗಿ | | | | ವ್ಯವಸ್ಥೆ ಇಲ್ಲ |
| | ಕೆದುಂಬಾಡಿ | 1/2 ಕಿ.ಮೀ. | | | |
| | ಕಣ್ವತೀರ್ಥ ರೈಲ್ವೇ ಗೇಟನಿಂದ | ಡಾಮರೀಕರಣ | ಹೌದು | ಹೌದು | " |
| | ಹೊರಟ ರಸ್ತೆ Fishering Area | | | | |
| | ತಲಪಾಡಿಯಿಂದ ಅಂಜರೆ | | | 4 ಕಿ.ಮೀ. | |
| | ಪಾವೂರು ಪಳ್ಳ ನಿಂದ | ಹೊಸರ ರಸ್ತೆ | ಹೊಸರಸ್ತೆ | ಹೌದು | " |
| | ಕುಂಜತ್ತೂರು ಮಾಡ | | | | |
| III | ಇಡ್ಯಕೊಲನಿ | ಉಳಿದ ರಸ್ತೆ | ಹೌದು | ಹಾಳದ್ದು | ಡಾಮರೀಕರಣ |
| IV | ಚೆಂಪಡವು ರಸ್ತೆ | ಡಾಮರೀಕರಣ | ಹೌದು | ಹಾಳಾದ್ದು | |
| | ವಯನಾಡ್ Road to AmbedkarNagar | 100 Mtrs | ಹೊಸತ್ತು | ಹೊಸತ್ತು | |
| IV | RK Road to ಪೋಸೋಡು | 700 Mtrs | | | ದಾರಿದೀಪ ವ್ಯವಸ್ಥೆ ಇಲ್ಲ |
| | ಗಾಂದಳಿಕೆ | ಹೌದು | ದುರಸ್ಥಿ | | |
| | NH 17 ನಿಂದ ಅಂಬೇಡ್ಕರ್ ನಗರಕ್ಕೆ | 1ಕಿ.ಮೀ. | ಹೌದು | ದುರಸ್ತಿ | |
| | GPM College Road to | | | | |
| | GUPS Gudde | 1 ಕಿ.ಮೀ. | ಹೊಸತ್ತು | ಹೊಸತ್ತು | |
| | ಅಂಬೇಡ್ಕರ್ ಕಾಲನಿಯಿಂದಾಗಿ | | | | |
| | ಪಳ್ಳಿಯಾಗಿ NHಗೆ ಜೋಡಣೆ | 1 ಕಿ.ಮೀ. | " | " | |
| | ಅಂಬೇಡ್ಕರ್ ರೋಡ್‌ನಿಂದ ಪಾವೂರು | | | | |
| | ಬಡಾಜೆ ರೋಡ್ ಜೋಡಣೆ | 200 Mtrs. | ಹೌದು | ರಿಪೇರಿ | |
| | ಮಾನಿಂಜ ರಸ್ತೆ ಯಿಂದ | | | | |
| | ಉದ್ಯಾವರ ಮಾಡ | 2ಕಿ.ಮೀ. | " | ಹೊಸತು | |
| | ಸತ್ಯನಾರಾಯಣ ಭಜನಾ ಮಂದಿರ | | | ಸಂಕಬೇಕು | |
| | ರಸ್ತೆಯಿಂದ | | | | |
| | ಅಂಬಿತ್ತಡಿ ರಸ್ತೆ ಜೋಡಣೆ | 700 Mtrs. | ಹೊಸತು | ಹೌದು | |
| VI | ಶಾಂತಿನಗರದ ಎಲ್ಲಾ ರಸ್ತೆ | | | | |
| | ಹೊಸಂಗಡಿಗೆ ವಿವಿಧ ಕಡೆಗಳಿಂದ | | | | |
| | ಸೇರುತ್ತದೆ ಮತ್ತು ಅಂಗಡಿಪದವು | - | ಹಳತ್ತು | ರಿಪೇರಿ | ಡಾಮರೀಕರಣ |
| | ನಿತ್ಯಾನಂದ ಭಜನೆ ಮುಂದಾಗಿ ಎಣ್ಣೆ ಪಚ್ಚು | | ಹೊಸತ್ತು | ರಿಪೇರಿ | ದಾರಿದೀಪ ಇಲ್ಲ |
| | ಆಗಿ ಚೆಕ್ ಪೋಸ್ಟ್ ಸೇರುತ್ತದೆ | | | | |
| | NH ನಿಂದ ಮೂಡುಭಾಗಕ್ಕೆ | | | | |
| | ಎಣ್ಣೆಪಡ್ಪು (ಭಜನಾ ಮಂದಿರ ಹಿಂದಿನ ಭಾಗ) | 1 ಕಿ.ಮೀ. | ಹೊಸತ್ತು | ರಿಪೇರಿ | ದಾರಿದೀಪ ಇಲ್ಲ |

SC, ST ಯ ಪಂಡ್ ಬಂದರೂ ಬೋರ್ಡ್‌ನವರು ಸಹಾಯ ಧನ ನೀಡುವುದಿಲ್ಲ ಇಷ್ಟು ದಾರಿಗಳಿಗೆ ದಾಮರೀಕರಣವಾಗಿಲ್ಲ ಈ ದಾರಿಗಳಿಗೆ ವಿದ್ಯುತ್ ದೀಪದ ಸೌಕರ್ಯವಿಲ್ಲ. ಮುಸ್ಲಿಮರ ಪ್ರತಿಯೊಂದು ಕೇರಿಗೆ ದಾರಿಯಾಗಿದೆ ಆದರೆ ನಮ್ಮ ಅಭಿವೃದ್ಧಿಯಾಗಲು ಇವರಿಂದ ಸಹಕಾರ ಸಿಗುವುದಿಲ್ಲ ಎಂಬುದಕ್ಕೆ ಈ ಕೋಷ್ಟಕ ಸಾಕ್ಷಿ.

## ಸಾರಿಗೆ ಸಂಪರ್ಕ

ಈ ಮೇಲೆ ಕಾಣಿಸಿದ ಕೋಷ್ಟಕಗಳಲ್ಲಿರುವ ದಾರಿಗಳೂ ಹಿಂದೆಯೇ ಇದ್ದು ಅದರ ರಿಪೇರಿಗಗಾಲಿ, ದಾಮರೀಕರಣಕ್ಕೆ ಬೇಕಾದ ಸವಲತ್ತುಗಳು ಸಿಗುವುದಿಲ್ಲ ಸರಕಾರದಿಂದ ಬಂದಿರುವ ಹಣಗಳನ್ನು ಬೇರೆ ಕಾರ್ಯಗಳಿಗೆ ಹಾಕುವುದರಿಂದ ನಮ್ಮಲ್ಲಿಗೆ ಬಂದು ತಲಪುದಿಲ್ಲ.

ಈ ಸಾರಿಗೆಯ ಸಂಪರ್ಕದಿಂದಾಗಿ ನಮ್ಮಲ್ಲಿ ಹೊಸ ಕಾರ್ಖಾನೆಗಳು, ಶಾಲೆಗಳು ಇನ್ನಿತರ ಗುಡಿ ಕೈಗಾರಿಗೆಳ ಬೆಳವಣಿಗೆ ಅಗತ್ಯ ಒಂದು ಪ್ರದೇಶ ಬೆಳವಣಿಗೆಯಾಗಬೇಕಾದರೆ ಸಾರಿಗೆ ಸಂಪರ್ಕ ಅಗತ್ಯ. ರೋಗಗಳು, ತುರ್ತು ಪರಿಸ್ಥಿತಿಯಾದ ಸಂದರ್ಭದಲ್ಲಿ ರೋಗಿಗಳನ್ನು ಕೊಂಡು ಹೋಗಲು ಸಾಧ್ಯವಿರುವುದಿಲ್ಲ. ಆದ್ದರಿಂದ ಈ ದಾರಿಗಳನ್ನು ಸಂಚಾರಿ ಯೋಗ್ಯ ರಸ್ತೆಗಳನ್ನಾಗಿ ಮಾರ್ಪಡಿಸಿ ಈ ದಾರಿಗಳಿಗೆ ದಾರಿ ದೀಪದ ವ್ಯವಸ್ಥೆಯನ್ನು ಮಾಡಿಕೊಡುವುದು ಅನಿವಾರ್ಯವಾಗಿದೆ.

## ಉಪ ಸಂಹಾರ

ಮಂಜೇಶ್ವರ ಪಂಚಾಯತಿನಲ್ಲಿ ಒಟ್ಟು ಜನ ಸಂಖ್ಯೆಯಲ್ಲಿ SC, ST ಯವರು 3 ನೇ ಸ್ಥಾನ ಪಡೆದಿದ್ದಾರೆ. ಇವರು ಆರ್ಥಿಕವಾಗಿ ಸಾಮಾಜಿಕವಾಗಿ ತೀರಾ ಹಿಂದುಳಿದು ಬಿಟ್ಟಿದ್ದಾರೆ. ಸಾಂಸ್ಕೃತಿಕವಾಗಿ ಮತ್ತು ಜನಪದ ಸಂಪತ್ತುಗಳೊಂದಿಗೆ ತೀರಾ ಅವಸಾನ ಹೊಂದುವ ನೆಲೆಯಲ್ಲಿದೆ. ಅದು ಅಲ್ಲದೇ ತೀರ ಶೋಷಿತವಾದ ಜನಾಂಗದ ಕೊರಗ ಸಮುದಾಯವನ್ನು ಕ್ರಿಶ್ಚಿನಣ ಮಿಶನರಿಯವರು ದತ್ತು ಪಡೆದು ಸುಮಾರು 100 ವರ್ಷಗಳಾದರೂ ಅವರ ಸಾಮಾಜಿಕ ನೆಲೆಯನ್ನು ಕಾಣುವುದಾದರೆ ಈಗಲೂ ಕೀಳರಿಮೆಯನ್ನು ಬಿಟ್ಟಿಲ್ಲ. ಅವರ ಪರಿಸರವಾಗಲಿ ಮನೆಗಳಾಗಲಿ ತೀರಾ ಅನಾಗರಿಕ ಸ್ಥಿತಿಯಿಂದ ಕೂಡಿದೆ. ಆದರೆ ಕ್ರೈಸತ್ತ ಸಮುದಾಯದವರು ಕೊರಗರ ಸ್ವಂತ ಸ್ಥಳವಾದ 292.45 ಎಕರೆ ಭೂಮಿಯನ್ನು ಕೈವಶಪಡಿಸಿಕೊಂಡಿದ್ದಾರೆ. ಮಾತ್ರವಲ್ಲ. ಸರಕಾರವೂ ಅದನ್ನು ಖಾಸಗಿ ವ್ಯಕ್ತಿಗಳಿಗೆ ಉದ್ದಿಮೆಗಳಿಗೆ ನೀಡುವ ಹುನ್ನಾರ ನಡೆಸಿದೆ. ಇಂರಿಂದ ಇಲ್ಲಿನ ಮೂಲ ನಿವಾಸಿಗಳನ್ನು ಬೀದಿಗೆ ದೂಡುವ ಪ್ರಯತ್ನ ಮಾಡುತ್ತಿದ್ದಾರೆ. ಈ ಸಮುದಾಯವಿರುವ ಪ್ರದೇಶದಲ್ಲಿ ಜನಪರವಾದ ಕಲ್ಯಾಣ ಕ್ರಮಗಳನ್ನು ಕೈಗೊಂಡಿಲ್ಲ. ಶಾಲೆಗಳಾಗಲಿ, ಸರಕಾರಿ ಬಾವಿಗಳಾಗಲಿ, ದೂರದರ್ಶನದ ವ್ಯವಸ್ಥೆಯಾಗಲಿ ಅಂಬೇಡ್ಕರ್ ಸಮಾಜ ಭವನವಾಗಲಿ ಇಲ್ಲ. ST ಯಲ್ಲಿರುವ ವಿದ್ಯಾವಂತ ರೊರಗ ಸಮುದಾಯದವಿರಗೆ ಮಂಜೇಶ್ವರ ಸರಕಾರಿ, ಅಥವಾ ಪಂಚಾಯತು, ಸಹಕಾರಿ ಬ್ಯಾಂಕುಗಳಲ್ಲಾದರೂ ಕೆಲಸ ದೊರೆಸುವುದು ತೀರ ಅಗತ್ಯವಾಗಿದೆ. ಕೊರಗ ಸಮುದಾಯದ ಜನರಿಗೆ, ಪ್ರಾಥಮಿಕ ಶಿಕ್ಷಣದ ಕೊರತೆಯು ಇದೆ. ಇದುವರೆಗೆ ಕೇವಲ ಮೂರು ಜನ ಮಾತ್ರ SSLC ಪಾಸಾಗಿದ್ದಾರೆ. ಅವರಿಗೆ ಉದ್ಯೋಗವು ಇಲ್ಲ. ಈಗ ಈ ಒಂದನೇ ವಾರ್ಡ್‌ನಲ್ಲಿ ಒಂದು ಸ್ಮಶಾನದ ಅಗತ್ಯವಿದ್ದು, ಅದಕ್ಕೆ ಬೇಕಾದ ಚಿತಾಗಾರವನ್ನು ಒದಗಿಸುವುದು ಅಗತ್ಯ. SC, STಯಲ್ಲಿರುವ ಕೊಲನಿಗಳಲ್ಲಿನ ಸ್ಮಶಾನಗಳನ್ನು ಪುನರುಜ್ಜೀವನಗೊಳಿಸಬೇಕು.

ಒಂದನೇ ವಾರ್ಡಿನ ಪಾವೂರುಪಳ್ಳ ಹಾಗೂ 4ನೇ ವಾರ್ಡಿನ ಅಂಬೇಡ್ಕರ್ ಗ್ರಾಮದಲ್ಲಿರುವ ಪಳ್ಳವನ್ನು ಒಂದು ಬೃಹತ್ ಕ್ರೀಡಾಂಗಣವಾಗಿ ಪರಿವರ್ತಿಸಬೇಕು. ಇಲ್ಲಿ ಬದಿಗೆ ಕಲ್ಲುಗಳನ್ನು ಕಟ್ಟಿ ನೀರನ್ನು ಒಂದು ಬದಿಯಿಂದ ಹೋಗುವ ರೀತಿಯಲ್ಲಿ ಮಾಡಿದರೆ ಮೇವಿನ ಪ್ರದೇಶವೂ ಆದರ ಬಯಲೂ ಆಗುತ್ತದೆ. ಪ್ರತಿಯೊಂದೂ ಕೊಲನಿಗಳಲ್ಲಿ ಅಂಬೇಡ್ಕರ್ ಸಮಾಜ ಭವನ ನಿರ್ಮಾಣ ಮಾಡಬೇಕು. ಪ್ರತಿಯೊಂದು ಕೊಲನಿಗಳಿಗೆ ಉಚಿತ ದೂರದರ್ಶನದ ಸೌಲಭ್ಯವನ್ನು ವಿಸ್ತರಿಸಬೇಕು. ಗುಡ್ಡಕೇರಿ ಸ್ಮಶಾನವನ್ನು ವಶೀಕರಿಸಿ ಮನೆಗಳನ್ನು ನಿರ್ಮಿಸಿದ್ದಾರೆ. ಜಿಲ್ಲಾಧಿಕಾರಿಯವರು ಹಲವಾರು ಸುತ್ತೋಲೆಗಳನ್ನು ಕಳಿಸಿದ್ದರೂ ಪಂಚಾಯತ್ ಅಧಿಕೃತರು ಆ ಸ್ಮಶಾನ ವಾಸಿಗಳ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಅದನ್ನು SC, STಯವರ ಸ್ಮಶಾನಗಳಿಗೆ ಪರಿವರ್ತಿಸಬೇಕು. SC, STಯವರಿಗೆ ಮಾಹಿತಿ ಕೇಂದ್ರವನ್ನು GPM Govt. College ತೆರೆಯಬೇಕು. ಮಂಜೇಶ್ವರ SSLC ಪೂರ್ವ ಮತ್ತು ಹಾಸ್ಟಲ್‌ನ್ನು ಅಂಬೇಡ್ಕರ್ ಕೊಲನಿಯಲ್ಲಿ ತೆರೆಯಬೇಕು. ಸರಕಾರಿ ಮಿಗತೆ ಭೂಮಿಯನ್ನು ಸರಿಯಾದ ರೀತಿಯಲ್ಲಿ ಹಂಚಿಕೊಡಬೇಕು. ಹೋಮಿಯೋಪತಿ ಆಸ್ಪತ್ರೆಯನ್ನು ಅಂಬೇಡ್ಕರ್ ಗ್ರಾಮದಲ್ಲಿ ತೆರೆಯಬೇಕು.

'ಭಾರತ ಸಂವಿಧಾನದಲ್ಲಿ ಇಲ್ಲದ' ಹರಿಜನ' ಎಂಬ ಪದವನ್ನು ಉಪಯೋಗಿಸುವುದನ್ನು ಸಂಪೂರ್ಣವಾಗಿ ಎಲ್ಲಾ ಸರಕಾರಿ ಖಾಸಗಿ ಸಂಸ್ಥೆಗಳ ಫಲಕಗಳಲ್ಲಿ ಹಾಗೂ ಇನ್ನಿತರ ದಾಖಲೆಗಳಲ್ಲಿ ನಿಷೇಧಿಸಬೇಕು.

# ಸಂಪನ್ಮೂಲ ಸಂಗ್ರಹ

ಮಂಜೇಶ್ವರ ಪಂಚಾಯತು ಕೇರಳ ಪ್ರಾಂತ್ಯದ ಅತ್ಯಂತ ಉತ್ತರಕ್ಕಿರುವ ಒಂದನೇ ಗ್ರೇಡು ಗ್ರಾಮ ಪಂಚಾಯತು. ಇದು ಒಂದು ಹಳ್ಳಿಯೂ ಹಾಗೂ ಪಟ್ಟಣವೂ ಸಮ್ಮಿಶ್ರಗೊಂಡ ಪ್ರದೇಶವಾಗಿದೆ. ಮಹಿಳಾ ಮೀಸಲಾತಿಗಳಿಗೊಳಪಟ್ಟ ಈ ಗ್ರಾಮ ಪಂಚಾಯತು ಹನ್ನೆರಡು ಸದಸ್ಯರಿರುವ ಪಂಚಾಯತಾಗಿರುತ್ತದೆ.

ಮಂಜೇಶ್ವರ ಗ್ರಾಮ ಪಂಚಾಯತು 1995-96ನೇ ವರ್ಷದಲ್ಲಿ 22,13,565.15 ರೂಪಾಯಿ ಆಯವನ್ನೂ 22,02,883.45 ವ್ಯಯವನ್ನೂ ಒಳಗೊಂಡ ಅಖೈರಿ ಶುಲ್ಕವು 45,4278.48 ಹೊಂದಿರುತ್ತದೆ.

## ಮಂಜೇಶ್ವರ ಗ್ರಾಮ ಪಂಚಾಯತು

### ಕೋಷ್ಟಕ 1

| ಕ್ರ.ಸಂ. | ವರಮಾನ | 1993-94 | 94-95 | 95-96 |
|---|---|---|---|---|
| 1 | ಕಟ್ಟಡ ತೆರಿಗೆ | 316863.40 | 277917.53 | 354730.38 |
| 2 | ವೃತ್ತಿ ತೆರಿಗೆ | 15,9000-00 | 18,6240-00 | 109560-00 |
| 3 | ವಿನೋದ ತೆರಿಗೆ | 58177-32 | 63801-20 | 71978-24 |
| 4 | ಪರವಾನಿಗೆ ತೆರಿಗೆ | 10849-25 | 11258-50 | 10644-75 |
| 5 | ಬಾಡಿಗೆ ಮತ್ತು ಏಲಂ | 163644-95 | 155334-00 | 191071-00 |
| ಜುಮ್ಲಾ | | 708534-92 | 694551-23 | 737984-37 |

ಪಂಚಾಯತಿನಲ್ಲಿ 8373 ಕಟ್ಟಡಗಳಿದ್ದು 301 ಕಟ್ಟಡಗಳಿಗೆ ಮಾತ್ರ ತೆರಿಗೆ ವಿನಾಯಿತಿಯಿದ್ದು ಕಟ್ಟಡ ತೆರಿಗೆಯಾಗಿ ಸುಮಾರು 3,56,000 ವಾರ್ಷಿಕ ಆದಾಯವನ್ನು ಹೊಂದಿರುತ್ತದೆ.

ಪಂಚಾಯತುಗಳು ವಾರ್ಷಿಕ ಬಾಡಿಗೆಯ ಆರು ಶೇಕಡದಿಂದ ಹತ್ತು ಶೇಕಡದ ವರೆಗೆ ತೆರಿಗೆ ಹೊರಿಸಬಹುದಾದರೂ ಈ ಪಂಚಾಯತು 8 ಶೇಕಡ ಮಾತ್ರ ತೆರಿಗೆ ಹೇರಿರುತ್ತದೆ.

ಈ ಪಂಚಾಯತು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಾ ಇರುವುದರಿಂದ ನಗರ ಯೋಜನೆಯ ಕಾನೂನು ಅತೀ ಅಗತ್ಯವಾಗಿದೆ. ಇದಕ್ಕಾಗಿ ಬಿಲ್ಡಿಂಗ್ ರೆಗ್ಯುಲೇಶನ್ ಆಕ್ಟನ್ನು ಈ ಪಂಚಾಯತಿನಲ್ಲಿ ಜಾರಿಗೊಳಿಸಿದರೆ ಕ್ರಮಬದ್ಧವಾಗಿ ಕಟ್ಟಡಗಳು ನಿರ್ಮಿಸಲ್ಪಡುವಾಗ ಬಿಲ್ಡಿಂಗ್ ಲೈಸೆನ್ಸ್ ಫೀಸಿನಿಂದ ವರಮಾನವನ್ನು ಹೆಚ್ಚಿಸಿಕೊಳ್ಳಬಹುದು. ವೃತ್ತಿ ತೆರಿಗೆ ಹೊಂದಿಸುವಾಗ ಸ್ಟೆಂಡಿಂಗ್ ಕಮಿಟಿ ಕಸುಬುದಾರನ ತೆರಿಗೆ ಹೊರಿಸಬಹುದಾದ ಮೊತ್ತ ವೃತ್ತಿಗಳನ್ನು (ವರಮಾನ) ಕೂಲಂಕುಶ ಪರಿಶೀಲಿಸಿ ತೆರಿಗೆ ಹೊರಿಸಿದರೆ ವರಮಾನವನ್ನು ಹೆಚ್ಚಿಸಬಹುದು.

ಗ್ರಾಮ ಅಭಿವೃದ್ಧಿ ಬೋರ್ಡಿನ ಸಹಾಯದಿಂದ 13,81,226 ರೂಪಾಯಿ ಖರ್ಚಿನಲ್ಲಿ ಮಂಜೇಶ್ವರ ರೈಲ್ವೇ ಸ್ಟೇಶನ್ ಹತ್ತಿರ ಶೋಪಿಂಗ್ ಕಾಂಪ್ಲೆಕ್ಸ್ ನಿರ್ಮಿಸಲ್ಪಟ್ಟಿರುತ್ತದೆ. ಇದರಿಂದ ಸರಾಸರಿ ವಾರ್ಷಿಕ ವರಮಾನ ಸುಮಾರು ಒಂದು ಲಕ್ಷ ರೂಪಾಯಿ ಆಗಿರುತ್ತದೆ.

### ಕೋಷ್ಟಕ - 2
### ಸರಕಾರಿ ಗ್ರೇಂಟ್

| | | | | |
|---|---|---|---|---|
| 1 | ಭೂಮಿ ವಿನಿಮಯ ಗ್ರೇಂಟ್ | 93-94 | 94-95 | 95-96 |
| 2 | ಮೂಲ ಗ್ರೇಂಟ್ | 236370-00 | 264288-00 | 129167-00 |
| 3 | ಎಸ್ಟಾಬ್ಲಿಸ್‌ಮೆಂಟು ಗ್ರೇಂಟ್ | 37639-00 | - | 42507-00 |
| 4 | VRM Grant | - | 15988-00 | - |
| 5 | VTC Grant | 23013-00 | 23350-00 | 23392-00 |
| 6 | M.T. Grant | - | - | 172644-00 |
| | Total | 3440-00 | 3440-00 | 3440-00 |
| | | 300462-00 | 307066-00 | 37150-00 |

**ಭೂ ವಿನಿಯಮ ಗ್ರಾಂಟು :** ಭೂವಿನಿಮಯದ ಬಗ್ಗೆ ಸಿಕ್ಕುವ ಸಂಪೂರ್ಣ ಮೊತ್ತವನ್ನು ಪಂಚಾಯತಿಗೆ ಕೊಟ್ಟರೆ ಪಂಚಾಯತಿನ ವರಮಾನವನ್ನು ಹೆಚ್ಚಿಸಬಹುದು.

ಪ್ರಕೃತ ಪಂಚಾಯತು ಫಂಡಿನಿಂದಲೇ ಪಂಚಾಯತು ನೌಕರರಿಗೆ ಸಂಬಳ ಕೊಡುವುದಾಗಿರುತ್ತದೆ. ಇದನ್ನು ನಿವಾರಿಸಿ ಸರಕಾರದಿಂದಲೇ ಗ್ರಾಂಟ್‌ರೂಪದಲ್ಲಿ ಪಂಚಾಯತು ಫಂಡಿಗೆ ಹಣ ಒದಗಿಸಿ ಆ ಮೂಲಕ ಪಂಚಾಯತು ನೌಕರರಿಗೆ ಸಂಬಳ ಕೊಡುವ ಕ್ರಮ ಜ್ಯಾರಿಗೊಳಿಸಿದಲ್ಲಿ ಪಂಚಾಯತು ವರಮಾನ ಹೆಚ್ಚುವುದು.

## ಕೋಷ್ಟಕ 3

## ಇನ್ನಿತರ ಗ್ರಾಂಟುಗಳು

| | | 93-94 | 94-95 | 95-96 |
|---|---|---|---|---|
| 1 | Untained Fund | 272,000-00 | 340400 | 353840-00 |
| 2 | Deposit | 33883-00 | 119698-92 | 455270-00 |
| 3 | JRY Scheme | 235163-00 | 511477-00 | 292970-00 |
| | Total | 540046-00 | 971575-00 | 1102080-00 |

**ಸೆಲ್ಫ್ ರಿಲಯೆಂಟ್ ಸ್ಕೀಮ್ :** ಈ ಪಂಚಾಯತು ಸ್ವಾಶ್ರಯಶೀಲ ಗ್ರಾಮ ಪಂಚಾಯತು ಆಗಿ ಆರಿಸಲ್ಪಟ್ಟಿದ್ದರಿಂದ 95-96ನೇ ವರ್ಷಕ್ಕೆ 221196 ರೂಪಾಯಿ ಗ್ರೇಂಟಾಗಿ ಸಿಕ್ಕಿರುತ್ತದೆ. ಇದನ್ನು ಪಂಚಾಯತಿನ ಕಾಮಗಾರಿಗಳ ಬಗ್ಗೆ ಉಪಯೋಗಿಸಲ್ಪಡುವುದು. ಅಲ್ಲದೆ United ಫಂಡಿನಲ್ಲಿ 35,3840 ರೂಪಾಯಿ ಪಂಚಾಯತಿನ ನ್ಯಮಿತ ಕೆಲಸಗಳ ಬಗ್ಗೆ ಸಿಕ್ಕುವುದಾಗಿರುತ್ತದೆ. ಅದರಂತೆ NRY ಸ್ಕೀಮಿನಲ್ಲಿ 2,92970 ರೂಪಾಯಿ ಕಾಮಗಾರಿ ಕೆಲಸಗಳ ಬಗ್ಗೆ ಸಿಕ್ಕಿರುತ್ತದೆ.

ಪಂಚಾಯತಿಗೆ ಸಿಗುವ ಅನ್‌ಟೈಡ್ Grant ಖರ್ಚು ಮಾಡುವರೆ ಸದ್ರಿ ಪಂಚಾಯತಿಗೆ ಯಾವ ವಿಶೇಷ ಸರ್ತವೂ ಇಲ್ಲದೆ ಪಂಚಾಯತಿನ ಇಚ್ಛೆಗೆ ಅನುಸಾರವಾಗಿ ಸಿಕ್ಕುವ ಗ್ರೇಂಟಿನ JRY ಸ್ಕೀಮ್. ಇದು ಕೇಂದ್ರ ಸರಕಾರವು ಪಂಚಾಯತಿಗೆ ಜನರ ಸಹಭಾಗಿತ್ವದಲ್ಲಿ ಮಾಡುವ ನಿರ್ಬಂದಿತ ಕಾಮಗಾರಿಗೆ ಸಿಕ್ಕುವ ಗ್ರೇಂಟು.

## ಕೋಷ್ಟಕ 4

| ಕ್ರ.ಸಂ. | ವಿವರಗಳು | 93-94 | 94-95 | 95-96 |
|---|---|---|---|---|
| 1 | ಆಡಳಿತೆ | 465000-00 | 566737-35 | 518215-70 |
| 2 | ಸಾರ್ವಜನಿಕ ಕಾಮಗಾರಿ | 629201-75 | 2888318-50 | 1123223-50 |
| 3 | ವಿದ್ಯಾಭ್ಯಾಸ | 20889 | 36916-00 | 28865-15 |
| 4 | ಜಲವಿತರಣೆ | 6140-00 | 28246-50 | 42071-00 |
| 5 | ಆರೋಗ್ಯ | 16412-50 | 3940-00 | 2590-00 |
| 6 | ದಾರಿದೀಪ | 44358-00 | 36323-50 | 94357-00 |
| 7 | ಇತರ ಖರ್ಚು | 265602-25 | | 393516-10 |
| | ಮೊತ್ತ | 1447604-25 | 3052355-80 | 2202888-45 |

ಈ ಪಂಚಾಯತು 1995-96ನೇ ವರ್ಷದಲ್ಲಿ 518215-70 ರೂಪಾಯಿಯನ್ನು ಆಡಳಿತ ವೆಚ್ಚವಾಗಿ ಖರ್ಚು ಮಾಡಿರುತ್ತದೆ. ಇದು ಸುಮಾರು ಪಂಚಾಯತಿನ ಸಾಮಾನ್ಯ ಆದಾಯದ 46% ಆಗುತ್ತದೆ. ಈ ಪಂಚಾಯತು ಸಾರ್ವಜನಿಕ ಕಾಮಗಾರಿಗಳ ಬಹಳ ಸದ್ರಿ ವರ್ಷದಲ್ಲಿ 1123223.50 ರೂಪಾಯಿ ಖರ್ಚು ಮಾಡಿರುತ್ತದೆ. ಇದು ಪಂಚಾಯತಿನ ಒಟ್ಟು ಆದಾಯದ ಸುಮಾರು 49% ಆಗಿರುತ್ತದೆ. ಅದರಂತೆ ವಿದ್ಯಾಭ್ಯಾಸ ಆರೋಗ್ಯ ಮತ್ತು ದಾರಿದೀಪ ಇತ್ಯಾದಿಗಳ ಬಗ್ಗೆ ಅನುಕ್ರಮವಾಗಿ ಎರಡು ಶೇಕಡ ವಿದ್ಯಾಭ್ಯಾಸಕ್ಕೂ ಆರೋಗ್ಯ ಮತ್ತು ಜಲವಿತರಣೆಗೆ ಮೂರು ಶೇಕಡಾವನ್ನು ದಾರಿದೀಪದ ಖರ್ಚಿಗಾಗಿ ಐದು ಶತಮಾನವನ್ನೂ ಸಾಮಾನ್ಯ ಸಾಮಾನ್ಯ ಆಯದಿಂದ ಖರ್ಚು ಮಾಡಲಾಗಿದೆ.

ಪಂಚಾಯತಿನ ಆದಾಯವನ್ನು ಹೆಚ್ಚಿಸುವ ಬಗ್ಗೆ ಈ ಕೆಳಗೆ ವಿವರಿಸಲ್ಪಟ್ಟ ಪದ್ಧತಿಗಳನ್ನು ಕಾರ್ಯರೂಪಕ್ಕೆ ತರಬೇಕು.

ಬಂಗ್ರಮಂಜೇಶ್ವರ ಹೊಸಂಗಡಿ ಹಿಲ್‌ಸೈಡ್ ಟಾಕೀಸಿನ ಎದುರುಗಡೆ, ಖಾಲಿ ಸ್ಥಳದಲ್ಲಿ ಒಂದು ಬಸ್‌ಸ್ಟೇಂಡನ್ನು ನಿರ್ಮಿಸಿ ಶೋಪಿಂಗ್ ಕಾಂಪ್ಲೆಕ್ಸ್ ರಚಿಸುವುದು. ಇದಕ್ಕಾಗಿ ಚೆಕ್‌ಪೋಸ್ಟಿನ ಹತ್ತಿರದಿಂದ ಬಂಗ್ರ ಮಂಜೇಶ್ವರದ ಹರಿಜನ ಕಾಲನಿಯಾಗಿರುವ ಪಂಚಾಯತು ಮಾರ್ಗವನ್ನು ಅಗಲಗೊಳಿಸಿ ವನ್‌ವೇ ಟ್ರಾಫಿಕ್ ಮಾಡಿದರೆ ಹೊಸಂಗಡಿಯ ಟ್ರಾಫಿಕ್ ತೊಂದರೆಗಳನ್ನು ಕಡಿಮೆಮಾಡಬಹುದು. ಅಂಗಡಿ ಪದವಿನ ಹತ್ತಿರ ಒಂದು ವಾರದ ಸಂತೆಯನ್ನೂ ಸಂಘಟಿಸಿದರೆ, ಇದರಿಂದ ಪಂಚಾಯತಿಗೂ ವರಮಾನ. ಊರ ಹಾಗೂ ಪರ ಮೂರ ಕೃಷಿಕರಿಗೂ, ಇನ್ನಿತರರಿಗೂ ಮಧ್ಯವರ್ತಿಗಳಿಲ್ಲದೆ ಸರಿಯಾದ ಬೆಲೆ ಸಿಗುವಂತಾಗುವುದು.

ಈ ಪ್ರದೇಶದಲ್ಲಿ ಪರೂರಿಂದ ಬರುವ ಯಾತ್ರಿಕರಿಗೆ ಸರಿಯಾದ ವಸತಿ ಸೌಕರ್ಯಗಳಿಲ್ಲ. ಇದರಿಂದಾಗಿ ಇಲ್ಲಿ ಬರುವ ಯಾತ್ರಾರ್ಥಿಗಳು ತಾತ್ಕಾಲಿಕ ವಾಸಕ್ಕಾಗಿ ದೂರ ಪ್ರದೇಶಗಳಿಂದ ಮಂಗಳೂರು ಅಥವಾ ಇನ್ನಿತರ ಸ್ಥಳಗಳಿಗೆ ಹೋಗಬೇಕಾಗುತ್ತದೆ. ಇದರ ಸೌಕರ್ಯಕ್ಕಾಗಿ ತಲಪಾಡಿ ಬಸ್ಸು ನಿಲ್ಲುದ ವಠಾರದ ಹತ್ತಿರ ವಸತಿಗೃಹಗಳನ್ನು ನಿರ್ಮಿಸಿ ಪಂಚಾಯತಿನ ವರಮಾನವನ್ನು ಕೂಡಾ ಹೆಚ್ಚಿಸಬಹುದು.

ಅಧಿಕೃತ ಮೀನು ಮಾರ್ಕೇಟು ಕೇವಲ ಮಂಜೇಶ್ವರ ರೈಲ್ವೆ ಸ್ಟೇಶನಿನ ಹತ್ತಿರ ಒಂದು ಮಾತ್ರ ಇರುವುದಾಗಿದೆ. ಹೊಸಂಗಡಿಯು ಮೀನು ವ್ಯಾಪಾರ ಕೇಂದ್ರವಾಗಿರುವುದರಿಂದ ಈ ಅನಧಿಕೃತವಾಗಿ ಮೀನು ಮಾರಾಟ ಮಾಡುವ ಸ್ಥಳವನ್ನು ಸರಿಯಾಗಿ ವ್ಯವಸ್ಥೆಗೊಳಿಸಿ ಉತ್ತಮ ಮಾರ್ಕೆಟನ್ನು ಕಟ್ಟಬೇಕು. ಅಲ್ಲದೆ ಹೊಸಬೆಟ್ಟು ರೇಶನ್ ಸೋಪಿನ ಹತ್ತಿರ ಕುಂಜತ್ತೂರು ಸರಕಾರಿ ಬಾವಿಯ ಹತ್ತಿರ ಒಂದೊಂದು ಮಿನಿ ಮಾರ್ಕೆಟನ್ನು ತೆರೆದರೆ, ಪಂಚಾಯತಿನ ಉತ್ಪತ್ತಿಯನ್ನು ಇನ್ನೂ ಹೆಚ್ಚಿಸಬಹುದು.

ಸರಕಾರ ಏರ್ಪಡಿಸುತ್ತಿರುವ ಸೇಂದಿ ಏಲಂನ್ನು ಪಂಚಾಯತಿಗೆ ವಹಿಸಿಕೊಟ್ಟರೆ ಪಂಚಾಯತಿನ ವರಮಾನವನ್ನು ಗಣನೀಯವಾಗಿ ಹೆಚ್ಚಿಸಬಹುದು.

ಉದ್ಯಾವರ ಗುತ್ತು ಎಂಬಲ್ಲಿ ಈಗ ಇರುವ 13 ಎಕ್ರೆ ಸೋಶಲ್ ಫಾರೆಸ್ಟ್ ಸ್ಥಳವನ್ನು ಪಂಚಾಯತಿನ ಸ್ವಾಧೀನಕ್ಕೆ ಬಿಟ್ಟುಕೊಟ್ಟರೆ ತೇಗು ಮಾಂಜಿಯ ಇತ್ಯಾದಿ ಮೋಪು ಮರಗಳ ಗಿಡಗಳನ್ನು ನೆಟ್ಟು ಈ ಪಂಚಾಯತಿನ ವರಮಾನವನ್ನು ವೃದ್ಧಿಸಬಹುದು.

ಈ ಪಂಚಾಯತಿಗೆ ತನ್ನದೇ ಆದ ಕಮ್ಯುನಿಟಿ ಹಾಲ್ ಇಲ್ಲದ ಕಾರಣ ಮಂಜೇಶ್ವರ ಗೋವಿಂದ ಪೈ ಗ್ರಂಥಾಲಯದ ಹತ್ತಿರವಿರುವ ಕಮ್ಯೂನಿಟಿ ಹಾಲನ್ನು ಸುವ್ಯವಸ್ಥೆಗೊಳಿಸಿ ಪಂಚಾಯತಿಗೆ ಬಿಟ್ಟು ಕೊಟ್ಟಲ್ಲಿ ಮದುವೆ ಇತ್ಯಾದಿ ಕಾರ್ಯಕ್ರಮಗಳಿಗೆ ಬಳಸಿದರೆ ಉತ್ಪನ್ನವನ್ನು ಹೆಚ್ಚಿಸಬಹುದು.

ಈ ಪ್ರದೇಶದಲ್ಲಿ ಧಾರಾಳವಾಗಿ ಸಿಕ್ಕುವ ತೆಂಗಿನ ಸಿಪ್ಪೆಯು ಬೆಂಕಿ ಹಚ್ಚಲು ಕಟ್ಟಿಗೆಗಾಗಿ ಉಪಯೋಗಿಸಲ್ಪಡುತ್ತದೆ. ಇದನ್ನು ದುರುಪಯೋಗವಾಗದಂತೆ ಸರಕಾರಿ ರಂಗದಲ್ಲಿ ಹುರಿಹಗ್ಗ ತಯಾರಿಸುವ ಕಾರ್ಖಾನೆಯನ್ನು ನಿರ್ಮಿಸಿ ಇಲ್ಲಿಯ ನಿರುದ್ಯೋಗಿ ವಿದ್ಯಾವಂತ ಹಾಗೂ ಇನ್ನಿತರರಿಗೆ ಈ ಬಗ್ಗೆ ತರಬೇತಿಯನ್ನು ಕೊಟ್ಟು ಇದರಲ್ಲಿ ನಿಯೋಜಿಸಿದರೆ ಸ್ವಲ್ಪ ಮಟ್ಟಿಗೆಗಾದರೂ ನಿರುದ್ಯೋಗವನ್ನು ಕಡಿಮೆಗೊಳಿಸಬಹುದು. ಅದರಂತೆ ಇಲ್ಲಿ ಸಿಕ್ಕುವ ತೆಂಗಿನ ಕಾಯಿಯನ್ನು ಇಲ್ಲೇ ಪರಿಷ್ಕರಿಸಿ ತಿಂಡಿ ಹಾಗೂ ಎಣ್ಣೆ ಇತ್ಯಾದಿಗಳ ಬಗ್ಗೆ ಸಹಕಾರಿ ರಂಗದಲ್ಲಿ (ಅಡಿಕೆ ಬಗ್ಗೆ ಕ್ಯಾಂಪ್ಕೋ ಮಾಡುವಂತೆ) ವ್ಯವಹರಿಸಿದರೆ ಮದ್ಯವರ್ತಿಗಳನ್ನು ಇಲ್ಲದಂತೆ ಮಾಡಿ, ಕೃಷಿಕರಿಗೆ ಸರಿಯಾದ ಬೆಲೆ ಸಿಕ್ಕುವಂತೆ ಆಗುವುದು. ಇಲ್ಲಿಯ ಜನರಿಗೆ ಉದ್ಯೋಗ ವಿಕಾಸ ಹೆಚ್ಚುವುದು. ಅದರಂತೆ ಇಲ್ಲಿಯ ಉತ್ಪತ್ತಿಯಾದ ಅಡಿಕೆಯನ್ನು ಇಲ್ಲೇ ಸಂಸ್ಕರಿಸುವ ವ್ಯವಸ್ಥೆ ಮಾಡಿದರೆ ಇಲ್ಲಿಯ ಯುವಕರಿಗೆ ಉದ್ಯೋಗ ಸಾಧ್ಯತೆ ಹೆಚ್ಚುವುದು.

ಈ ಪ್ರದೇಶದಲ್ಲಿ ಹಲವಾರು ನುರಿತ ಕಬ್ಬಿಣದ, ಮರದ ಕೆತ್ತನೆಯ ಹಾಗೂ ಇನ್ನಿತರ ಪೈಂಟಿಂಗ್ ಇತ್ಯಾದಿ ಕುಶಲ ಕರ್ಮಿಗಳು ಇದ್ದಾರೆ. ಆದರೆ ಅವರಿಗೆ ಸರಿಯಾದ ಮಾರ್ಗದರ್ಶನ ಹಾಗೂ ಆರ್ಥಿಕ ಸಹಾಯ ಸಹಕಾರಗಳನ್ನು ಕೊಟ್ಟರೆ, ಈ ಪ್ರದೇಶದ ಇಂತಹ ಕೆಲಸಗಳಿಗೆ ಹೊರ ಪ್ರದೇಶಗಳಿಂದ ಆವಶ್ಯಕತೆಗಳು ಬಂದೊದಗಿ ಅಭಿವೃದ್ಧಿಯನ್ನು ಸಾಧಿಸಬಹುದು.

ಭಾರತವು ಲೋಕದಲ್ಲಿ ಜನಸಂಖ್ಯೆಯಲ್ಲಿ IIನೇ ಅತೀ ದೊಡ್ಡ ದೇಶವಾಗಿದೆ. ಪಂಚವಾರ್ಷಿಕ ಯೋಜನೆಗಳ ಸರಿಯಾದ ಪ್ರಯೋಜನ ಜನರಿಗೆ ಸಿಗಬೇಕಾದರೆ Family Planning ಕೂಡಾ ಅತೀ ಅಗತ್ಯವಾಗಿದೆ. ಅದಕ್ಕಾಗಿ ಈ ಯೋಜನೆಯನ್ನು ಜನರ ಯೋಜನೆಯಾಗಿ ಮಾಡುವರೆ ವಾರ್ಡಿನ ಅಡಿಸ್ಥಾನದಲ್ಲಿ ಸರಿಯಾದ ಅರಿವನ್ನುಂಟು ಮಾಡುವುದು ಅತೀ ಅಗತ್ಯವಾಗಿದೆ. ಅದಕ್ಕಾಗಿ ಸರಿಯಾದ ಕಾರ್ಯಕ್ರಮಗಳನ್ನು ಹಾಕಿ ನೂರು ಶತಮಾನ ಯಶಸ್ವಿಗೊಳಿಸುವಂತಾಗಬೇಕು.

ಮಂಜೇಶ್ವರವು ಹಿನ್ನೀರಿನ ಸೌಕರ್ಯವಿರುವುದರಿಂದ ಸರ್ವಋತು ಬಂದರಿಗೆ ಯೋಗ್ಯವಾಗಿರುತ್ತದೆ. ಇದನ್ನು ಬಂದರನ್ನಾಗಿ ಅಭಿವೃದ್ಧಿಗೊಳಿಸುವುದು ಅತೀ ಅಗತ್ಯವಾಗಿರುತ್ತದೆ.

# ಮೀನುಗಾರಿಕೆ ಮತ್ತು ಮೃಗ ಸಂರಕ್ಷಣೆ

ಮಂಜೇಶ್ವರ ಗ್ರಾಮ ಪಂಚಾಯತಿನ ಸುಮಾರು 9 ಕಿ.ಮೀ. ಕಡಲ ತೀರ ಪ್ರದೇಶದಿಂದ ಆವೃತಗೊಂಡಿದೆ. ಈ ತೀರ ಪ್ರದೇಶದ ಜನರ ಮುಖ್ಯ ವೃತ್ತಿ ಮೀನುಗಾರಿಕೆಯಾಗಿದೆ. ಮಂಜೇಶ್ವರ ಕಡಲ ತೀರವು ತಲಪ್ಪಾಡಿ ಹೊಳೆಯಿಂದ ಉಪ್ಪಳ ನದಿಯ ತನಕ ವ್ಯಾಪಿಸಿಕೊಂಡಿದೆ. ಹೆಚ್ಚು ಕಡಿಮೆ 500 ಕುಟುಂಬಗಳು ಈ ವೃತ್ತಿಯಿಂದ ಜೀವನ ನಿರ್ವಹಣೆ ಮಾಡುತ್ತಿದ್ದಾರೆ.

ನಮ್ಮ ಪಂಚಾಯತ್‌ನ ಪಶ್ಚಿಮಕ್ಕೆ 3 ಕಿ.ಮೀ.ನಷ್ಟು ಹಬ್ಬಿಕೊಂಡಿದೆ. ಈ ತೀರವನ್ನು ತೆಂಕು ಮತ್ತು ಮೂಡು ಭಾಗಗಳಿಂದ ಎರಡು ನದಿಗಳು ಸುಮಾರು 25 ಕಿ.ಮೀ.ನಷ್ಟು ಹರಿದು ಸಮುದ್ರ ಸೇರುವಾಗ ಅಲ್ಪ ಸ್ವಲ್ಪ ದೊಡ್ಡ ಪ್ರಮಾಣದ 20 ಕೈತೋಡುಗಳು ಈ ನದಿಯೊಂದಿಗೆ ಸೇರಿಕೊಳ್ಳುತ್ತವೆ.

**ಕೋಷ್ಟಕ (ಅ)**

| ಮೀನುಗಾರಿಕೆಯಲ್ಲಿ ತೊಡಗಿಸಿದವರು | ಮೀನುಗಾರಿಕೆಯ ಕೆಲಸಗಾರರು |
|---|---|
| ಕಡಲಿಗೆ ಹೋಗುವವರು | 925 |
| ಒಳ ಪ್ರದೇಶದ ಮೀನುಗಾರರು | 550 |
| ಮೀನು ಸಂಸ್ಕರಣೆ ಮಾಡುವವರು | 56 |
| ಮೀನು ವ್ಯಾಪಾರ | 140 |
| ಬಲೆ ನೇಯುವವರು | 88 |
| ಬೋಟ್ ಇರುವವರು | 5 |
| ಯಾಂತ್ರೀಕೃತ ದೋಣಿಯವರು | 130 |
| ನಾಡ ದೋಣಿ | 75 |
| ಸಿಗಡಿ ಸಾಕಣೆ ಕೇಂದ್ರ | 2 |

**ಸಮಸ್ಯೆಯೂ ಪರಿಹಾರವೂ**

ವರ್ಷದಲ್ಲಿ 4 ತಿಂಗಳು ಮಾತ್ರ ಮರದ ದೋಣಿಗೆ ಯಂತ್ರವನ್ನು ಜೋಡಿಸಿ ಸಮುದ್ರದಲ್ಲಿ ದೂರ ಪ್ರಯಾಣವನ್ನು ಸಾಗಿಸಿ ತಮ್ಮ ಜೀವನವನ್ನು ಮುಡಿಪಾಗಿಸಿಕೊಂಡು ಜೀವಿಸುವವರೂ ಇನ್ನುಳಿದ 8 ತಿಂಗಳಲ್ಲಿ ಮಂಗಳೂರು ಬಂದರುಗಳಿಂದ ಹೊರಡುವ ನೂರಾರು ಯಾಂತ್ರಿಕ ಬೋಟುಗಳಿಂದ, ಮತ್ತು ಪರ್ಸಿನ್ ಬೋಟುಗಳು ನಮ್ಮ ಕರೆಯಲ್ಲಿ ಮೀನು ಹಿಡಿಯುವುದರಿಂದ ಸಾಧಾರಣ ದೋಣಿಗಳಲ್ಲಿ ಮೀನು ಹಿಡಿಯಲು ಹೋಗುವವರಿಗೆ ಮೀನು ಸಿಗುವುದಿಲ್ಲ.

ಈ ಪ್ರದೇಶದಲ್ಲಿ ಬಂದರು ಸೌಲಭ್ಯವಿಲ್ಲವಾದ್ದರಿಂದ ಯಾಂತ್ರೀಕೃತ ದೋಣಿಗಳನ್ನು ಉಪಯೋಗಿಸಲು ಸಾಧ್ಯವಿಲ್ಲ. ಆದುದರಿಂದ ಹೊಸಬೆಟ್ಟು ಪರಿಸರದ ಕಡಪರದಲ್ಲಿ ಮಿನಿ ಬಂದರು ರೂಪೀಕರಿಸಿದಲ್ಲಿ ಈ ಪ್ರಶ್ನೆಯನ್ನು ಸಾಧ್ಯವಾದಷ್ಟು ಪರಿಹರಿಸಲು ಸಾಧ್ಯವಿದೆ. ಕಡಲ ತೀರದ ಮಹಿಳೆಯರಿಗೆ ಯಾವುದೇ ಗುಡಿ ಕೈಗಾರಿಕೆಗಳು ತಿಳುವಳಿಕೆ ಇಲ್ಲ. ಅದಕ್ಕೆ ಬೇಕಾಗಿರುವ ತಂತ್ರಜ್ಞಾನವನ್ನು ಉಪಯೋಗಿಸಿ ಅದರ ಅಭಿವೃದ್ಧಿ ಸಾಧಿಸಬಹುದು. ಸುಣ್ಣ ತಯಾರಿಸುವುದು, ಉಲೆ ನೇಯುವುದು ಇತ್ಯಾದಿ.

2. ಬಂಗ್ರ ಮಂಜೇಶ್ವರದಲ್ಲಿ ಮೀನುಗಾರಿಕೆಗೆ ಬೇಕಾದ 1995ರಲ್ಲಿ ಒಂದು ಸಹಕಾರಿ ಸಂಘ ಸ್ಥಾಪನೆಯಾಗಿದ್ದು ಈಗಾಗಲೇ 25 ಲಕ್ಷ ರೂಪಾಯಿಗಿಂತಲೂ ಹೆಚ್ಚು ವ್ಯವಹಾರವಿದ್ದೂ ಅವರ ಸಂಪೂರ್ಣ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಈ ಸಹಕಾರಿ ಸಂಘದಿಂದ ಇನ್ನಷ್ಟು ಹೆಚ್ಚಿನ ಸವಲತ್ತುಗಳು ದೊರಕಬೇಕಾಗಿದೆ. ದೋಣಿಗಳಿಗೆ, ಲಾಂಚುಗಳಿಗೆ ಸಾಲ ಅಗತ್ಯವಿದೆ.

3. ದೋಣಿಗಳಿಗೆ ಸಂಭವಿಸುವ ತೊಂದರೆಗಳನ್ನು ಸರಿಪಡಿಸಲು ಮಂಗಳೂರು ಅಥವಾ ಕಾಸರಗೋಡಿಗೆ ಹೋಗುವ ದುಸ್ಥಿತಿ ಇದೆ. ಈ ಪ್ರದೇಶದಲ್ಲಿ ಒಂದು ದೋಣಿ ದುರಸ್ತಿ ಕೇಂದ್ರವನ್ನು ಸ್ಥಾಪಿಸಬೇಕು. ಹೊಸಬೆಟ್ಟು ಹಾಗೂ ಕಣ್ವತೀರ್ಥದಲ್ಲಿ ಗೈಡ್‌ಲೈಟ್‌ಗಳನ್ನು ಸ್ಥಾಪಿಸುವುದು ಹಾಳಾದುದನ್ನು ಮತ್ತೆ ದುರಸ್ಥಿಗೆ ಒಳಪಡಿಸುವುದು ಅಗತ್ಯ ಆಗಿದೆ.

4. ಮೀನುಗಾರಿಕೆಗೆ ಅವಶ್ಯಕತೆಯಿರುವ ಸೀಮೆ ಎಣ್ಣೆಯನ್ನು ಸುಲಭ ಬೆಲೆಗೆ ನೀಡುವ ವ್ಯವಸ್ಥೆಯಾಗುವುದು ಅತೀ ಅಗತ್ಯ ಮಾತ್ರವಲ್ಲದೆ ಮಂಜೇಶ್ವರದಲ್ಲೆ ಸೀಮೆಎಣ್ಣೆಯನ್ನು ನೇರವಾಗಿ ವಿತರಿಸುವ ಕೇಂದ್ರವನ್ನು ಸ್ಥಾಪಿಸಬೇಕು.

5. ಮೀನುಗಾರಿಕೆಯ ಕ್ಷೇತ್ರ ಮಾರುಕಟ್ಟೆ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ಆದರೆ ವ್ಯವಸ್ಥಿತ ಹಾಗೂ ಅಧಿಕೃತ ಮಾರುಕಟ್ಟೆ ಕೇವಲ ಒಂದೇ ಇರುವುದರಿಂದ ನಮ್ಮ ಪಂಚಾಯತಿನ ಪ್ರಮುಖ ಕೇಂದ್ರವಾದ ಹೊಸಂಗಡಿಯಲ್ಲಿ ಮಾರುಕಟ್ಟೆ ಬೇಕಾಗಿದೆ. ಸುವ್ಯವಸ್ಥಿತ ಮಾರುಕಟ್ಟೆ ವ್ಯವಸ್ಥೆ ಮಾಡುವುದರೊಂದಿಗೆ ಮಾರ್ಗದ ಬದಿಯಲ್ಲಿ ಮೀನು ಮಾರುವುದರಿಂದ ಉಂಟಾಗುವ ಪರಿಸರ ಮಾಲಿನ್ಯವನ್ನು ತಡೆಯಬಹುದಾಗಿದೆ.

6. ಮೀನು ಹೆಚ್ಚಾಗಿ ದೊರೆತ ಸಂದರ್ಭದಲ್ಲಿ ಮೀನುಗಳನ್ನು ಸರಬರಾಜು ಮಾಡಲು ಬೇಕಾದ ವ್ಯವಸ್ಥೆ ಇಲ್ಲದ್ದರಿಂದ ಆ ಮೀನುಗಳನ್ನು ಸಂಗ್ರಹಿಸಿಡಲು ಶೀತಲೀಕರಣ ಕೇಂದ್ರದ (Cold storage) ಅಗತ್ಯವಿದೆ.

7. ಮಂಜೇಶ್ವರ ಮತ್ತು ಉಪ್ಪಳ ಹೊಳೆಯು ಅರಬೀ ಸಮುದ್ರವನ್ನು ಸೇರುವ ಸಂಗಮದಲ್ಲಿ ಇರುವ ಬಂಡೆ ಕಲ್ಲುಗಳನ್ನು ಆಳದಿಂದ ತೆಗೆದು ಅಳಿವೆಯನ್ನು ಸರ್ವಋತು ಬಂದರಿನೋಪಾದಿಯಲ್ಲಿ ಅಗಲಗೊಳಿಸಿ ಅಳಿವೆಯಿಂದ 1 ಕಿ.ಮೀ.ನಷ್ಟು ಉದ್ದಕ್ಕೆ ಹೊಳೆಗಳನ್ನು ಆಳಗೊಳಿಸಿ ಮೋಟು, ಮಂಜ ಇತ್ಯಾದಿಗಳು ಇಲ್ಲಿಂದ ಈ ಮುಖದಲ್ಲಿ ವರ್ಷವಿಡೀ ವ್ಯವಹರಿಸುವಂತೆ ಮಾಡಬೇಕಾಗಿದೆ. ಇದರಿಂದಾಗಿ ವ್ಯಾಪಾರ ಹಾಗೂ ಕೈಗಾರಿಕೆ ಅಭಿವೃದ್ಧಿ ಹೊಂದಬಹುದು.

8. ಇತರ ಪ್ರದೇಶದ ಯಾಂತ್ರೀಕೃತ ದೋಣಿಯವರು ಬಡ ಮೀನುಗಾರರ ಬಲೆಯನ್ನು ಆಕ್ರಮಿಸಿ ಕತ್ತರಿಸಿ ಮೀನುಗಳ್ನು ಕೊಳ್ಳೆ ಹೊಡೆಯುವುದನ್ನು ತಡೆಗಟ್ಟಲು Costal Guardನ ಅಗತ್ಯವಿದೆ.

9. ಉಳಿದ ಮೀನನ್ನು ಗೊಬ್ಬರವನ್ನಾಗಿ ಪರಿವರ್ತಿಸುವ ಸರಕಾರದ ವತಿಯಿಂದ ಕಾರ್ಖಾನೆಯನ್ನು ಸ್ಥಾಪನೆಗೊಳಿಸಬೇಕು.

## ಸಾರ್ವಜನಿಕ ಮೃಗ ಸಂರಕ್ಷಣೆ

ಮಂಜೇಶ್ವರ ಪಂಚಾಯತಿನಲ್ಲಿ ದನ, ಕೋಳಿ, ಆಡು, ನಾಯಿ ಬೆಕ್ಕು ಮುಂತಾದವುಗಳನ್ನು ಸಾಕಿಕೊಂಡು ಬರುತ್ತಿದ್ದರು. ಸ್ವಂತ ಉಪಯೋಗಕ್ಕಾಗಿ ಕೋಳಿಯನ್ನು ಮಾಂಸ ಹಾಗೂ ಮೊಟ್ಟೆಗಾಗಿ ಉಪಯೋಗ ಮಾಡುತ್ತಿದ್ದರು. ಧಾರಾಳ ಸ್ಥಳವಿದ್ದು ವ್ಯಾಪಾರ ಹುಲ್ಲುಗಾವಲಿನ ವ್ಯವಸ್ಥೆ ಇದ್ದು ಜಾನುವಾರುಗಳನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಸಾಕುತ್ತಿದ್ದರು. ಜನಸಂಖ್ಯೆ ಹೆಚ್ಚಾದರೂ ಅದೇ ಪ್ರಮಾಣದಲ್ಲಿ ಜಾನುವಾರುಗಳ ಸಾಕಣೆ ಕೂಡಾ ಕಡಿಮೆಯಾಗಿದೆ. ಹಿಂದಿನ ಕಾಲದಲ್ಲಿ ಜಾನುವಾರುಗಳಿಗೆ ಬೇಕಾದಷ್ಟು ವಿಶಾಲ ಹುಲ್ಲುಗಾವಲಿದ್ದು ಮೇವಿನ ಕೊರತೆಯಿರಲಿಲ್ಲ. ಆದರೆ ಈಗ ಈ ಮೊದಲು ಹುಲ್ಲುಗಾವಲು ಇದ್ದ ಸ್ಥಳವನ್ನು ದರ್ಖಾಸು ಇತ್ಯಾದಿ ಉದ್ದೇಶಗಳ ಬಗ್ಗೆ ಹಂಚಿಕೊಟ್ಟದ್ದರಿಂದ ಈಗಿನ ಪರಿಸ್ಥಿತಿಯಲ್ಲಿ ಜಾನುವಾರುಗಳಿಗೆ ಸಂರಕ್ಷಣೆ ಅಥವಾ ಪೋಷಣೆ ಅಸಾಧ್ಯವಾಗಿದೆ. ಪ್ರತಿ ಗ್ರಾಮದಲ್ಲಿ ಒಂದೊಂದು ಹುಲ್ಲುಗಾವಲಿನ ಅಗತ್ಯವನ್ನು ಪೂರೈಸುವುದು.

ಬಹಳ ಹಿಂದಿನಿಂದಲೇ ಈ ಪ್ರದೇಶದಲ್ಲಿ ಮೃಗಾಸ್ಪತ್ರೆ ಕಾರ್ಯ ನಿರ್ವಹಿಸಿಕೊಂಡು ಬರುತ್ತಿದ್ದರೂ ಇಲ್ಲಿ ಈಗಿನ ಸುಧಾರಿತ ಗರ್ಭಧಾರಣೆ (ಪ್ರಣಾಳ ಶಿಶು) ಪದ್ಧತಿಯನ್ನು ಕೂಡಾ ಅಳವಡಿಸಿ ಅತ್ಯಾಧುನಿಕ ವಿಧಾನವೂ ಅಗತ್ಯವಾಗಿದೆ. ಇದನ್ನು ಮುಂದುವರಿಸಬೇಕು.

ಈ ಪ್ರದೇಶದ ಜನರು ಬರೇ ಊರಿನ ತಳಿಯನ್ನು ಸಾಕುವುದರಿಂದ ಉತ್ಪತ್ತಿ ಕಡಿಮೆಯಾಗಿ ವೆಚ್ಚ ತುಂಬಾ ದುಬಾರಿಯಾಗುವುದು. ಅದಕ್ಕಾಗಿ ಹೊಸ ತಳಿಯ ಜಾನುವಾರುಗಳನ್ನು ಸಾಕುವ ಸರಿಯಾದ ಮಾಹಿತಿ, ಕ್ರಮ, ಮೃಗ ಸಂರಕ್ಷಣೆಗೆ ಬೇಕಾದ ವೈದ್ಯಕೀಯ ಸಹಾಯ ಇತ್ಯಾದಿಗಳ ಬಗ್ಗೆ ಜನರಿಗೆ ತಿಳುವಳಿಕೆಯನ್ನು ಸಹಾಯವನ್ನು ಜನರಿಗೆ ಸಕಾಲದಲ್ಲಿ ಒದಗಿಸಿ ಪ್ರೋತ್ಸಾಹಿಸುವುದು ಆಗತ್ಯವಾಗಿದೆ. ಆಡು, ಕುರಿ, ಹಂದಿ ಎಂಬಿತ್ಯಾದಿ ಪ್ರಾಣಿಗಳನ್ನು ಸಾಕಾಣಿಕೆಗೆ ಅನುಕೂಲ ಮಾಡಿಕೊಡುವುದು.

**ಕೋಷ್ಟಕ ೧**

| ಸಾಕುವ ಜಾನುವಾರುಗಳು | ಊರಿನದ್ದು | ಮಿಶ್ರತಳಿ | ಪ್ರತಿ ತಿಂಗಳು ಉತ್ಪಾದಿಸುವ ಮೊತ್ತ ಹಾಲು, ಮಾಂಸ | ಮೊತ್ತ |
|---|---|---|---|---|
| ದನ | 2019 | 362 | 35,840<br>22180 | 58020 |
| ಎಮ್ಮೆ | 15 | | 502 | 502 |
| ಆಡು | 1129 | - | 210 | 210 |
| ಕೋಳಿ | 14365 | 4000 | 17775 ಮೊಟ್ಟೆ<br>8000 ಮಾಂಸ | |

ಮೃಗ ಸಂರಕ್ಷಣೆಯಲ್ಲಿ ಮಂಜೇಶ್ವರ ಪಂಚಾಯತ್ ತೀರ ಹಿಂದುಳಿದಿದೆ. ದನ, ಆಡು, ಕೋಳಿಗಳು ಇತ್ಯಾದಿಗಳನ್ನು ಈ ಪ್ರದೇಶದಲ್ಲಿ ಸಾಕುತ್ತಾರೆ.

**ಕೋಷ್ಟಕ (೨)**

| ವರ್ಗಗಳು | ಊರಿನ | ಮಿಶ್ರತಳಿ | ಮೊತ್ತ |
|---|---|---|---|
| ದನ | 2019 | 362 | 2381 |
| ಎಮ್ಮೆ | 15 | - | 15 |
| ಆಡು | 1129 | - | 1129 |
| ಕೋಳಿ | 14365 | 4000 | 18365 |
| ಮೊತ್ತ | - | - | 21,890 |

**ಜಾನುವಾರುಗಳ ರೋಗಗಳು:**

ಸಾಧಾರಣವಾಗಿ ಕಂಡು ಬರುವ ಫುಟ್ ಅಂಡ್ಮ್ಯುಮೌತ್, ದೊಡ್ಡ ರೋಗ, ಜ್ವರ ದಹನ ಸಂಬಂಧ, ರೋಗ, ಶಾವಶಕೋಶ ಸಬಂಧವಾದ ರೋಗಗಳಿವೆ. ಇದಕ್ಕಾಗಿ ಕಡ್ಡಾಯವಾಗಿ ಸಕಾಲದಲ್ಲಿ ಶುಶ್ರೂಷೆ ಸಿಗಬೇಕು. ಇದಕ್ಕಾಗಿ ನುರಿತ ವೈದ್ಯರು ಸದಾ ಕಾಲವು (24 ಗಂಟೆಗಳ ಕಾಲವೂ) ದೊರೆಯುವಂತೆ ವ್ಯವಸ್ಥೆಯಾಗಬೇಕು. ಉಚಿತ ಚುಚ್ಚು ಮದ್ದುಗಳನ್ನು ಸರಿಯಾದ ಸಮಯದಲ್ಲಿ ಸಿಗುವಂತೆ ವ್ಯವಸ್ಥೆಯಾಗಬೇಕು. ಈ ಆಸ್ಪತ್ರೆಗೆ ಸಕಾಲದಲ್ಲಿ ಸಂಚರಿಸಿ ಹೋಗಿ ಶುಶ್ರೂಷೆ ಕೊಡುವ ಬಗ್ಗೆ ಒಂದು ವಾಹನ ಸೌಕರ್ಯ ಮಾಡುವುದು ಅಗತ್ಯವಾಗಿದೆ.

ಈ ಪ್ರದೇಶದ ಹಾಲುತ್ಪತ್ತಿಯನ್ನು ಸೃಷ್ಠಿಸಿ ಒಂದು ಸಹಕಾರಿ ರಂಗದಲ್ಲಿ ಹಾಲಿನ ಡೈರಿಯನ್ನು ಸೂಕ್ತ ಸ್ಥಳದಲ್ಲಿ ಸ್ಥಾಪಿಸಿ ಜಾನುವಾರ ಸಾಕಣೆದಾರರಿಗೆ ಲಾಭದಾಯಕವಾಗಿ ಹಾಲಿನ ವಿತರಣೆ ಆಗುವಂತೆ ಪ್ರಯತ್ನಿಸಬೇಕು.

ಮಹಿಳೆಯರಿಗೆ ಬಿಡುವಿನ ಸಮಯದಲ್ಲಿ ಆಡು ಸಾಕಣೆ, ಕೋಳಿ ಸಾಕಣೆಗೆ ಹೆಚ್ಚಿನ ಪ್ರಮಾಣದಲ್ಲಿ ಸಹಾಯಕೊಟ್ಟು ಗುಡಿ ಕೈಗಾರಿಕೆಯಾಗಿ ಅಭಿವೃದ್ಧಿ ಪಡಿಸಬೇಕು. ಈ ಪಂಚಾಯತ್ ಬೇಕಾದ ಹಾಲನ್ನು (Packed milk) ಹಾಲನ್ನು ಪಡಕೊಳ್ಳದೇ ಇಲ್ಲೆ ಉತ್ಪಾದಿಸಿದ ಹಾಲನ್ನೇ ಸರಬರಾಜು ಮಾಡಲು ಬೇಕಾದ ವ್ಯವಸ್ಥೆಯನ್ನು ಕೂಡಲೇ ಜಾರಿಗೆ ತರಬೇಕು.

**ಪಶುಗಳ ರೋಗಗಳು ಮತ್ತು ವಿವರಣೆಗಳು**

**ಕೋಷ್ಟಕ ೩**

| | ರೋಗಗಳು | ದನ | ಎಮ್ಮೆ | ಆಡು | ಹಂದಿ | ನಾಯಿ | ಕೋಳಿ | ಬೆಕ್ಕು |
|---|---|---|---|---|---|---|---|---|
| 1 | ದಹನ ಸಂಬಂಧ | 1750 | 15 | 510 | 125 | 610 | 18365 | 50 |
| 2 | ಶ್ವಾಸಕೋಶ ಸಂಬಂಧ | 650 | 5 | 620 | 30 | 225 | 1100 | 65 |
| 3 | ಪಚನ ಕ್ರಿಯೆ ರೋಗ | 250 | 10 | 50 | 25 | 45 | - | - |
| 4 | ಚರ್ಮರೋಗ | 1750 | 2 | 50 | 28 | 150 | - | 25 |
| 5 | ದಾತು ಲವಣಗಳ ಅಭಾವ | 850 | 5 | 218 | 35 | 61 | 205 | 10 |
| 6 | ನರರೋಗಗಳು | 1300 | 2 | 200 | 10 | 175 | 218 | - |
| 7 | ಗರ್ಭಾಶಯ ಸಂಬಂಧ | 795 | 5 | 300 | 15 | 18 | - | 5 |
| 8 | ಬಂಜೆತನ | 900 | 5 | 26 | 5 | - | - | - |
| 9 | ಪೇಶಿಕೋಶಗಳು | 110 | - | 4 | - | - | - | - |
| 10 | ಜ್ವರ | 250 | 1 | - | - | - | - | - |
| 11 | ಸಾಂಕ್ರಾಮಿಕ ರೋಗ | 50 | - | - | - | - | 1050 | - |

ಕೋಳಿಗಳಿಗೆ ಅತೀ ಹೆಚ್ಚಿನ ಸಾಂಕ್ರಾಮಿಕ ರೋಗ ಕಂಡು ಬರುತ್ತದೆ. ಇದನ್ನು ನಿವಾರಿಸಲು ಪ್ರಯತ್ನದ ಅಗತ್ಯವಿದೆ.

ಹಾಲಿನ ರಂಗದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದನೆಯಲ್ಲಿ ಅತೀ ಹೆಚ್ಚು ಪ್ರಮಾಣದಲ್ಲಿ ನಡೆಸುವುದಾಧಿ ಕೃತಕ ಗರ್ಭಧಾರಣೆ ವಿಧಾನದಲ್ಲಿ ಪ್ರತ್ಯೇಕ ರೀತಿಯ ಪ್ರಜ್ಞಾ, ಸೆಮಿನಾರ್‌ಗಳನ್ನು ತರಬೇತಿಗಳನ್ನು ಕೊಟ್ಟು ಬೇಕಾದ ಸಲಹೆ, ಸಲಕರಣೆಗಳನ್ನು ಚುಚ್ಚುಮದ್ದುಗಳನ್ನು ನೀಡುವುದು ಬಹಳ ಅಗತ್ಯವಾಗಿದೆ.

## ಕೃತಕ ಗರ್ಭಧಾರಣೆಯ ವಿವರಣೆ

### ಕೋಷ್ಠಕ ೪

| ಸಾಕು ಪ್ರಾಣಿಗಳ ಜಾತಿ | ಮೊತ | ನಡೆಸಿದ್ದು | 2ನೇ ಬಾರಿ ಕೃತಕ ಗರ್ಭಧಾರಣೆ |
|---|---|---|---|
| ಪಶು | 2019 | 165 | 15 |
| ಕರು | 904 | 25 | 5 |
| ಎಮ್ಮೆ | 3 | 1 | - |

ಹಿಂದಿನ ಕಾಲದಿಂದಲೇ ಸರ್ವ ಸಾಧಾರಣ ಎಲ್ಲಾ ಮನೆಗಳಲ್ಲಿ ಕೋಳಿಗಳನ್ನು ಸಾಕುತ್ತಿದ್ದರು ದಿನ ಉಪಯೋಗಕ್ಕೆ ಮೊಟ್ಟೆ, ಮಾಂಸಗಳಿಗಾಗಿ ಆದರೂ ಕೂಡಾ ಮಾಂಸಕ್ಕಾಗಿ ಹೊರಗಿನ ಪ್ರದೇಶವಾದ ಕರ್ನಾಟಕ, ತಮಿಳ್ನಾಡುಗಳಿಂದ ಆಮದು ಮಾಡಿಕೊಳ್ಳುವ ಸ್ಥಿತಿಯಾದರೆ ಕೋಳಿ ಸಾಕುವುದು ಹೆಚ್ಚು ಪ್ರಮಾಣದಲ್ಲಿ ಸಾಧ್ಯ ಇದೆ ಎಂಬುದನ್ನು ಗಮನಿಸಬಹುದು. ಮಾತ್ರವಲ್ಲ ನಮ್ಮ ಪಂಚಾಯತ್‌ನಲ್ಲಿ ಮೊಟ್ಟೆ ಉತ್ಪಾದನೆಗಳೂ ಕೂಡಾ ಆಗಿದೆ. ಇದೊಂದು ಸ್ವ ಉದ್ಯೋಗ ಮಾಡಲು ಸುಲಭ ವಿಧಾನವಾಗಿದೆ. ಇದರಿಂದ ನಿರುದ್ಯೋಗ ಕಡಿಮೆಯಾಗಲು ಸಹಾಯವಾಗುತ್ತದೆ. ಸಹಾಯಧನ ಸಾಲ ಸೌಲಭ್ಯಗಳು ದೊರಕುವ ಮಾರ್ಗ ಸರಳವಾಗಿರಬೇಕು.

**ಪ್ರತಿರೋಧ ಚುಚ್ಚು ಮದ್ದುಗಳ ಬಗ್ಗೆ**

### ಕೋಷ್ಠಕ ೫

| ಜಾತಿಗಳು | ಕೊಡಿಸಿದ್ದು | ಮೊತ್ತ |
|---|---|---|
| ನಾಯಿ | 175 | 175 |
| ಆಡು | 15 | 15 |
| ಪಶು | 150 | 150 |

ಮಂಜೇಶ್ವರ ಗ್ರಾಮದಲ್ಲಿ ಬೀದಿ ನಾಯಿಗಳ ಕಾಟ ಜಾಸ್ತಿಯಾಗಿದ್ದು ಪ್ರಸ್ತುತ ಇದರ ಹಾವಳಿಯಿಂದ ಜನರು ಭಯಭೀತರಾಗಿದ್ದಾರೆ. ಹುಚ್ಚು ನಾಯಿಗಳಿಂದ ರೇಬಿಸ್ ಮುಂತಾದ ಕಾಯಿಲೆಗಳು ಬರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಈ ಹುಚ್ಚು ನಾಯಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಜಾಸ್ತಿಯಾಗಿದೆ. ಇದನ್ನು ನಿವಾರಿಸುವರೇ ಪ್ರಯತ್ನ ಪಂಚಾಯತ್ ಮಟ್ಟದಲ್ಲಿ ನಡೆಸಬೇಕಾಗಿದೆ.



# ಉಪ ಸಂಹಾರ

ನಮ್ಮ ಮಂಜೇಶ್ವರ ಗ್ರಾಮ ಪಂಚಾಯತಿನ ಸಮಗ್ರ ವಿಕಸನ ಯೋಜನೆಗಳನ್ನು ಚರ್ಚಿಸಿ ಪ್ರಾಯೋಗಿಕವಾಗಿ ಜ್ಯಾರಿಗೊಳಿಸುವುದು ಅತೀ ಅಗತ್ಯವಾಗಿದೆ. ಕೃಷಿ, ಕೈಗಾರಿಕೆ ಸಾರಿಗೆ ವಿದ್ಯಾಭ್ಯಾಸ ಮೊದಲಾದವುಗಳ ಅಭಿವೃದ್ಧಿಯಿಂದ ಮಾತ್ರ ಸ್ಥಿರವಾದ, ನೀತಿಪೂರ್ವಕವಾದ ಸರ್ವತೋಮುಖ ಅಭಿವೃದ್ಧಿಯು ಸಾಧ್ಯವಾಗುತ್ತದೆ.

ಬೇರೆ ಬೇರೆ ಇಲಾಖೆಗಳ ವರದಿಗಳ ಆಧಾರದಲ್ಲಿ ಪ್ರಾಂತ್ಯದ ಯಾ ದೇಶದ ಯೋಜನೆಗಳನ್ನು ನಿರ್ಮಿಸುತ್ತಿದ್ದುದು ನಾವು ಕೇಳಿಕೊಂಡು ಇರುತ್ತಿದ್ದ ವಿಷಯವಾಗಿರುತ್ತದೆ. ಇಲಾಖೆಯ ಜನರಿಗೆ ಮತ್ತು ಮೇಲ್ಮಟ್ಟದ ಆಡಳಿತ ಅಧಿಕಾರಿಗಳಿಗೆ ಮಾತ್ರ ಯೋಜನೆಯ ತಿಳುವಳಿಕೆ ಇರುತ್ತಿತ್ತು. ಜನ ಸಾಮಾನ್ಯರಿಗೆ ಯೋಜನೆಗಳ ಬಗ್ಗೆ ತೀರಾ ತಿಳುವಳಿಕೆ ಕಡಿಮೆ ಇರುತ್ತಿತ್ತು. ಗತ ಯೋಜನೆಗಳಲ್ಲಿ ಜನರ ಪಾಲುಗಾರಿಗೆ ಬಹು ಕಡಿಮೆಯಾದುದರಿಂದ ಯೋಜೆಗಳು ಕಾರ್ಯಗತಗೊಳ್ಳುವಾಗ ಹಲವಾರು ತೊಡಕು ತೊಂದರೆಗಳು ಪ್ರಾದೇಶಿಕ ಜನರಿಗೆ ಉಂಟಾಗುತ್ತಿತ್ತು. ಅಲ್ಲದೆ ಜನರಿಗೆ ಸರಿಯಾದ ತಿಳುವಳಿಕೆಯನ್ನು ಯೋಜನೆಯ ಬಗ್ಗೆ ಕೊಡುತ್ತಿರಲಿಲ್ಲ.

ಸರಕಾರದಿಂದ ಯೋಜನೆಗಳಿಗೆ ಸಿಗುವ ಹಣವು, ಪಂಚಾಯತಿನ ಸಾಂಪತ್ತಿಕ ಆದಾಯವು ಪಂಚಾಯತಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಿರುತ್ತದೆ. ನಮ್ಮ ಗ್ರಾಮ ಪಂಚಾಯತಿನ 1995-96ರ ವಾರ್ಷಿಕ ಆದಾಯವು ರೂ. 2213565-15 ಆಗಿತ್ತು. ದೇ ರೀತಿ ಖರ್ಚು ರೂ. 22,02,888-45 ಆಗಿತ್ತು. ಸರಕಾರದ ಕೊಡುಗೆ ಮತ್ತು ಪಂಚಾಯತಿನ ಆದಾಯ ಗ್ರಾಮದ ಅಭಿವೃದ್ಧಿಗೆಗಳನ್ನು ಸಂಪೂರ್ಣವಾಗಿ ಪೂರ್ತಿಗೊಳಿಸಬೇಕಾದರೆ ಹಲವಾರು ವರ್ಷಗಳ, ತುಂಬಾ ಮೊಬಲಗು ವ್ಯಯದ ಯೋಜನೆಗಳು ನಾವು ತಯಾರು ಮಾಡಬೇಕಾಗಿದೆ. ನಿಶ್ಚಿತ ಸಮಯದಲ್ಲಿ ನಿಶ್ಚಿತ ಮೊಬಲಗನ್ನು ಇಟ್ಟುಕೊಂಡು ಯೋಜನೆಗಳನ್ನು ತಯಾರಿಸಿ ಸರಕಾರಕ್ಕೆ ನಾವು ತಿಳಿಯಪಡಿಸಬೇಕಾಗಿರುತ್ತದೆ. ಇದು ನಮ್ಮ ಪಂಚಾಯತಿನ ಸಮಸ್ಯೆಗಳೂ ಆಗಿರುತ್ತದೆ.

ವಿಕಸನ ಪಡಿಸಬೇಕಾದ ಯೋಜನೆಗಳು ನ್ಯಾಯವಾದ, ವೈಜ್ಞಾನಿಕ ರೀತಿಯಲ್ಲಿ ಅಂಕೆ ಸಂಖ್ಯೆಗಳ ರೂಪದಲ್ಲಿ ನಮ್ಮ ಮುಂದೆ ಇರುತ್ತದೆ. ಪ್ರಸ್ತುತ ಸಾಮಾಜಿಕ ಆರೋಗ್ಯ ಸರ್ವೆ, ವಿದ್ಯಾಭ್ಯಾಸ ಸರ್ವೆ, ಸಾರಿಗೆ ಸರ್ವೆ ಆದಾಯ ಸಂಪನ್ಮೂಲ ಸರ್ವೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಸರ್ವೇ ಮೊದಲಾದುವುಗಳಿಂದ ನಮ್ಮ ಕುಂದುಕೊರತೆಗಳನ್ನು ತಿಳಿಯಬಹುದು. ಇದನ್ನು ವಿಕಸನ ಯೋಜನೆಗಳ ಮೂಲಕ ಪರಿಹರಿಸಬೇಕಾಗಿದೆ.

ಕುಡಿನೀರಿನ ವ್ಯವಸ್ಥೆ, ಕಕ್ಕುಸು ಇಲ್ಲದವರಿಗೆ ಅವುಗಳ ಒದಗಣೆ, ಕೃಷಿ ನಾಶವಾಗುತ್ತಿರುವ ಕೃಷಿಕನಿಗೆ ನಷ್ಟ ಪರಿಹಾರ ಕೃಷಿ ಅಭಿವೃದ್ಧಿಗೆ ಪ್ರೋತ್ಸಾಹವಿಲ್ಲದೆ ನಶಿಸಿ ಹೋಗುತ್ತಿರುವ ಪರಂಪರಾಗತ ಕೈಗಾರಿಕೆಗಳಿಗೆ ಪುನರ್ರಚಿಸಲುವ್ಯವಸ್ಥೆ ಅಥವಾ ಇನ್ನಿತರ ಕೈಗಾರಿಕೆಗಳನ್ನು ಆರಂಭಿಸಲು ಪ್ರೋತ್ಸಾಹ ಕೊಡುವುದು ಬಹಳ ಅಗತ್ಯವಾಗಿದೆ. ಇಂತಹ ಹಲವಾರು ಪ್ರಶ್ನೆಗಳು ನಮ್ಮ ಗ್ರಾಮ ಪಂಚಾಯತಿನಲ್ಲಿ ಇರುವುದು. ಮನೆ ಇಲ್ಲದವರು ತುಂಬಾ ಮಂದಿ ನಮ್ಮ ಗ್ರಾಮ ಪಂಚಾಯತಿನಲ್ಲಿ ಇರುತ್ತಾರೆ. ಬಾಡಿಗೆ ಮನೆಗಳಲ್ಲಿ ವಾಸಿಸುತ್ತಾರೆ. ಕುಟುಂಬದ ಅಭಿವೃದ್ಧಿ ಇದರಿಂದ ಕುಂಠಿತವಾಗಿದೆ. ಕೇವಲ ಪಂಚಾಯತಿನ ಫಂಡಿನಿಂದ ಈ ಪ್ರವರ್ತನ ಕಾರ್ಯಗಳನ್ನು ನೆರವೇರಿಸುವರೇ ಸಾಧ್ಯವಾಗಲಾರದು. ಪ್ರಾಂತ್ಯ ಸರಕಾರವು ಒಂಬತ್ತನೇ ಯೋಜನ್ನಾ ಪದ್ಧತಿಯು ಜನಕೀಯ ಯೋಜನಾ ಪದ್ಧತಿಯೆಂದು ಸಾರಿರುತ್ತದೆ. ಒಂಬತ್ತನೇ ಯೋಜನೆಗೆ ಸುಮಾರು 14,800 ಕೋಟಿ ರೂಪಾಯಿ ಕೇರಳ ಸರಕಾರಕ್ಕೆ ನಿಯೋಜಿಸಲ್ಪಟ್ಟಿದೆ. ಇದರಲ್ಲಿ 40% ಗ್ರಾಮ ಪಂಚಾಯತುಗಳಿಗೆ ವಿಭಾಗಿಸಲ್ಪಟ್ಟಿದೆ. ಇದರಲ್ಲಿ ನಮ್ಮ ಪಂಚಾಯತಿಗೆ ಸುಮಾರು 72 ಲಕ್ಷ ರೂ. ವಾರ್ಷಿಕ ಲಭಿಸುವರೇ ಸಾಧ್ಯತೆ ಇರುವುದು. ಗ್ರಾಮಗಳಲ್ಲಿ ಬಡಜನರಿಗೆ ಅಗತ್ಯದ ಅವಶ್ಯಕತೆಗಳನ್ನು ಪೂರೈಸುವುದು ಅತೀ ಅಗತ್ಯ. ಇದು ನಮ್ಮ ಜವಾಬ್ದಾರಿಯೂ ಆಗಿರುತ್ತದೆ. ಅವರ ಕನಸುಗಳನ್ನು ನನಸು ಮಾಡುವರೇ ಇಂದು ಒಳ್ಳೆಯ ಸುಸಂದರ್ಭ ಬಂದಿರುತ್ತದೆ. ಯೋಜನೆಗಳ ಸ್ವಭಾವವು ಕೆಳಗಿನ ಸ್ತರದಿಂದ ಮೇಲಿನ ಸ್ತರಕ್ಕೆ ಆಗಿರುತ್ತದೆ. ಹಳ್ಳಿಯಿಂದ ದಿಲ್ಲಿಗೆ ಯೋಜನೆಗಳ ರೂಪುರೇಖೆಗಳು ಹೋಗುತ್ತದೆ. ಯೋಜನೆಗಳ ಸ್ವಭಾವವು ಸಂಪೂರ್ಣವಾಗಿ ಜನರಿಗೆ ತಿಳಿದಿರುತ್ತದೆ. ಹಾಗೂ ಚರ್ಚಿಸಲ್ಪಟ್ಟಿರುತ್ತದೆ. ಸಮೂಹದ ಸಮಸ್ತ ಜನವಿಭಾಗದ ಐಕ್ಯತೆಯಿಂದ ಯೋಜನೆಗಳು ಯೋಜಿಸಲ್ಪಡುತ್ತದೆ. ಇದರ ತಳಹದಿಯಿಂದ ಗ್ರಾಮಾಭಿವೃದ್ಧಿ ರಂಗದಲ್ಲಿ ನಮಗೆ ಅತ್ಯಂತ ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಮಾಡುವರೇ ಸಾಧ್ಯವಿರುವುದು. ದೇಶದ ಸ್ವಾತಂತ್ರ್ಯ ಸಮರದ ಅರಿವುಳ್ಳ ನಮ್ಮ ಹಿರಿಯರ ಅನುಭವಗಳ ಸಹಾಯದಿಂದ ಮುಂದಿನ ಪಥವನ್ನು ಸ್ಪಷ್ಟವಾಗಿ ತಿಳಿದು ಕೊಂಡು ನಮ್ಮ ಮಂಜೇಶ್ವರ ಗ್ರಾಮ ಪಂಚಾಯತಿನ ಸಮಗ್ರ ವಿಕಸನ ಯೋಜನೆಯ ರೂಪುರೇಖೆಗಳು ತಮ್ಮ ಮುಂದೆ ಚರ್ಚೆಗೂ ಕ್ರಿಯಾತ್ಮಕ ನಿರ್ದೇಶನಗಳಿಗೂ ಸಮರ್ಪಿಸಲ್ಪಟ್ಟಿರುತ್ತದೆ. ಮಂಜೇಶ್ವರ ಗ್ರಾಮ ಪಂಚಾಯತಿನ ಕೃಷಿ, ನೀರಾವರಿ, ಕೈಗಾರಿಕೆ, ವಿದ್ಯಾಭ್ಯಾಸ, ಸಾರಿಗೆ, ಕುಡಿಯುವ ನೀರು, ವಿದ್ಯುತ್, ಸಾಮಾಜಿಕ ಆರೋಗ್ಯ, ವಸತಿ ನಿರ್ಮಾಣ, ಮೃಗ ಸಂರಕ್ಷಣೆ, ಮೀನುಗಾರಿಕೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ವನಿತೆಯರು, ಸಹಕಾರಿ ರಂಗ ಮೊದಲಾದುವುಗಳ ಸರ್ವತೋಮುಖ ಅಭಿವೃದ್ಧಿಯೇ ನಮ್ಮ ಯೋಜನೆಯ ಮುಖ್ಯ ಗುರಿಯಾಗಿರುತ್ತದೆ. ಆಶಯಗಳು ತುಂಬಾ ಇರುತ್ತದೆ. ಅವುಗಳನ್ನು ಕಾರ್ಯಗೊಳಿಸಲು ಯೋಜನೆಗಳು ಮನುಷ್ಯನಿಗೆ ಸಹಾಯ ಮಾಡುತ್ತವೆ ಎಂಬುದು ನೆಹರೂರವರ ಉಕ್ತಿಯಾಗಿರುತ್ತದೆ.

# ಮಂಜೇಶ್ವರ ಗ್ರಾಮ ಪಂಚಾಯತು ಅಭಿವೃದ್ಧಿ ಕಾರ್ಯಗಳು ಜನಕೀಯ ಯೋಜನೆಗಳಾಗಿವೆ.

**ಜನಕೀಯ ಯೋಜನೆಗಳು :**

ಮಂಜೇಶ್ವರ ಗ್ರಾಮ ಪಂಚಾಯತಿನಲ್ಲಿ ಅಧಿಕ ಜನರು ಕೃಷಿಕರು ಮತ್ತು ಕೃಷಿ ಕೂಲಿಜನರು ಆಗಿರುತ್ತಾರೆ. ಹಲವಾರು ವಿಕಸನ ಕಾರ್ಯಕ್ರಮಗಳನ್ನು ಕಂಡು ಹಿಡಿದು ಅಭಿವೃದ್ಧಿ ಯೋಜನೆಗಳನ್ನು ಮಾಡಿದರೂ ಇನ್ನೂ ಹಲವಾರು ಸಮಸ್ಯೆಗಳು ಪರಿಹಾರವಾಗದೆ ಹಾಗೆಯೇ ಉಳಿದಿರುತ್ತದೆ. ಕೃಷಿ ಮತ್ತು ಕೈಗಾರಿಕೆ ರಂಗಗಳಲ್ಲಿ ಇನ್ನೂ ಹಿಂದುಳಿದಿರುವಿಕೆಯ ಅವಸ್ಥೆಯನ್ನು ನಾವು ಕಾಣಬಹುದು. ಕುಡಿನೀರಿನ ಸಮಸ್ಯೆ ಆರೋಗ್ಯ ಮಸಸ್ಯೆ, ಸಾರಿಗೆ ಅಸೌಕರ್ಯಗಳು, ವರ್ಷ ಕಳೆದಂತೆ ಹೆಚ್ಚುತ್ತಾ ಹೋಗುವುದು. ಅವಶ್ಯಕವಾದ ಸಾಂಪತ್ತಿಕ ಕೊರತೆಯೇ ಅಭಿವೃದ್ಧಿ ಯೋಜನೆಗಳ ಹಿನ್ನಡೆತೆಗೆ ಕಾರಣವಾಗಿರುತ್ತದೆ. ಮಿತಿಯುಳ್ಳ ಆರ್ಥಿಕ ಆದಾಯ ಹಾಗೂ ಹೆಚ್ಚಾಗುತ್ತಿರುವ ಜನರ ಅವಶ್ಯಕತೆಗಳ ಈ ಸಮಸ್ಯೆಗಳನ್ನು ಜಟಿಲಗೊಳಿಸುತ್ತವೆ. ನಾಡಿನ ಜನರ ಅಭ್ಯುದಯವು ಜಾತಿ, ಮತ, ಸಂಕುಚಿತ ಆಲೋಚನೆಗಳಿಗೆ ಅತೀತವಾಗಿ ಇರುವುದೇ ಪಂಚಾಯತಿನ ಪ್ರವರ್ತನ ಮೂಲಧನವಾಗಿರುತ್ತದೆ. ಹೆಚ್ಚಿನ ಜನರ ಸಹಕಾರದೊಂದಿಗೆ ಕಾರ್ಯರೂಪಕ್ಕೆ ತರುವ ಪದ್ಧತಿಗಳನ್ನು ಪಂಚಾಯತು ಆಡಳಿತ ಸಮಿತಿಯ ಆತ್ಮವಿಶ್ವಾಸದಿಂದ ಹಾಗೂ ಜನರ ಸಹಾಯದಿಂದ ನಡೆಯಬೇಕಾಗಿರುತ್ತದೆ.

ಗ್ರಾಮ ಪಂಚಾಯತು ಆಡಳಿತ ಸಮಿತಿಯು ಗ್ರಾಮ ಪಂಚಾಯತಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಿರುತ್ತದೆ. ಗ್ರಾಮ ಪಂಚಾಯತಿನಲ್ಲಿರುವ ವಿವಿಧ ರಾಷ್ಟ್ರೀಯ ಯುವಜನ-ಸಾಂಪತ್ತಿಕ, ಸಾಂಸ್ಕೃತಿಕ ಸಂಘಟನೆಗಳ ಪ್ರತಿನಿಧಿಗಳ ಮೊತ್ತಮೊದಲ ಸಾರ್ವತ್ರಿಕ ಸಭೆಯು ಮಂಜೇಶ್ವರ ಕೊ-ಅಪರೇಟಿವ್ ಬೇಂಕ್ ಹಾಲ್‌ನಲ್ಲಿ ಜನವರಿ 26ರಂದು ನಡೆಯಿತು. ನಾವು ಅನುಭವಿಸುತ್ತಿರುವ ಸಮಸ್ಯೆಗಳಿಗೆ ಸರಿಯಾದ ಪರಿಹಾರವನ್ನು ಕಂಡುಕೊಳ್ಳುವುದು ನಮ್ಮ ಸಾಮಾಜಿಕ ಸಭೆಗಳಿಂದ ಆಗಿರುತ್ತದೆ. ನಮ್ಮ ಪಂಚಾಯತಿನಲ್ಲಿರುವ ಎಲ್ಲಾ ಮನೆಗಳ ಸರ್ವೆ ನಡೆಸಿ ವಿದ್ಯುತ್, ಕೃಷಿ, ಕೈಗಾರಿಕೆ ಸಮಸ್ಯೆಗಳನ್ನು ತಿಳಿದುಕೊಂಡು ಈಗ ಇರುವ ಹಲವಾರು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದು ಅಗತ್ಯ. ವಾರ್ಡು ಮೆಂಬರುಗಳ ನೇತೃತ್ವದಲ್ಲಿ ಒಂದೊಂದು ವಾರ್ಡು ಕಮಿಟಿಗಳನ್ನು ನಿರ್ಮಿಸಿ ಅವುಗಳ ಆಧಾರದಿಂದ ಕನ್ವೀನರುಗಳನ್ನು ಚುನಾಯಿಸಿ ಅವುಗಳ ವರದಿ ಪ್ರಕಾರ ಪಂಚಾಯತು ಅಡಿಸ್ಥಾನದಲ್ಲಿ ಒಂದು ಯೋಜನಾ ವರದಿಯನ್ನು ತಯಾರಿಸಿರುವುದು. ಕ್ರೋಢೀಕರಿಸಿದ ಈ ಭಾಗವನ್ನು ವಿದಗ್ಧರ ಮೂಲಕ ಪರಿಶೋಧಿಸಿ ಅಂಕಿ ಸಂಖ್ಯೆಗಳಿಂದ ಅಭಿವ್ಯಕ್ತಗೊಳಿಸಿ ತಮ್ಮ ಗಮನಕ್ಕೆ ಪುಸ್ತಕ ರೂಪದಲ್ಲಿ ಕೊಟ್ಟಿರುತ್ತೇವೆ. ನಮ್ಮ ಗ್ರಾಮದಲ್ಲಿ 12 ವಾರ್ಡುಗಳಿದ್ದು ಸಾಕಷ್ಟುಜನರು ಗ್ರಾಮ ಸಭೆಗಳಲ್ಲಿ ಭಾಗವಹಿಸಿರುತ್ತಾರೆ. ತಮ್ಮ ಅಭಿಪ್ರಾಯಗಳನ್ನು ಗ್ರಾಮ ಸಮಿತಿಗಳಲ್ಲಿ ವ್ಯಕ್ತಪಡಿಸಿರುತ್ತಾರೆ. ನಮ್ಮ ಗ್ರಾಮ ಪಂಚಾಯತಿನಲ್ಲಿ ವಾಸಿಸುವ ಮನೆಗಳು ವಾಸಿಸಲ್ಪಡದ ಮನೆಗಳು ತಮ್ಮ ಮನೆಗಳಲ್ಲಿ ಸ್ವಂತ ಕಕ್ಕುಸು ಇರುವವರು, ಸ್ವಂತ ಕಕ್ಕುಸು ಇಲ್ಲದವರು ಇರುತ್ತಾರೆ. ನೀರಿನ ಕ್ಷಾಮ ಇರುವ ಕುಟಲುಗಳು, ಅವಿಧ್ಯಾವಂತ ಜನರ ಸಂಖ್ಯೆ ಕೆಲಸವಿಲ್ಲದವರ ಸಂಖ್ಯೆ, ವಿದ್ಯುತ್ ಇರುವ ಮನೆಗಳು, ವಿದ್ಯುತ್ ಇಲ್ಲದ ಮನೆಗಳು, ಸಾರಿಗೆ ಸೌಕರ್ಯ ಇಲ್ಲದ ಪ್ರದೇಶಗಳು, ರಿಪೇರಿ ಮಾಡಬೇಕಾದ ಮಾರ್ಗಗಳು, ಹೊಸ ಮಾರ್ಗಗಳು ಅವಶ್ಯವಾಗಿ ಬೇಕಾಗಿರುವ ಸಂಕಗಳು, ಕೃಷಿಕರ ಸಮಸ್ಯೆ ಮತ್ತು ಅದರ ಪರಿಹಾರ ಉಪಾಯಗಳು ಸರ್ವೇ ಮೂಲಕ ಸಂಗ್ರಹಿಸಲು ನಮಗೆ ಸಾಧ್ಯವಾಯಿತು.

ಪಂಚಾಯತಿನಲ್ಲಿರುವ ಎಲ್ಲಾ ಕುಟುಂಬಗಳಿಗೂ ಉತ್ತಮ ಆರೋಗ್ಯವನ್ನು ಕಾಪಾಡಲು, ಶುದ್ಧ ನೀರಿನ ಅವಶ್ಯಕತೆಯನ್ನು ಪೂರೈಸಲು, ಸಾರಿಗೆ ಸೌಕರ್ಯವನಲು ಅಭಿವೃದ್ಧಿಗೊಳಿಸಲು ಹಾಗೂ ಮಲೀನ ನೀರನ್ನು ನಿವಾರಿಸಲು ಬೇಕಾದ ತೋಡುಗಳ ರಿಪೇರಿ (Drainage System) ವಿದ್ಯುತ್ ಕೊರತೆಯನ್ನು ನಿವಾರಿಸುವರೇ ಬೇಕಾದ ಸೌರಶಕ್ತಿ ಯೋಜನೆ, ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಬೇಕಾದ ಸ್ಥಳ ಹಾಗೂ ಕಚ್ಚಾವಸ್ತುಗಳ ಒದಗಣೆ ಮೊದಲಾದುವುಗಳಿಗೆ ವಿಕಸನ ಯೋಜನೆ ರೂಪರೇಖೆಗಳನ್ನು ತಯಾರಿಸಲಾಗಿದೆ.

ಪಂಚಾಯತಿನಲ್ಲಿ ನಡೆದುಕೊಂಡು ಬರುವ ಜನಕೀಯ ಯೋಜನೆಗಳಿಗೆ ಪ್ರಾಂತ್ಯದ ಯೋಜನೆಯಲ್ಲಿ ಪ್ರಧಾನ ಭಾಗವಿರುವುದು ಯೋಜನೆಯನ್ನು ಕಾರ್ಯಗತಗೊಳಿಸುವಾಗ ಜನರ ಸಹಭಾಗಿತ್ವವು ಮತ್ತು ಅಭಿರುಚಿಯು ಯೋಜನೆಯನ್ನು ಹೆಚ್ಚು ಅರ್ಥಪೂರ್ಣಗೊಳಿಸುತ್ತದೆ. ವೈಜ್ಞಾನಿಕ ರೀತಿಯಲ್ಲಿ ಮುಂದಿನ ನಮ್ಮ ಗ್ರಾಮ ಪಂಚಾಯತಿನ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕವಾಗುವ ರೀತಿಯಲ್ಲಿ ನಮ್ಮ ಯೋಜನೆಯನ್ನು ತಯಾರಿಸುವುದು ಅತೀ ಅಗತ್ಯವಾಗಿದೆ.

ಮಣ್ಣು, ಜಲ ಸಂರಕ್ಷಣೆ ಇವುಗಳನ್ನು ಕಾಣಿಸುವರೇ ನಮ್ಮ ಗ್ರಾಮ ವಿಕಸನ ಸಮಿತಿಯಂದ ಸಾಧ್ಯವಾಗಿರುತ್ತದೆ. ಮಣ್ಣು ಸಂರಕ್ಷಣೆ, ಜಲ ಸಂರಕ್ಷಣೆ ಇವುಗಳು ನೀರಿನ ಶೇಖರಣೆಗೆ ಅತೀ ಅಗತ್ಯವಾಗಿದೆ. ಹರಿಯುವ ತೋಡುಗಳಿಗೆ, ನದಿಗಳಿಗೆ ಅಡ್ಡಗೋಡೆ ಹಳ್ಳ, ಕೆರೆ, ನೀರಿನ ಒರತೆಯ ಮೂಲಗಳನ್ನು ಕಂಡು ಹಿಡಿದು ನೀರಿನ ಶೇಖರಣೆಯನ್ನು ಹೆಚ್ಚಿಸುವುದರಿಂದ ಜಲಸಮೃದ್ಧತೆಯನ್ನು ಪಡೆಯಬಹುದು. ಇದಕ್ಕೆ ಬೇಕಾದ ಸರಿಯಾದ ಪ್ರೊಜೆಕ್ಟನ್ನು ಪಂಚಾಯತು ಅಳವಡಿಸಿದೆ ಹಾಗೂ ತಮ್ಮ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಿರುತ್ತದೆ. ಸುಮಾರು 50 ಲಕ್ಷ ರೂಪಾಯಿಗಳು ಈ ಯೋಜನೆಗೆ ಬೇಕಾಗಿ ಬರಬಹುದು.

ಮಂಜೇಶ್ವರ ಗ್ರಾಮ ಪಂಚಾಯತಿನ ವಿದ್ಯಾಭ್ಯಾಸ ವಿಭಾಗದಲ್ಲಿ ಇರುವ ಸಮಸ್ತ ಸಮಸ್ಯೆಗಳನ್ನು ಪರಿಹರಿಸುವರೇ ಅಧ್ಯಾಪಕರ, ವಿದ್ಯಾಭ್ಯಾಸ ಪ್ರವರ್ತನಕಾರರ, ಸಾಹಿತಿಗಳ ಒಂದು ಸಭೆಯನ್ನು ಕರೆದು ಸಮಿತಿಯನ್ನು ರೂಪೀಕರಿಸಿ ವಿದ್ಯಾಭ್ಯಾಸದ ಪುರೋಗತಿಯನ್ನು ಯೋಜನೆಯಲ್ಲಿ ಅಳವಡಿಸಲು ಸಾದ್ಯವಾಗುವಂತೆ ಪ್ರಯತ್ನಿಸಲಾಗಿದೆ. ಉಪಸಮಿತಿಗಳ ಆಧಾರದಿಂದ ಪ್ರಧಾನ ಅಧ್ಯಾಪಕರ ಸಹಾಯ ಪಡೆದು ಸಮಸ್ಯೆ ನಿವಾರಣೋಪಾಯವನ್ನು ಕಂಡುಹಿಡಿಯಲಾಗಿದೆ. ಶಾಲಾ ಮಕ್ಕಳ, ಕಟ್ಟಡಗಳ, ಪರಿಶಿಷ್ಟ ವರ್ಗ, ಪರಿಶಿಷ್ಟ ಜಾತಿ, ಮಧ್ಯಾಹ್ನದ ಊಟ, ಪೀಠೋಪಕರಣಗಳ ಸಮಸ್ಯೆ, ಪುಸ್ತಕಗಳ ಸಮಸ್ಯೆ, ಅಧ್ಯಾಪಕರ ಸಮಸ್ಯೆ ಮೊದಲಾದವುಗಳನ್ನು ಅರಿತು ಪರಿಹಾರಗಳನ್ನು ಕಂಡು ಹಿಡಿಯಲಾಗಿದೆ. ಸುಮಾರು 60 ಲಕ್ಷ ರೂ.ಗಳ ಯೋಜನೆಯನ್ನು ನಿರ್ಮಿಸಲಾಗಿರುತ್ತದೆ.

ಕೃಷಿ, ನೀರಾವರಿ, ಮೃಗ ಸಂರಕ್ಷಣೆ, ಮೀನುಗಾರಿಕೆ, ಕೈಗಾರಿಕೆ, ವಿದ್ಯಾಭ್ಯಾಸ, ಕುಡಿಯುವ ನೀರು, ಸಾರಿಗೆ, ವಿದ್ಯುತ್, ಮಾರ್ಕೇಟು, ಸಾಮಾಜಿಕ ಕ್ಷೇಮ (ಆರೋಗ್ಯ) ವಸತಿ ಸೌಕರ್ಯ, ಸಾಂಸ್ಕೃತಿಕ ಬೆಳವಣಿಗೆ, ವನಿತೆಯರ ಸಾಮಾಜಿಕ ಕ್ಷೇಮಾಭಿವೃದ್ಧಿ, ಸಹಕಾರಿ ರಂಗದ ಬೆಳವಣಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಮಾನವ ಹಾಗೂ ಪ್ರಾಕೃತಿಕ ಸಂಪತ್ತಿನ ಶೇಖರಣ, ವಿಕಸನವು ನಮ್ಮ ಪಂಚಾಯತಿನಲ್ಲಿ ಆಗಬೇಕಾಗಿದೆ. ಇದಕ್ಕೆ ರಾಜಕೀಯ ಭೇದಭಾವವಿಲ್ಲದೆ ನಾಡಿನ ಏಳಿಗೆಯನ್ನು ಅಭಿವೃದ್ಧಿಗೊಳಿಸಲು ಇಚ್ಛೆ ಇರುವ ನವಯುವಕರ ಸಹಾಯದ ಸಂಪತ್ತು ಅತೀ ಅಗತ್ಯವಾಗಿರುತ್ತದೆ. ಧಾರಾಳ ಮನುಷ್ಯ ಸಂಪತ್ತು, ಪ್ರಾಕೃತಿಕ ಸಂಪತ್ತು, ಇರುವ ಗ್ರಾಮ ಪಂಚಾಯತು ನಮ್ಮದಾಗಿರುತ್ತದೆ. ಇದನ್ನು ಉಪಯೋಗಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುವುದು. ಆರೋಗ್ಯಪೂರ್ಣವಾದ ಗ್ರಾಮಾಭಿವೃದ್ಧಿಯು ಜನ ಸಹಭಾಗಿತ್ವದಲ್ಲಿ ನಡೆಯುವುದು ಅತೀ ಅಗತ್ಯವಾಗಿದೆ. ಜನರಿಗೆ ಜನರಿಂದ ಜನರಿಗೋಸ್ಕರ ಇರುವ ಯೋಜನೆಗಳು ನಮ್ಮದಾಗಿರುತ್ತದೆ. ಹೆಚ್ಚು ಜನರು ಈ ಯೋಜನೆಗಳಲ್ಲಿ ಪಾಲ್ಗೊಂಡು ಕ್ರಿಯಾತ್ಮಕಗೊಳಿಸುವುದು ಜನರ ಜವಾಬ್ದಾರಿಯೂ ಆಗಿರುತ್ತದೆ.

**ಕೆ.ಪಿ. ನೆಪೀಸ ರಹಮಾನ್**, ಹೊಸೂರು
ಅಧ್ಯಕ್ಷರು
ಮಂಜೇಶ್ವರ ಗ್ರಾಮ ಪಂಚಾಯತ್

*With Best Compliments from:*

# *The Manjeshwar Service Co-operative Bank Ltd.*

***No. C. 323***
***MANJESHWAR***

***Head Office : Manjeshwar***
*Phone : 872222*

***Branch : Hosangadi***
*Phone : 872622*

*All Banking facilities offered render quick, prompt and courteous service*

*For further details please contact :*

***B. M. Anantha***
*President*

***Ravindra Manjeshwar***
*Secretary*

*With Best Compliments From:*

# Kalandar Stores

***Wholesale and Retail Merchants***
***Kajoor Complex, Hosangadi***
***MANJESHWAR***

# Kalandar Wood Industries

***MANJESHWAR***

***With Best Compliments From :***

# *Jayaraj Textiles*

# *Jayaraj Shopping Centre*

***Hosangady, Manjeshwar***

***Rooms Available by Ownership Basis***
*Please Contact Jayaraj Textiles*
***HOSANGADI***

*With Best Compliments From :*

**V. MOOSA KUNHI**
**SHIFA MEDICALS**
*Kajoor Shopping Complex*
*Hosangadi*
*Manjeshwar - 671323*

*With Best Compliments From :*

# Farook Frame Industries

Hosangady, Manjeshwar-671323

Phone : (0499) 872933

Dealers : Timber Products, Furniturers
Mfrs. : Block Boards & Flush Doors & Frames

*With Best Compliments From :*

# AISHWARYA COMPLEX

---

*With Best Compliments From :*

# M/s. Kakunje Plastics

## Manjeshwar-671323

Ph : 872502
872620

*With Best Compliments From :*

**MALABAR AQUA FARMS [P] LTD.**

***Farm Office :***

*B. Manjeshwar*
*Manjeshwar P. O.*
*Kasaragod - 671323*
*Kerala*
*Ph : 0499 - 872656*

***Regd. Office :***

*P. B. No. 4257*
*Ist Floor, Parmapelly Nagar*
*Cochin-682036*
*Phone : 315813*

*With Best Compliments :*

*V. M. Hameed*

# YAFCO

**Wood Industries**

*Mfrs. of:*
*Block Boards, Flush Door Frames*
*Veeners & Chair Seat & Back*
*Durgipalla, Hosangadi*
*Manjeshwar - 671323, Kerala*

*© : Fact : (0499) 872539, Resi. : 872639*

*With Best Compliments From :*

*Phone : 872387*

# BHAGAVATHI PRINTING PRESS

Printers & Binders

**MANJESHWAR-671323**

*With Best Compliments From*

**M/s. Badriya Wood Industries**

Near Rly. Station

Udyawar, Manjeshwar-671323

Phone : 872284 (Off.)

872384 / 872584 (Res.)

*With Best Compliments From*

**Machambady Travells**

Machambady

MANJESHWAR-671323

Prop: Ibrahim

*With Best Compliments From:*

# *M/s. Kakunje Plastics*

***MANJESHWAR-671323***

*Phone : 872502*
*872620*

***Our Sister Concern :***

***M/s. Kakunje Polymers***
***M/s. Kaybees Marketing Associates***
***Manjeshwar***

*With Best Compliments From:*

# Kerala Perfumary Industries

**Pavoor Road**

Manjeshwar-671323

*Mfrs. of AG - MARKED SANDAL WOOD OIL, SANDAL POWDER SANDAL CHIPS AND OTHER ESSENTIAL OIL AGARBATHI RAW MATERIALS ETC.*

*Directors :*
*P.B. Ahmad*
*P. B. Abdul Razak*
*Naimarmoola*

*Tel : 872707 (Off)*
*Res. : 521786*
*520786*
*420644*
*420939*

With Best Compliments From :-

Offi : (0499) 872393
Resi. : (0499) 872339

**MANJESHWAR WOOD INDUSTRIES**

TIMBER MERCHANTS & COUPE CONTRACTORS

KADAMBAR

**MANJESHWAR - 671323**

KASARAGOD DIST. KERALA

Allied Concerns:

**MANJESHWAR VENEERS**

**K. A. BOARDS & FLUSH DOORS**

**COASTAL TRADE LINKS**

K.A. Boards

*With Best Compliments From:*

Shilpa
PACKAGING INDUSTRIES
Specialists in Multicolour
Flexo Printing

*Near G. P. M. G. College*
*MANJESHWAR - 671323*

*Phone : (0499) 872305*

*Mfrs. HM / LD / LLDPE Pick up bags, Flexo Printed carrier bags*
*Shopping carrier bags, woder pick up bags & other packing materials*

*With Best Compliments from*

# M/s. Ganesh Ice Plant and Cold Storage

*Kanvathirtha, Kunjathur*
*Manjeshwar - 671323*

*Managing Partner*
**C. S. Shivappa**

*Resi. 840527*

*With Best Compliments From :*

# FAROOK

## TIMBER MART & SAW MILLS

**HOSANGADI**

**MANJESHWAR - 671 323**

Kasaragod Dist. Kerala

Mfrs. of :

- Block Board Frames
- Flush Door Frames
- Packing Cases &
- Timber Products

*With Best Compliments from:*

# DAMODAR MOTOR WORKS

*N. H. 17, KUNJATHUR*

*MANJESHWAR - 671 323*

*With Best Compliments From :*

***M/s. Fathima Perfumary Industries***

*Hosangadi*

*Manjeshwar-671323*

*Phone : 872955*

*With Best Coompliments From*

# THE PLEASURE OF SHOPPING

# ONLY AT M. M. PLAZA

## Hosangadi, Manjeshwar

## ONLY FOUR OWNERSHIP SHOPS & FEW OFFICE ROOMS ARE AVAILABLE

| | | |
|---|---|---|
| *Contact :* | M. M. Builders | Phone : 872848 |
| | M. M. Plaza | Phone : 872442 |
| | Hosangadi Junction | Phone : 872340 |
| | Manjeshwar | Phone : 872835 |

**ಮನೆ ಸೈಟು, ಫ್ಲಾಟ್, ಅಂಗಡಿ ಮತ್ತು ಬಾಡಿಗೆಯ ಅಂಗಡಿ ಯಾ ಮನೆ ಮಾರಾಟ ಯಾ ಖರೀದಿ, ಕಟ್ಟಡ ಕಟ್ಟಿಸಿ ಕೊಡುವುದು ಯಾ ರಿಪೇರಿ ಮಾಡಿಕೊಡಲಾಗುವುದು. ಈ ಬಗ್ಗೆ ವಿಚಾರಿಸಿರಿ.**

**ಎಂ. ಎಂ. ಬಿಲ್ಡರ್ಸ್,**
ಎಂ. ಎಂ. ಪ್ಲಾಝ,
ಹೊಸಂಗಡಿ ಜಂಕ್ಷನ್, ಮಂಜೇಶ್ವರ

# MANJESWARAM PANCHAYAT
## SURFACE MATERIAL

②

